# A Research on Folk Medicine System in Bidar District

**Preamble:-**

Bidar District has a historical background in the culture, literacy and monuments this leads to take place the more than hundred varieties of the Folk Medicine plants. Further the Bidar is also had a Reserve Forest, Small Rivers and Check Dams which promotes the development and preservation of the Medicinal plants around this atmosphere. Bio Diversity in the conservation of Birds, Animals in the Bidar District. Surrounded Bio Diversity Area which covers the Rural villages, which consists Folk Medicine Plants. In each village it has a specific medicine plants in their own land. Hence it promotes the Folk Medicine practitioners, which includes Old Age women, Traditional livelihood promoters like handicrafts, woodcrafts, farmers, hakims and Social workers. In several villages Math Swamiji's are also practicing the Folk Medicine, Farmers and Folk Medicine Practitioners are growing the Medicine plants in their own lands and behind houses of the Rural villages. Bidar District consists 718 Rural villages, where we have not seen the GDR Development compare to the other district. The lack of facility in the Medicine and Scientific field. In the District the peoples are not adopted the allopathic medicines. They are fully depend on the Folk Medicine and they are using the Medicine only from their villages, which refers the Folk Medicine Practitioners referred Medicines only. Folk Medicine as a broad background. It is a very difficult

to identifying and finding the specific background. We are not seen else any where whether in the manuscripts or in printed leaflets or in the Books, where it is grown, how it is grown and the quantity.

The Folk Medicine system which is in use by namely religious medicine, regions medicine, village medicine, green medicine, house medicine, forest medicine. They are naming the medicines and using the same. The Folk Medicine almost all depend on the nature for preventing the curing the disease, it has played a tremendous role for human beings. Some of the diseases, where affecting the their region base depend upon the environment and atmosphere, where it is possible to use the medicine from those regions only. It is a responsibility of the Researchers how the Folk Medicine Practitioners adopt to the practice, how they are lived and what is the status of economical and social to find out the exact data. Hence this research may be platform to the upcoming young generation to know the life of the Folk Medicine Practitioners and how to become a live with Model life in the villages. I thought it is a referral work for the Folk Medicine.

**NATURE & OBJECTIVE OF RESEARCH:-**

A research study is on Folk Medicine system in Bidar District. Folk Medicine is how different from allopathic medicine and defining the Folk Medicine system is useful to the human beings. It is a challenged issue in the globalization world for promoting and conserving Folk Medicine and creating awareness among the youths about the practices of the Folk Medicines. As well as giving a wide publicity and finding for the family problems of the Folk Medicine Practitioners. And also finding human values and specific Medicine Practice system from their families. Further it is a main object to how difference between the allopathic medicine at the modern life comparing to how very useful of Folklore medicine, where it is a easy available and which consists no side effects to the patients. This is to be informed through the Research study among the community.

**METHODOLOGY OF RESEARCH:-**

In the research available statistical data of the Folk Medicine plants, breed of the plants, where to be considered for the Research. Also finding the previous Research study on the Folk Medicine practices, which includes the Folklore Medicine plant base practice, liquid base practice, surgical base practice, and practicing of yantra-mantra system for the parameters of the Research and it is analyzing on the base of scientific manner. Through the Field work collecting information regarding types of Folklore Medicine, System of practice, even to collect the data of economical poor practitioners.

And also recording the special practitioners of the Folklore Medicine. This has to collected at the time of Survey from a model questionnaire. For collecting these information we are contacting the Senior citizens of the villages and interacting with them and same to be placed before the Research.

**AREA OF RESEARCH**:-

Folk Research Medicine is nothing but to finding the plant based medicines like Forest Medicine, practitioners of syco medicines, Children practitioners and gnyanic practitioners, general practitioners, veterinary practitioners where we observes. In the situation of globalization of the world, we are losing the folklore medicine system. In these critical conditions the practitioners of the Folk medicines, they try to conserve and practicing the medicines at their level, we find it means to theme of the Research. A folk medicine is grown with the at the time human beings take place in the world. It is very difficult to finding the base and growing of the Folklore Medicine like we find in every 50 km we have the different languages and traditional practices like folklore medicine is also region to region difference along with Environmental status. Folklore Medicine is grown throughout the world. But it is not possible to research on World level. Hence it is decided to Research on Folklore Medicine practice of Bidar District. Finding of the practices of the Bidar District which includes treatment to the patients on jaundice, kidney stones dissolving methodology,

jointing orthopedic fractures and other special practices where practiced in the Bidar District.

**IMPORTANCE OF THE RESEARCH:-**

It is a important to do the research on Folklore Medicine Practices in Bidar due to below said points.

1) To finding the which plants consists the Medicine content.
2) It helps to intelligible practices of the traditional folklore medicines.
3) Through this research it is a base for Youth generation to come forward for the folklore medicine practitioners.
4) Contribution of the nature, atmosphere in the folklore medicine practice
5) Folklore Medicine experts are how adopted the system in their life and the Research helps to finding the same.
6) Through the research the said results are considered for the Research and how it is benefit in the Modern Trend.

**NECESSITY OF THE RESEARCH:-**

In the present scenario we found that modern life is totally depend on the mechanical system like Fast Food, Using of chemical foods, adopting the allopathic medicine, totally human beings are depends on other systems like Electric, without the support of the electricity we cant step out to the next step. Also human beings are not giving physical work to the body. Because of this resistant power is day by day decreasing. It leads to inviting the diseases to the body like blood pressure, renal infection, diabetic and other several diseases.

Hence the only one solution is to be said on the above problem to promoting the folklore medicine practice at Bidar. Further the research limits to Bidar only, but the said problems are global problems. Folklore Medicine which consists Eco-friendly, strength of disease control, no side effects, easy available and cost of the medicine is also very less as compare to other allopathic medicine.

Hence the Research is a base for creating awareness among the community about the Folk Medicine Practices. Also very economical efficiency for comparing the cost of materials. In general we are also observed that the peoples are very much interest about the folklore medicines but the lack of communication and contact information it is not express before the other medicine like allopathic. If once traditional folklore medicine taken a wide publicity, because never adopt the allopathic medicine in their life. Also it promotes the peoples have not consumpting chemical applied foods. The chemical foods creates a lot of diseases in our body. Hence the peoples are going to traditional organic farming and buying the organic products from the Market. On the organic farming the Government of Karnataka had played a major role they are creating the awareness among the community about the organic foods and implementing the organic farming training to the village groups.

**RESULT OF THE RESEARCH:-**

Through the Research of the Folk Medicine Practices in the Bidar District it gives a platform for the finding the specialty of the Medicine Practice, Expert practitioners, availability of folk medicines in the District. It is a platform to give wide publicity and resource materials to the community. Further the young generation also aware about the system, they are using and practicing the folk medicine, which is very easily available around their villages. And also it is a solution for the employment problem, which youths are on the finding the medicine, promoting the medicine and marketing of the folk medicine. Through these the oral result is identifying the folk medicine practitioners and giving opportunities and empowering the practitioners family and giving healthy medicine to the community. Where the community getting the healthy, Eco-friendly, no side effect medicine and less cost medicine for the preventing the diseases. This is also introduces the how our olders using the Medicine systems in the life. And it leads to establishing the Research centre on Folklore medicine in the university of the State.

PRESIDENT
Karunamaya Youth Club (R)
Road BIDAR

# Complete Report

## A Research On Folk Medicine System in Bidar District

## ಬೀದರ ಜಿಲ್ಲೆ ಜನಪದ ವೈದ್ಯ ಪದ್ಧತಿ ಕುರಿತು ಸಂಶೋಧನೆ

-: Submitted by:-


# KARUNAMAYA YOUTH CLUB (R)

**Near Hanuman Temple**
**Navadgeri, Janwada Road,**
**Bidar - 585401. (Karnataka State)**
**Email: akmmbidar@gmail.com**
**Mb No: 7411534295**



ದಕ್ಷಿಣ ಮಧ್ಯ ಸಾಂಸ್ಕೃತಿಕ ಕೇಂದ್ರ ನಾಗಪೂರನ ಕಾರ್ಯಕ್ರಮ ಅಧಿಕಾರಿಗಳಾದ ಶ್ರೀ ದೀಪಕ ಪಾಟೀಲ ರವರು ಬಸವಕಲ್ಯಾಣ ನಗರದ ಪಟೇಲ ಬಡಾವಣೆಯಲ್ಲಿ ಹೆಸರಾಂತ ನಾಟಿ ವೈದ್ಯರಾದ ಅಬ್ದುಲ್ ಗಫೂರ ಅವರ ಮಾಹಿತಿ ಸಂಗ್ರಹಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾಹಿತಿ ಸಂಗ್ರಹಿಸುತ್ತಿರುವ ಭಾವಚಿತ್ರ.



ಬೀದರ ತಾಲ್ಲೂಕಿನ ಮೈಲೂರು ನಗರದಲ್ಲಿರುವ ಹೆಸರಾಂತ ನಾಟಿ ವೈದ್ಯರಾದ ಅಂಬಾಜಿ ದುಬಲಗುಂಡಿಕರ ರವರಿಂದ ಮಾಹಿತಿ ಸಂಗ್ರಹಿಸುತ್ತಿರುವ ಭಾವಚಿತ್ರ.



ಬೀದರ ನಗರದ ಪ್ರತಾಪನಗರ ಬಡಾವಣೆಯ ಹಿರಿಯ ನಾಟಿ ವೈದ್ಯರಾದ ಸಿದ್ರಾಮಪ್ಪ ಮಡಿವಾಳ ರವರಿಂದ ನಾಟಿ ವೈದ್ಯ ಪದ್ಧತಿ ಕುರಿತು ಮಾಹಿತಿ ಸಂಗ್ರಹಿಸುತ್ತಿರುವ ಭಾವಚಿತ್ರ.



ಬೀದರ ತಾಲ್ಲೂಕಿನ ಮೈಲೂರು ಬಡಾವಣೆಯ ಖ್ಯಾತ ನಾಟಿ ವೈದ್ಯರಾದ ಅಬ್ದುಲ್ ರಶೀದ (ಪೀರಬಾಬಾ) ರವರಿಂದ ನಾಟಿ ವೈದ್ಯ ಪದ್ಧತಿ ಕುರಿತು ಮಾಹಿತಿ ಸಂಗ್ರಹಿಸುತ್ತಿರುವ ಭಾವಚಿತ್ರ.

1) **ವಕ್ತಾರರು : ಜಬ್ಬರಮಿಯ್ಯಾ**

ವಯಸ್ಸು : ೬೫ ವರ್ಷ

ಗ್ರಾಮ : ಬೇಲೂರು (ಎನ್)

ಅಂಚೆ : ಗಡಿಕುಸನೂರ

ತಾಲೂಕಾ : ಔರಾದ

1) <u>ದನಕರುಗಳಿಗೆ ಕುಂದು ಬಂದಾಗ:</u>

ಗುಟ್‌ಗುಟ್ಯಾನ ಸೊಪ್ಪು, ಔಡಲ ಸೊಪ್ಪು ತೊಂಡಿ ಸೊಪ್ಪುಗಳು ಚೆನ್ನಾಗಿ ಅರೆದು ರಸ ತೆಗೆದು ದನಕರುಗಳ ಕಿವಿಯಲ್ಲಿ ಮೂರು ದಿನಗಳವರೆಗೆ ಹಾಕಬೇಕು. ದನಕರುಗಳ ಕುಂದು (ಜ್ವರ) ನಿವಾರಣೆಯಾಗಿ, ಆರೋಗ್ಯದಾಯಕವಾಗುತ್ತದೆ.

ದನಕರುಗಳಿಗೆ ಕುಂದು ಬಂದು, ಮೇವು ತಿನ್ನದೇ ಇದ್ದಾಗ, ನೆಲದ ಅತ್ತಿಕಾಯಿ, ಭೂರಗೆನ ಗಿಡದ ತೊಗಟೆ, ಅಜ್ವನ್, ಪಟಕಾ, ಅರಸಿಣ ಬೊಟು ಕುಟ್ಟಿ, ಪೌಡರ ತಯ್ಯಾರಿಸಿ, ಮೊಸರಿನಲ್ಲಿ ಬೆರೆಸಿ, ಮೂರು ದಿನಗಳ ವರೆಗೆ ದನಕರುಗಳಿಗೆ ಕುಡಿಸಬೇಕು. ಕುಂದು/ಜ್ವ ರ ವಾಸಿಯಾಗಿ ಮೇವು ತಿನ್ನುತ್ತವೆ.

2) <u>ಹಾಲು ವೃದ್ಧಿಸುವುದು :</u>

ಎಮ್ಮೆ / ಹಸುಗಳ ಹಾಲು ವೃದ್ಧಿಸಲು ಒಂದು ಕಿಲೋ ಬೆಲ್ಲ, ಪಟಕಾ 100 ಗ್ರಾಂ, ಅರಸಿಣ 200 ಗ್ರಾಂ. ಅಜ್ವನ್ 25 ಗ್ರಾಂ, ಈ ಪದಾರ್ಥಗಳು ಚೆನ್ನಾಗಿ ಮಿಶ್ರಣ ಮಾಡಿ, ನೀರಿನಲ್ಲಿ / ಮುಸುರಿಯಲ್ಲಿ ಬೆರೆಸಿ ಎಂಟು ದಿನಗಳವರೆಗೆ ಎಮ್ಮೆ / ಹಸುಗಳಿಗೆ ಕುಡಿಸಿದರೆ ಅವುಗಳಲ್ಲಿ ಹಾಲು ವೃದ್ಧಿಯಾಗುತ್ತದೆ. ಇದರಿಂದಾಗಿ ಹೆಚ್ಚಿನ ಲಾಭ ಗಳಿಸಬಹುದು.

3) <u>ದನಕರುಗಳ ಕಣ್ಣಿನಲ್ಲಿ ಹೂ ಬಿದ್ದಾಗ :</u>

ದನಕರುಗಳ ಕಣ್ಣಿನಲ್ಲಿ ಹೂ ಬಿದ್ದಾಗ ಅಥವಾ ಪೊರೆ ಬಂದು ಕಣ್ಣು ಕಳೆದುಕೊಳ್ಳುವಂತ್ತಿದ್ದರೆ ಕೊಡಪತ್ರಿಯ ಮೊಗ್ಗಿನ ಚಿಗುರನ್ನು ಕೈಯಲ್ಲಿಯೇ ಚೆನ್ನಾಗಿ ಅದುಮಿ ಅದರ ರಸ / ಬುರುಗನ್ನು 3, 4 ದಿನಗಳ ಕಾಲ ಕಣ್ಣಿಗೆ ಹಚ್ಚಿದಾಗ ಪೊರೆ ಕಳಚಿ ದನಕರುಗಳ ಕಣ್ಣು ಗುಣಮುಖವಾಗುತ್ತದೆ.

2) ವಕ್ತಾರರು : ಸಂಗಯ್ಯಾ ತಂದೆ ಮಾದಯ್ಯಾ ಸ್ವಾಮಿ

ವಯಸ್ಸು : 50 ವರ್ಷ

ಗ್ರಾಮ : ಬೇಲೂರು(ಎನ್)

ಅಂಚೆ : ಗಡಿಕುಶನೂರ

ತಾಲೂಕಾ : ಔರಾದ

1. ಕಾಮಾಲೆ ರೋಗ ನಿವಾರಣೆ :

ಕಾಮಾಲೆ ರೋಗ ನಿವಾರಣೆಗೆ ಅಮೃತ ಬಳ್ಳಿಯ ಮೊದಲನೆ ದಿನಕ್ಕೆ ಒಂದು ಎಲೆ, ಎರಡನೆಯ ದಿನಕ್ಕೆ ಎರಡು ಎಲೆಗಳು, ಮೂರನೆಯ ದಿನಕ್ಕೆ ಮೂರು ಎಲೆಗಳು, ನಾಲ್ಕನೆಯ ದಿನಕ್ಕೆ ನಾಲ್ಕು ಎಲೆಗಳು, ಐದನೆಯ ದಿನಕ್ಕೆ ಐದು ಎಲೆಗಳು ಹೀಗೆ ಐದು ದಿನಗಳು ನಿರಂತರವಾಗಿ ಚಿಗುರೆಲೆಗಳು ದಿನಾಲೂ ಮುಂಜಾನೆಯ ಸಮಯದಲ್ಲಿ ತಿನ್ನಲು ರೋಗಿಗೆ ಕೊಡಬೇಕು. ಇದರಿಂದಾಗಿ ಕಾಮಾಲೆ ರೋಗ ನಿವಾರಣೆಯಾಗುತ್ತದೆ.

2. ಗಂಟು ಮಳಿಗೆ ರೋಗ ನಿವಾರಣೆ :

ಮನುಷ್ಯರಿಗೆ ಗಂಟು ಮಳಿಗೆ ರೋಗ / ಗಂಟಲು ಉಬ್ಬುವುದು ರೋಗ ಕಂಡು ಬಂದಲ್ಲಿ ನೆಲೆದ ಎಕ್ಕೆ ಬೇರು, ಗಂಟಿನ ಅರಿಸಿನ ಬೋಟು, ಕರಿ ಸಾಬೂನು, ಕ್ಯಾರಳ, ಔಡಲ ಪಲಕ ಇವುಗಳನೆಲ್ಲ ಚೆನ್ನಾಗಿ ಸೊಸಿ ಗಂಧ ತೆಗೆದು ಹುಣ್ಣಿಮೆಯ ಪೂರ್ವ ದಿನಗಳಲ್ಲಿ ಗಂಟಲಿಗೆ ಗಂಧ ಚೆನ್ನಾಗಿ ಲೇಪಿಸಬೇಕು. ರಾತ್ರಿ ಮಲಗುವಾಗ ಹಚ್ಚಿಕೊಂಡು ಬೆಳಿಗ್ಗೆ ಸ್ವಲ್ಪ ಬೆಚ್ಚಗಿನ ನೀರಿನಿಂದ ತೊಳೆದುಕೊಳ್ಳಬೇಕು. ಈ ರೀತಿ ಮೂರು ದಿನಗಳವರೆಗೆ ಉಪಚಾರ ಕೈಗೊಂಡರೆ ಗಂಟ ಮಳಿಗೆ ರೋಗ ನಿವಾರಣೆಯಾಗಿ ಗುಣಮುಖರಾಗುತ್ತಾರೆ.

3. ಮನುಷ್ಯರಿಗೆ ದಿನಬಿಟ್ಟು ದಿನಕ್ಕೆ ಜ್ವರ ಬಂದಾಗ :

ಮನುಷ್ಯರಿಗೆ ದಿನಬಿಟ್ಟು ದಿನಕ್ಕೆ ಜ್ವರ ಬರುತ್ತಿದ್ದರೆ ಬಿಲ್ವ ಪತ್ರಿಯ ಮೂರು ದಳಗಳು ನೀರಿನಲ್ಲಿ ಹಾಕಿ ಕುದುಸಿ ಮೂರು ದಿನಗಳವರೆಗೆ ಕೂಡಿಸಬೇಕು. ಜ್ವರ ವಾಸಿಯಾಗುತ್ತದೆ.

4. <u>ಝುಳ ಬಡಿದುಕೊಂಡು ಜ್ವರ ಬಂದಾಗ :</u>

ಬೇಸಿಗೆಯ ದಿನಗಳಲ್ಲಿ ಬಿಸಿ ಗಾಳಿ ಅಥವಾ ಝುಳ ಬಡಿದು ಮೂತ್ರ ಉರಿಯುತ್ತಿದ್ದರೆ ಎಳೆ ಮುತ್ತಲಿನ ಬೇರು ಬಾಯಿಯಲ್ಲಿ ಇಟ್ಟುಕೊಂಡು ಜಗಿಯಬೇಕು. ಇದರಿಂದ ಹೊರ ಸೂಸುವ ರಸ ದೇಹದಲ್ಲಿ ಬೆರೆತು ದೇಹಕ್ಕೆ ತಂಪು ನೀಡಿ ಅದನ್ನು ಸಮಸ್ಥಿತಿಗೆ ತಂದು ಮೂತ್ರ ಉರಿಯುವದು ನಿಲ್ಲುತ್ತದೆ ಹಾಗೂ ಜ್ವರವು ಕೂಡ ಕಡಿಮೆಯಾಗುತ್ತದೆ.

5. <u>ಹೊಟ್ಟೆ ನೋವು ಕಾಣಿಸಿಕೊಂಡಾಗ :</u>

ಸಿಹಿ ತಿಂದಾಗ, ಆಹಾರ ಜೀರ್ಣವಾಗದೇ ಇದ್ದಾಗ, ಹೊಟ್ಟೆ ನೋವು ಕಾಣಿಸಿಕೊಂಡರೆ ಬಿಲ್ವ ಪತ್ರಿಯ ನಾಲ್ಕೈದು ಎಲೆಗಳು ತಿನ್ನಿಸಬೇಕು. ಇದರಿಂದ ಹೊಟ್ಟೆ ನೋವು ನಿವಾರಣೆಯಾಗುತ್ತದೆ.

6. <u>ಚೇಳು ಕಡಿದಾಗ :</u>

ಮನುಷ್ಯನಿಗೆ ಚೇಳು ಕಡಿದಾಗ ದೊಡ್ಡ ನೀಲಗಿರಿ ಕಾಯಿ ಸೋಸಿ ಗಂಧ ತೆಗೆದು ಚೇಳು ಕಡಿದ ದೇಹದ ಭಾಗದಲ್ಲಿ ಹಚ್ಚಿದ್ದರೆ ವಿಷ ಜಲ್ದಿನೆ ಇಳಿದು ಗುಣಮುಖವಾಗುತ್ತದೆ.

ದನಕರುಗಳಿಗಾಗಿ ಉಪಚಾರ :

1. <u>ದನಕರುಗಳಿಗೆ ಕೆಟ್ಟು? ರೋಗ ಬಂದಾಗ :</u>

ದನಕರುಗಳಿಗೆ ಕೆಟ್ಟು ರೋಗ ಬಂದರೆ ಗುಟ್ ಗುಟ್ಯಾನ ಬಳ್ಳಿ ರೊಟ್ಟಿಯಲ್ಲಿಟ್ಟು ದನಗಳಿಗೆ ತಿನಿಸಬೇಕು ಮತ್ತು ಹಸಿರು ಜೋಳದ ಅಂಬಲಿ ಕುಡಿಸಬೇಕು. ಹಾಗೂ ಅಪಿನ ಗಡ್ಡೆ ಕುಟ್ಟಿ ಮಜ್ಜಿಗೆ / ಮೊಸರಿನಲ್ಲಿ ಬೆರೆಸಿ ದನಕರುಗಳಿಗೆ ಕುಡಿಸಿದರೆ ದನಕರುಗಳಿಗೆ ಬಂದ ಕೆಟ್ಟು ರೋಗ ವಾಸಿಯಾಗುತ್ತದೆ.

2. <u>ದನಕರುಗಳ ಎಲುಬು ಕೀಲು ಬಿಟ್ಟಾಗ :</u>

ದನಕರುಗಳು ಕುಸ್ತಿ ಆಡಿ ಅಥವಾ ಎಲ್ಲೋ ಬಿದ್ದು ಎಲುಬು ಕೀಲು ಸಡಿಲಿಸಿಕೊಂಡಾಗ ಔಡಲ ಬೀಜದ ಪಲಕ ಮೊಸಲಿನಲ್ಲಿ ಬೆರೆಸಿ ಎಲುಬು ಕೀಲುಗಳು ಬಿಟ್ಟ ಭಾಗದಲ್ಲಿ ಲೇಪಿಸಬೇಕು. ಮೂರು ದಿನಗಳ ಕಾಲದವರೆಗೆ ಹೀಗೆ ಮಾಡಿದರೆ ಎಲುಬು ಕೀಲುಗಳು ಮೊದಲಿನಂತೆ ಒಂದಕ್ಕೊಂದು ಕೂಡಿಕೊಳ್ಳುತ್ತವೆ.

3. <u>ಮಾಸು (ಗರ್ಭಕೋಶದ ಪೊರೆ) ಬೀಳದೆ ಇದ್ದಾಗ :</u>

ದನಕರುಗಳು ಈದಾಗ (ಕರು ಹಾಕಿದಾಗ) ಅಶಕ್ತವಾದ ಜಾನುವಾರುಗಳಿಂದ ಮಾಸು ಬೀಳುವುದಿಲ್ಲ. ಅಂತಹ ಸಂದರ್ಭದಲ್ಲಿ ತೊಡಸೇನ ಕಟ್ಟಿಗೆಯ ತೊಗಟೆಯನ್ನು ಕುಟ್ಟಿ ಅದನ್ನು ನೀರಿನಲ್ಲಿ ಬೆರೆಸಿ ದನಗಳಿಗೆ ಕುಡಿಸಬೇಕು. ಇದರಿಂದಾಗಿ ಮಾಡು ಬೇಗ ಕಳಚಿ ಬೀಳುತ್ತದೆ.

4. <u>ದನಕರುಗಳ ಮೈ ಹೊರಗೆ ಬಿದ್ದಾಗ:</u>

ದನಕರುಗಳಿಗೆ ಮೈ ಹೊರಗೆ ಬೀಳುತ್ತಿದ್ದರೆ ಮಳ್ಳೆ ಹಣ್ಣಿನ ಗಿಡದ ಮೃದುವಾದ ಮಳ್ಳೆ ಹಣ್ಣಿನ ತೊಗಟೆ ಮತ್ತು ಮುತ್ತಲು ಕಟ್ಟಿಗೆ ಸುಟ್ಟು ಅದರ ಕರಕನ್ನು ಚೆನ್ನಾಗಿ ಸೋಸಿ ಮಜ್ಜಿಗೆಯಲ್ಲಿ ಬೆರೆಸಿ ದನಗಳಿಗೆ ಕುಡಿಸಬೇಕು. ಹಾಗೆಯೇ ದನಗಳು ಕೂಡದಂತೆ ನೋಡಿಕೊಳ್ಳಬೇಕು. ಹೀಗೆ ಮಾಡಿದರೆ ಈ ರೋಗ ವಾಸಿಯಾಗುತ್ತದೆ.

3) **ವಕ್ತಾರರು : ಬಾಲಪ್ಪಾ ತಂದೆ ಬಾಬು**

ವಯಸ್ಸು : ೬೫ ವರ್ಷ

ಗ್ರಾಮ : ಬೇಲೂರ(ಎನ್)

ಅಂಚೆ : ಗಡಿಕುಸನೂರ

ತಾಲೂಕಾ : ಔರಾದ(ಬಿ)

1. **ಹಾವು ಕಚ್ಚಿದಾಗ:**

ಹಾವು ಕಚ್ಚಿದಾಗ ವಿಶಕಂಠದ ಸೊಪ್ಪು ಚೆನ್ನಾಗಿ ಅದುಮಿ ಅದರ ರಸ ತೆಗೆದು ನೀರಿನಲ್ಲಿ ಬೇರೆಸಿ ಹಾವು ಕಚ್ಚಿದವರಿಗೆ ಕುಡಿಯಲು ಕೊಡಬೇಕು. ಅವರಿಗೆ ವಾಂತಿ ಆಗುತ್ತದೆ. ಇದರಿಂದ ವಿಷ ಇಳಿದು ವ್ಯಕ್ತಿ ಗುಣಮುಖನಾಗುತ್ತಾನೆ ಮತ್ತು ಅದೇ ವಿಷ ಕಂಠ ಗಿಡದ ಬೇರಿನಿಂದ ಗಂಧ ತೆಗೆದು ಹಾವು ಕಚ್ಚಿದ ಸ್ಥಾನದಲ್ಲಿ ಹಚ್ಚಬೇಕು.

ಎರಡನೆಯ ವಿಧಾನವೆಂದರೆ ಆಡು ಮುಟ್ಟಲಾರದ ಸೊಪ್ಪಿನ ರಸ ನೀರಿನಲ್ಲಿ ಬೇರೆಸಿ ಕುಡಿಸಬೇಕು ವಾಂತಿ ಆಗುತ್ತದೆ ಇದರಿಂದ ವಿಷ ಇಳಿದು ಗುಣಮುಖರಾಗುತ್ತಾರೆ.

2. **ಫತ್ತರಗಡ್ಡಿ ರೋಗ ನಿವಾರಣೆಗೆ :**

ಫತ್ತರಗಡ್ಡಿ ರೋಗಕ್ಕೆ ನೆಲ ಎಕ್ಕೆಗಿಡದ ಬೇರಿನ ತೊಗಟೆ ಅರೆದು ಜೇನಿನ ತುಪ್ಪದಲ್ಲಿ ಮಿಶ್ರಣ ಮಾಡಿ, ಆ ಗಡ್ಡೆಯಾದ ಸ್ಥಳದಲ್ಲಿ ಲೇಪಿಸಿ ಪಟ್ಟಿ ಕಟ್ಟಬೇಕು. ಮೂರು ದಿನಕ್ಕೆ ಒಂದು ಸಲ ಕಟ್ಟಬೇಕು.

ಎರಡನೆಯ ಪದ್ಧತಿ ತೊಗರೆ ಬೆಳೆ ಕರ್ರಗೆ ಹುರಿದು ಚೆನ್ನಾಗಿ ಅರೆದು ಕೊಬ್ಬರಿ ಎಣ್ಣೆಯಲ್ಲಿ ಬೇರೆಸಿ ಗಡ್ಡೆಗೆ ಹಚ್ಚಿ ಪಟ್ಟಿ ಕಟ್ಟಬೇಕು. ಈ ಫತ್ತರಗಡ್ಡೆ ವಾಸಿಯಾಗಿ ವ್ಯಕ್ತಿ ಗುಣಮುಖನಾಗುತ್ತಾನೆ.

3. **ಕಾಕಬಿಲ್ಲಿ ರೋಗ ನಿವಾರಣೆಗೆ (ಬಗಲಿನ ಸಂದಿಯಲ್ಲಿ ಸಣ್ಣ ಸಣ್ಣ ಗಡ್ಡೆಗಳು) :**

ಕಾಕಬಿಲ್ಲಿ ರೋಗ ನಿವಾರಣೆಗೆ ಗಂಟಾದ ಅರಸಿಣ ಬೊಟ್ಟು ಕುಟ್ಟಿ ಪೌಡರ ತಯ್ಯಾರಿಸಿ ಔಡಲ ಎಣ್ಣೆಯಲ್ಲಿ ಬೆರೆಸಿ ಬಗಲಿನ ಸಂದಿಯಲ್ಲಿ ಲೇಪಿಸಿ ಪಟ್ಟಿ ಕಟ್ಟಬೇಕು. ಮೂರು ದಿನಕ್ಕೆ ಒಂದು ಸಲ ಪಟ್ಟಿ ಬದಲಾಯಿಸಬೇಕು. ಅದರಿಂದ ರೋಗ ವಾಸಿಯಾಗುತ್ತದೆ.

4. <u>ಮಲಜೇರಿ ರೋಗ ನಿವಾರಣೆಗೆ :</u>

ಮನುಷ್ಯರ ಕಾಲಿಗೆ ಮಲಜೇರಿ ರೋಗ ಕಂಡು ಬಂದಲ್ಲಿ ಕೊಡಪತ್ರಿಯ (ಬಿಲ್ವಪತ್ರಿ) ಎಳೆಯಾದ ಎಲೆಯ ರಸ ಹಚ್ಚಬೇಕು ಮತ್ತು ಗೆಜ್ಯಾಟಕ್ಯಾನ್ ಸೊಪ್ಪಿನ ರಸ ಹಾಗೂ ನೆಲ ಅವರಿ ಸೊಪ್ಪಿನ ರಸ ಮಿಶ್ರಣ ಮಾಡಿ ಕಾಲಿಗೆ ಲೇಪಿಸಬೇಕು ಇದರಿಂದ ಮಲಜೇರಿ ರೋಗ ವಾಸಿಯಾಗುತ್ತದೆ.

| | | |
|---|---|---|
| 4) | **ವಕ್ತಾರರು** | **: ಕಂಟೆಪ್ಪಾ ತಂದೆ ಭೀಮಣ್ಣಾ ಪಾಟೀಲ** |
| | ವಯಸ್ಸು | : 78 ವರ್ಷ |
| | ಗ್ರಾಮ | : ಮ.ನಂ. 9-9-180, ಹಾರೂರಗೇರಿ |
| | ತಾಲೂಕಾ | : ಬೀದರ. |

1. **ಹಾವು ಕಡಿದು ಕಾಲು ಉಬ್ಬಿದರೆ** :

ಮನುಷ್ಯರಿಗೆ ಹಾವು ಕಡಿದು ಕಾಲು ಉಬ್ಬಿದ್ದರೆ ವಿಷ ಕಂಠದ ಬೇರು ಸೋಸಿ ಗಂಧ ತೆಗೆದು ಹಚ್ಚಬೇಕು. ಉಬ್ಬಿದ ಕಾಲು ಇಳಿಯುತ್ತದೆ. ಹಾವು ಕಡಿದು ತಲೆಗೆ ಮತ್ತೇರಿ ನಿದ್ರೆ ಬರುತ್ತಿದ್ದರೆ ಹಸಿ ಸುಂಟಿ ಸೋಸಿ ಗಂಧ ತೆಗೆದು ಅವರ ಕಣ್ಣಿನ ಪೊರೆಗೆ ಹಚ್ಚಬೇಕು. ಇದರಿಂದ ನಿದ್ರೆ ಬರದ ಹಾಗೇ ನೋಡಿಕೊಳ್ಳಬಹುದು.

2. **ತಲೆ ನೋವು ನಿವಾರಣೆಗೆ**:

ಮನುಷ್ಯರಿಗೆ ತಲೆ ನೋವು ಆದಾಗ ಬೆಲ್ಲಾ ಮತ್ತು ಅದರಲ್ಲಿ ಕರಿ ಇರುವೆ ಬೆರೆಸಿ ತಿನಿಸಬೇಕು. ಮೇಲಿಂದ ಬಿಸಿ ಚಹಾ ಕುಡಿಸಬೇಕು ಅಥವಾ ಬರೀ ಹೊಟ್ಟೆಯಲ್ಲಿ ತುಳಸಿ ತಪ್ಪಲು ತಿನ್ನಲು ಕೊಡಬೇಕು. ಇದರಿಂದ ತಲೆ ನೋವು ನಿವಾರಣೆ ಆಗುತ್ತದೆ.

3. **ಚೇಳು ಕಡಿದಾಗ ನಿವಾರಣೆ** :

ಮನುಷ್ಯರಿಗೆ ಚೇಳು ಕಡಿದಾಗ ಚೇಳು ಕಡಿಸಿಕೊಂಡ ವ್ಯಕ್ತಿಗೆ ಕಿವಿಗೆ ಗ್ಯಾಜಾಟಕ್ಯಾನ್ ಸೊಪ್ಪಿನ ರಸ ಹಿಂಡಬೇಕು. ಮತ್ತು ಚೇಳು ಕಡಿದ ಭಾಗದಲ್ಲಿ ಪಟ್ಕಾ ಹಚ್ಚಬೇಕು. ಅದರಿಂದ ವಿಷ ನಿವಾರಣೆಯಾಗುತ್ತದೆ ವ್ಯಕ್ತಿ ಗುಣಮುಖನಾಗುತ್ತಾನೆ.

4. **ಕಿವುಡತನ ನಿವಾರಣೆ**:

ಮನುಷ್ಯರಿಗೆ ಕಿವಿ ಕೇಳಿಸದೇ ಇದ್ದಾಗ ಒಂಟೆಯ ಮೂತ್ರ ಕಿವಿಯಲ್ಲಿ ಹಾಕಬೇಕು. ಇದರಿಂದ ಕಿವುಡತನ ನಿವಾರಣೆಯಾಗುತ್ತದೆ.

5. **ಕೂದಲು ಉದರುವಿಕೆಗೆ ನಿವಾರಣೆ** :

ಮನುಷ್ಯರಿಗೆ ಕೂದಲು ಉದರುವುದರಿಂದ ಚರ್ಮ ರೋಗ ಇದ್ದವರಿಗೆ ಕೆಂಪು ದಾಸ್ಯಾಳ ಹೂವಿನ ರಸ ಹಚ್ಚಬೇಕು. ಇದರಿಂದ ಕೂದಲು ಉದರುವುದಿಲ್ಲ ಚರ್ಮ ರೋಗವು ಗುಣಮುಖವಾಗುತ್ತದೆ.

5) **ವಕ್ತಾರರು** : **ಪಂಚಯ್ಯಾ ತಂದೆ ಶಂಕರಯ್ಯಾ ಸ್ವಾಮಿ**

ವಯಸ್ಸು : ೬೨ ವರ್ಷ

ಗ್ರಾಮ : ಹಾರೂರಗೇರಿ

ತಾಲೂಕಾ : ಬೀದರ

**ದನಕರುಗಳಿಗೆ** :-

1) <u>ದನಕರುಗಳಿಗೆ ಗಂಟಲು ರೋಗ ಬಂದಾಗ:</u>

ದನಕರುಗಳಿಗೆ ಗಂಟಲು ರೋಗ ಬಂದಾಗ ಪಪಾಯಿ ಗಿಡದ ಮೂರು ಎಲೆ ಮತ್ತು ಒಂದು ಚಹಾ ಕಪ್ಪಿನ ತುಂಬ ಉಪ್ಪು ಬೇರೆಸಿ ಚೆನ್ನಾಗಿ ಕುಟ್ಟಿ ಉಂಡೆ ಮಾಡಿ ದನಗಳಿಗೆ ತಿನ್ನಿಸಬೇಕು. ಇದರಿಂದ ಗಂಟಲು ರೋಗ ವಾಸಿಯಾಗುತ್ತದೆ.

**<u>ಮನುಷ್ಯರಿಗೆ:</u>**

2) **<u>ಗಂಡಸರಿಗೆ ಮೂತ್ರದಲ್ಲಿ ಬಿಳಿ ಧಾತು ಮತ್ತು ಹೆಂಗಸರಿಗೆ ಬಿಳಿ ಸೆರಗು ಹೋಗುತ್ತಿದ್ದರೆ :</u>**

ಗಂಡಸರಿಗೆ ಮೂತ್ರದಲ್ಲಿ ಬಿಳಿ ಧಾತು ಮತ್ತು ಹೆಂಗಸರಿಗೆ ಬಿಳಿ ಸೆರಗು ಹೋಗುತ್ತಿದ್ದರೆ ಬಿಳಿ ಪಾಂಗರಿ ತೊಗಟೆಯು ಕುಟ್ಟಿ ಮಜ್ಜಿಗೆಯಲ್ಲಿ ರಾತ್ರಿ ಹೊತ್ತು ನೆನೆ ಹಾಕಿ ಮುಂಜಾನೆ ಅದನ್ನು ಸೋಸಿ ಕುಡಿಸಬೇಕು. ಇದರಿಂದಾಗಿ ಧಾತು ಮತ್ತು ಬಿಳಿ ಸೆರಗು ಹೋಗುವುದನ್ನು ನಿಲ್ಲುತ್ತದೆ.

3) **<u>ವಯಸ್ಸಾದವರಿಗೆ ಕಾಲು ಉಬ್ಬಿದರೆ:</u>**

ವಯಸ್ಸಾದವರಿಗೆ ಕಾಲು ಉಬ್ಬಿದರೆ ಕರಿಧತ್ರಿ ಸೊಪ್ಪು ಮತ್ತು ಚೆನ್ನಿಗ್ಯಾನ ಸೊಪ್ಪು ಬೇರೆಸಿ ರಸ ತೆಗೆದು ಕಾಲಿಗೆ ಲೇಪಿಸಬೇಕು. ಕಾಲಿನ ಬಾವು ಇಳಿದು ಕಾಲು ಗುಣಮುಖವಾಗುತ್ತದೆ.

4) **<u>ಕಾಲಿಗೆ / ಕೈಗೆ ಪೆಟ್ಟಾಗಿ ರಕ್ತ ಹೆಪ್ಪುಗಟ್ಟಿದ್ದರೆ ನಿವಾರಣೆ :</u>**

ಕಾಲಿಗೆ / ಕೈಗೆ ಪೆಟ್ಟಾಗಿ ರಕ್ತ ಹೆಪ್ಪು ಗಟ್ಟಿದ್ದರೆ ಲೋಳೆಸರ (ನವಳ ಸರ) ದ ಒಳಗಿನ ಭಾಗ ತೆಗೆದು ಹಂಚಿನ ಮೇಲೆ ಸ್ವಲ್ಪ ಬಿಸಿ ಮಾಡಿ ಕಾಲಿಗೆ / ಕೈಗೆ ಪಟ್ಟಿ ಕಟ್ಟಿದ್ದರೆ ರಕ್ತ ಸಂಚಾರ ಸುಲಭವಾಗುತ್ತದೆ. ಇದರಿಂದ ರಕ್ತ ಹೆಪ್ಪು ಗಟ್ಟಿದ ರೋಗ ನಿವಾರಣೆಯಾಗುತ್ತದೆ.

5) **ಕೊಡಲಿ, ಕತ್ತಿ, ಕುಡುಗೋಲು, ತಾಕಿ ಚರ್ಮಕ್ಕೆ ಗಾಯ ಆಗಿದ್ದಾಗ** :

ಮನುಷ್ಯರಿಗೆ ಕೊಡಲಿ, ಕತ್ತಿ, ಕುಡುಗೋಲು, ತಾಕಿ ಇವುಗಳಿಂದ ಚರ್ಮಕ್ಕೆ ಗಾಯ ಆಗಿ ಹರಿದರೆ ಕತ್ತೆ ಕವಿ ಎಲೆಯ ರಸ ಹಚ್ಚಿ, ಆ ಎಲೆಯಿಂದಲೇ ಪಟ್ಟಿ ಕಟ್ಟಬೇಕು. ಇದರಿಂದಾಗಿ ಗಾಯ ಮಾಯವಾಗಿ ಚರ್ಮ ಒಂದಕ್ಕೊಂದು ಅಂಟಿಕೊಳ್ಳುತ್ತದೆ. ಇದರಿಂದ ರೋಗ ನಿವಾರಣೆಯಾಗುತ್ತದೆ.

6) **ಬೆರಳಿಗೆ ಉಗುರುಸುತ್ತು ಹುಣ್ಣು ಆದಾಗ ನಿವಾರಣೆ** :

ಮನುಷ್ಯರ ಬೆರಳಿಗೆ ಉಗುರುಸುತ್ತು ಹುಣ್ಣು ಆದಾಗ ಕತ್ತೆ ಕವಿ ಎಲೆ ಮತ್ತು ಉಪ್ಪು, ಅರಸಿಣ, ಔಡಲ ಚಣ್ಣೆ ಚೆನ್ನಾಗಿ ಅರೆದು ಗಂಧ ಮಾಡಿ, ಹಚ್ಚಿ ಪಟ್ಟಿ ಕಟ್ಟಬೇಕು. ಇದರಿಂದ ಉಗುರಿನ ಹುಣ್ಣು ವಾಸಿಯಾಗುತ್ತದೆ.

7) **ಮಕ್ಕಳಿಗೆ ನಾಯಿ ಕೆಮ್ಮು ಹತ್ತಿದಾಗ ನಿವಾರಣೆ** :

ಮಕ್ಕಳಿಗೆ ನಾಯಿ ಕೆಮ್ಮು ಹತ್ತಿದಾಗ ಸದಾಪ ಗಿಡದ ಎಲೆ (ತೆಲುಗು ಹೆಸರು) ಬಟ್ಟೆಯಲ್ಲಿ ಕಟ್ಟಿ ಕೊರಳಲ್ಲಿ ಕಟ್ಟಬೇಕು. ಇದರಿಂದ ಕೆಮ್ಮು ನಿವಾರಣೆಯಾಗುತ್ತದೆ.

6) **ವಕ್ತಾರರು** : **ಲಾಲಮದ ತಂದೆ ಅಲಿಸಾಬ**

ವಯಸ್ಸು : 66 ವರ್ಷ

ಗ್ರಾಮ : ಅಮಲಾಪೂರ

ತಾಲೂಕಾ : ಬೀದರ.

**ಮನುಷ್ಯರಿಗೆ** :

1) **ಮೂಲವ್ಯಾಧಿ ರೋಗಕ್ಕೆ** :

ಮನುಷ್ಯರ ಮೂಲವ್ಯಾಧಿ ರೋಗಕ್ಕೆ ಕತ್ತೆ ಕಿವಿ ಸೊಪ್ಪಿನ ರಸ ಜಿರಿಗೆ ಕುಟ್ಟಿ ಮಿಶ್ರಣ ಮಾಡಿ ಏಳು ದಿನಗಳವರೆಗೆ ಕುಡಿಯಲು ಕೊಡಬೇಕು. ಇದರಿಂದಾಗಿ ಮೂಲವ್ಯಾಧಿ ರೋಗ ನಿವಾರಣೆಯಾಗುತ್ತದೆ.

2) **ಕಾಮಾಲೆ ರೋಗ ನಿವಾರಣೆಗೆ** :

ಮನುಷ್ಯರಿಗೆ ಕಾಮಾಲೆ ರೋಗ ಆಗಿದ್ದರೆ ಔಡಲ ಸೊಪ್ಪಿನ ಚಿಗುರು ಚೆನ್ನಾಗಿ ಅದುಮಿ ಅದರಲ್ಲಿ ಬೆಣ್ಣೆ ಬೇರೆಸಿ ತಿನ್ನಲು ಕೊಡಬೇಕು. ಇದರಿಂದ ಕಾಮಾಲೆ ರೋಗ ನಿವಾರಣೆಯಾಗುತ್ತದೆ.

3) **ಹಾವು ಕಡಿದಾಗ ನಿವಾರಣೆ** :

ಮನುಷ್ಯರಿಗೆ ಹಾವು ಕಡಿದರೆ ಆಡು ಮುಟ್ಟದ ಸೊಪ್ಪಿನ ರಸ ಕುಡಿಸಬೇಕು ಇದರಿಂದ ವಾಂತಿ ಆಗುತ್ತದೆ ಇದರಿಂದ ವಿಷ ಇಳಿದು ವ್ಯಕ್ತಿ ಗುಣಮುಖನಾಗುತ್ತಾನೆ.

4) **ಚೇಳು ಕಡಿದಾಗ ನಿವಾರಣೆ** :

ಮನುಷ್ಯರಿಗೆ ಚೇಳು ಕಡಿದಾಗ ಪಪ್ಪಾಯಿ ಗಿಡದ ರಸ ಚೇಳು ಕಡಿದ ಭಾಗದ ವಿರುದ್ಧ ಅಂಗೈಯಲ್ಲಿ ಹಾಕಬೇಕು. ವಿಷ ಇಳಿದು ವ್ಯಕ್ತಿ ಗುಣಮುಖನಾಗುತ್ತಾನೆ.

5) **ಹೆಣ್ಣು ಮಕ್ಕಳ ಋತು ಚಕ್ರ (ಮುಟ್ಟು) ಆಗದೇ ಇದ್ದಾಗ ನಿವಾರಣೆ** :

ಹೆಣ್ಣು ಮಕ್ಕಳಿಗೆ ಸಕಾಲಕ್ಕೆ ಋತು ಚಕ್ರ (ಮುಟ್ಟು) ಆಗದೇ ಇದ್ದಾಗ ತೊಟ್ಟಿಲಕಾಯಿ ಮತ್ತು ಉಪ್ಪು ಕುಟ್ಟಿ ಆ ಪೌಡರನ್ನು ಹಾಲಿನಲ್ಲಿ ಬೇರಿಸಿ, ಏಳು ದಿನಗಳವರೆಗೆ ಕುಡಿಸಬೇಕು. ನಿಯಮದಂತೆ ಋತು ಚಕ್ರವಾಗುತ್ತದೆ.

6) **ಕೀಲು ನೋವು ನಿವಾರಣೆಗೆ** :

ಮನುಷ್ಯರಿಗೆ ಮೊಳಕಾಲು ಹಿಡಿದುಕೊಂಡರೆ, ಕೀಲು ನೋವು ಕಂಡು ಬಂದರೆ ಆಡುಮುಟ್ಟದ ಸೊಪ್ಪಿನ 1/4 ಭಾಗ ಬೀಜ ವಿಳ್ಯದ ಎಲೆಯಲ್ಲಿ ತಿನ್ನಲು ಕೊಟ್ಟು ದಿನಕ್ಕೆ ಒಂದು ಲೀಟರ ಮೊಸರು ಕುಡಿಯಲು ಕೊಡಬೇಕು. ಇದರಿಂದ ಕೀಲು ನೋವು ನಿವಾರಣೆಯಾಗುತ್ತದೆ.

7) **ಸ್ತ್ರೀಯರಿಗೆ ಹೊಟ್ಟೆ ನೋವು ನಿವಾರಣೆ** :

ಸ್ತ್ರೀಯರಿಗೆ ಹೊಟ್ಟೆ ನೋವು ಕಂಡುಬಂದಲ್ಲಿ ಬುರುಗಿನ ಕಾಯಿಯ ತೊಗಟೆ ಕುಟ್ಟಿ ಮೊಸರಿನಲ್ಲಿ / ಮಜ್ಜಿಗೆಯಲ್ಲಿ ಕುಡಿಸಬೇಕು. ನೋವು ಕಡಿಮೆಯಾಗುತ್ತದೆ.

8) **ಸ್ತ್ರೀಯರಿಗೆ ಬಿಳಿ (ಸೆರಗು) ನಿವಾರಣೆ** :

ಸ್ತ್ರೀಯರಿಗೆ ಬಿಳಿ (ಸೆರಗು) ಧಾತು ಹೋಗುತ್ತಿದ್ದರೆ, ಬುರಗ್ಯಾನ ತೊಗಟೆಲ್ಲಿನ ರಸ ತೆಗೆದು ಅದರಲ್ಲಿ ಜೀರಿಗೆ ಪುಡಿ ಮಾಡಿ, ಅದನ್ನು ನೀರಿನಲ್ಲಿ ಮಿಶ್ರಣ ಮಾಡಿ ಕುಡಿಯಲು ಕೊಡಬೇಕು. ಬಿಳಿ ಧಾತು ಹೋಗುವುದನ್ನು ನಿಲ್ಲುತ್ತದೆ.

9) **ಸ್ತ್ರೀಯರಿಗೆ ಕೆಂಪು ಸೆರಗು (ಧಾತು) ನಿವಾರಣೆ** :

ಸ್ತ್ರೀಯರಿಗೆ ಕೆಂಪು ಸೆರಗು (ಧಾತು) ಹೋಗುತ್ತಿದ್ದರೆ, ಕೆಂಪು ಔಡಕೆನ ತೊಗಟೆ ಮಜ್ಜಿಗೆಯಲ್ಲಿ ಬೆರೆಸಿ, ಕುಡಿಯಲು ಕೊಟ್ಟರೆ ಸ್ತ್ರೀಯರಿಗೆ ಕೆಂಪು ಸೆರಗು (ಧಾತು) ಹೋಗುವುದು ನಿಲ್ಲುತ್ತದೆ.

10) **ಪುರುಷರ ನಪುಂಸಕತನ ನಿವಾರಣೆ** :

ಪುರುಷರಲ್ಲಿ ವಿರ್ಯ್ಯಾಣುಗಳು ಕಡಿಮೆಯಾಗುತ್ತಿದ್ದರೆ / ನಪುಂಸಕತನ ಇದ್ದಾಗ ಟರಬುಜ ಬೀಜ, ಕಾಜು, ಕಿಸಮಿಸ್, ಜಾಜಿಕಾಯಿ, ಖರ್ಜೂರ, ಖೊಬ್ಬರಿ, ಸಕ್ಕರೆ ಈ ಎಲ್ಲವುಗಳು ಸರಿಸಮವಾಗಿ ಬೆರೆಸಿ, ಕುಟ್ಟಿ ಪೌಡರ ತಯ್ಯಾರಿಸಿ ದಿನಾಲು ಎರಡು ಚಮಚ ಪೌಡರ ಜೊತೆಗೆ ಎರಡು ಗಿಲಾಸ ಹಾಲು ಕುಡಿಯಲು ಕೊಡಬೇಕು. ವಿರ್ಯಾಣುಗಳು ವೃದ್ಧಿಯಾಗಿ ಗಂಡಸತನ ಬರುತ್ತದೆ.

11) <u>ಪುರುಷರ ಧಾತು ಸ್ಖಲನ ನಿವಾರಣೆ :</u>

ಪುರುಷರ ಧಾತು ಸ್ಖಲನವಾಗುತ್ತಿದ್ದರೆ, ಭೂರಗೆನ ತೊಗಟೆಯು ಕುಟ್ಟಿ ಮೊಸರಿನಲ್ಲಿ ಬೆರೆಸಿ ಕುಡಿಸಬೇಕು. ಇದರಿಂದಾಗಿ ಧಾತು ಸ್ಖಲನವಾಗುವುದಿಲ್ಲ.

12) <u>ಮೂಲವ್ಯಾಧಿ ನಿವಾರಣೆ:</u>

ಈರುಳ್ಳಿ ರಸ ಕುಡಿಯಲು ಕೊಟ್ಟು, ಮತ್ತು ಈರುಳ್ಳಿ ಮತ್ತು ಕರ್ಪೂರ ಮಿಶ್ರಣ ಮಾಡಿ ಗುದದ್ವಾರಕ್ಕೆ ಕಟ್ಟಬೇಕು. ಇದರಿಂದಾಗಿ ಮೂಲವ್ಯಾಧಿ ರೋಗ ಗುಣಮುಖವಾಗುತ್ತದೆ.

13) <u>ತಲೆನೋವು ನಿವಾರಣೆ:</u>

ತಲೆ ನೋವು ಆದಾಗ, ಕೋಳಿ ಮೊಟ್ಟೆಯ ಬಿಳಿ ರಸವನ್ನು ಕಿವಿಯಲ್ಲಿ ಏರಿಸಬೇಕು ತಲೆನೋವು ಕಡಿಮೆಯಾಗುತ್ತದೆ.

14) <u>ಯಾವುದೇ ರೋಗ ನಿವಾರಣೆಗೆ :</u>

ಯಾವುದೇ ರೋಗ ಬರಲಿ ಹಸಿ ಶುಂಠಿ ರಸದಲ್ಲಿ ಉಪ್ಪು ಬೆರೆಸಿ ಕುಡಿಸಬೇಕು. ರೋಗ ನಿವಾರಣೆಯಾಗುತ್ತದೆ.

7) **ವಕ್ತಾರರು** : **ಮಾಣಿಕಪ್ಪಾ ತಂದೆ ಸಿದ್ದಪ್ಪ ಅಡಕರ**

ವಯಸ್ಸು : ೮೮ ವರ್ಷ

ಗ್ರಾಮ : ಮಲ್ಕಾಪೂರ

ತಾಲೂಕಾ : ಬೀದರ

**ದನಕರುಗಳಿಗೆ**:

1) **ದನಕರುಗಳಿಗೆ ಬಾಯಿಗೆ ಕುಂದುರೋಗ ನಿವಾರಣೆ** :

ದನಕರುಗಳಿಗೆ ಬಾಯಿಗೆ ಕುಂದು ಬಂದಾಗ ಕುದುರೆ ಬೇವಿನ ಸೊಪ್ಪು, ಜಿಲಿಗೆ, ಬೆಲ್ಲ ಮಿಶ್ರಣ ಮಾಡಿ ಕುಟ್ಟಿ ಮಜ್ಜಿಗೆಯಲ್ಲಿ 3 ದಿವಸಗಳ ಕಾಲ ಕುಡಿಸಬೇಕು. ಕುಂದು (ಜ್ವರ) ನಿವಾರಣೆಯಾಗಿ ದನಕರುಗಳು ಗುಣಮುಖಯಾಗುತ್ತವೆ.

೨) **ದನಕರುಗಳ ಮೈ ಹೊರಗೆ (ಗುದದ್ವಾರ) ಬಿದ್ದಾಗ ನಿವಾರಣೆ** :

ದನಕರುಗಳ ಮೈ ಹೊರಗೆ (ಗುದದ್ವಾರ) ಬಿದ್ದಾಗ ಕೈಗೆ ಒಳ್ಳೆಣ್ಣೆ ಹಚ್ಚಿಕೊಂಡು ಆ ಹೊರಬಿದ್ದ ಚರ್ಮವನ್ನು ಒಳಗೆ ಹಾಕಬೇಕು. ಇದಕ್ಕಿಂತ ಪೂರ್ವದಲ್ಲಿಯ ದನಕರುಗಳಿಗೆ ಒಂದು ಪಾಕೇಟು ಸರಾಯಿ ಕುಡಿಸಬೇಕು ಮತ್ತು ದನಗಳು ಕೂಡದಂತೆ ನೋಡಿಕೊಳ್ಳಬೇಕು. ಇದರಿಂದ ದನ ಕರುಗಳ ಮೈ ಹೊರಗೆ ಬೀಳುವುದಿಲ್ಲ.

3) **ದನಕರುಗಳು ಮೇವು ತಿನ್ನದೆ ಇದ್ದಲ್ಲಿ ನಿವಾರಣೆ** :

ದನಕರುಗಳು ಮೇವು ತಿನ್ನದೆ ಬಡಕಲ್ಲು (ಸೊರಗಿ ಹೋಗುತ್ತಿದ್ದರೆ) ಆಗುತ್ತಿದ್ದರೆ, ಲಮಾಣಿ ಸೊಪ್ಪು, ನೆಲಬೇವಿನ ಸೊಪ್ಪು, ಕುಟ್ಟಿ ಹಿಟ್ಟಿನಲ್ಲಿ ಬೆರೆಸಿ, ಉಂಡೆ ಮಾಡಿ 3 ದಿನಗಳ ಕಾಲ ದನಕರುಗಳಿಗೆ ತಿಳಿಸಬೇಕು. ರೋಗ ಗುಣವಾಗಿ ಮೇವು ಚೆನ್ನಾಗಿ ತಿನ್ನುತ್ತವೆ.

4) **ದನಕರುಗಳ ಹೊಟ್ಟೆ ಉಬ್ಬಿದಾಗ ನಿವಾರಣೆ** :

ದನಕರುಗಳ ಹೊಟ್ಟೆ ಉಬ್ಬಿದಾಗ ಔಡಲ ಗಿಡದ ಬೇರಿನ ರಸ ಬಲ ಕಿವಿಯಲ್ಲಿ ಹಾಗೂ ಎಡ ಮೂಗಿನ ಸೊಳ್ಳೆ (ದ್ವಾರ) ಯಲ್ಲಿ ಹಾಕಬೇಕು. ಹೊಟ್ಟೆ ಇಳಿಯುತ್ತದೆ.

5) **ದನಕರುಗಳಿಗೆ ಬಾಯಿಯಲ್ಲಿ ಬುರುಗು / ನೊರೆ ನಿವಾರಣೆ :**

ದನಕರುಗಳಿಗೆ ಯಾವುದೋ ರೋಗ ಬಂದು ಬಾಯಿಯಲ್ಲಿ ಬುರುಗು / ನೊರೆ ಬಂದಾಗ ಬಾಳೆಹಣ್ಣು, ಪುದಿನಾ, ಸೊಪ್ಪು, ಮೆಂತೆ ಪಲ್ಯ ಇವುಗಳನ್ನು ಒಳ್ಳೆಣ್ಣೆಯಲ್ಲಿ (ಸಿಹಿ ಎಣ್ಣೆ) ಎದ್ದಿ ತಿನ್ನಿಸಬೇಕು.

6) **ದನಕರುಗಳಿಗೆ ಹುಳು / ಕೀಟ ಬಿದ್ದಾಗ ನಿವಾರಣೆ :**

ದನಕರುಗಳಿಗೆ ಯಾವುದೇ ಕಾರಣದಿಂದಾಗಿ ಹುಳು / ಕೀಟ ಬಿದ್ದಾಗ, ಬಿಲ್ವಪತ್ರಿ ಎಲೆ ಹೊಟ್ಟೆಯಲ್ಲಿ ತಿನ್ನಲು ಕೊಟ್ಟು, ಹುಳು ಬಿದ್ದ ಭಾಗದ ಮೇಲೆ ಸೀಮೆ ಎಣ್ಣೆ ಸಿಂಪಡಿಸಬೇಕು.

7) **ದನಕರುಗಳಿಗೆ ಪಿಚ್ಚು / (ಸಿಳ್ಳು) ಬರುತ್ತಿದ್ದರೆ ನಿವಾರಣೆ :**

ದನಕರುಗಳಿಗೆ ಪಿಚ್ಚು / (ಸಿಳ್ಳು) ಬರುತ್ತಿದ್ದರೆ ಅದರ ಹೋಡುಗಳ ಬುಡದಲ್ಲಿ ಸಿಹಿ ಎಣ್ಣೆ ಇಳಿ ಬಿಡಬೇಕು. ರೋಗ ವಾಸಿಯಾಗುತ್ತದೆ.

8) **ದನಕರುಗಳ ಕಣ್ಣಿನಲ್ಲಿ ಹೂ (ಪೊರೆ ಬಂದಾಗ) ನಿವಾರಣೆ :**

ದನಕರುಗಳ ಕಣ್ಣಿನಲ್ಲಿ ಹೂ (ಪೊರೆ ಬಂದಾಗ) ಬಿದ್ದಾಗ ಸ್ವಲ್ಪ ಕ್ಯಾರಳ ಎಣ್ಣೆ ಕಣ್ಣಿನಲ್ಲಿ ಹಾಕಬೇಕು ಮತ್ತು ಕೊಡಪತ್ರಿ / ಬಿಲ್ವಪತ್ರಿ ಸೊಪ್ಪು ಮೆಲೆದು ಅದರ ಕಣ್ಣಿನಲ್ಲಿ ಉಗುಳಬೇಕು. ಕಣ್ಣು ತಿಳಿಯಾಗಿ ಕಣ್ಣಿಗೆ ದೃಷ್ಠಿ ಬರುತ್ತದೆ. ಇದರಿಂದ ದನಕರುಗಳ ದೃಷ್ಠಿ ಮೊದಲಿನಂತೆ ಆಗುತ್ತದೆ.

9) **ದನಕರುಗಳಲ್ಲಿ ಹಾಲು ವೃದ್ಧಿಯಾಗುವ ಔಷಧಿ :**

ದನಕರುಗಳಲ್ಲಿ ಹಾಲು ವೃದ್ಧಿಯಾಗಿಸಲು ಗಿಳೆ ಮೂಗಿನ ಗಡ್ಡೆ ಹಾಗೂ ಹಜಾರ ಬೇರಿನ ತೊಗಟೆ ಕುಟ್ಟಿ ಮಜ್ಜಿಗೆಯಲ್ಲಿ ಬೆರೆಸಿ ದನಕರುಗಳಿಗೆ ಕುಡಿಸಿದಾಗ ಹಾಲಿನ ಅಂಶ ವೃದ್ಧಿಯಾಗುತ್ತದೆ. ದನಕರುಗಳು ಕೊಡುವ ಹಾಲಿನ ಪ್ರಮಾಣ ಹೆಚ್ಚುತ್ತದೆ.

10) **ದನಕರುಗಳಿಗೆ ಗರ್ಭಧಾರಣೆಯಾಗದಿದ್ದ ಸಂದರ್ಭದಲ್ಲಿ ನಿವಾರಣೆ :**

ದನಕರುಗಳಿಗೆ ಗರ್ಭಧಾರಣೆಯಾಗದಿದ್ದಲ್ಲಿ ಲೊಳೆಸರವು (ನವುಳಸರ) ರಾತ್ರಿ ಹೊತ್ತು ಅರಸಿಣಪುಡಿ, ಉಪ್ಪು ಹಚ್ಚಿಟ್ಟು ಮುಂಜಾನೆ ದನಗಳಿಗೆ ತಿನ್ನಿಸಬೇಕು ಅಥವಾ ದಿನಾಲೂ ಒಂದೊಂದು ಪಾವು ಚಣಿಗೆ ಬೆಳೆ ತಿನ್ನಿಸಬೇಕು. ಹೀಗೆ ಮಾಡಿದರೆ ದನಗಳು ಗರ್ಭಧಾರಣೆಗೆ ಅಣಿಯಾಗುತ್ತವೆ.

11) ಎತ್ತುಗಳ ಹೆಗಲು ಉಬ್ಬಿದ್ದರೆ ನಿವಾರಣೆ:

ಎತ್ತುಗಳು ನೋಗ ಹೊತ್ತು ಹೊತ್ತು ಹೆಗಲು ಉಬ್ಬಿದ್ದರೆ ಚಿತ್ರಮಲಂ, ಬೇವು ರಸ, ಜಿದ್‌ವಾರ, ಬೆಣ್ಣೆಯಲ್ಲಿ ಬೆರೆಸಿ ಹೆಗಲಿಗೆ ಲೇಪಿಸಬೇಕು. ಬಾಬು ಇಳಿದು ಎತ್ತುಗಳ ನೋವು ಕಡಿಮೆಯಾಗುತ್ತದೆ.

1) ಅರ್ಧ ತಲೆ ನೋವಿಗೆ ನಿವಾರಣೆ:

ಮನುಷ್ಯರ ಅರ್ಧ ತಲೆ ನೋವಿಗೆ ಚಿತ್ರಮಲಂ ಬೇರು ಸೋಸಿ, ಅದರ ಗಂಧ ತೆಗೆದು ಗಂಧದಿಂದ ಸಣ್ಣ ಗೇರೆ ಎಳೆಯಬೇಕು. ಅರ್ಧ ತಲೆ ನೋವು ವಾಸಿಯಾಗುತ್ತದೆ.

2) ಹಲ್ಲು ನೋವಿಗಾಗಿ ನಿವಾರಣೆ:

ಹಲ್ಲು ನೋವಿಗಾಗಿ ಅಡಿ ಅವರಿ ತೊಗಟೆ ಹಾಗೂ ಕಾಚು ಮತ್ತು ಸುಣ್ಣ ವಿಳ್ಯದ ಎಲೆಯಲ್ಲಿ ತಿನ್ನಿಸಬೇಕು. ಹಲ್ಲು ನೋವು ವಾಸಿಯಾಗುತ್ತದೆ.

3) ಕಾಕಬಿಲ್ಲಿ (ಬಗಲಿನಲ್ಲಿ ಗಡ್ಡೆ) ನಿವಾರಣೆ:

ಕಾಕಬಿಲ್ಲಿ (ಬಗಲಿನಲ್ಲಿ ಗಡ್ಡೆ) ಆದಾಗ ಮೂರು ತುಲೆ ತಂದು ಬೆಂಕಿ ಮೇಲೆ ಹಿಡಿದು ಬಿಸಿ ಮಾಡಿ, ಬಗಲಿನಲ್ಲಿ ಹಚ್ಚಬೇಕು. ತದನಂತರ ಸ್ವಲ್ಪ ಬೆಂಕಿ ಕಾವು / ಸೆಕೆ ನೀಡಬೇಕು. ಕಾಕಬಿಲ್ಲಿ ರೋಗ ಕಡಿಮೆಯಾಗುತ್ತದೆ.

4) ಕುಷ್ಠರೋಗದ ನಿವಾರಣೆಗಾಗಿ :

ಕುಷ್ಠರೋಗದ ನಿವಾರಣೆಗಾಗಿ ಅಮೃತ ಬಳ್ಳಿಯ ಗಡ್ಡೆಯನ್ನು ಕಲ್ಲಿಗೆ ಸೋಸಿ ಗಂಧ ಬಂದಾಗ ಕೈಯಿಂದ ಮುಟ್ಟದೇ ನೇರವಾಗಿ ಬಾಯಿಂದ ನೆಕ್ಕಿಸಬೇಕು. ಕುಷ್ಠರೋಗ ವಾಸಿಯಾಗುತ್ತದೆ.

5) ಮುಳ್ಳು ನಟ್ಟಿದ್ದರೆ ನಿವಾರಣೆ :

ಯಾವುದೇ ಮುಳ್ಳು ಕಾಲಲ್ಲಿ / ದೇಹದ ಯಾವುದೇ ಭಾಗದಲ್ಲಿ ನಟ್ಟಿದ್ದರೆ ಉತ್ರಾಣಿ ಎಲೆ ಚೆನ್ನಾಗಿ ಅರೆದು, ಕೋಣ ಈದ ಎಮ್ಮೆಯ ಬೆಣ್ಣೆಯಲ್ಲಿ ಬೆರೆಸಿ, ಒಂದೊಂದು ಎಲೆ 3 ದಿನಗಳ ಕಾಲ ತಿನ್ನಿಸಬೇಕು. ಮುಳ್ಳು ಕರಗಿ ಹೋಗುತ್ತದೆ. ಇಲ್ಲವೆ ಹೊರ ಬರುತ್ತದೆ.

8. ವಕ್ತಾರರು : **ಶಿವಲಿಂಗಪ್ಪಾ ತಂದೆ ಹಣಮಂತಪ್ಪ ಬಸಣ್ಣನೊರ**

ವಯಸ್ಸು : ೬೦ ವರ್ಷ

ಗ್ರಾಮ : ಚಿಟ್ಟಾವಾಡಿ

ತಾಲೂಕಾ : ಬೀದರ

1) **ಬೆಂಕಿಯಿಂದ ಮೈ ಸುಟ್ಟುಕೊಂಡಿದ್ದರೆ ನಿವಾರಣೆ :**

ಬೆಂಕಿಯಿಂದ ಮೈ ಸುಟ್ಟುಕೊಂಡಿದ್ದರೆ ಧೂಪಾ, ರಸಕಾಪೂರ ಇವುಗಳನ್ನು ಒಳ್ಳೆಣ್ಣೆಯಲ್ಲಿ ಬೆರೆಸಿ ಗಾಯವಾದ ಸ್ಥಳದಲ್ಲಿ ಹಚ್ಚಿಕೊಳ್ಳಬೇಕು. ಗಾಯ ಗುಣಮುಖವಾಗುತ್ತದೆ.

2) **ಕಾಮಾಲೆ ರೋಗಕ್ಕೆ ನಿವಾರಣೆ :**

ಕಾಮಣಿ ರೋಗದ ನಿವಾರಣೆಗೆ ಒಂದು ಬೆಳ್ಳುಳ್ಳಿ, ಮೆಣಸು, ಔಡಲ ಮುಗುಳು ಬೆರೆಸಿ ಚೆನ್ನಾಗಿ ಕುಟ್ಟಿ ಗುಳಿಗೆ ಮಾಡಿ, ದಿನಕ್ಕೆ ಮೂರು ಸಲ ಬರಿ ಹೊಟ್ಟೆಯಲ್ಲಿ ತಿನ್ನಲು ಕೊಡಬೇಕು ಮತ್ತು ರೊಟ್ಟಿ ಮತ್ತು ಬದನೆಕಾಯಿ ಪಲ್ಯ ಊಟಕ್ಕೆ ಸಾಯಂಕಾಲ ನೀಡಬೇಕು. ಹೀಗೆ ಮಾಡಿದರೆ ಕಾಮಾಲೆ ರೋಗ ವಾಸಿಯಾಗುತ್ತದೆ.

3) **ಮಲಜೇರಿ ರೋಗಕ್ಕೆ ನಿವಾರಣೆ :**

ಮಲಜೇರಿ ರೋಗಕ್ಕೆ ಬಾವು ಎರಿದ ಕಾಲಿನ ಸ್ವಲ್ಪ ಚರ್ಮ ಸೀಳಿ, ಗೂರ್ಜಿಸೊಪ್ಪು, ಧತ್ರಿಸೊಪ್ಪು, ತೊಂಡಿ ಸೊಪ್ಪುಗಳು ಬೆರೆಸಿ, ಕುಟ್ಟಿ ರಸ ತೆಗೆದು ಕಾಲಿಗೆ ಚೆನ್ನಾಗಿ ಲೇಪಿಸಬೇಕು. ಇದರಿಂದಾಗಿ ಕಾಲಿಗೆ ಆದ ಮಲಜೇರಿ ರೋಗ ವಾಸಿಯಾಗುತ್ತದೆ.

4) **ದವರಿ ರೋಗದ ನಿವಾರಣೆಗೆ :**

ದವರಿ ರೋಗದ ನಿವಾರಣೆಗೆ ಧತ್ರಿ ಸೊಪ್ಪು, ತೊಂಡಿ ಸೊಪ್ಪು, ಗೂರ್ಜಿ ಸೊಪ್ಪುಗಳು ಚೆನ್ನಾಗಿ ಕುಟ್ಟಿ ರಸ ತೆಗೆದು ಹಚ್ಚಬೇಕು. ದವರಿರೋಗ ವಾಸಿಯಾಗುತ್ತದೆ.

5) **ಚೇಳು ಕಡಿದಾಗ ನಿವಾರಣೆ** :

ಚೇಳು ಕಡಿದಾಗ ಔಡಲ ತಪ್ಪಲು ಔಷಧ ರೂಪದಲ್ಲಿ ಜಗಿದು ಹಚ್ಚಿಕೊಳ್ಳಬೇಕು ಮತ್ತು ಅದೇ ಸೊಪ್ಪಿನ ರಸ ತೆಗೆದು ಚೇಳು ಎಡಭಾಗಕ್ಕೆ ಕಡಿದರೆ ಬಲಭಾಗದ ಕಿವಿಯಲ್ಲಿ ಐದಾರು ಹನಿ ರಸ ಹಾಕಬೇಕು. ಅದೇ ರೀತಿಯಾಗಿ ಗೆಜಿಟಿಕ್ಯಾನ್ ಸೊಪ್ಪು ಚೆನ್ನಾಗಿ ಅದುಮಿ ಚೇಳು ಕಡಿದ ಸ್ಥಾನದಲ್ಲಿ ಹಚ್ಚಬೇಕು. ಆ ಚೇಳಿನ ವಿಷ ಇಳಿದು, ನೋವಿನಿಂದ ಗುಣಮುಖರಗುತ್ತಾರೆ.

6) **ಕಣಗೀಲು ಕಡಿದಾಗ ನಿವಾರಣೆ** :

ಕಣಗೀಲು ಕಡಿದಾಗ ಘೂಂಡಿ ಸೊಪ್ಪು, ಚೆನ್ನಾಗಿ ಅದುಮಿ ಕಣಗೀಲು ಕಡಿದ ಸ್ಥಾನದಲ್ಲಿ ಕಟ್ಟಬೇಕು. ಇದರಿಂದ ಕಣಗೀಲು ಕಡಿದ ನೋವು ನಿವಾರಣೆಯಾಗುತ್ತದೆ.

7) **ಮುಳ್ಳು ನಟ್ಟಾಗ ನಿವಾರಣೆ** :

ಮುಳ್ಳು ನಟ್ಟಾಗ ಉತ್ರಾಣಿ ಸೊಪ್ಪು ಮತ್ತು ಬೆಲ್ಲ ಸೇರಿಸಿ ಮೂರು ದಿನಗಳ ವರೆಗೆ ತಿನ್ನಲು ನೀಡಬೇಕು. ಇದರಿಂದಾಗಿ ಮುಳ್ಳು ಹೊರಬರುತ್ತದೆ / ಒಳಗೆ ಸುಟ್ಟು ಹೋಗುತ್ತದೆ.

**ದನಕರುಗಳಿಗಾಗಿ** :-

1) **ಕರಿನ್ ಘೂಡ್ ರೋಗ ನಿವಾರಣೆ** :

ದನಕರುಗಳಿಗೆ ಕರಿನ್‌ಘೂಡ್ ಆದರೆ ಈರುಳ್ಳಿ ಒಡೆದು ದನಗಳ ಮಲವಿಸರ್ಜನೆಯ ಭಾಗದಲ್ಲಿ ಇಡಬೇಕು ಮತ್ತು ಔಡಲ ಸೊಪ್ಪಿನ ರಸ ಕಿವಿಯಲ್ಲಿ ಹಿಂಡಬೇಕು. ಇದರಿಂದಾಗಿ ಕರಿನ್‌ಘೂಡ್ ರೋಗ ನಿವಾರಣೆಯಾಗುತ್ತದೆ.

2) **ಕರು ಹಾಕಿದ ಸಂದರ್ಭದಲ್ಲಿ ಮಾಸು (ಗರ್ಭಕೋಶದ ಪೊರೆ) ಬೇಗ ಬೀಳದೆ ಇದ್ದಾಗ** :

ಕರು ಹಾಕಿದ ಸಂದರ್ಭದಲ್ಲಿ ಮಾಸು (ಗರ್ಭಕೋಶದ ಪೊರೆ) ಬೇಗ ಬೀಳದೆ ಇದ್ದಾಗ, ಕಳವಿ (ಭತ್ತ), ಅಗಸೆ, ಭೆಂಡಿಕಾಯಿ ಸೊಪ್ಪು, ಕಾಯಿ, ದನಗಳಿಗೆ ತಿನಿಸಬೇಕು. ಇದರಿಂದ ಬೇಗ ಮಾಸು ಬೀಳುತ್ತದೆ.

**೯) ವಕ್ತಾರರು : ಮಹ್ಮದ ಸಾಬ ತಂದೆ ಇಸ್ಮಾಯಿಲ್ ಸಾಬ ಬಡಾಬಡಾ**

ವಯಸ್ಸು : 75 ವರ್ಷ

ಗ್ರಾಮ : ಅಮಲಾಪೂರ

ತಾಲೂಕಾ : ಬೀದರ

1) <u>ಹಾವು ಕಡಿದಾಗ ಕಾಲು / ಕೈ, ಮೈ ಉಬ್ಬಿದ್ದರೆ ನಿವಾರಣೆ:</u>

ಹಾವು ಕಡಿದಾಗ ಕಾಲು / ಕೈ, ಮೈ, ಉಬ್ಬಿದ್ದರೆ ಕಾಅಶ್ರೀ, ಬಿಳಿಶ್ರೀ ಇವೆರಡೂ ಮಿಶ್ರಣ ಮಾಡಿ ಕಾಲಿಗೆ ಹಚ್ಚಬೇಕು. ಕಾಲಿನ ಬಾವು ಇಳಿದು ಗುಣಮುಖವಾಗುತ್ತದೆ. ಮತ್ತೊಂದು ವಿಧಾನವೆಂದರೆ ಗುಟ್ ಗುಟ್ಯಾನ್ ಸೊಪ್ಪು, ಗುಲ್ ಬೆಲ, ಕಂದೊಲಿಯ ಎಲೆ / ಗಡ್ಡೆ ಚೆನ್ನಾಗಿ ಕುಟ್ಟಿ ರಸ ತೆಗೆದು ಉಬ್ಬಿದ ಸ್ಥಳದಲ್ಲಿ ಲೇಪಿಸಬೇಕು ರೋಗ ಗುಣಮುಖವಾಗುತ್ತದೆ.

೨) <u>ದನಕರುಗಳಿಗೆ ಕುಂದು ಬಂದಾಗ ನಿವಾರಣೆ :</u>

ದನಕರುಗಳಿಗೆ ಕುಂದು ಬಂದಾಗ ಕರಿ ಉಪ್ಪು ತಿನ್ನುವ ಸೋಡಾ ಗಂಜಣ್ಣಿಯ ಹೂ ಮತ್ತು ಕೊತ್ತಂಬರಿಯ ಸೊಪ್ಪು, ೩ ಅಂಬೆ ಹಣ್ಣಿನಲ್ಲಿ ಬೆರೆಸಿ, ಕುಡಿಯಲು ನೀಡಬೇಕು. ಇದರಿಂದಾಗಿ ದನಕರುಗಳ ಕುಂದು ನಿವಾರಣೆಯಾಗಿ ಹುಲ್ಲು ತಿಂದು ಆರೋಗ್ಯದಾಯಕವಾಗುತ್ತದೆ.

10. **ವಕ್ತಾರರು** : **ಹಣಮಂತ ಮೈಪಾಲ ಶೆರಿಕರ**

ವಯಸ್ಸು : 70 ವರ್ಷ

ಗ್ರಾಮ : ಗಾದಗಿ

ತಾಲೂಕಾ : ಬೀದರ

1) **ಕಾಮಾಲೆ ರೋಗ ನಿವಾರಣೆ**:

ಕಾಮಾಲೆ ರೋಗಕ್ಕೆ ಒಂದು ಗಿಲಾಸ ಮೇಕೆಯ ಹಾಲಿಲ್ಲಿ ಔಡಲ ಸೊಪ್ಪಿನ ರಸ ಬೆರೆಸಿ ಕುಡಿಯಲು ಕೊಡಬೇಕು. ಹೀಗೆ ನೀಡಿದರೆ ಒಂದೇ ಸಲಕ್ಕೆ ಕಾಮಾಲೆ ರೋಗ ವಾಸಿಯಾಗುತ್ತದೆ.

2) **ಗಂಟ ಮಲಿಗೆ ರೋಗ ನಿವಾರಣೆ**:

ಗಂಟಮಲಿಗೆ ರೋಗ ನಿವಾರಣೆಗೆ ಕರಿ ಚಿಕಣಿ ಅಡಿಕೆ ಮತ್ತು ಮೂರು ತೊಲ ಇವೆರಡು ಬೆರೆಸಿ ಪುಡಿ ಮಾಡಿ ಒಳ್ಳೆಣ್ಣೆಯಲ್ಲಿ ಬೆರೆಸಿ, ಗಂಟಲಿಗೆ ಹಚ್ಚಬೇಕು. ಗಂಟಮಲಿಗೆ ವಾಸಿಯಾಗುತ್ತದೆ.

3) **ಮಲಜೇರಿ ರೋಗ ನಿವಾರಣೆಗೆ** :

ಮಲಜೇರಿ ರೋಗ ನಿವಾರಣೆಗೆ ಆನೆ ಗಿಡದ ಸೊಪ್ಪು ಕುಟ್ಟಿ ಕಾಲಿಗೆ 3 ದಿವಸ ಕಾಲ ಪಟ್ಟಿ ಕಟ್ಟಬೇಕು. ಮಲಜೇರಿ ರೋಗ ನಿವಾರಣೆಯಾಗುತ್ತದೆ.

4) **ಹಲ್ಲು ನೋವಿಗೆ ನಿವಾರಣೆ** :

ಹಲ್ಲು ನೋವಿಗೆ ಬೇವಿನ ತೊಗಟೆ ಸುಟ್ಟು, ಅರೆದು ಗುಟಗುಟ್ಯಾನ ತಪ್ಪಲಿನಲ್ಲಿ ಮಿಶ್ರಣ ಮಾಡಿ, ಹಲ್ಲಿಗೆ ತಿಕ್ಕಬೇಕು ಇದರಿಂದ ನೋವು ವಾಸಿಯಾಗುತ್ತದೆ.

5) **ಮಕ್ಕಳಿಗೆ ಹೊಟ್ಟೆ ನೋವು ನಿವಾರಣೆ :**

ಸಣ್ಣ ಮಕ್ಕಳಿಗೆ ಹೊಟ್ಟೆಯಲ್ಲಿ ಗುಸ್‌ಗುಸ್ ಎಂದು ನೋವು ಕಾಣಿಸಿಕೊಂಡಾಗ, ಗೊಲ್ಲ ಜಡ್ಡಿ ತಪ್ಪಲು ರಸ ತಾಯಿಯ ಎದೆ ಹಾಲಿನಲ್ಲಿ ಬೇರೆಸಿ ಮಕ್ಕಳಿಗೆ ಕುಡಿಸಬೇಕು. ಮೂರು ಸಲ ಕುಡಿಸಿದರೆ ರೋಗ ವಾಸಿಯಾಗುತ್ತದೆ.

6) **ದನಕರುಗಳಿಗೆ ಕುಂದು / ಜ್ವರ ಬಂದರೆ ನಿವಾರಣೆ :**

ದನಕರುಗಳಿಗೆ ಕುಂದು/ಜ್ವರ ಬಂದರೆ ಔಡಲ ರಸ ದನಗಳ ಕಿವಿಯಲ್ಲಿ ಹಿಂಡಬೇಕು. ಗರಂ ಪೌಡರ ಆದರೂ ಔಡಲ ರಸ ಕಿವಿಯಲ್ಲಿ ಹಿಂಡಬೇಕು.

7) **ಎಮ್ಮೆ/ಹಸುಗಳಲ್ಲಿ ಹಾಲು ವೃದ್ಧೀಕರಣ :**

ಎಮ್ಮೆ / ಹಸುಗಳಲ್ಲಿ ಹಾಲು ವೃದ್ಧಿಸುವುದಾದರೆ ಹೊತ್ತ ಮುಣ್ಣುಗ್ಯಾನ ಬೇರು ಕುಟ್ಟಿ ಆಹಾರದಲ್ಲಿ / ಮುಸುರಿಯಲ್ಲಿ ಬೆರೆಸಿ ದನಗಳಿಗೆ ಕುಡಿಸಬೇಕು. ಇದರಿಂದಾಗಿ ಚೆನ್ನಾಗಿ ಹುಲ್ಲು ತಿಂದು, ಹಾಲಿನ ಅಂಶ ವೃದ್ಧಿಯಾಗುತ್ತದೆ.

11) **ವಕ್ತಾರರು : ಶ್ರೀಮತಿ ಸುಬ್ಬಮ್ಮಾ ಗಂಡ ಹಣಮಂತ ಶೆರಿಕಾರ**

ವಯಸ್ಸು : 55 ವರ್ಷ

ಗ್ರಾಮ : ಗಾದಗಿ

ತಾಲೂಕಾ : ಬೀದರ

1) <u>ಎಳೆಯ ಮಕ್ಕಳ (ಕೂಸುಗಳ) ತಾಳಿಗೆ ಬಿದ್ದಾಗ :</u>

ಎಳೆಯ ಮಕ್ಕಳ (ಕೂಸುಗಳ) ತಾಳಿಗೆ ಬಿದ್ದರೆ, ಕಹಿ ಜಿರಿಗೆ, ಗಂಟಾದ ಅರಿಶಿಣ ಬೊಟ್ಟು, ಮಿಶ್ರಣ ಮಾಡಿ ಕುಟ್ಟಿ ಪೌಡರ ತಯ್ಯಾರಿಸಿ, ಇದನ್ನು ಔಡಲ ಎಣ್ಣೆಯಲ್ಲಿ ಬೆರೆಸಿ, ಔಡಲ ಎಲೆಯಲ್ಲಿ ಹಾಕಿ ಕೂಸಿನ ತಾಳಿಗೆಗೆ ಕಟ್ಟಬೇಕು ಮತ್ತು ತಾನಿನ ಸೊಪ್ಪಿನ ರಸ ಸ್ವಲ್ಪ ಕುಡಿಸಬೇಕು. ಇದರಿಂದಾಗಿ ತಾಳಿಗೆ ಸರಿ ಹೋಗಿ ಎಳೆಯ ಮಕ್ಕಳು ಆರೋಗ್ಯದಿಂದಿರಲು ಸಾಧ್ಯವಾಗುತ್ತದೆ.

2) <u>ಕಿವಿಯಲ್ಲಿ ಹುಣ್ಣು / ಕಿವಿ ಒಡೆದರೆ ನಿವಾರಣೆ :</u>

ಮನುಷ್ಯರ ಕಿವಿಯಲ್ಲಿ ಹುಣ್ಣು / ಕಿವಿ ಒಡೆದು ಒಳಗಿನ ರಸ ಸೋರಿ ದುರ್ಗಂಧ ವಾಸನೆ ಬರುತ್ತಿದ್ದರೆ ಕಿವಿಯಲ್ಲಿ ಕಸ್ತೂರಿ ಸೊಪ್ಪಿನ (ತುಳಸಿ) ರಸ ಹಿಂಡಬೇಕು. ಇದರಿಂದ ಕಿವಿಯಲ್ಲಿಯ ಹುಣ್ಣು ವಾಸಿಯಾಗಿ ಕಿವಿ ಗುಣಮುಖವಾಗುತ್ತದೆ.

3) <u>ಹಲ್ಲು ನೋವಿನ ನಿವಾರಣೆಗಾಗಿ :</u>

ಹಲ್ಲು ನೋವಿನ ನಿವಾರಣೆಗಾಗಿ ಆಲದ ಮರದ ಹಾಲು ತೆಗೆದು ಅದನ್ನು ಹತ್ತಿಯಲ್ಲಿ ನೆನೆಯಿಸಿ, ಹಲ್ಲಿನಲ್ಲಿ ಹಿಡಿದುಕೊಳ್ಳಬೇಕು. ಹಲ್ಲು ನೋವು ವಾಸಿಯಾಗುತ್ತದೆ.

4) <u>ಕಣ್ಣಿನ ದೃಷ್ಠಿ ಮಂದಾದಾಗ :</u>

ಕಣ್ಣಿನ ದೃಷ್ಠಿ ಮಂದಾದಾಗ ಬೇವಿನ ಗಿಡದ ಅಂಟು, ಕುಟ್ಟಿ ಜೇನಿನ ತುಪ್ಪದಲ್ಲಿ ಬೇರೆಸಿ, ಕಣ್ಣಿನ ಕೆಳಭಾಗದ ಮೊರೆಗೆ ಹಚ್ಚಬೇಕು. ಇದರಿಂದಾಗಿ ಕಣ್ಣಿನ ದೃಷ್ಠಿ ತಿಳಿಯಾಗುತ್ತದೆ.

5) **ಮೂಲವ್ಯಾಧಿ ರೋಗದ ನಿವಾರಣೆಗೆ** :

ಮೂಲವ್ಯಾಧಿ ರೋಗದ ನಿವಾರಣೆಗೆ ಲೋಳೆಸರದ ಒಳಗಿನ ಮೆತ್ತನೆಯ ಭಾಗ ಜೊತೆಗೆ ವಿಭೂತಿ ಗಿಡದ ಸೊಪ್ಪು, ಬೆರೆಸಿ ಕುಟ್ಟಿ ಗುಳಿಗೆ ಮಾಡಿ, ದಿನಕ್ಕೆ ಒಂದರಂತೆ ತಿನ್ನಲು ಕೊಡಬೇಕು. ಇದರಿಂದ ಮೂಲವ್ಯಾಧಿ ರೋಗ ವಾಸಿಯಾಗುತ್ತದೆ.

6) **ಸ್ತ್ರೀಯರ ಮುಟ್ಟು ದೋಷ / ಬಿಳಿ ಧಾತು ಸ್ರಾವದ ನಿವಾರಣೆ** :

ಸ್ತ್ರೀಯರ ಮುಟ್ಟು ದೋಷ / ಬಿಳಿ ಧಾತು ಸ್ರಾವ ಆಗುತ್ತಿದ್ದರೆ, ಬಿಳಿ ಗುಲಮಶ್ಯಾನ ಗಡ್ಡೆ ಕಲ್ಲು ಸಕ್ಕರೆ, ಜಿರಿಗೆ ಬೇರೆಸಿ ಕುಟ್ಟಿ, ನೀರಿನಲ್ಲಿ ಹಾಕಿ ಕುಡಿಸಬೇಕು. ಇದರಿಂದ ಸ್ತ್ರೀಯರ ಬಿಳಿ / ಧಾತು ಸ್ರಾವ ನಿಲ್ಲುತ್ತದೆ.

7) **ದೇಹದಲ್ಲಿ ಬಿಸಿ / ಉಷ್ಣತೆ ಹೆಚ್ಚಾದಾಗ** :

ದೇಹದಲ್ಲಿ ಬಿಸಿ / ಉಷ್ಣತೆ ಹೆಚ್ಚಾದಾಗ ಮುತ್ತಲು ಹೂ ಒಣಗಿಸಿ, ಕುಟ್ಟಿ ಅದರ ಪುಡಿಯನ್ನು ರಾತ್ರಿ ಹೊತ್ತು ಮೊಸರಿನಲ್ಲಿ ಹಾಕಿಟ್ಟು, ಮುಂಜಾನೆ ಜಿರಿಗೆ ಕಲ್ಲು ಸಕ್ಕರೆ ಬೆರೆಸಿ ಕುಡಿಸಬೇಕು ಅದರ ಕಷಾಯ / ರಸವನ್ನು ಕುಡಿಯಲು ಕೊಟ್ಟರೆ ದೇಹದಲ್ಲಿನ ಬಿಸಿ / ಗರಂ ವಾಸಿಯಾಗುತ್ತದೆ.

12) **ವಕ್ತಾರರು** : **ಸಿದ್ರಾಮ ತಂದೆ ತುಕಾರಾಮ ಭೂತೇನೊರ**

ವಯಸ್ಸು : ೬೦ ವರ್ಷ

ಗ್ರಾಮ : ಸಿಪ್ಪಲಗೇರಿ (ಮಿರಾಗಂಜ)

ತಾಲೂಕಾ : ಬೀದರ

1) **ಸ್ತ್ರೀಯರಿಗೆ ಕೆಂಪು ರಕ್ತಸ್ರಾವ ಆದಾಗ:**

ಸ್ತ್ರೀಯಲಿಗೆ ಕೆಂಪು ರಕ್ತ ಸ್ರಾವ ಆಗುತ್ತಿದ್ದರೆ ಸೊಮೆ ಗಿಡದ ಚಕ್ಕೆ / ತೊಗಟೆ, ಕಾಚು ಬೆರೆಸಿ ಕುಟ್ಟಿ ಅದರ ಪುಡಿಯನ್ನು ನೀಲಿನಲ್ಲಿ ಬೆರೆಸಿ ದಿನಾಲೂ ನೀರು ಕುಡಿಯುವ ಎರಡು ಗಿಲಾಸ ತುಂಬ ಕುಡಿಯಲು ಕೊಡಬೇಕು. ಇದಲಿಂದಾಗಿ ಕೆಂಪು ರಕ್ತ ಸ್ರಾವ ಆಗುವುದನ್ನು ನಿಲ್ಲುತ್ತದೆ.

2) **ಪುರುಷರಿಗೆ ಬಿಳಿ ಧಾತು ಸ್ರಾವ ಆಗುತ್ತಿದ್ದರೆ :**

ಪುರುಷಲಿಗೆ ಬಿಳಿ ಧಾತು ಸ್ರಾವ / ಹೋಗುತ್ತಿದ್ದರೆ ಭುರಗೆಂದು, ಗಿಡದ ತೊಗಟೆ ಹಾಗೂ ಕಲ್ಲು ಸಕ್ಕರೆ, ಜಿಲಿಗೆ ಇವುಗಳನ್ನು ಬೆರೆಸಿ, ಕುಟ್ಟಿ ಇದರ ಪೌಡರನ್ನು ನೀಲಿನಲ್ಲಿ ಬೆರೆಸಿ ಕುಡಿಯಲು ನೀಡಿದರೆ ಬಿಳಿ ಧಾತು ಸ್ರಾವ ವಾಸಿಯಾಗುತ್ತದೆ.

3) **ಪರುಷರಲ್ಲಿ ಶಕ್ತಿಹೀನ, ದೌರ್ಬಲ್ಯತನ ನಿವಾರಣೆ :**

ಪುರುಷರಲ್ಲಿ ಶಕ್ತಿಹೀನ, ದೌರ್ಬಲ್ಯತನ ಉಂಟಾದಾಗ ರತನ ಪುರುಷ, ಮದನಮಸ್ತ ಕಂಬರಕಸ್ತ, ಕುಬಕಲಾಯಿ, ಬೀಜಬಂದ, ಕೊಂಗಯಿ ಬೀಜ, ಹವಳದ ಗಡ್ಡೆ, ಶಿರೋಳ, ಜಾಲಿಮರದ ಅಂಟು, ಖೊಬ್ಬರಿ, ಬಾದಾಮ ಬೀಜ, ಕಡಮ ಕುಡಮ ಇವುಗಳನ್ನೆಲ್ಲ ಸಮಭಾಗದಲ್ಲಿ ಬೇರೆಸಿ ಚೆನ್ನಾಗಿ ಕುಟ್ಟಿ ಪೌಡರ ತಯ್ಯಾಲಿಸಿ ತುಪ್ಪದಲ್ಲಿ ಬೆರೆಸಿ ದಿನಕ್ಕೆ ಒಂದು ಚಮಚ ತಿನ್ನಲು ನೀಡಬೇಕು. ಇದಲಿಂದ ಪುರುಷರಲ್ಲಿ ಶಕ್ತವರ್ಧಿಸಿ ಆರೋಗ್ಯವಂತರಾಗಿರುತ್ತಾರೆ.

4) **ಪುರಷರ ಮೈ ಬಿಸಿ / ಗರಂ ಆಗುವುದು :**

ಪುರುಷರ ಮೈ ಬಿಸಿ / ಗರಂ ಆಗಿ ಅವರ ಮೂತ್ರ ಕೋಶಕ್ಕೆ ರಂದ್ರ ಆದರೆ, ಕಾಚು ವಿಳ್ಯದ ಎಲೆ ಸಣ್ಣ ಕಳ್ಳಿಯ ಮುಗುಳು, ಕುಟ್ಟಿ ಸಣ್ಣ ಗುಳಿಗೆಗಳನ್ನು ಮಾಡಿ ತಿನ್ನಲು ದಿನಕ್ಕೆ ಒಂದೊಂದಾಗಿ ಮೂರು ದಿನಗಳ ಕಾಲ ನೀಡಬೇಕು. ಇದಲಿಂದಾಗಿ ರಂಧ್ರ ಮುಚ್ಚಿ ಗಾಯ ಮಾಯವಾಗಿ ಗುಣಮುಖಿಯಾಗುತ್ತದೆ.

5) **ಇಸುಬು / ನಾಸೂರ ಗಂಟಮಲಗೆ ನಿವಾರಣೆ** :

ಇಸುಬು / ನಾಸೂರ ಗಂಟಮಲಗೆ ರೋಗ ನಿವಾರಣೆಗಾಗಿ ಚಿಕಣಿ ಅಡಿಕೆ, ಮೂರು ತೊಲೆ, ಇವುಗಳನ್ನು ಸುಟ್ಟು ಅರೆದು ಬೆಣ್ಣೆಯಲ್ಲಿ ಬೆರೆಸಿ ಗಾಯ ಎರಡು ದಿನಗಳು ಹಚ್ಚಬೇಕು. ಗಾಯ ಮಾಯವಾಗಿ ರೋಗ ನಿವಾರಣೆಯಾಗುತ್ತದೆ.

6) **ಮಲಜೇರಿ ರೋಗ ನಿವಾರಣೆ** :

ಮಲಜೇರಿ ರೋಗ ನಿವಾರಣೆಗಾಗಿ ಚೆನ್ನ್ಯಾಂಗ್ಯನ ಸೊಪ್ಪು, ಧತ್ರಿ ಸೊಪ್ಪುಗಳನ್ನು ಕುಟ್ಟಿ ರಸ ತೆಗೆದು ಕಾಲಿಗೆ ಲೇಪಿಸಬೇಕು. ಇದರಿಂದಾಗಿ ರೋಗ ವಾಸಿಯಾಗುತ್ತದೆ.

13) **ವಕ್ತಾರರು** : **ಕಲ್ಲಮ್ಮ ಗಂಡ ಬಸಪ್ಪಾ ಮೆತ್ರೆನೊರ**

ವಯಸ್ಸು : ೮೦ ವರ್ಷ

ಗ್ರಾಮ : ಕಬೀರವಾಡಿ (ಮಿರಾಗಂಜ)

ತಾಲೂಕಾ : ಬೀದರ

1) **ಇಸುಬು ರೋಗ ನಿವಾರಣೆಗೆ** :

ಇಸುಬು ರೋಗ ನಿವಾರಣೆಗೆ ಮುಳ್ಳಾದ ಹುಲ್ಲುಗಡ್ಡೆ ಮತ್ತು ಆರತಿ ಕರ್ಪೂರ ಪುಡಿ ಮಾಡಿ, ಒಳ್ಳೆಣ್ಣೆಯಲ್ಲಿ ಬೆರೆಸಿ ಗಾಯಕ್ಕೆ ಹಚ್ಚಿದ್ದರೆ ಇಸುಬು ರೋಗ ವಾಸಿಯಾಗುತ್ತದೆ.

2) **ಕೂಸುಗಳಿಗೆ ತಾಳಿಗೆ ಬಿದ್ದರೆ ನಿವಾರಣೆ** :

ಕೂಸುಗಳಿಗೆ ತಾಳಿಗೆ ಬಿದ್ದರೆ, ಔಡಲ ಎಣ್ಣೆಯಲ್ಲಿ ಸುಣ್ಣ, ಬೆಲ್ಲ, ಹಾಲಿನ ಕೆನೆ, ಬೆರೆಸಿ ವಿಳ್ಯದ ಎಲೆಯಲ್ಲಿ ಹಾಕಿ ತಾಳಿಗೆಗೆ ಕಟ್ಟಬೇಕು. ಈ ಮೂರು ಸಲ ಕಟ್ಟಬೇಕು ಪಟ್ಟಿ ಒಂದು ದಿನ ಬಿಟ್ಟು, ಮಾರನೆ ದಿನ ಬಿಡಬೇಕು. ಇದರಿಂದ ತಾಳಿಗೆ ಸರಿಹೋಗಿ ಆರಾಮವಾಗುತ್ತದೆ.

14) **ವಕ್ತಾರರು** : **ಶ್ರೀಮತಿ ನಿರ್ಮಲ ಗಂಡ ರಮೇಶ ಮೇಸ್ತ್ರೀ**

ವಯಸ್ಸು : 40 ವರ್ಷ

ಗ್ರಾಮ : ಕಬೀರವಾಡಿ (ಮಿರಾಗಂಜ)

ತಾಲೂಕಾ : ಬೀದರ

1) **ಸ್ತ್ರೀಯರಿಗೆ ಕೆಂಪು ರಕ್ತ ಸ್ರಾವ ನಿವಾರಣೆ** :

ಸ್ತ್ರೀಯಲಿಗೆ ಕೆಂಪು ರಕ್ತ ಸ್ರಾವ ಆಗುತ್ತಿದ್ದರೆ ತುಳಸಿ ಎಲೆ, ಕುಂಕುಮ, ಕಲ್ಲುಸಕ್ಕರೆ, ಮಿಶ್ರಣ ಮಾಡಿ 3 ದಿನಗಳ ಕಾಲ ತಿನ್ನಿಸಬೇಕು. ಇದರಿಂದ ರಕ್ತಸ್ರಾವ ನಿಲ್ಲುತ್ತದೆ.

2) **ಮೈಯಲ್ಲಿ ಉಷ್ಣತೆ / ಗರಂ ಆದಾಗ** :

ಮೈಯಲ್ಲಿ ಉಷ್ಣತೆ / ಗರಂ ಆದಾಗ ಮೇಹಂದಿ ಸೊಪ್ಪು, ಜಿರಿಗೆ, ಕಲ್ಲು ಸಕ್ಕರೆಯನ್ನು ಕುಟ್ಟಿ ಮೊಸರಿನಲ್ಲಿ ಬೇರೆಸಿ 3, 4 ದಿವಸಗಳ ಕಾಲ ಕುಡಿಸಬೇಕು. ಮೈಯಲ್ಲಿನ ಬಿಸಿ ನಿವಾರಣೆಯಾಗುತ್ತದೆ.

3) **ಮಕ್ಕಳಿಗೆ ತಾಳಿಗೆ ಕಟ್ಟುವುದು**:

ಸಣ್ಣ ಮಕ್ಕಳಿಗೆ / ಹಸುಳೆಗಳಿಗೆ ತಾಳಿಗೆ ಬಿದ್ದರೆ ಔಡಲ ಎಣ್ಣೆ ತಾಳಿಗೆಗೆ ತುಂಬಿ ಹಾಲಿನ ಕೆನೆ ಮತ್ತು ಬೆಲ್ಲ ಕುಟ್ಟಿ ಔಡಲ ಎಲೆಯು ಮೇಲೆ ಹಚ್ಚಿ ಪಟ್ಟಿಕಟ್ಟಬೇಕು. ಇದರಿಂದ ತಾಳಿಗೆ ಸರಿ ಹೋಗುತ್ತದೆ. ಹಸುಳೆಗಳಿಗೆ ಆರಾಮ ನೀಡುತ್ತದೆ.

4) **ಸಣ್ಣ ಮಕ್ಕಳಿಗೆ ಹೆಡಕು ಬಿದ್ದಾಗ** :

ಸಣ್ಣ ಮಕ್ಕಳಿಗೆ ಹೆಡಕು ಬಿದ್ದಾಗ ಒಳ್ಳೆಣ್ಣೆಯನ್ನು ಗೋಣಿನ ಮೇಲೆ ಹಾಕಿ ಚೆನ್ನಾಗಿ ತಿಕ್ಕಿ ಗೋಣ ಮುರಿದರೆ, ಗೋಣು ಸರಿ ಹೋಗುತ್ತದೆ. ಇದರಿಂದ ಮಗುವಿಗೆ ಆರಾಮವಾಗುತ್ತದೆ.

5) **ಸಣ್ಣ ಮಕ್ಕಳಿಗೆ (1-2 ವರ್ಷದ) ಕಿಸ್ತು (ಮಲ ಜಾಸ್ತಿ) ಆಗುತ್ತಿದ್ದರೆ** :

ಸಣ್ಣ ಮಕ್ಕಳಿಗೆ (1-2 ವರ್ಷದ) ಕಿಸ್ತು (ಮಲ ಜಾಸ್ತಿ) ಆಗುತ್ತಿದ್ದರೆ ಗೊಲ್ಲ ಜಡಿ ತಪ್ಪಲು ರಸ, ಬೆನ್ನಿಗೆ, ಅಂಗಾಲಿಗೆ 3, 4 ದಿನಗಳವರೆಗೆ ಹಚ್ಚಬೇಕು. ಇದರಿಂದಾಗಿ ಕಿಸ್ತು ಕಡಿಮೆ ಆಗಿ ಮಕ್ಕಳು ಗುಣಮುಖವಾಗುತ್ತದೆ.

6) **ಮನುಷ್ಯರಿಗೆ ಕಾಕ ಬಿಲ್ಲ (ಬಗಲಿನಲ್ಲಿ ಸಣ್ಣ ಗಡ್ಡೆ) ರೋಗ ನಿವಾರಣೆ** :

ಮನುಷ್ಯರಿಗೆ ಕಾಕ ಬಿಲ್ಲ (ಬಗಲಿನಲ್ಲಿ ಸಣ್ಣ ಗಡ್ಡೆ) ರೋಗ ನಿವಾರಣೆಗಾಗಿ ಸಿಪ್ಪರೆಟ್ಯಾನ ಹುಲ್ಲು ಕುಟ್ಟಿ, ಅದರ ಮುದ್ದೆಯನ್ನು ಗಾಯದ ಮೇಲೆ ಹಚ್ಚಿ ಪಟ್ಟಿ ಕಟ್ಟಬೇಕು. 2 ದಿನಗಳಿಗೊಮ್ಮೆ ಪಟ್ಟಿ ಬದಲಾಯಿಸಬೇಕು. ಇದರಿಂದಾಗಿ ರೋಗ ನಿವಾರಣೆಯಾಗುತ್ತದೆ.

7) **ಉಗುರು ಸುತ್ತು ಹುಣ್ಣು ಆದಾಗ** :

ಉಗುರು ಸುತ್ತು ಹುಣ್ಣು ಆದಾಗ ಹುಣಸೆ ಗಿಡದ ತೊಗಟೆ, ಬೆಳ್ಳುಳ್ಳಿ ಸಾಸಿವೆ ಮಿಶ್ರಣ ಮಾಡಿ ಕುಟ್ಟಿ ಬೆರಳಿಗೆ ಹಚ್ಚಿ ಪಟ್ಟಿ ಕಟ್ಟಬೇಕು. ಹುಣ್ಣು ಮಾಯವಾಗಿ ಬೆರಳು ಗುಣಮುಖವಾಗುತ್ತದೆ.

8) **ಖಂಡಕಿ ಹುಣ್ಣು (ಬೆರಳಿಗೆ) ನಿವಾರಣೆ** :

ಖಂಡರ ಹುಣ್ಣು (ಬೆರಳಿಗೆ) ಆದಾಗ ಖಂಡಕಿ ಮಂಗಳಾರ ಸೊಪ್ಪು, ಆರತಿ, ಕರ್ಪೂರ, ಮಿಶ್ರಣ ಮಾಡಿ ಔಡಲ ಎಣ್ಣೆಯಲ್ಲಿ ಬೆರೆಸಿ ಪಟ್ಟಿ ಕಟ್ಟಬೇಕು. ಇದರಿಂದ ಹುಣ್ಣು ವಾಸಿಯಾಗುತ್ತದೆ.

15) **ವಕ್ತಾರರು** : **ಶ್ರೀಮತಿ ಚಂದ್ರಕಲಾ ಗಂಡ ತುಕಾರಾಮ**

ವಯಸ್ಸು : 35 ವರ್ಷ

ಗ್ರಾಮ : ಕಬೀರವಾಡಿ (ಮೀರಾಗಂಜ)

ತಾಲೂಕಾ : ಬೀದರ.

1) **ಮುಳ್ಳು ನಟ್ಟು ಬಾರದೆ ಇದ್ದಾಗ** :

ಮುಳ್ಳು ನಟ್ಟು ಬಾರದೆ ಇದ್ದಾಗ, ಮುಳ್ಳು ಬೆಂಕಿ ಸೊಪ್ಪು ಉಪ್ಪು ಮಿಶ್ರಣ ಮಾಡಿ ತಿನ್ನಲು ಕೊಟ್ಟು, ಅದೇ ಔಷಧವನ್ನು ಬೆಣ್ಣೆಯಲ್ಲಿ ಬೆರೆಸಿ, ಮುಳ್ಳು ನೆಟ್ಟ ಗಾಯದಲ್ಲಿ ಹಚ್ಚಿ ಪಟ್ಟಿಕಟ್ಟಬೇಕು. ಮೂರು ದಿನಗಳಲ್ಲಿ ಮುಳ್ಳು ಕರಗಿ ನೋವು ನಿವಾರಣೆಯಾಗುತ್ತದೆ.

2) **ಹಲ್ಲು ನೋವು ನಿವಾರಣೆಗಾಗಿ** :

ಹಲ್ಲು ನೋವು ನಿವಾರಣೆಗಾಗಿ ಮೆಣಸು ಅರೆದು, ಪುಡಿ ಮಾಡಿ ನಿಂಬೆ ಹಣ್ಣಿನ ರಸದಲ್ಲಿ ಬೆರೆಸಿ, ಹಲ್ಲು ತಿಕ್ಕಲು ನೀಡಬೇಕು. ಇದರಿಂದ ಹಲ್ಲು ನೋವು ವಾಸಿಯಾಗುತ್ತದೆ.

3) **ಪುರುಷ ಸ್ತ್ರೀಯರಿಗೆ ಬಿಳಿ ಧಾತು ಹೋಗುವಾಗ** :

ಪುರುಷ ಸ್ತ್ರೀಯರಿಗೆ ಬಿಳಿ ಧಾತು ಹೋಗುತ್ತಿದ್ದರೆ ಮೆಣಸು, ಜೀರಿಗೆ, ಕಲ್ಲು ಸಕ್ಕರೆ, ಕುಟ್ಟಿ ಪುಡಿ ಮಾಡಿ ಇದರೊಂದಿಗೆ ಕುದುರೆ ಬೇವಿನ ರಸ, ಬೆರೆಸಿ, ಮಜ್ಜಿಗೆಯಲ್ಲಿ ಹಾಕಿಕೊಂಡು ಕುಡಿಯಲು ನೀಡಬೇಕು. ಇದರಿಂದ ಬಿಳಿ ಧಾತು ಹೋಗುವುದನ್ನು ತಡೆಯುತ್ತದೆ.

4) **ಮೂತ್ರ ಏಕಕಾಲಕ್ಕೆ ನಿಂತು ಹೋದರೆ** :

ಮೂತ್ರ ಏಕಕಾಲಕ್ಕೆ ನಿಂತು ಹೋದರೆ ಬೆಕ್ಕಿನ ತೊಂಡಿನ ಸೊಪ್ಪಿನ ರಸ ಮಜ್ಜಿಗೆಯಲ್ಲಿ ಬೆರೆಸಿಕೊಂಡು ಕುಡಿಸಬೇಕು ಮತ್ತು ಯಥಾವತ್ತಾಗಿ ಮೂತ್ರ ವಿಸರ್ಜನೆ ಆಗುತ್ತದೆ.

5) **ಹೆಣ್ಣು ಮಕ್ಕಳಿಗೆ ಕೆಂಪು ರಕ್ತ ಸ್ರಾವ ಆಗುತ್ತಿದ್ದರೆ ನಿವಾರಣೆ** :

ಹೆಣ್ಣು ಮಕ್ಕಳಿಗೆ ಕೆಂಪು ರಕ್ತ ಆಗುತ್ತಿದ್ದರೆ ಹೆಬ್ಬೇವಿನ ಸೊಪ್ಪಿನ ರಸ, 15 ಗ್ರಾಂ ಜೀರಿಗೆ, ಕುಂಕುಮ, ಕಾಚು, ಬೆರೆಸಿ, ಕುಡಿಯಲು ನೀಡಬೇಕು. ಇದರಿಂದ ರಕ್ತ ಸ್ರಾವ ನಿಲ್ಲುತ್ತದೆ.

೬) **ದೇಹಕ್ಕೆ ಯಾವುದೇ ವಸ್ತುವಿನಿಂದ ಗಾಯವಾದಾಗ** :

ದೇಹಕ್ಕೆ ಯಾವುದೇ ವಸ್ತುವಿನಿಂದ ಗಾಯವಾಗಿ ಚರ್ಮ ಹರಿದರೆ, ಮೃದುವಾದ (ಸಾಫ್) ಉತ್ರಾಣಿ ತಪ್ಪಲು ಕುಟ್ಟಿ ಅದರ ರಸ ಗಾಯಕ್ಕೆ ಲೇಪಿಸಬೇಕು. ಚರ್ಮ ಒಂದಕ್ಕೊಂದು ಅಂಟಿಕೊಂಡು ರೋಗ ನಿವಾರಣೆಯಾಗುತ್ತದೆ.

೭) **ಮಲಜೇರಿ (ಕಾಲು ಉಬ್ಬುವುದು) ರೋಗ ನಿವಾರಣೆ** :

ಮಲಜೇರಿ (ಕಾಲು ಉಬ್ಬುವುದು) ಆದಾಗ ಧತ್ರಿ ಸೊಪ್ಪು, ಚೆನ್ನಿಂಗ್ಯಾನ ಸೊಪ್ಪು ಉಪ್ಪು ಬೆರೆಸಿ ಕುಟ್ಟಿ ಅದರ ಗಂಧ ಕಾಲಿಗೆ ಹಚ್ಚಬೇಕು. ಮಲಜೇರಿ ರೋಗ ನಿವಾರಣೆಯಾಗುತ್ತದೆ.

೮) **ಕಾಮಾಲೆ ರೋಗ ನಿವಾರಣೆಗೆ** :

ಕಾಮಾಲೆ ರೋಗ ನಿವಾರಣೆಗೆ ನೆಲದ ಅತ್ತಿಯ ಹಾಲು ಕಣ್ಣಿನಲ್ಲಿ ಹಾಕಬೇಕು ಮತ್ತು ಕಾಗೆ ತಪ್ಪಲಿನ ಸಾರು ಮಾಡಿ ಊಟಕ್ಕೆ ನೀಡಬೇಕು. ಇದರಿಂದಾಗಿ ಕಾಮಾಲೆ ರೋಗ ವಾಸಿವಾಗುತ್ತದೆ.

16) **ವಕ್ತಾರರು** : **ವಿಶ್ವನಾಥ ಉಪ್ಪೆ**

ವಯಸ್ಸು : 49 ವರ್ಷ

ವಿಳಾಸ : ಸೂಪರ್ ಎಲೆಕ್ಟ್ರಾನಿಕ್ಸ್

ಹೊಸ ಬಸ್ ನಿಲ್ದಾಣ

ಡೆಂಟಲ್ ಕಾಲೇಜು ರೋಡ್,

ಬೀದರ.

1) **ಕಾಮಾಲೆ ಆದಾಗ** :

ಪಟಕಾದಿಂದ ಭಸ್ಮವನ್ನು ತಯ್ಯಾರಿಸಿ ಬಾಳೆ ಹಣ್ಣು ತೆಗೆದುಕೊಂಡು ಉದ್ದವಾಗಿ ಸೀಳಿ ನಂತರ ಒಂದು ಕಡ್ಡಿ ಬ್ಯಾಳೆ ದಾಣಿಯನ್ನು ಪಟಕಾ ಭಸ್ಮ ಹಾಕಬೇಕು. ಈ ಕೆಲಸ ರಾತ್ರಿ ಮಾಡಬೇಕು. ರಾತ್ರಿ ಇಡಿ ಬಾಳೆಹಣ್ಣು ಹಾಗೆ ಇಟ್ಟು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ರೋಗಿಗೆ ತಿನ್ನಲು ಕೊಡಬೇಕು. 8 ದಿವಸ ಹೀಗೆ ಮಾಡಿದರೆ ಕಾಮಾಲೆ ರೋಗ ಹೇಳ ಹೆಸರಿಲ್ಲದಂತೆ ಮಾಯವಾಗುತ್ತದೆ.

2) **ನಾಲಿಗೆಗೆ ಲಕ್ವ ಹೊಡೆದಾಗ** :

ಅಂಕಲ ಕಡ್ಡಿಯ ಒಂದು ಗ್ರಾಂ ನಷ್ಟು ಪೌಡರ ತಯ್ಯಾರಿಸಿ ನಂತರ ಕಸ್ತೂರಿಯಿಂದ ಒಂದು ಗ್ರಾಂ ಪೌಡರ ಸಿದ್ಧಪಡಿಸಿ ಎರಡನ್ನು ಕುಟ್ಟಿ ನಂತರ ಒಂದು ಚಮಚ ಜೇನು ತುಪ್ಪದಲ್ಲಿ ಕಲೆಸಿ ನಾಲಿಗೆಗೆ ಹಚ್ಚಬೇಕು. ಹೀಗೆ ದಿನಕ್ಕೆ 4 ಸಲದಂತೆ ಈ ರೋಗ ಕಡಿಮೆಯಾಗುವವರೆಗೆ ಹಚ್ಚಿದರೆ ಈ ರೋಗ ನಿವಾರಣೆಯಾಗುತದೆ.

3) **ಕಾಲರಾ ಅಥವಾ ಏ.ಸಿ.ಡಿ.ಬಿ. ಆದಾಗ** :

ಪಂಚಾಮೃತ ಪರಪಟಿ 300 ಮಿ.ಗ್ರಾಂ ತೆಗೆದುಕೊಂಡು ಜೇನು ತುಪ್ಪದಲ್ಲಿ ಚೆನ್ನಾಗಿ ಅರೆಯಬೇಕು. ನಂತರ ನೆಕ್ಕಬೇಕು. ಹೀಗೆ ದಿನಕ್ಕೆ 3 ಬಾರಿಯಂತೆ 3 ದಿನ ನೆಕ್ಕಿದರೆ ಈ ರೋಗ ನಿವಾರಣೆಯಾಗುತ್ತದೆ.

4) **ಕ್ಯಾನ್ಸರ್** :

ಮಲ್ಲಿಗೆ ಹೂವಿನ ಗಿಡದ 10-1 ಚಿಗುರೆಲೆಗಳನ್ನು ತೆಗೆದುಕೊಂಡು ದಿನಕ್ಕೆ 2 ಸಲದಂತೆ 6 ತಿಂಗಳುಗಳ ಕಾಲ ತಿನ್ನಬೇಕು. ಜೊತೆಗೆ ಗೋಮೂತ್ರಾಕ್ಷರ (ದನದ ಉಚ್ಚಿಯನ್ನು ಕುದಿಸಿದರೆ ಉಪ್ಪಿನ ಹಾಗೆ ಬರುತ್ತದೆ). ಈ ಗೋಮೂತ್ರಾಕ್ಷರ ಸ್ವಲ್ಪ ಮಟ್ಟಿಗೆ ತಿನ್ನಬೇಕು. ಹೀಗೆ ಸೇವಿಸಿದರೆ ಈ ರೋಗ ಸಂಪೂರ್ಣ ಗುಣಮುಖವಾಗುತ್ತದೆ.

5) <u>ಮನೆಯಲ್ಲಿ ಸೊಳ್ಳೆ ಹೆಚ್ಚಾದರೆ</u> :

ಕಳ್ಳಿಯನ್ನು ಕಡಿದು ತಂದು ಮನೆಯಲ್ಲಿ ಕಟ್ಟಿದರೆ ಆ ಮನೆಯಲ್ಲಿ ಸೊಳ್ಳೆ ನಾಶವಾಗುತ್ತದೆ.

6) <u>ಸುತನಾಗುರ ಆದಾಗ</u>:

ಬಾರಸಿಂಗಿ ಎಳ್ಳಿಯ (ಜಿಂಕಿ) ಕೋಡನ್ನು ತಂದು ನೀರಿನಲ್ಲಿ ಎದ್ದಿ ಶೋಸಿ ಗಂಧವನ್ನು ತೆಗೆದು ಸುತನಾಗೂರ ಆದ ಜಾಗಕ್ಕೆ ಹಚ್ಚಬೇಕು. ಹೀಗೆ 7 ದಿವಸಗಳ ಕಾಲ ಹಚ್ಚಿದರೆ ಈ ರೋಗ ನಿವಾರಣೆಯಾಗುತ್ತದೆ.

7) <u>ಮೂಲವ್ಯಾಧಿ</u>:

ಹಿಂಗ್ಯಾನ ಗಿಡದ ಕಾಯಿಯ ಮೇಲಿನ ಸಿಪ್ಪೆಯನ್ನು ತೆಗೆದಾಗ ಅದರ ಮೇಲೆ ಅಂಟು ಬರುತ್ತದೆ. ಆ ಅಂಟನ್ನು ತೆಗೆಯಬೇಕು. ಆದರಿಂದ ಗುಳಿಗೆಳನ್ನು ಮಾಡಿ ದಿನಕ್ಕೆ 5 ಗುಳಿಗೆಯಂತೆ 8 ದಿವಸಗಳ ಕಾಲ ತಿಂದರೆ ಈ ರೋಗ ನಿವಾರಣೆಯಾಗುತ್ತದೆ.

ಹಿಂಗ್ಯಾನ ಕಾಯಿಯನ್ನು ಒಡೆದು ಅದರಲ್ಲಿನ ಬಿಳಿ ಬೀಜವನ್ನು ತೆಗೆದು ಆ ಬೀಜವನ್ನು ಕೈಯಿಂದ ಹಿಸುಕಿದರೆ ಎಣ್ಣೆ ಬರುತ್ತದೆ. ಈ ಎಣ್ಣೆಯನ್ನು ಮೂಲವ್ಯಾಧಿ ಇರುವ ಜಾಗಕ್ಕೆ ಹಚ್ಚಿದರೆ ರೋಗ ನಿವಾರಣೆಯಾಗುತ್ತದೆ.

8) <u>ಸಕ್ಕರೆ ಬೇನೆ ಇದ್ದಾಗ</u>:

ಹಿಂಗ್ಯಾನ ಗಿಡದ ಕಾಯಿಯ ಮೇಲಿನ ಸಿಪ್ಪೆಯನ್ನು ತೆಗೆದಾಗ ಅದರ ಮೇಲೆ ಅಂಟು ಬರುತ್ತದೆ. ಆ ಅಚಿಟನ್ನು ತೆಗೆದು ನಂತರ ಬೇವಿನ ತಪ್ಪಲು ಒಣಗಿಸಿ ಪುಡಿ ಮಾಡಿ ಆ ಅಂಟಿನಲ್ಲಿ ಕಲಿಸಿ ಗುಳಿಗೆಯನ್ನು ತಯಾರಿಸಿ ದಿನಕ್ಕೆ 5 ಸಲದಂತೆ ಆ ಗುಳಿಗೆಯನ್ನು 6 ತಿಂಗಳ ಕಾಲ ತಿಂದರೆ ಈ ರೋಗ ನಿವಾರಣೆಯಾಗುತ್ತದೆ.

9) <u>ಕಾಲು ಹುರಿ ಬಿದ್ದಾಗ ಬಿದ್ದು ನೋವು (ಒಳಗಾಯ) ಆದಾಗ, ಗೋಣು, ಕೈ, ಹಿಡಿದು ಕೊಂಡಾಗ</u> :

ನೋವು ಇರುವ ಜಾಗಕ್ಕೆ ಮೊದಲು ಜೇನು ತುಪ್ಪವನ್ನು ಚೆನ್ನಾಗಿ ಸವರಿ ನಂತರ ಅರಿಶಿನ ಪುಡಿಯನ್ನು ಹಾಕಿ ನಂತರ ವಿಳ್ಯದೆಲೆಗೆ ಹಚ್ಚುವ ಸುಣ್ಣವನ್ನು ಅದರ ಮೇಲೆ ಸವರಿ, ಸವರಿದ ಮೇಲೆ ಕಪ್ಪು ಬಣ್ಣ ಬರುತ್ತದೆ. 3 ಗಂಟೆ ನಂತರ 1 ಸಲದಂತೆ ಈ ಮೇಲಿನಂತೆ ಚಿಕಿತ್ಸೆ ಮಾಡಬೇಕು. ಹೀಗೆ 2 ದಿವಸ ಮಾಡಿದರೆ ಕಾಲು ನೋವು, ಬಿದ್ದಿ ನೋವಾಗಿದ್ದು, ಗೋಣು ಕೈ ನೋವು ಈ ಎಲ್ಲಾ ನೋವುಗಳು ಮಾಯವಾಗುತ್ತವೆ.

10) ಸುಟ್ಟು ಗಾಯವಾದಾಗ (ಗುಳ್ಳೆ ಬಂದಾಗ, ಬುಸಕಿ (ಚರ್ಮ) ಉಬ್ಬಿದಾಗ) :

ದೊಡ್ಡ ದೊಡ್ಡ ಆಲುಗಡ್ಡೆಯನ್ನು ತೆಗೆದುಕೊಂಡು ಚೆನ್ನಾಗಿ ಕುದಿಸಿ ನಂತರ ಅದರ ಮೇಲಿನ ಸಿಪ್ಪೆಯನ್ನು ತೆಗೆದು ಆ ಸಿಪ್ಪೆಯನ್ನು ಗುಳ್ಳೆ ಅಥವಾ ಬೂಸಕಿ ಉಬ್ಬಿದ ಜಾಗಕ್ಕೆ ಹಚ್ಚಿ ನಂತರ ಒಂದು ಪಟ್ಟಿಯನ್ನು ಕಟ್ಟಬೇಕು. ಹೀಗೆ ದಿನಕ್ಕೆ 3 ಸಲದಂತೆ ಪಟ್ಟಿಯನ್ನು ಕಟ್ಟಬೇಕು. ಈ ರೀತಿ ಹುಣ್ಣುಗಳು ಕಡಿಮೆ ಯಾಗುವವರೆಗೆ ಕಟ್ಟಿದರೆ ಈ ರೋಗ ನಿವಾರಣೆಯಾಗುತ್ತದೆ.

11) ಸೀಜರಿಂಗ್ ಆದಾಗ:

ಗಂಟ ಅರಿಶಿಣ ತೆಗೆದುಕೊಂಡು, ಗ್ಲೆಸರಿನ್ (ಸಕ್ಕರೆ ಪಾಕ್ ಇದ್ದ ಹಾಗೆ ಇರುತ್ತದೆ) ಇದರಲ್ಲಿ ತಿಕ್ಕಿ ಗಂಧವನ್ನು ತೆಗೆಯಬೇಕು. ಈ ಗಂಧವನ್ನು ಆಪರೇಶನ ಆದ ಜಾಗಕ್ಕೆ ಹಚ್ಚಿದರೆ ನೋವು ನಿವಾರಣೆಯಾಗುತ್ತದೆ. ಸ್ವಲ್ಪ ದಿನಗಳ ನಂತರ ಆ ಜಾಗ ತಿಂಡಿಕೊಡುತ್ತದೆ. ಆಗ ನಿಂಬೆ ಹುಳಿ, ಗಿಸರಿನಲ್ಲಿ ಹಾಕಿ ಗಂಟ ಅರಿಶಿಣದಿಂದ ತಕ್ಕಿ ಗಂಧ ತೆಗೆದು ನಂತರ ಗಾಯದ ಮೇಲೆ ಹಚ್ಚಿದರೆ ನೋವು ಶಮನವಾಗಿ ರೋಗ ನಿವಾರಣೆಯಾಗುತ್ತದೆ.

12) ಬಾಯಿ (ದುರ್ಗಂಧ) ವಾಸನೆಯಾದಾಗ:

ಪಟಕಾವನ್ನು ಸುಟ್ಟು ಭಸ್ಮವನ್ನು ತಯ್ಯಾರಿಸಿ ಟೂತ್ ಬ್ರಶ್‌ಗೆ ಹಚ್ಚಿ ಹಲ್ಲನ್ನು ತಿಕ್ಕಬೇಕು. ಹೀಗೆ 3-4 ದಿವಸಗಳ ಕಾಲ ನಿರಂತರವಾಗಿ ತಿಕ್ಕುವುದರಿಂದ ಬಾಯಿಯಿಂದ ಬರುವ ವಾಸನೆ ಮತ್ತು ರಕ್ತ ಸೋರುವುದು, ವಸಡು ನೋವೆಲ್ಲ ನಿವಾರಣೆಯಾಗುತ್ತದೆ.

13) ಶರೀರದಲ್ಲಿ ಯಾವುದೇ ರೋಗ ಇದ್ದಾಗ:

(ರೋಗ ಕಾಣಿಸಿಕೊಳ್ಳುವುದಿಲ್ಲ ಆದರೂ ಸಮಾಧಾನ ಇರುವುದಿಲ್ಲ)

ಅರಿಶಿಣವನ್ನು ಚೆನ್ನಾಗಿ ನೀರಿನೊಂದಿಗೆ ಸೋಸಿದರೆ ಗಂಧವು ಬರುತ್ತದೆ. ಆ ಗಂಧವನ್ನು ಒಣಗಿಸಿ ಪೌಡರ (ಪುಡಿ) ಮಾಡಿ ಸಂಗ್ರಹಿಸಿ ದಿನಕ್ಕೆ ಒಂದು ಚಿಟಿಕೆ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ತೆಗೆದುಕೊಳ್ಳಬೇಕು. ಹೀಗೆ 2 ತಿಂಗಳ ಕಾಲ ತೆಗೆದುಕೊಂಡರೆ ಶರೀರದಲ್ಲಿರುವ ಯಾವುದೇ ರೋಗವು ನಿವಾರಣೆಯಾಗುತ್ತದೆ. ಆ ಔಷಧ ತಿಂದ ಮೇಲೆ 1 ಗಂಟೆವರೆಗೆ ಬಾಯಿಯಲ್ಲಿ ನೀರು ಕುಡಿಯಬಾರದು.

14) <u>ಗರ್ಮಿ ಮತ್ತು ಸರ್ದಿ ಆದಾಗ :</u>

ಎರಡು ಚಮಚ ಜೇನು ತುಪ್ಪ, ಅರ್ಧ ನಿಂಬೆ ಕಾಯಿಯ ರಸವನ್ನು ಚೆನ್ನಾಗಿ ಕಲೆಸಿ ದಿನಾಲು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಸೇವಿಸಬೇಕು. ಹೀಗೆ 15 ದಿವಸಗಳವರೆಗೆ ಸೇವಿಸಿದರೆ ಈ ರೋಗ ನಿವಾರಣೆಯಾಗುತ್ತದೆ.

15) <u>ದೃಷ್ಠಿ ಮಂದಾದಾಗ:</u>

ಅರ್ಧ ಚಮಚ ತ್ರಿಫಳ ಚೂರ್ಣ, ಒಂದು ಚಮಚ ಹವಳ ಗಡ್ಡಿಯ ಚೂರ್ಣ, ಈ ಎರಡು ಚೂರ್ಣವನ್ನು ನೀರಿನಲ್ಲಿ ಅಥವಾ ಹಾಲಿನಲ್ಲಿ ಹಾಕಿ ದಿನಕ್ಕೆ 2 ಸಲದಂತೆ 2 ವರ್ಷಗಳ ಕಾಲ ತೆಗೆದುಕೊಂಡರೆ ದೃಷ್ಟಿಮಂದವಾಗಿದ್ದ ಕನ್ನಡಕವನ್ನು ತೆಗೆಯುತ್ತಾರೆ. ದೃಷ್ಟಿ ದೋಷ ನಿವಾರಣೆಯಾಗುತ್ತದೆ.

16) <u>**ಕಣ್ಣಿನಲ್ಲಿ ತೊಂದರೆ ಕಾಣಿಸಿಕೊಂಡಾಗ** :</u>

ಕಣ್ಣಿನಲ್ಲಿ ಬಾವು ಬಂದು ನೀರು ಸೋರುತ್ತಿದ್ದರೆ ಬಬಲೀ ಗಿಡದ ಎಲೆಗಳನ್ನು ನೀರಿನ ಸಹಾಯದಿಂದ ಚೆನ್ನಾಗಿ ಅರೆದು ರಸವನ್ನು ತೆಗೆದು ಸ್ವಲ್ಪ ಬೆಚ್ಚಗೆ ಮಾಡಿ ನಂತರ ಕಣ್ಣಿನ ರೆಪ್ಪೆಗೆ (ಬಳದರೆ) ಹಚ್ಚಿದರೆ ಕಣ್ಣಿನ ತೊಂದರೆ ನಿವಾರಣೆಯಾಗುತ್ತದೆ.

17) <u>ಸ್ತ್ರೀಯರಿಗೆ ರಕ್ತ ಸ್ರಾವದ ತೊಂದರೆ ಇದ್ದಾಗ:</u>

ಬಬಲೆ ಗಿಡದ ಕಾಯಿ ಒಳಗಿನ ಬೀಜ ಬೂರಶ್ಯಾನ ಗಿಡದ ತೊಗಟೆ ಮತ್ತು ಮಾವಿನ ತೊಗಟೆ ಇವೆಲ್ಲವನ್ನು ಸಮಭಾಗದಲ್ಲಿ ಸೇರಿಸಿ ಚೆನ್ನಾಗಿ ಅರೆದು ಚೂರ್ಣವನ್ನು ತಯ್ಯಾರಿಸಿ ಅರ್ಧ ಚಮಚ ಚೂರ್ಣವನ್ನು ಒಂದು ಗ್ಲಾಸ್ ಹಾಲಿನಲ್ಲಿ ಹಾಕಿ ನಂತರ ಎರಡು ಚಮಚ ಸಕ್ಕರೆ ಸೇರಿಸಿ ಕಲೆಸಿ ದಿನಾಲು ಬೆಳಗ್ಗೆ ಸೇವಿಸಬೇಕು. ಹೀಗೆ 7 ದಿನ ಸೇವಿಸಿದರೆ ಈ ರೋಗ ನಿವಾರಣೆಯಾಗುತ್ತದೆ.

ಬಬಲೆ ಗಿಡದ ಚಿಗುರೆಲೆಗಳನ್ನು ತೆಗೆದುಕೊಂಡು ಇದರಷ್ಟೇ ಜೀರಿಗೆಯನ್ನು ತೆಗೆದುಕೊಂಡು ಈ ಎರಡನ್ನು ಸೇರಿಸಿ ಅರೆದು ನಂತರ ಅರ್ಧ ತೊಲೆ ಖಡಿ ಸಕ್ಕರೆ (ಕಲ್ಲು ಸಕ್ಕರೆ) ಸೇರಿಸಿ ಪ್ರತಿ ದಿನ ಬೆಳಗ್ಗೆ ಸೇವಿಸಬೇಕು. ಹೀಗೆ 7 ದಿನ ಸೇವಿಸಿದರೆ ಈ ರೋಗ ನಿವಾರಣೆಯಾಗುತ್ತದೆ.

17) **ವಕ್ತಾರರು** : **ಮಲ್ಲಿಕಾರ್ಜುನ ಪಾಂಚಾಳ**

ವಯಸ್ಸು : 46 ವರ್ಷ

ಗ್ರಾಮ : ಜೊನ್ನೆಕೇರಿ

ತಾಲೂಕಾ : ಔರಾದ (ಬಿ)

ಜಿಲ್ಲಾ : ಬೀದರ.

1) **ಕಾಮಾಲೆಯಾದಾಗ** :

ಕಾಗೆ (ಹಣ್ಣಿನ) ಗಿಡದ ಬೇರನ್ನು ತಂದು ನೀರಿನ ಸಹಾಯದಿಂದ ಚೆನ್ನಾಗಿ ಕುಟ್ಟಿ ರಸ ತೆಗೆಯಬೇಕು. ಒಂದು ಗ್ಲಾಸಿನಲ್ಲಿ ಹಾಕಿ ನಂತರ ಪಟಕಾ, ಆಕಳ ಹಾಲಿನಿಂದ ತಯಾರಿಸಿದ ಮೊಸರು, ಗೋಮೂತ್ರ ಇವೆಲ್ಲವನ್ನು ಚೆನ್ನಾಗಿ ಕಲೆಸಿ, ದಿನಕ್ಕೆ ಒಂದು ಸಲದಂತೆ ಮೂರು ದಿನ ಮುಂಜಾನೆ ಕೂಡಿದರೆ ಈ ರೋಗ ಮಾಯವಾಗುತ್ತದೆ.

2) **ಮಲಜೇರಿ ಆದಾಗ** :

ಧತ್ತುರಿ ಗಿಡದ ತಪ್ಪಲು, ಪತ್ರಿ (ಬಿಲ್ವ) ಗಿಡದ ಎಲೆ, ಗುಟ ಗುಟೆನ್ ತಪ್ಪಲು, ಗಜಗಾ ಇವೆಲ್ಲವನ್ನು ಚೆನ್ನಾಗಿ ಕುದಿಸಿ ಸ್ವಲ್ಪ ಆರಿಸಿ ನಂತರ ಮಲ್ಲಜೇರಿ ಆದ ಜಾಗಕ್ಕೆ ಕಟ್ಟಬೇಕು. ಹೀಗೆ 3 ದಿನ ಕಟ್ಟಿದರೆ ಈ ರೋಗವು ನಿವಾರಣೆಯಾಗುತ್ತದೆ.

3) **ಚೇಳು ಕಡಿದ್ದಾಗ** :

ಬಿಳಿ ಎಕ್ಕೆ ಹಾಲು, ಹಾಲುಗೇನ್ ಗಿಡದ ಹಾಲು ಈ ಎರಡನ್ನು ಕಲಿಸಿ ಚೇಳು ಕಡಿದ ಜಾಗಕ್ಕೆ ಹಚ್ಚಿದರೆ ವಿಷ ಉರಿ ಇಳಿದು ರೋಗ ನಿವಾರಣೆಯಾಗುತ್ತದೆ.

4) **ಹೊಟ್ಟೆ ಬೇನೆ (ಚಿಕ್ಕ ಮಕ್ಕಳಿಗೆ) ಆದಾಗ** :

ಆಡಿನ ಹಾಲು, ಅವರೆ ಬಳ್ಳಿಯ ರಸ, ಎರಡನ್ನೂ ಕಲೆಸಿ ಮಗುವಿಗೆ ಎರಡು ಹನಿ 3 ದಿನಗಳ ಕುಡಿಸಿದರೆ ಈ ರೋಗ ನಿವಾರಣೆಯಾಗುತ್ತದೆ.

5) ಏಸಿಡಿಟಿ ಆದಾಗ :

ರುದ್ರಾಕ್ಷಿಯನ್ನು ಸೋಸಿ ಮತ್ತು ಬಂಗಾರವನ್ನು ಸೋಸಿ ಗಂಧ ತೆಗೆದು ಈ ಎರಡು ಗಂಧವನ್ನು ಕಲಸಿ ಪ್ರತಿ ದಿನ ಮುಂಜಾನೆ ಈ ಗಂಧವನ್ನು ನೆಕ್ಕಿಸಬೇಕು. ಹೀಗೆ 3 ದಿನ ತಪ್ಪದೆ ಮಾಡಿದರೆ ರೋಗ ನಿವಾರಣೆಯಾಗುತ್ತದೆ.

6) ಛಳಿ ಬಂದಾಗ :

ಕರಿ ಮೆಣಸನ್ನುಕುಟ್ಟಿ ಪುಡಿ ಮಾಡಿ ಕರಿಯ ವಿಳ್ಳೆದೆಲೆಯ ಮೇಲೆ ಈ ಪುಡಿಯನ್ನು ಉದುರಿಸಿ ತಿಂದರೆ. ರೋಗವು ನಿವಾರಣೆಯಾಗುತ್ತದೆ.

7) ದೊಡ್ಡ ಹುಣ್ಣುಗಳು ಆದಾಗ :

ಹಳೆಯ ಆಲದ ಮರದ ಚಕ್ಕೆ ಮತ್ತು ಅಳ್ಳೆ ಗಿಡದ ಚಕ್ಕೆ ಎರಡನ್ನು ತೆಗೆದುಕೊಂಡು ಸುಟ್ಟು ಬೆಳ್ಳಗೆ ಬೂದಿಯನ್ನು ಮಾಡಿ, ಕೊಬ್ಬರಿ ಎಣ್ಣೆಯಲ್ಲಿ ಕಲೆಸಿ ಹುಣ್ಣು ಇರುವ ಜಾಗಕ್ಕೆ 4 ರಿಂದ 5 ದಿನಗಳ ಕಾಲ ಹಚ್ಚಿದರೆ ಹುಣ್ಣುಗಳು ಮಾಯವಾಗುತ್ತವೆ.

8) ಮಾನಸಿಕ ರೋಗವಿದ್ದಾಗ :

ಅಮೃತ ಬಳ್ಳಿಯನ್ನು ನೀರಿನಲ್ಲಿ ಹಾಕಿ ಚೆನ್ನಾಗಿ ಕುದಿಸಿದಾಗ ಅದು ಗಟ್ಟಿಯಾಗುತ್ತದೆ. ಅದಕ್ಕೆ ನಾಲ್ಕು ಭಾಗ ಮಾಡಿ ದಿನಕ್ಕೆ ಒಂದರಂತೆ 4 ದಿನ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ತಿಂದರೆ ಈ ರೋಗ ಮಾಯವಾಗುತ್ತದೆ.

9) ಗಂಟ ಮಲ್ಲಿ ಆದಾಗ :

ಸಿಂಧೆ ಗಿಡದ ಹೂ, ಹೌವಳದ ಗಡ್ಡೆ, ಬೇಳೆ ತಪ್ಪಲು, ಬೇವಿನ ತಪ್ಪಲು, ಈ ಎಲ್ಲವನ್ನು ಒಣಗಿಸಿ ಪುಡಿ ಮಾಡಿ ಜೇನಿನ ಹಸಿ ಮೇಣ, ಅರಸಿನ ಇವೆಲ್ಲವನ್ನು ಕಲಿಸಿ ಉಂಡೆಯನ್ನು ಮಾಡಿ ನಂತರ ಚಪ್ಪಟ ಮಾಡಿ ಸ್ವಲ್ಪ ಕಾಯಿಸಿ, ಗಂಟಮಲ್ಗಿ ಇರುವ ಜಾಗಕ್ಕೆ ಹಚ್ಚಿ ಅದರ ಮೇಲೆ ಔಡಲ ತಪ್ಪಲನ್ನು ಹಚ್ಚಿ ಅದರ ಮೇಲೆ ಬಟ್ಟೆಯನ್ನು ಕಟ್ಟಬೇಕು. ಹೀಗೆ ನಾಲ್ಕು ದಿವಸ ಪಟ್ಟಿಯನ್ನು ಕಟ್ಟಿದರೆ ಈ ರೋಗ ಮಾಯವಾಗುತ್ತದೆ.

10) **ಮೂಲವ್ಯಾಧಿ** :

ಬಿಲ್ವ ಪತ್ರಿ ಗಿಡದ ಕಾಯಿಯ ಒಳಗಿನ ತಿರುಳನ್ನು ತೆಗೆದು ಚೆನ್ನಾಗಿ ಒಣಗಿಸಿ ಪುಡಿ ಮಾಡಿ ಅದಕ್ಕೆ ಅಷ್ಟೇ ಪ್ರಮಾಣದ ಒಣಗಿದ ಸುಂಠಿಯನ್ನು ಕುಟ್ಟಿ ಪುಡಿ ಮಾಡಿ ಅದರಲ್ಲಿ ಕಲಿಸಿ ಆ ಮಿಶ್ರವನ್ನು ಹಳೆಯ ಬೆಲ್ಲದೊಂದಿಗೆ ಸೇರಿಸಿ ಕಲಿಸಿ ನಂತರ ಮಜ್ಜಿಗೆ ಹಾಕಿ ಕುಡಿಯಬೇಕು. ಹೀಗೆ ಏಳು ದಿವಸ ಪ್ರತಿದಿನ ಕೂಡಿದರೆ ಮೂಲವ್ಯಾಧಿ ರೋಗ ನಿವಾರಣೆಯಾಗುತ್ತದೆ.

11) **ಒಸಡು ನೋವು** :

ಬಿಲ್ವ ಪತ್ರಿಯ ಗಿಡದ ಬೇರನ್ನು ಮಜ್ಜಿಗೆಯಲ್ಲಿ ತೇಲಿಸಿ ಗಂಧವನ್ನು ತೆಗೆದು ಈ ಗಂಧವನ್ನು ಒಂದು ಗ್ಲಾಸ್ ನೀರಿನಲ್ಲಿ ಹಾಕಿ ಕಲಿಸಿ ಹೀಗೆ ಸಿದ್ಧಗೊಂಡ ಆ ಕಸದಿಂದ ಬಾಯಿಯನ್ನು ಮುಕ್ಕಳಿಸಬೇಕು. ಹೀಗೆ ಎರಡು ದಿವಸಗಳ ಕಾಲ ಮಾಡಿದರೆ ಒಸಡು ನೋವು ಮಾಯವಾಗಿ ರೋಗ ನಿವಾರಣೆಯಾಗುತ್ತದೆ.

12) **ಕೆಮ್ಮು ನೆಗಡಿ ಆದಾಗ** :

ಆಕಳ ಹಾಲಿಗೆ ಅರಸಿಣದ ಪುಡಿ ಮತ್ತು ಕರಿ ಮೆಣಸನ್ನು ಕುಟ್ಟಿ ಪುಡಿ ಮಾಡಿ ಈ ಎರಡು ಪುಡಿಯನ್ನು ಹಾಲಿಗೆ ಹಾಕಿ ಚೆನ್ನಾಗಿ ಕಲಿಸಿ ಕುಡಿಯುವುದರಿಂದ ಕೆಮ್ಮು ಮತ್ತು ನೆಗಡಿ ಈ ರೋಗಗಳು ನಿವಾರಣೆಯಾಗುತ್ತವೆ.

18) **ವಕ್ತಾರರು : ಸಿದ್ರಾಮಪ್ಪ ಮಡಿವಾಳ**

ವಯಸ್ಸು : 47 ವರ್ಷ

ವಿಳಾಸ : ಮ.ಸಂ. 1-9-493, ಪ್ರತಾಪನಗರ, ನೌಬಾದ.

ಜಿಲ್ಲೆ : ಬೀದರ.

1) <u>ನಪುಂಸಕತ್ವ ಇದ್ದಾಗ :</u>

ವಂಗ ಭಸ್ಮ 50 ಗ್ರಾಂ. ಕವಚ ಬೀಜದ ಚೂರ್ಣ 100 ಗ್ರಾಂ. ಕಾಳಿ ಮೂಸಳಿ ಚೂರ್ಣ 100 ಗ್ರಾಂ. ಜಾಫಳ ಚೂರ್ಣ 100 ಗ್ರಾಂ. ಅಶ್ವಗಂಧ ಚೂರ್ಣ 100 ಗ್ರಾಂ. ಸತಾವರಿ ಚೂರ್ಣ 100 ಗ್ರಾಂ. ಖಡಸಕ್ಕರೆ 1 ಕಿ.ಲೋ. ಈ ಎಲ್ಲವನ್ನು ಒಂದು ಕಡೆ ಸೇರಿಸಿ ಕುಟ್ಟಿ ಚೂರ್ಣ ತಯಾರಿಸಿ. ಇದರಲ್ಲಿ ಜೇನು ತುಪ್ಪ ಹಾಕಿ ಕಲಸಿ ಕಡ್ಡಿ ದಾನಿಯಷ್ಟು ಗುಳಿಗೆಯನ್ನು ಮಾಡಿ ಈ ಗುಳಿಗೆಯನ್ನು ಮುಂಜಾನೆ ಎರಡು ರಾತ್ರಿ ಎರಡು ಗುಳಿಗೆ 1/4 ಲೀಟರ ಆಕಳ ಹಾಲಿನಲ್ಲಿ ಕಾಯಿಸಿ ಗಟ್ಟಿ ಮಾಡಿ ಅದನ್ನು ತಿನ್ನಬೇಕು. ಹೀಗೆ 30 ದಿನಗಳು ತೆಗೆದುಕೊಂಡರೆ. ಈ ರೋಗ ಮಾಯವಾಗುತ್ತದೆ.

ಪಥ್ಯ : ಎಣ್ಣೆ, ಹುಳಿ, ಖಾರಾ, ಕರಿದ ಪದಾರ್ಥ, ಚಹಾ, ಹಾಗೆ ಒಂದು ತಿಂಗಳು ಸ್ತ್ರೀ ಸಂಪರ್ಕ ಇಟ್ಟುಕೊಳ್ಳಬಾರದು.

2) <u>ಹೆಣ್ಣು ಮಕ್ಕಳ ಗುಪ್ತರೋಗವಿದ್ದಾಗ :</u>

ಅಶ್ವಗಂಧನಾಗುರಿ 250 ಗ್ರಾಂ. ಸತಾವರಿ 150 ಗ್ರಾಂ. ಖಡಿಸಕ್ಕರೆ 250 ಗ್ರಾಂ. ಬೀಜಬಂದ 100 ಗ್ರಾಂ. ತಾಲಿಮಖಲ 100 ಗ್ರಾಂ. ಇಲಾಚಿ 10 ಗ್ರಾಂ. ಇವೆಲ್ಲವನ್ನು ಚೆನ್ನಾಗಿ ಕುಟ್ಟಿ ಚೂರ್ಣವನ್ನು ತಯಾರಿಸಿ ದಿನಾಲು ಮುಂಜಾನೆ ಎರಡು ಚಮಚ ತಿನ್ನಬೇಕು. ನಂತರ ಒಂದು ಗ್ಲಾಸ್ ಆಕಳ ಹಾಲು ಕುಡಿಯಬೇಕು. ನಂತರ ರಾತ್ರಿ ಎರಡು ಚಮಚ ತಿಂದ ನಂತರ ಹಾಲು ಕುಡಿಯಬೇಕು. ಹೀಗೆ 20 ದಿವಸಗಳ ಕಾಲ ಮಾಡಿದರೆ ರೋಗ ನಿವಾರಣೆಯಾಗುತ್ತದೆ.

ಪಥ್ಯ : ಎಣ್ಣೆ, ಹುಳಿ, ಖಾರಾ, ಚಹಾ, ಕರಿದ ಪದಾರ್ಥ ತಿನ್ನಬಾರದು.

3) **ಕೀಲು ನೋವು** :

ಮಹಾ ಯೋಗರಾಜ ಗುಗ್ಗಳ್ ಗುಳಿಗೆ ಮುಂಜಾನೆ ಎರಡು, ರಾತ್ರಿ ಎರಡು ತಿನ್ನಬೇಕು. ಮತ್ತು ಮಹಾರಸನಾದಿ ಕಾಡ ಮೂರು ಚಮಚ ತೆಗೆದುಕೊಂಡು ಅರ್ಧ ಗ್ಲಾಸ್ ಬಿಸಿ ಮಾಡಿದ ನೀರಿನಲ್ಲಿ ಕಲೆಸಿ ಕುಡಿಯಬೇಕು. ನಂತರ ಮಹಾನಾರಾಯಣ ಎಣ್ಣೆ ದಿನಕ್ಕೆ ಒಂದು ಸಲದಂತೆ ಮುಂಜಾನ್ಲೆ ಮೈ ಕೈ ತಿಕ್ಕಬೇಕು. ಹೀಗೆ ಒಂದು ತಿಂಗಳು ಮಾಡಬೇಕು. ಹೀಗೆ ಮಾಡಿದರೆ ಕೀಲು ನೋವು ಮಾಯವಾಗುತ್ತದೆ.

ಪಥ್ಯ : ಥಂಡಿ ಪದಾರ್ಥ, ಆಲುಗಡ್ಡೆ, ಬದನೆಕಾಯಿ, ಚೆಣಗೆ ಬ್ಯಾಳಿ, ರತ್ನಾಲ, ಸೌತೆಕಾಯಿ, ಮೊಸರು, ಮಜ್ಜಿಗೆ, ಥಂಡಿ ಪಾನೀಯ, ಫ್ರಿಜ ನೀರು, ಇತ್ಯಾದಿಗಳು ಸೇವಿಸಬಾರದು.

4) **ಮೂಲವ್ಯಾಧಿ** :

ಕ್ಯಾರಳ 50 ಗ್ರಾಂ. ಬಾಳ ಹರಡಾ 50 ಗ್ರಾಂ. ಎಳ್ಳು 50 ಗ್ರಾಂ. ಬೆಲ್ಲ 300 ಗ್ರಾಂ. ಇವೆಲ್ಲವನ್ನು ಚೆನ್ನಾಗಿ ಕುಟ್ಟಿ ನಂತರ ಕಲೆಸಿ ಅಡಿಕೆಯಷ್ಟು ಗುಳಿಗೆಯನ್ನು ತಯಾರಿಸಿ ಪ್ರತಿದಿನ ಮುಂಜಾನೆ ಒಂದು ಗುಳಿಗೆ ನಾಲ್ಕು ಚಮಚ ತುಪ್ಪದಲ್ಲಿ ಬೆರೆಸಿ ತಿನ್ನಬೇಕು. ಹೀಗೆ 30 ದಿವಸಗಳ ತೆಗೆದುಕೊಂಡರೆ ಮೂಲವ್ಯಾಧಿ ರೋಗ ನಿವಾರಣೆಯಾಗುತ್ತದೆ.

ಪಥ್ಯ : ಖಾರಾ, ಮಸಾಲೆ, ಕರಿದ ಪದಾರ್ಥ, ಗರಮಿ (ಉಷ್ಣ) ವಸ್ತುಗಳು ಸೇವಿಸಬಾರದು.

5) **ಅಜೀರ್ಣತೆ ಆದಾಗ** :

ಒಣ ಶುಂಠಿ 50 ಗ್ರಾಂ. ಹಿಪ್ಪಲಿ 50 ಗ್ರಾಂ. ಮೆಣಸು 50 ಗ್ರಾಂ. ಅಜವಾನ 50 ಗ್ರಾಂ. ಜಿರಿಗೆ 50 ಗ್ರಾಂ. ಶಾಜೀರಾ 50 ಗ್ರಾಂ. ಸಿಂದೆಲೋನ 50 ಗ್ರಾಂ. ಇಂಗು 50 ಗ್ರಾಂ. ಈ ಎಲ್ಲವನ್ನು ಸೇರಿಸಿ ಚೆನ್ನಾಗಿ ಕುಟ್ಟಿ ಪುಡಿಮಾಡಿ ಚೂರ್ಣ ತಯಾರಿಸಿ ಮುಂಜಾನೆ ಅರ್ಧ ಚಮಚ ರಾತ್ರಿ ಅರ್ಧ ಚಮಚ ಊಟ ಆದ ನಂತರ

ತಿನ್ನಬೇಕು. ನಂತರ ಬಿಸಿ ನೀರು ಕುಡಿಯಬೇಕು. ಹೀಗೆ 7 ದಿವಸಗಳ ಕಾಲ ಸೇವಿಸಿದರೆ ರೋಗ ಮಾಯವಾಗುತ್ತದೆ.

6) <u>ಬಾಯಿಯಲ್ಲಿನ ಎಲ್ಲಾ ರೋಗಗಳ ನಿವಾರಣೆಗೆ :</u>

ತ್ರಿಫಲಾದಿ ಚೂರ್ಣ 1 ಕಿ.ಲೋ. ಪಟಕಾ 1/2 ಕಿ.ಲೋ. ಸಿಂಧೆಲೋಣ 100 ಗ್ರಾಂ. ಕರ್ಪೂರ ಹಳ್ಳಿ 50 ಗ್ರಾಂ. ಇವೆಲ್ಲವನ್ನು ಒಂದು ಕಡೆ ಸೇರಿಸಿ ಚೆನ್ನಾಗಿ ಕುಟ್ಟಿ ಪುಡಿ ಮಾಡಿ ಈ ಪುಡಿಯಿಂದ ಮುಂಜಾನೆ ಮತ್ತು ಸಾಯಂಕಾಲ ಹಲ್ಲು ತಿಕ್ಕಿದರೆ ಹಲ್ಲು ನೋವು ಒಸಡು ನೋವು ಬಾಯಿ ಹುಣ್ಣು ಇತ್ಯಾದಿ ಬಾಯಿಯಲ್ಲಿನ ಎಲ್ಲಾ ರೋಗಗಳು ನಿವಾರಣೆಯಾಗುತ್ತವೆ.

7) <u>ಹಾವು ಕಡಿದಾಗ :</u>

ಬುರುಗ್ಯಾನ ಕಾಯಿ (ಸಾಬುನ ಕಾಯಿ, ರೀಟಾ) 50 ಗ್ರಾಂ. ಚೂರ್ಣ ತಯಾರಿಸಿ. ಆ ಚೂರ್ಣವನ್ನು ಎರಡು ಲೀಟರ ನೀರಿನಲ್ಲಿ ಕಲಿಸಿ ನಂತರ ಆ ನೀರನ್ನು ಸೋಸಿ ಈ ನೀರನ್ನು ಹಾವು ಕಡಿದ ವ್ಯಕ್ತಿಗೆ ಕೂಡಿಸಬೇಕು. ಸ್ವಲ್ಪ ಸಮಯದ ನಂತರ ವಾಂತಿಯಾಗುತ್ತದೆ. ಮತ್ತೆ ಈ ರಸ ಕುಡಿಸಬೇಕು ಮತ್ತೆ ವಾಂತಿಯಾಗುತ್ತದೆ. ಪುನ: ಅರ್ಧ ಲೀಟರ್ ನೀರಿನಲ್ಲಿ ಈ ಚೂರ್ಣ ಕಲೆಸಿ ವಾಂತಿ ಮಾಡಿಸಬೇಕು. ಒಂದು ವೇಳೆ ವಾಂತಿಯಾಗದಿದ್ದಾಗ ಹಸಿಯಾದ ಬೇವಿನ ತಪ್ಪಲು ಬಾಯಿಯಲ್ಲಿ ಆಡಿಸಬೇಕು. ಅಥವಾ ಯಾವುದೇ ಪಕ್ಷಿಯ ಫಂಕ (ಗರಿ) ಬಾಯಿಯಲ್ಲಿ ಅಲ್ಲಾಡಿಸಬೇಕು ಆಗ ವಾಂತಿಯಾಗುತ್ತದೆ. ಇದರಿಂದ ವಿಷ ಇಳಿದು ರೋಗ ನಿವಾರಣೆಯಾಗುತ್ತದೆ.

ಪರೀಕ್ಷೆ : ವಿಷ ಇಳಿದಿದೆ ಅಥವಾ ಇಲ್ಲ ಎನ್ನುವುದಕ್ಕೆ ಬೇವಿನ ತಪ್ಪಲನ್ನು ರೋಗಿಗೆ ತಿನ್ನಿಸಬೇಕು. ಕಹಿ ಇದ್ದರೆ ವಿಷ ಹೋಗಿದೆ ಎಂದರ್ಥ. ಸಪ್ಪಗೆ ಇದ್ದರೆ ವಿಷ ಇದೆ ಎಂದರ್ಥ. ಒಂದು ವೇಳೆ ವಿಷ ಇದ್ದರೆ ಮೇಲಿನಂತೆ ಮತ್ತೆ ವಾಂತಿ ಮಾಡಿಸಿ ಔಷಧಿಯ ನೀರನ್ನು ಎರಡು ಕಣ್ಣಿನಲ್ಲಿ ಒಂದೊಂದು ಹನಿ ಹಾಕಬೇಕು.

ಪಥ್ಯ : ಇಡೀ ರಾತ್ರಿ ನಿದ್ದೆ ಮಾಡಬಾರದು. ಉಪ್ಪು, ಉಪ್ಪಿನಕಾಯಿ ತಿನ್ನಬಾರದು.

ಸೂಚನೆ : ಈ ಔಷಧಿಯನ್ನು ರೋಗಿಯು ಹುಷಾರಿದ್ದರೆ ಮಾತ್ರ ಕೊಡಬೇಕು.

8) <u>ಕಣ್ಣಿಗೆ ಪೊರೆ ಬಂದಾಗ :</u>

ಹತ್ತು ನಿಂಬೆ ಹಣ್ಣಿನ ರಸವನ್ನು ತೆಗೆದು ಅದರಲ್ಲಿ 20 ಗ್ರಾಂ. ಪಟಕಾ ಸೋಸಿ ಪೂರ್ತಿ ಕರಗಿಸಿ ಮುಂಜಾನೆ ಸಮಯದಲ್ಲಿ ಕಣ್ಣಿನಲ್ಲಿ ಹಾಕಬೇಕು. ಹೀಗೆ 7 ದಿವಸಗಳ ಕಾಲ ಹಾಕಿದರೆ ಕಣ್ಣಿನ ಪೊರೆ ನಿರ್ಮೂಲನೆಯಾಗಿ ಕಣ್ಣು ಸೂಕ್ಷ್ಮವಾಗಿ ರೋಗ ನಿವಾರಣೆಯಾಗುತ್ತದೆ.

9) <u>ಕಣ್ಣಿನಲ್ಲಿ ಹೂವು ಬಿದ್ದಾಗ ಅಥವಾ ಕೆಂಪು ಆದಾಗ :</u>

ಗಂಟ ಅರಶಿಣ, ತೊಗರಿ ಬೇಳೆ ಎರಡೂ ಸೇರಿಸಿ ನೀರನಲ್ಲಿ ಹಾಕಿ ಚೆನ್ನಾಗಿ ಕುದಿಸಬೇಕು. ಬೇಳೆಯನ್ನು ಕುದ್ದಿದ ನಂತರ ಆ ಅರಶಿಣವನ್ನು ತೆಗೆದು ನೆರಳಿನಲ್ಲಿ ಒಣಗಿಸಿ ನಂತರ ಆ ಅರಶಿಣವನ್ನು ನೀರಿನಲ್ಲಿ ಅಥವಾ ತುಪ್ಪದಲ್ಲಿ ಸೋಸಿ ಗಂಧವನ್ನು ತೆಗೆಯಬೇಕು. ಗಂಧವನ್ನು ಕಣ್ಣಿನಲ್ಲಿ ಹಾಕಬೇಕು. ಹೀಗೆ 7 ದಿವಸ ಹಾಕಿದರೆ ಈ ರೋಗ ನಿವಾರಣೆಯಾಗುತ್ತದೆ.

10) <u>ಮೂಗಿನ ರೋಗವಿದ್ದಾಗ :</u>

**(ವಾಸನೆ ಬರುವುದು ಮತ್ತು ಕೀವು ಇತ್ಯಾದಿ)**

ಕಾರ ಇಂಗ ಅಥವಾ ಡಿಕ್‌ಮಲ್ – 100 ಗ್ರಾಂ. ಎಳ್ಳೆಣ್ಣೆಯಲ್ಲಿ ಮಂದಾಗ್ನಿಯಿಂದ ಕುದಿಸಿ. ಬಟ್ಟೆಯಲ್ಲಿ ಸೋಸಿ ದಿನಾಲು ನಾಲ್ಕು ಸಲ 4 ಹನಿ ಮೂಗಿನಲ್ಲಿ ಹಾಕಿ. ಮೂಗನ್ನು ಮೇಲೆ ಮಾಡಿ ಮಲಗಬೇಕು. ಹೀಗೆ ಈ ರೋಗ ಕಡಿಮೆಯಾಗುವವರೆಗೂ ಮಾಡಿದರೆ ರೋಗ ಮಾಯವಾಗುತ್ತದೆ.

11) <u>ಅಲರ್ಜಿ:</u>

ಸುವಾಸ ಕುಟ್ಸರ ರಸ 2 ಗುಳಿಗೆ ಅರ್ಧ ಚಮಚ ವಾಸೌವಲೋಹ ಮತ್ತು ಒಂದು ಚಮಚ ಅಲ್ಲದ ರಸ ಈ ಎಲ್ಲವನ್ನು ಜೇನು ತುಪ್ಪದಲ್ಲಿ ಕಲಸಿ ಚೆನ್ನಾಗಿ ಬೆರೆಸಿ ದಿನಾಲು ಮುಂಜಾನೆ ಹಾಗೂ ಸಾಯಂಕಾಲ 30 ದಿವಸ ಸೇವಿಸಿದರೆ ಅಲರ್ಜಿ ರೋಗ, ಕೆಮ್ಮು ನಿವಾರಣೆಯಾಗುತ್ತದೆ.

ಪಥ್ಯ : ಕರಿದ ಪದಾರ್ಥ, ಶೀತ ಪದಾರ್ಥಗಳನ್ನು ಸೇವಿಸಬಾರದು.

12) <u>ದಮ್ಮು:</u>

ತೊರೆಕಾಯಿ ತೊಗಟೆ 1 ಕಿಲೊ ಗೋಮೂತ್ರ 2 ಲೀಟರು. ಎರಡನ್ನು ಚೆನ್ನಾಗಿ ಕುದಿಸಿ ನಂತರ ಬಿಸಿಲಿಗೆ ಒಣಗಿಸಿ ಚೂರ್ಣ ತಯಾರಿಸಿ. ಅರ್ಧ ಚಮಚ ಚೂರ್ಣ ಎರಡು ಚಮಚ ಜೇನು ತುಪ್ಪದ ಜೊತೆ ಕಲೆಸಿ ದಿನಕ್ಕೆ ಎರಡು ಸಲದಂತೆ ಮುಂಜಾನೆ ಮತ್ತು ಸಾಯಂಕಾಲ ತಿಂದರೆ ದಮ್ಮು ರೋಗ ಮಾಯವಾಗುತ್ತದೆ.

13) <u>ಕಫ್ ರೋಗ ಇದ್ದಾಗ (20 ತರಹದ)</u>

ಇಲಾಚಿ (ಯಾಲಕ್ಕಿ) 20 ಗ್ರಾಂ. ಲವಂಗ 20 ಗ್ರಾಂ. ಪಿಂಪಳ್ಳಿ 30 ಗ್ರಾಂ. ಜೇಷ್ಠಮದ್ 30 ಗ್ರಾಂ. ಕರಿ ಮೆಣಸು 40 ಗ್ರಾಂ. ಶುಂಠಿ 40 ಗ್ರಾಂ. ದಾಲ್‌ಚಿನ್ನಿ 30 ಗ್ರಾಂ. ಖಡಿಸಕ್ಕರೆ 210 ಗ್ರಾಂ. ಈ ಎಲ್ಲವನ್ನು ಒಂದು ಕಡೆ ಸೇರಿಸಿ ಚೆನ್ನಾಗಿ ಕುಟ್ಟಬೇಕು. ನಂತರ ಚೂರ್ಣ ತಯಾರಿಸಿ ದಿನಾಲು ಮುಂಜಾನೆ ಮತ್ತು ಸಾಯಂಕಾಲ ಅರ್ಧ ಚಮಚ ತಿನ್ನಬೇಕು. ನಂತರ ಸ್ವಲ್ಪ ಬಿಸಿ ಮಾಡಿದ ನೀರು ಕುಡಿಯಬೇಕು. ಹೀಗೆ ಮಾಡಿದರೆ ಈ ರೋಗ ನಿವಾರಣೆಯಾಗುತ್ತದೆ.

ಪಥ್ಯ : ಮಜ್ಜಿಗೆ, ಮೊಸರು, ಕರಿದ ಪದಾರ್ಥ, ಎಣ್ಣೆಕಾಳು ಪದಾರ್ಥ ಇತ್ಯಾದಿ ತಿನ್ನಬಾರದು.

14) **<u>ಹೊಟ್ಟೆ ನೋವು</u>** :

ಶುಂಠಿ 50 ಗ್ರಾಂ. ಮೆಣಸು 50 ಗ್ರಾಂ. ಸಿಂದೆಲೋನ (ಸೈದಾಲೋಣ್) 50 ಗ್ರಾಂ. ಪಾದಲವಣ (ಪಾದಲೋಣ) 50. ಈ ಎಲ್ಲವನ್ನು ಒಂದು ಕಡೆ ಸೇರಿಸಿ ಕುಟ್ಟಬೇಕು. ನಂತರ ಚೂರ್ಣ ತಯಾರಿಸಿ ಮುಂಜಾನೆ ಊಟದ ಮೊದಲು ಅರ್ಧ ಚಮಚ. ಸಾಯಂಕಾಲ ಊಟದ ನಂತರ ಅರ್ಧ ಚಮಚ ತಿನ್ನಬೇಕು. ನಂತರ ಸ್ವಲ್ಪ ಬಿಸಿ ಮಾಡಿದ ನೀರು ಕುಡಿಯಬೇಕು. ಹೀಗೆ ಮಾಡಿದರೆ ಹೊಟ್ಟೆ ನೋವು ನಿವಾರಣೆಯಾಗುತ್ತದೆ.

ಪಥ್ಯ : ಸಿಹಿ ಪದಾರ್ಥ ಗೋಧಿಯಿಂದ ತಯಾರಿಸಿದ ಪದಾರ್ಥಗಳು ತಿನ್ನಬಾರದು.

15) <u>ರಕ್ತದ ಒತ್ತಡ (ಬಿ.ಪಿ.)</u> :

ಅಜುಜನ ಅರಿಷ್ಠಕಾಳ್, ಬಿಸಿ ನೀರಿನ ಜೊತೆ ಕುಡಿಯಬೇಕು. ಹೀಗೆ 30 ದಿವಸ ಮುಂಜಾನೆ ಮತ್ತು ಸಾಯಂಕಾಲ ಕುಡಿದರೆ ರೋಗ ನಿವಾರಣೆಯಾಗುತ್ತದೆ.

ಪಥ್ಯ : ಮಾಂಸಾಹಾರ, ಅನ್ನ, ಹಾಲು, ತುಪ್ಪ, ಎಣ್ಣೆಕಾಳು, ಕೊಬ್ಬುಕಾರಕ ಪದಾರ್ಥಗಳನ್ನು ತಿನ್ನಬಾರದು.

16) <u>ಮೂರ್ಛೆ ರೋಗ ಇದ್ದಾಗ</u> :

ಶುಂಠಿ ಮತ್ತು ಬಜಿ ಈ ಎರಡನ್ನು ಸಮ ಪ್ರಮಾಣದಲ್ಲಿ ತೆಗೆದುಕೊಂಡು ಕುಟ್ಟಿ ಪುಡಿ ಮಾಡಿ (ಚೂರ್ಣ ತಯಾರಿಸಿ) ಅರ್ಧ ಚಮಚ ಚೂರ್ಣದಲ್ಲಿ 4 ಚಮಚ ಜೇನು ತುಪ್ಪ ಸೇರಿಸಿ ಚೆನ್ನಾಗಿ ಕಲಿಸಿ ದಿನಾಲು ಮುಂಜಾನೆ

ಮತ್ತು ಸಾಯಂಕಾಲ ರೋಗದ ಪ್ರಮಾಣ ನೋಡಿ 30-45 ದಿವಸಗಳವರೆಗೆ ಸೇವಿಸಿದರೆ ಈ ರೋಗ ಮಾಯವಾಗುತ್ತದೆ.

ಸೂಚನೆ : ಬುದ್ಧಿ ಚುರುಕುಗೊಳಿಸಲು ಹಣ್ಣು, ತುಪ್ಪ, ಸೇವಿಸಬೇಕು.

17) <u>ಜೇರ್ ಅಥವಾ ಅಂಡವಾಯ (ಹೈಡ್ರೋಸೀಲ್) ಆದಾಗ :</u>

ಕ್ಯಾರೆ ಎಲೆ ಚೆನ್ನಾಗಿ ಕುಟ್ಟಿ ಒಂದು ಚಮಚ ಅರಸಿಣ ಹಾಕಿ ಇದನ್ನು ಸ್ವಲ್ಪ ಬಿಸಿ ಮಾಡಿ ಅಂಡದ ಮೇಲೆ ಮುಚ್ಚುವಷ್ಟು ಚೆನ್ನಾಗಿ ಮುಚ್ಚಿ ಅದರ ಮೇಲೆ ಯಾವುದಾದರು ಎಲೆ ಹಚ್ಚಬೇಕು. ದಿನಾಲು ರಾತ್ರಿ ಹಚ್ಚಿದ ನಂತರ ಕುಸ್ತಿ ಲಂಗೋಟಿಯನ್ನು ಹಾಕಿ ಚೆನ್ನಾಗಿ ಬಿಗಿದು ಕಟ್ಟಬೇಕು. ಹೀಗೆ ಕಡಿಮೆಯಾಗುವವರೆಗೂ ಕಟ್ಟಿದರೆ ರೋಗ ನಿವಾರಣೆಯಾಗುತ್ತದೆ.

ಪಥ್ಯ : ಕಫ ಕಾರಕ ಪದಾರ್ಥಗಳನ್ನು ತಿನ್ನಬಾರದು.

ತ್ರಿಫಲ ಮುಂಜಾನೆ ಅರ್ಧ ಚಮಚ. ರಾತ್ರಿ ಅರ್ಧ ಚಮಚ ತಿಂದು ಗೋಮೂತ್ರ ಅಥವಾ ಸ್ವಲ್ಪ ಬಿಸಿ ಮಾಡಿದ ನೀರು ಕುಡಿಯಬೇಕು. ಹೀಗೆ ಮಾಡಿದರೆ ರೋಗ ನಿವಾರಣೆಯಾಗುತ್ತದೆ.

18) <u>ಕೈ ಕಾಲು ಬಿಚ್ಚಿದ್ದರೆ :</u>

ಕ್ಯಾರಳ 50 ಗ್ರಾಂ, ಶುದ್ಧಮೇಣ 50 ಗ್ರಾಂ, ರಾಳ 50 ಗ್ರಾಂ ಈ ಮೂರನ್ನು ಚೆನ್ನಾಗಿ ಕುಟ್ಟಿ ಪುಡಿ ಮಾಡಿ 100 ಗ್ರಾಂ. ಕೊಬ್ಬರೆ ಎಣ್ಣೆಯಲ್ಲಿ ಹಾಕಿ ಅದನ್ನು ಕಾಯಿಸಬೇಕು ನಂತರ ಕೈ ಕಾಲು ಒಡೆದ ಜಾಗಕ್ಕೆ ಹಚ್ಚಬೇಕು. ಹೀಗೆ ನೋವು ಕಡಿಮೆಯಾಗುವವರೆಗೆ ಹಚ್ಚಿದರೆ ರೋಗ ನಿವಾರಣೆಯಾಗುತ್ತದೆ.

ಪಥ್ಯ : ಗರ್ಮಿ ವಸ್ತು ತಿನ್ನಬಾರದು.

19) <u>ಕೂದಲು ಉದುರುತ್ತಿದ್ದರೆ :</u>

ಅರ್ಧ ಕಿಲೋ ನೆಲ್ಲಿಕಾಯಿ. 100 ಗ್ರಾಂ. ಶೀಗೆಕಾಯಿ ಪುಡಿ. 5 ಲೀಟರ ನೀರಿನಲ್ಲಿ ಹಾಕಿ ಅರಬಿ (ಬಟ್ಟೆ) ಯಲ್ಲಿ ಸೋಸಿ ಮುಂಜಾನೆ ಮತ್ತು ಸಂಜೆ ತಲೆಯನ್ನು ತೊಳೆದುಕೊಂಡರೆ ತಲೆಹೊಟ್ಟು ಮಾಯವಾಗುತ್ತದೆ. ಕೂದಲು ಉದುರುವದು ನಿಲ್ಲುತ್ತದೆ. ಬಿಳಿ ಕೂದಲು ಬೆಳೆಯವುದು ನಿಲ್ಲುತ್ತವೆ. ಹಾಗೆ ಕೂದಲು ಸಹ ನಯವಾಗುತ್ತವೆ.

20) <u>ಹೆಣ್ಣು ಮಗು ಬೇಕಾದಾಗ :</u>

ಹೆಣ್ಣಿನ ಗರ್ಭಕೋಶ ಒಳ್ಳೆಯ ರೀತಿಯಾಗಿರಬೇಕು. ಹೆಣ್ಣು ಋತುಮತಿಯಾಗಿರಬೇಕು. ನಾಲ್ಕು ದಿನ ಬಿಟ್ಟು 5ನೇ ದಿನ, 9ನೇ ದಿನ, 11ನೇ ದಿನ, 15ನೇ ದಿನ ಈ ದಿವಸಗಳಲ್ಲಿ ಗಂಡು ಸ್ತ್ರೀಯ ಜೊತೆ ಸಂಪರ್ಕಿಸಿದರೆ ಹೆಣ್ಣು ಮಗು ಹುಟ್ಟುತ್ತದೆ.

21) <u>ಗಂಡು ಮಗು ಬೇಕಾದಾಗ :</u>

ಹೆಣ್ಣು ಋತುಮತಿಯಾಗಿನಿಂದ 5 ದಿವಸ ಬಿಟ್ಟು 6ನೇ ದಿನ, 8ನೇ ದಿನ, 10ನೇ ದಿನ, 14ನೇ ದಿನ, 16ನೇ ದಿನ ಈ ದಿವಸಗಳಲ್ಲಿ ಸ್ತ್ರೀಯಯೊಂದಿಗೆ ಗಂಡು ಸಂಪರ್ಕಿಸಿದರೆ ಗಂಡು ಮಗು ಹುಟ್ಟುತ್ತದೆ.

22) <u>ಸಕ್ಕರೆ ಬೇನೆ ಆದಾಗ :</u>

ಹಳೆ ಬೇವಿನ ಮರದ ಬೇರನ್ನು ತಂದು ನೀರಿನ ಸಹಾಯದಿಂದ ಚೆನ್ನಾಗಿ ಸೋಸಿ 2 ಚಮಚ ಗಂಧವನ್ನು ತೆಗೆದು, 1 ಗ್ಲಾಸ್ ನೀರಿನಲ್ಲಿ ಹಾಕಿ ಕುಡಿಯಬೇಕು. ಹೀಗೆ ರೋಗ ಕಡಿಮೆಯಾಗುವವರೆಗೆ ಕುಡಿದರೆ ರೋಗವು ನಿವಾರಣೆಯಾಗುತ್ತದೆ.

ಪಥ್ಯ : ಸಿಹಿ ಪದಾರ್ಥಗಳನ್ನು ತಿನ್ನಬಾರದು.

23) <u>ಅರ್ಧ ತಲೆ ನೋವಾದಾಗ :</u>

- ಮುಂಜಾನೆ 5 ಗಂಟೆಯ ಒಳಗಾಗಿ ಎದ್ದು ಬಿಸಿಯಾದ ಅನ್ನವನ್ನು ಮಾಡಿ ಅದರಷ್ಟೇ ಮೊಸರನ್ನು ಕಲಿಸಿ ಹೊಟ್ಟೆತುಂಬ ಊಟ ಮಾಡಿ ಮಲಗಬೇಕು. ಮುಂಜಾನೆ 10 ಗಂಟೆಯವರೆಗೆ ಏಳಬಾರದು. ಹೀಗೆ ಮಾಡಿದರೆ ಅರ್ಧ ತಲೆ ನೋವು ರೋಗ ನಿವಾರಣೆಯಾಗುತ್ತದೆ.
- ಹಳೆ ಬೇವಿನ ಗಿಡದ ಹಣ್ಣು ತಪ್ಪಲನ್ನು ಅಂಗೈಯಲ್ಲಿ ಒರೆಸಿಕೊಂಡು ನಾಸಿ ಏರಿಸಿಕೊಳ್ಳಬೇಕು. ಹೀಗೆ ಮಾಡಿದರೆ ತಲೆ ನೋವು ರೋಗ ಮಾಯವಾಗುತ್ತದೆ.

24) <u>ಕಾಮಣಿಯಾದಾಗ :</u>

ಔಡಲ ಗಿಡದ ಬೆಳೆಯುತ್ತಿರುವ ಎಳೆಯ ಎಲೆಯನ್ನು ತಂದು ಕುಟ್ಟಿ ರಸ ತೆಗೆದು 12 ವರ್ಷದ ಒಳಗಿನ ಮಕ್ಕಳಿಗೆ 1 ಕಪ್ ಆಕಳ ಹಾಲಿನಲ್ಲಿ 1 ಚಮಚ ರಸ ಹಾಕಿ ಕುಡಿಸಬೇಕು. 12 ವರ್ಷದ ಮೇಲ್ಪಟ್ಟವರಿಗೆ ಔಡಲ

ಎಲೆಯ ರಸ 2 ಚಮಚ, ಒಂದು ಗ್ಲಾಸ್ ಆಕಳ ಹಾಲಿನಲ್ಲಿ ಹಾಕಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಕುಡಿಸಬೇಕು. ಆ ದಿನ ಪೂರ್ತಿ 24 ಗಂಟೆಗಳ ಕಾಲ ಬರಿ ಹಾಲನ್ನು ಮಾತ್ರ ಸೇವಿಸಬೇಕು. ಉಳಿದ ಯಾವುದೇ ಪದಾರ್ಥವನ್ನು ತಿನ್ನಬಾರದು. 3 ರವಿವಾರ ತೆಗೆದುಕೊಂಡರೆ ಕಾಮಣಿ ರೋಗವು ನಿವಾರಣೆಯಾಗುತ್ತದೆ.

25) <u>ಗಜಕರ್ಣ :</u>

ತುಪ್ಪ 100 ಗ್ರಾಂ. ಗಂಧಕ 20 ಗ್ರಾಂ. ಮೊರ್ಚುನ್ 10 ಗ್ರಾಂ. ಪಾಪಡ ಖಾರಾ 5 ಗ್ರಾಂ. ಇವೆಲ್ಲವನ್ನು ಚೆನ್ನಾಗಿ ಕುಟ್ಟಿ ಮಲಾಮಿನಂತೆ ಮಾಡಿ ಗಜಕರಣ ಆದ ಜಾಗಕ್ಕೆ ರಾತ್ರಿ ಹಚ್ಚಬೇಕು. ಹೀಗೆ ಈ ರೋಗ ಕಡಿಮೆಯಾಗುವವರೆಗೆ ಹಚ್ಚಿದರೆ ಈ ರೋಗ ಮಾಯವಾಗುತ್ತದೆ.

26) <u>ಇಸಬು ಆದಾಗ :</u>

ಖಗ್ಗು ಪಪಾಯಿ ಕಾಯಿಯನ್ನು ತಂದು ಗೀಚಿ ಈ ಚೂರ್ಣದಲ್ಲಿ ಟೆಂಕಣ ಖಾರಾ 50 ಗ್ರಾಂ. ಬೆರೆಸಿ ಬಿಸಿ ಮಾಡಿ ದಿನಾಲು ರಾತ್ರಿ ಇಸಬು ಇದ್ದ ಜಾಗಕ್ಕೆ ಕಟ್ಟಿದರೆ ಈ ಇಸಬು ರೋಗ ನಿವಾರಣೆಯಾಗುತ್ತದೆ.

ಪಥ್ಯ : ಕೀವು ತರುವ ಪದಾರ್ಥ ರತ್ನಾಲ, ಕಡಲೆ ಬೇಳೆ, ಆಲು ಗಡ್ಡೆ ಸೇವಿಸಬಾರದು.

19) **ವಕ್ತಾರರು** : **ಶ್ರೀಧರಗೌಡ ತಂದೆ ನಾಗನಗೌಡ**

ವಯಸ್ಸು : 30 ವರ್ಷ

ವಿಳಾಸ : ಎಲ್.ಐ.ಜಿ. 74, ಬೀದರ.

ದೂರವಾಣಿ : ಮನೆ 227783, ಕಛೇರಿ 241936

1) **ಕಾಮಾಲೆಯಾದಾಗ :**

- ಔಡಲ ಗಿಡದ ತಪ್ಪಲನ್ನು ಕುಟ್ಟಿ 2 ಚಮಚ ರಸ ತೆಗೆಯಬೇಕು. 2 ಜೀರಿಗೆಯನ್ನು ಕುಟ್ಟಿ ಈ ರಸದಲ್ಲಿ ಹಾಕಬೇಕು. ಈ ರಸವನ್ನು ಮುಂಜಾನೆ ನೀರು ಮುಟ್ಟದೆ ರವಿವಾರ ಮತ್ತು ಮಂಗಳವಾರ ಒಂದು ತಿಂಗಳು ಸೇವಿಸಿದರೆ. ರೋಗ ಮಾಯವಾಗುತ್ತದೆ.
- ಚಿಕ್ಕ ಮಕ್ಕಳಿಗೆ ಒಂದು ಚಮಚ ರಸ ಹಾಕಬೇಕು. ರವಿವಾರ ಹಾಗೂ ಮಂಗಳವಾರ ಒಂದು ತಿಂಗಳು ಕುಡಿಸಬೇಕು. ಹೀಗೆ ಕುಡಿಸುವುದರಿಂದ ಈ ರೋಗ ಮಾಯವಾಗುತ್ತದೆ.

2) **ಲಕ್ವಾ ಹೊಡೆದಾಗ :**

ಬಿಳಿಎಕ್ಕಿ ಅಥವಾ ಕರಿಎಕ್ಕಿಯ ಎಲೆಯನ್ನು 150 ಗ್ರಾಂ. ತೆಗೆದುಕೊಂಡು ಔಡಲ ಗಿಡದ 6 ಎಲೆಗಳನ್ನು ತೆಗೆದುಕೊಂಡು ಲಕ್ವಾ ಹೊಡೆದ ರೋಗಿಯ ತಲೆಗೆ ಮಂಗಳವಾರ ಹಾಗೂ ರವಿವಾರ ರಾತ್ರಿ ಕಟ್ಟಬೇಕು. ಮುಂಜಾನೆ ಎದ್ದ ತಕ್ಷಣ ಈ ಎಲೆಯನ್ನು ತೆಗೆಯಬೇಕು. ಹೀಗೆ ಒಂದು ತಿಂಗಳ ಕಾಲ ಮಾಡಿದರೆ ರೋಗ ನಿವಾರಣೆಯಾಗುತ್ತದೆ.

ಪಥ್ಯ : ಹೊರಗೆ ಹೋಗಬಾರದು. ಜಿಡ್ಡು ಪದಾರ್ಥ ತಿನ್ನಬಾರದು.

3) **ಲಕ್ವಾದಿಂದ ಮಾತು ಬರದೇ ಇದ್ದಾಗ :**

ಅಂಕಿಲ್ ಬೇರ (ಅಕ್ಕಲ್ ಖಾರಾ) ತೆಗೆದುಕೊಂಡು 4-5 ಹನಿ ಜೇನು ತುಪ್ಪದಲ್ಲಿ ಬೆರಸಿ ಅರ್ಧ ಚಮಚದಷ್ಟು ಈ ಚೂರ್ಣ ಕಲೆಸಿ ರೋಗಿಗೆ ನೆಕ್ಕಿಸಬೇಕು. ಹೀಗೆ ಒಂದು ತಿಂಗಳ ಕಾಲ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಸೇವಿಸಿದರೆ ರೋಗ ನಿವಾರಣೆಯಾಗಿ, ರೋಗಿಯು ಗುಣಮುಖವಾಗುತ್ತಾನೆ.

4) <u>ಕೀಲು ನೋವು</u> :

ತುಂಬೆ ಗಿಡದ ದೊಡ್ಡ ದೊಡ್ಡ ಎಲೆಗಳನ್ನು 250 ಗ್ರಾಂ. ತೆಗೆದುಕೊಂಡು ಎಳ್ಳೆಣ್ಣೆಯಲ್ಲಿ ಮಂದಾಗ್ನಿಯಿಂದ ಕಾಸಿ, ಚೆನ್ನಾಗಿ ಕುಟ್ಟಬೇಕು. ನಂತರ ಮತ್ತೆ ಎಳ್ಳೆಣ್ಣೆಯಲ್ಲಿ ಮಂದಾಗ್ನಿಯಿಂದ ಕಾಸಬೇಕು. ನಂತರ ಒಂದು ಬಿಳಿ ಬಟ್ಟೆಯನ್ನು ತೆಗೆದುಕೊಂಡು ಸೋಸಿ ನಂತರ ಬಂದ ಎಣ್ಣೆಯನ್ನು ಸೀಸೆಯಲ್ಲಿ ಹಾಕಿ ತುಂಬಿಟ್ಟುಕೊಂಡು ದಿನಾಲು ಬೆಳಿಗ್ಗೆ ಮತ್ತು ಸಾಯಂಕಾಲ ನೋವು ಇರುವ ಜಾಗಕ್ಕೆ ತಿಕ್ಕಿಕೊಂಡರೆ ಕೀಲು ನೋವು ರೋಗ ಮಾಯವಾಗುತ್ತದೆ.

5) <u>ವಿರ್‍ಯ ಹೋಗುತ್ತಿದ್ದಾಗ</u> :

ಅಡವಿ ಬೆಂಡಿಕಾಯಿಯ ಬೇರನ್ನು ತಂದು ಚೆನ್ನಾಗಿ ತೊಳೆದು ಕುಟ್ಟಬೇಕು. ಅದರಲ್ಲಿ ಸಮಪ್ರಮಾಣದ ಖಡಿಸಕ್ಕರೆಯನ್ನು ಮಿಶ್ರಣ ಮಾಡಿ ಚೆನ್ನಾಗಿ ಕಲೆಸಿ ಎರಡು ಚಮಚ ಚೂರ್ಣವನ್ನು ಒಂದು ಗ್ಲಾಸ ಮಜ್ಜಿಗೆಯಲ್ಲಿ ಹಾಕಿ ದಿನಾಲು ಮುಂಜಾನೆ ಮತ್ತು ಸಾಯಂಕಾಲ 15 ದಿವಸಗಳ ಕಾಲ ತೆಗೆದುಕೊಂಡರೆ ವಿರ್‍ಯ ಪುಷ್ಟಿಯಾಗುತ್ತದೆ. ನೀರಿನಂತಾದ ಧಾತುವನ್ನು ಗಟ್ಟಿಯಾಗುತ್ತದೆ. ಇದರಿಂದ ವಿರ್‍ಯ ಗಟ್ಟಿಯಾಗಿ ವಿರ್ಯ ಹೋಗುವುದನ್ನು ನಿಂತು ಈ ರೋಗ ಮಾಯವಾಗುತ್ತದೆ.

6) <u>ಕಬ್ಬಿಣಾಂಶ ಕಡಿಮೆಯಾದಾಗ</u> :

100 ಗ್ರಾಂ. ನೆಲ್ಲಿಕಾಯಿ ಬೀಜ, 100 ಗ್ರಾಂ. ಖಡಿ ಸಕ್ಕರೆ ಚೆನ್ನಾಗಿ ಕುಟ್ಟಿ ದಿನಾಲು ಮುಂಜಾನೆ - ಸಂಜೆ ಒಂದೊಂದು ಚಮಚದಂತೆ 15 ದಿವಸ ಸೇವಿಸಿದರೆ ಕಬ್ಬಿಣಾಂಶ ಹೆಚ್ಚಾಗುತ್ತದೆ.

7) <u>ವೀರ್ಯ ಪುಷ್ಠಿಗೆ</u> :

ತುಳಸಿ ಗಿಡದ ಒಣಗಿದ ಬೀಜವನ್ನು ಚೆನ್ನಾಗಿ ಕುಟ್ಟಿ ಪುಡಿ ಮಾಡಿ ಚೂರ್ಣ ತಯಾರಿಸಿ ಅದರಷ್ಟೇ ಸಮಪ್ರಮಾಣದಲ್ಲಿ ಒಳ್ಳೆಯ ಬೆಲ್ಲವನ್ನು ಕುಟ್ಟಿ ಕಲೆಸಿ ಬಾರೆ ಹಣ್ಣಿನಷ್ಟು ಗಾತ್ರದ ಗುಳಿಗೆಯನ್ನು ಮಾಡಿ ಈ ಗುಳಿಗೆಯನ್ನು ನೆರಳಿನಲ್ಲಿ ಒಣಗಿಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಎರಡು ಗುಳಿಗೆಗಳನ್ನು ತಿನ್ನಬೇಕು. ಹಾಗೆ ರಾತ್ರಿ ಊಟ ಮಾಡಿದ ನಂತರ ಎರಡು ಗುಳಿಗೆಗಳನ್ನು ತಿನ್ನಬೇಕು. ಹೀಗೆ ಒಂದು ತಿಂಗಳ ಕಾಲ ಸೇವಿಸಿದರೆ, ಧಾತು ವೃದ್ಧಿ ಅಥವಾ ವೀರ್ಯ ವೃದ್ಧಿಯಾಗಿ ಈ ರೋಗ ಸಂಪೂರ್ಣ ನಿವಾರಣೆಯಾಗುತ್ತದೆ.

ಪಥ್ಯ : ಹುಳಿ, ಎಣ್ಣೆ, ಖಾರಾ ಇವುಗಳನ್ನು ಅಲ್ಪ ಪ್ರಮಾಣದಲ್ಲಿ ಉಪಯೋಗಿಸಬೇಕು.

8) <u>ದಮ್ಮು, ಕೆಮ್ಮು (ಬಲಗಮ) ಆದಾಗ</u>:

ತುಳಸಿ ಗಿಡದ ನಾಲ್ಕು ಎಲೆಗಳು, ಅಮೃತ ಬಳ್ಳಿಯ ನಾಲ್ಕು ಎಲೆಗಳು, ಆಡುಸೋಗೆ ನಾಲ್ಕು ಎಲೆಗಳು ಒಳ್ಳೆಯ ನೀರಿನಲ್ಲಿ ಚೆನ್ನಾಗಿ ತೊಳೆದು ನಾಲ್ಕು ಕಪ್ ನೀರನ್ನು ಒಲೆಯ ಮೇಲೆ ಇಟ್ಟು ಈ ಎಲ್ಲಾ ಎಲೆಗಳನ್ನು ನೀರಿನಲ್ಲಿ ಹಾಕಿ ಮಂದಾಗ್ನಿಯಿಂದ ಕುದಿಸುತ್ತಾ ಒಂದು ಕಪ್ ಆಗುವರೆಗೆ ಕುದಿಸಿ ನಂತರ ಸೋಸಿ ಮುಂಜಾನೆ ಒಂದು ಕಪ್ ರಾತ್ರಿ ಒಂದು ಕಪ್ ಈ ರಸ ಕುಡಿಯಬೇಕು. ಹೀಗೆ 15 ದಿವಸಗಳವರೆಗೆ ಕುಡಿದರೆ ದಮ್ಮು ಕೆಮ್ಮು (ಬಲಗಮ) ರೋಗ ನಿವಾರಣೆಯಾಗುತ್ತದೆ.

ಪಥ್ಯ : ಎಣ್ಣೆ ಪದಾರ್ಥಗಳನ್ನು ಉಪಯೋಗಿಸಬಾರದು.

ಆಡುಸೋಗೆ ಎಲೆಗಳನ್ನು ನೆರಳಿನಲ್ಲಿ ಒಣಗಿಸಿ ಚೆನ್ನಾಗಿ ಪುಡಿ ಮಾಡಿ ಚುಟ್ಟದಲ್ಲಿ ಈ ಪುಡಿಯನ್ನು ಹಾಕಿ ಬೀಡಿಯಂತೆ ಬಿಗಿಯ (ಸೇದ) ಬೇಕು. ಹೀಗೆ ಒಂದು ತಿಂಗಳ ಕಾಲ ಬಿಗಿದರೆ ಬಲಗಮ ಹೊರಗಡೆ ಬಂದು ಈ ರೋಗ ನಿವಾರಣೆಯಾಗುತ್ತದೆ.

9) <u>ಮೂತ್ರ ಚನ್ನಾಗಿ ಹೋಗದೇ ಇದ್ದಾಗ</u>:

ತುಳಸಿ ಗಿಡದ ಎಲೆಗಳನ್ನು ಮುಂಜಾನೆ ಊಟ ಮಾಡದೇ ಖಾಲಿ ಹೊಟ್ಟೆಯಲ್ಲಿ ನಾಲ್ಕು ಎಲೆಗಳನ್ನು ಮತ್ತು ರಾತ್ರಿ ಊಟ ಮಾಡಿದ ನಂತರ ನಾಲ್ಕು ಎಲೆಗಳನ್ನು ಮೆಲಿದು ತಿನ್ನಬೇಕು. ಹೀಗೆ 15 ದಿವಸಗಳ ಕಾಲ ಪ್ರತಿನಿತ್ಯ ತಿಂದರೆ ಮೂತ್ರವು ಸರಳವಾಗಿ ಹೋಗುತ್ತದೆ. ಇದರಿಂದ ಈ ರೋಗ ನಿವಾರಣೆಯಾಗುತ್ತದೆ.

10) <u>ಹಳೆಜ್ವರ (ವಿಕ್‌ನೇಸ್) ಆದಾಗ</u>:

ಅಮೃತ ಬಳ್ಳಿಯ ಬೇರನ್ನು 500 ಗ್ರಾಂ. ತೆಗೆದುಕೊಂಡು ಒರಳಲ್ಲಿ ಹಾಕಿ ರುಬ್ಬಬೇಕು. ನಂತರ ಒಂದು ಒಳ್ಳೆಯ ಪಾತ್ರೆಯಲ್ಲಿ ಹಾಕಿ ಆ ಮೇಲೆ ಅರ್ಧ ಲೀಟರ್ ನೀರು ಹಾಕಿ 3 ಅಥವಾ 4 ದಿನಗಳ ಕಾಲ ಇಡಬೇಕು. ಆ ನಂತರ ಪಾತ್ರೆಯ ತಳದಲ್ಲಿ ಕುಳಿತಂತಹ ಅಮೃತ ಸತ್ವವನ್ನು ತೆಗೆದುಕೊಳ್ಳಲು ಮೇಲಿನ ನೀರನ್ನು ಜಾನಿ ಚೆಲ್ಲಬೇಕು. ಈ ಅಮೃತ ಸತ್ವವನ್ನು ನೆರಳಿನಲ್ಲಿ ಒಣಗಿಸಬೇಕು. ನಂತರ ಒಂದು ಸೀಸೆಯಲ್ಲಿ ತುಂಬಿಟ್ಟುಕೊಳ್ಳಬೇಕು. ಪ್ರತಿದಿನ ಅರ್ಧ ಚಮಚ ಈ ಚೂರ್ಣಕ್ಕೆ ಎಂಟು ಹನಿ ಜೇನು ತುಪ್ಪ ಕಲೆಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಮತ್ತು ಸಾಯಂಕಾಲ ಊಟ ಮಾಡಿದ ನಂತರ ಸೇವಿಸಬೇಕು. ಹೀಗೆ 15 ರಿಂದ 20 ದಿವಸಗಳು ಸೇವಿಸಿದರೆ ಹಳೆ ಜ್ವರ ಹೋಗಿ ದೇಹ ಪುಷ್ಟಿಯಾಗುತ್ತದೆ.

ಪಥ್ಯ : ಹುಳಿ, ಖಾರ, ಉಪ್ಪು ಸ್ವಲ್ಪ ಪ್ರಮಾಣದಲ್ಲಿ ಉಪಯೋಗಿಸಬೇಕು.

11) <u>ರಕ್ತ ಮೂಲವ್ಯಾಧಿ ಮತ್ತು ಮೂಲ ವ್ಯಾಧಿ ಆದಾಗ:</u>

500 ಗ್ರಾಂ. ಖತೀರಾ ಗೋಂದ (ಅಂಟ)ನ್ನು ತಂದಿಟ್ಟುಕೊಂಡು ಪ್ರತಿದಿನ ಒಂದು ಚಮಚ ಅಂಟಿಗೆ 6-7 ಹನಿ ನೀರು ಬೆರೆಸಿ ರಾತ್ರಿ ನೆನೆಸಿಟ್ಟು ಮುಂಜಾನೆ ಸೇವಿಸಬೇಕು. ಮುಂಜಾನೆ ನೆನೆಸಿಟ್ಟು ರಾತ್ರಿ ಸೇವಿಸಬೇಕು. ಹೀಗೆ 15 ದಿವಸ ಸೇವಿಸಿದರೆ ಮೂಲವ್ಯಾಧಿ ನಿವಾರಣೆಯಾಗುತ್ತದೆ.

12) <u>ಲಕ್ವ ಹೊಡೆದಾಗ (ಪಾರ್ಶ್ವವಾಯು) :</u>

ನಾಲ್ಕು ಸೇರ ಆಕಳ ಹಾಲನ್ನು ತೆಗೆದುಕೊಂಡು ನಂತರ 20 ತೊಲೆ ಬೆಳಗಡ್ಡಿಯನ್ನು ಸುಲಿದು ಇದರ ಮಧ್ಯದಲ್ಲಿರುವ ಹಸಿರು ದೇಟನ್ನು ತೆಗೆದು ಆ ಬೆಳಗಡ್ಡಿಯ ಎಸಳುಗಳು ಹಾಲಿನಲ್ಲಿ ಹಾಕಿ. ಒಂದು ಸ್ವಚ್ಛವಾಗಿರುವ ಪಾತ್ರೆಯಲ್ಲಿ ಮಂದಾಗ್ನಿಯಿಂದ ಕುದಿಸಬೇಕು. ಈ ಹಾಲಿನಿಂದ ಖವೆಯನ್ನು ಮಾಡಿ ನಂತರ ಈ ಖವೆಯನ್ನು ಹಂಚಿನಲ್ಲಿ ಹಾಕಿ ಆಕಳ ಹಾಲಿನಿಂದ ತಯಾರಿಸಿದ ತುಪ್ಪದಲ್ಲಿ ಇದನ್ನು ಕೆಂಪು ಆಗುವವರೆಗೆ ಹುರಿಯಬೇಕು. ತಣ್ಣಗಾದ ನಂತರ 250 ಗ್ರಾಂ. ಜೇನು ತುಪ್ಪದಲ್ಲಿ ಕಲೆಸಬೇಕು. ಇದನ್ನು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಒಂದು ಚಮಚ ಮತ್ತು ರಾತ್ರಿ ಊಟವಾದ ನಂತರ ಒಂದು ಚಮಚ ತೆಗೆದುಕೊಳ್ಳಬೇಕು. ಹೀಗೆ ರೋಗ ಕಡಿಮೆ ಆಗುವವರೆಗೆ ಸೇವಿಸುತ್ತಾ ಇರಬೇಕು. ಇದರಿಂದ ಸಮಸ್ತ ವಾತ ರೋಗ, ನರ ರೋಗ ಲಕ್ವ ಮೊದಲಾದ ರೋಗ ನಿವಾರಣೆಯಾಗುತ್ತವೆ.

ಪಥ್ಯ : ಹುಳಿ, ಖಾರ, ಎಣ್ಣೆ ಮುಂತಾದವುಗಳನ್ನು ಸೇವಿಸಬಾರದು.

13) <u>ಪುರುಷತ್ವ ಕಳೆದುಕೊಂಡಾಗ :</u>

500 ಗ್ರಾಂ ಮುತ್ತಿನ ಗಿಡದ ಬೀಜವನ್ನು ತೆಗೆದುಕೊಂಡು ಡೋಲಾಯಂತ್ರದಿಂದ ಎಣ್ಣೆಯನ್ನು ತೆಗೆಯಬೇಕು. ಒಂದು ಹನಿ ವಿಳ್ಳೆದೆಲೆಗೆ ಹಚ್ಚಬೇಕು. ಚೆನ್ನಾಗಿ ಒರೆಸಿ ನಂತರ ಎರಡು ಕೈಯಿಂದ ಈ ಎಲೆಯನ್ನು ತಿಕ್ಕಬೇಕು. ನಂತರ ಇನ್ನೊಂದು ವಿಳ್ಯದೆಲೆ ತೆಗೆದುಕೊಂಡು ಅದರಲ್ಲಿ ಹಾಕಿ ಮುಂಜಾನೆ ಊಟವಾದ ನಂತರ ತಿನ್ನಬೇಕು. ಹೀಗೆ ತಿಂದಾಗ ಪುರುಷತ್ವ ಬರುತ್ತದೆ. ನಂತರ ಒಂದು ಹನಿ ಎಣ್ಣೆಯನ್ನು ಅಂಗಕ್ಕೆ ಹಾಕಿ ಮಾಲಿಷ ಮಾಡಬೇಕು. ಅಂದು ಸ್ತ್ರೀ ಸಂಭೋಗ ಮಾಡಬೇಕು. ಹೀಗೆ 3-4 ದಿನ ಇಂತಹ ಎಲೆ ತಿಂದರೆ ಸಂಪೂರ್ಣ ಪುರುಷತ್ವ ಬರುತ್ತದೆ. ಇದರಿಂದ ಈ ರೋಗ ನಿವಾರಣೆಯಾಗುತ್ತದೆ.

14) <u>ಹಾವು ಕಡಿದಾಗ</u> :

ಗಿಳಿ ಮೊತ್ತಿನ ಗಡ್ಡಿ ಬೇರನ್ನು ತಂದು ನೀರಿನ ಸಹಾಯದಿಂದ ಸೋಸಿ ಗಂಧವನ್ನು ತೆಗೆಯಬೇಕು. ಈ ಗಂಧವನ್ನು ಜೇನು ತುಪ್ಪದಲ್ಲಿ ಕಲಿಸಿ ರೋಗಿಗೆ ನೆಕ್ಕಿಸಬೇಕು. ಸ್ವಲ್ಪ ಸಮಯದ ನಂತರ ವಾಂತಿಯಾಗುತ್ತದೆ. ಆಗ ವಿಷ ಹೊರಗೆ ಬಂದು ವ್ಯಕ್ತಿ ಅಪಾಯದಿಂದ ಪಾರಾಗುತ್ತಾನೆ.

15) <u>ಕೀಲು ನೋವು</u> :

ಅಂಬುಲದ ಬೇರು ಕಣಜಿ ಗಿಡದ ಬೇರು, ದೊಡ್ಡ ಔಡಲ ಗಿಡದ ಬೇರು ಸಣ್ಣ ಔಡಲ ಗಿಡದ ಬೇರುಗಳನ್ನು ಸಮಪ್ರಮಾಣದಲ್ಲಿ ತಂದು ಬೇರೆ ಬೇರೆಯಾಗಿ ಕುಟ್ಟಿ ಚೂರ್ಣವನ್ನು ತಯಾರಿಸಿ ಎಲ್ಲ ಒಂದೆಡೆ ಕುಡಿಸಬೇಕು ನಿತ್ಯವು ಅರ್ಧ ಚಮಚ ಚೂರ್ಣವನ್ನು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ತಿನ್ನಬೇಕು. ಸಾಯಂಕಾಲ ಊಟವಾದ ನಂತರ ಅರ್ಧ ಚಮಚ ಚೂರ್ಣವನ್ನು ತಿನ್ನಬೇಕು. ನಂತರ ನೀರು ಕುಡಿಯಬೇಕು. ಹೀಗೆ ರೋಗ ಕಡಿಮೆಯಾಗುವವರೆಗೆ ತಿಂದರೆ ೮೦ ತರಹದ ಕೀಲು ನೋವು ರೋಗ ನಿವಾರಣೆಯಾಗುತ್ತದೆ.

16) <u>ಕಾಲರಾ</u> :

ಬಿಲ್ವ ಪತ್ರಿ ಗಿಡದ ಕಾಯಿಯನ್ನು ಒಡೆದು ಮೇಲಿನ ತೋಟೆ (ಕವಚ) ಮತ್ತು ಬೀಜವನ್ನು ಹೊರತೆಗೆಯಬೇಕು 20 ಗ್ರಾಂ. ಗಾಬಿ (ತಿರುಳು) ತೆಗೆದುಕೊಂಡು 5 ಲೀಟರ ನೀರಿನಲ್ಲಿ ಹಾಕಿ ಮಂದಾಗ್ನಿಯಿಂದ ಒಂದು ಲೀಟರ ಆಗುವವರೆಗೆ ಕುದಿಸಬೇಕು. ನಂತರ ಅದನ್ನು ಸೋಸಿ ಒಳ್ಳೆಯ ಸ್ವಚ್ಛವಾಗಿರುವ ಒಂದು ಸೀಸೆಯಲ್ಲಿ ಹಳಿಕಿ ತುಂಬಿಟ್ಟುಕೊಳ್ಳಬೇಕು. ಇದನ್ನು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಒಂದು ಚಮಚ ಹಾಗೂ ರಾತ್ರಿ ಊಟವಾದ ನಂತರ ಸೇವಿಸಬೇಕು. ಹೀಗೆ ರೋಗ ಕಡಿಮೆಯಾಗುವವರೆಗೆ ಸೇವಿಸಬೇಕು. ಹೀಗೆ ಮಾಡಿದರೆ ಯಾವುದೇ ತರಹದ ಕಾಲರಾ ರೋಗ ಮಾಯವಾಗುತ್ತದೆ.

17) <u>ಮುಖದ ಕಾಂತಿಗಾಗಿ</u> :

ತುಳಸಿ ಗಿಡದ ಎಲೆಗಳನ್ನು ನೆರಳಿನಲ್ಲಿ ಒಣಗಿಸಿ ರಾತ್ರಿ ನೀರಿನಲ್ಲಿ ಬೆರೆಸಿ ಮೂರು ಚಮಚದಷ್ಟು ನಯವಾಗಿ ಅರೆದು ಮಲಾಮಿನಂತೆ ಮಾಡಿ ಮಲಗುವ ಅರ್ಧ ಗಂಟೆ ಮೊದಲೇ ಮುಖಕ್ಕೆ ಹಚ್ಚಿಕೊಳ್ಳಬೇಕು. ಅರ್ಧ ಗಂಟೆ ಆದ ನಂತರ ಮುಖ ತೊಳೆದುಕೊಳ್ಳಬೇಕು. ಹೀಗೆ ಕೆಲ ದಿವಸಗಳ ಕಾಲ ಮಾಡಿದರೆ ಎಂತಹ ಕುರುಪಿ ಮುಖ ಕೂಡ ಸುಂದರವಾಗಿ ಕಾಣುತ್ತದೆ. ಮುಖದ ಮೊಡವೆಗಳು ನಿವಾರಣೆಯಾಗುತ್ತವೆ. ಹೀಗೆ ಮಾಡಿದರೆ ಯಾವುದೇ ಮುಖದ ಮೇಲಿನ ಕಲೆ ಮತ್ತು ಇತರ ರೋಗಗಳು ಇಲ್ಲವಾಗುತ್ತವೆ ಮುಖ ಕಾಂತಿ ಹೆಚ್ಚುತ್ತದೆ.

18) ಸ್ತ್ರೀ ಬಂಜೆ ತನಕ್ಕೆ :

- ಮುತ್ತುಗದ ಗಿಡದ ಬೀಜವನ್ನು ತಂದು ಉಲಿಯಲು ಹಾಕಿ ಬೀಜ ಸುಟ್ಟಿ ಕರ್ಕುಮಾಡಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಸಂಜೆ ಊಟವಾದ ನಂತರ ಅರ್ಧ ಚಮಚ ತಿನ್ನಬೇಕು. ಇದನ್ನು ಸ್ತ್ರೀಯು ಋತುಮತಿಯಾದ ಮೂರು ದಿನಗಳಾದ ಮೇಲೆ ಆರಂಭಿಸಬೇಕು. ಹೀಗೆ ಋತುಮತಿಯಾಗುವವರೆಗೂ ತಿನ್ನಬೇಕು. ಮತ್ತೆ ಮೂರು ದಿನಗಳು ಬಿಟ್ಟು ಪುನರಾವರ್ತಿಸಬೇಕು. ಹೀಗೆ ಮೂರು ತಿಂಗಳ ಕಾಲ ಮಾಡಿದರೆ ಸ್ತ್ರೀಯಲ್ಲಿರುವ ಬಂಜೆತನ ನಿವಾರಣೆಯಾಗುತ್ತದೆ.

- ಪಾದರಿ ಗಿಡದ ಬೀಜವನ್ನು ತಂದು ಚೆನ್ನಾಗಿ ಕುಟ್ಟಿ ಚೂರ್ಣ ತಯಾರಿಸಿ ಚೂರ್ಣವನ್ನು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಮೂರು ಬೆರಳಿಗೆ ಬರುವಷ್ಟು ತಿಂದು ನೀರು ಕುಡಿಯಬೇಕು. ಹೀಗೆ ಮೂರು ತಿಂಗಳ ತಿಂದರೆ ಸ್ತ್ರೀ ಬಂಜೆತನ ನಿವಾರಣೆಯಾಗುತ್ತದೆ.

19) **ವಿಷ ಕೊಂಡಾಗ (ಕುಡಿದಾಗ, ಸೇವಿಸಿದಾಗ)** :

- 5 ಲೀಟರ್ ನೀರನ್ನು ತೆಗೆದುಕೊಂಡು ಅಡಿಗೆ ಉಪ್ಪನ್ನು ಚೆನ್ನಾಗಿ ಬೆರೆಸಿ ವಿಷ ಕುಡಿದವರಿಗೆ ಕುಡಿಸಬೇಕು. ನಂತರ ವಾಂತಿಯಾಗುತ್ತದೆ. ಆಗ ವಿಷ ಹೊರಗೆ ಬರುತ್ತದೆ. ಮತ್ತೆ ಮತ್ತೆ ಹೀಗೆ ಮಾಡಬೇಕು. ವಿಷ ಹೊರಗೆ ಬಂದು ಅಪಾಯದಿಂದ ಪಾರಾಗುತ್ತಾರೆ.

- ಕೋಳಿ ಮೊಟ್ಟೆಯನ್ನು ಒಡೆದು ವಿಷ ಕುಡಿದವರಿಗೆ ಕುಡಿಸಬೇಕು. ತಕ್ಷಣವೇ ವಾಂತಿಯಾಗುತ್ತದೆ. ಇದರಿಂದ ವಿಷ ಹೊರಗೆ ಬಂದು ಅಪಾಯ ತಪ್ಪುತ್ತದೆ.

- ಆಕಳ ಹಾಲಿನಿಂದ ತಯಾರಿಸಿದ ತುಪ್ಪವನ್ನು ರೋಗಿಗೆ ಕುಡಿಸಬೇಕು. ತಕ್ಷಣವೇ ವಾಂತಿಯಾಗಿ ವಿಷ ಹೊರಗೆ ಬಂದು ಅಪಾಯ ದೂರಾಗುತ್ತದೆ.

20) **ಏಡ್ಸ ರೋಗಕ್ಕೆ ಪ್ರಾಯೋಗಿಕ ಗಿಡ ಮೂಲಿಕೆಗಳು (ಪ್ರಾಯೋಗಿಕ ಹಂತ)**

- ತುಳಸಿ ಗಿಡದ ಎಲೆಗಳನ್ನು ಕುಟ್ಟಿ ಒಂದು ಚಮಚ ರಸ ತೆಗೆದು ದಿನಾಲು ಮುಂಜಾನೆ ಖಾಲಿ ಹೊಟ್ಟೆಯಲ್ಲಿ, ಕುಡಿಯಬೇಕು. ಹಾಗು ಸಾಯಂಕಾಲ ಊಟವಾದ ನಂತರ ಕುಡಿಯಬೇಕು.

- ಬಿಲ್ವ ಪತ್ರಿ ಗಿಡದ ಕಾಯಿಯನ್ನು ತಂದು ಖಪ್ಪರ (ಕವಚ) ಮತ್ತು ಬೀಜವನ್ನು ಹೊರತೆಗೆದು ಒಂದು ಚಮಚ ನೀರಿನಲ್ಲಿ ಅದರ ತಿರುಳ (ಗಾಬಿಯ)ನ್ನು ಕಲೆಸಿ ಮುಂಜಾನೆ ಊಟವಾದ ನಂತರ ಸೇವಿಸಬೇಕು.

- ಎರಡು ಬೆಳಗಡ್ಡಿಯನ್ನು ತೆಗೆದುಕೊಂಡು ಅದರ ಮೇಲಿನ ಸಿಪ್ಪೆಯನ್ನು ತೆಗೆದು ಮತ್ತು ಆ ಎಸಳಿನಲ್ಲಿರುವ ಹಸಿರು ದೇಟನ್ನು ತೆಗೆದು ಮೂರುಕಪು ಆಕಳ ಹಾಲಿನಲ್ಲಿ ಹಾಕಿ ಮಂದಾಗ್ನಿಯಿಂದ ಕುದಿಸುತ್ತಾ ಒಂದು ಕಪ್ ಆಗುವವರೆಗೂ ಕುದಿಸಬೇಕು. ಇದನ್ನು ರಾತ್ರಿ ಮಲಗುವಾಗ ಕುಡಿಯಬೇಕು. ಹೀಗೆ ರೋಗ ಕಡಿಮೆಯಾಗುವವರೆಗೂ ಮಾಡಬೇಕು. ಆಗ ಈ ರೋಗ ಸ್ವಲ್ಪ ಸ್ವಲ್ಪ ಕಡಿಮೆಯಾಗುತ್ತದೆ.

ಏಕೆಂದರೆ ಈ ಮೂರರಲ್ಲಿ ಎಚಿಟಿ ವೈರಸ್ ಔಷಧಗುಣವಿದೆ. ಆದ್ದರಿಂದ ಇದನ್ನು ಉಪಯೋಗಿಸಬೇಕು.

21) ಸಕ್ಕರೆ ಬೇನೆ :

- ಸದಾಮಲ್ಲಿಗೆ ಗಿಡದ ಎರಡೆರಡು ಎಲೆಗಳನ್ನು ದಿನಾಲು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಹಾಗೂ ಊಟವಾದ ನಂತರ ಸಾಯಂಕಾಲ ತಿನ್ನಬೇಕು. ಹೀಗೆ ರೋಗ ಕಡಿಮೆಯಾಗುವವರೆಗೂ ಸೇವಿಸಿದರೆ ಸಕ್ಕರೆ ರೋಗ ಸ್ವಲ್ಪ ಸ್ವಲ್ಪ ನಿವಾರಣೆಯಾಗುತ್ತದೆ.
- ಸದಾ ಮಲ್ಲಿಗೆ ಗಿಡದ ಬೇರನ್ನು ತಂದು ನೀರಿನ ಸಹಾಯದಿಂದ ಚೆನ್ನಾಗಿ ಕುಟ್ಟಿ ಒಂದು ಗ್ಲಾಸ್ ರಸ ತೆಗೆದು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಕುಡಿಯಬೇಕು. ಹೀಗೆ ಕೆಲವು ದಿವಸಗಳ ಕಾಲ ಕುಡಿದರೆ ಸಕ್ಕರೆ ಬೇನೆ ಸ್ವಲ್ಪ ಸ್ವಲ್ಪ ಮಾಯವಾಗುತ್ತದೆ.

20) **ವಕ್ತಾರರು** : **ಸಿದ್ರಾಮ ಕಾಶಿನಾಥ ಮಾಲಿ ಪಾಟೀಲ**

ವಯಸ್ಸು : 25 ವರ್ಷ

ಊರು : ಕೊಟಗ್ಯಾಳ

ತಾಲೂಕಾ : ಭಾಲ್ಕಿ

ಜಿಲ್ಲಾ : ಬೀದರ.

1) **ಕೆಂಪು ಸೆರಗು ಮತ್ತು ಬಿಳಿ ಸೆರಗು ಹೋಗುತ್ತಿದ್ದಾಗ** :

ಡಾಂಗಡೇನ್ ಬೆಳ್ಳಿಯ ತಪ್ಪಲನ್ನು ತಂದು ಒಣಗಿಸಿ ನಂತರ ಕುಟ್ಟಿ ಪುಡಿ ಮಾಡಿ ಪ್ರತಿದಿನ ಮುಂಜಾನೆ 2 ಚಮಚ ಚೂರ್ಣವನ್ನು ತಿಂದು ಸ್ವಲ್ಪ ಬಿಸಿ ನೀರನ್ನು ಕೂಡಿಯಬೇಕು. ಹೀಗೆ 3 ದಿನ ಮಾಡಿದರೆ ಕೆಂಪು ಮತ್ತು ಬಿಳಿ ಸೆರಗು ನಿಲ್ಲುತ್ತದೆ.

2) **ಕಾಲಲ್ಲಿ ಮುಳ್ಳು ನಟ್ಟಾಗ** :

ಉತ್ತರಣಿಯ 10 ಎಲೆಗಳನ್ನು 3 ದಿನ ತಿಂದರೆ ಕಾಲಲ್ಲಿ ಇರುವ ಮುಳ್ಳು ಅಲ್ಲೆ ಕರಗಿ ಹೋಗುತ್ತದೆ.

3) **ಗಾಜು, ಮುಳ್ಳು, ಕಲ್ಲು ಚಿಂಪು, ಕಬ್ಬಿಣ, ಯಾವುದೇ ವಿಷವುಳ್ಳ ವಸ್ತು ನಟ್ಟಾಗ** :

ಒಂದು ಗಜಲಿಂಬೆಯನ್ನು ತಂದು ನಾಲ್ಕು ಭಾಗ ಮಾಡಿ ದಿನಾಲು ಮುಂಜಾನೆ ಒಂದು ಭಾಗ ತಿನ್ನಬೇಕು. ಹೀಗೆ 4 ದಿನ ತಿಂದರೆ ಗಾಜು, ಮುಳ್ಳು, ಕಲ್ಲು ಚೀಪು, ಕಬ್ಬಿಣ, ಯಾವುದೇ ವಸ್ತು ಹೊರಗಡೆ ಬರುತ್ತದೆ. ಇಲ್ಲವಾದಲ್ಲಿ ಆ ವಸ್ತು ಅಲ್ಲೆ ಕರಗಿ ಹೋಗುತ್ತದೆ. ಇದರಿಂದ ರೋಗ ನಿವಾರಣೆಯಾಗುತ್ತದೆ.

4) **ಚೇಳು ಕಡಿದಾಗ** :

- ಗೆಯೇಟಿಕಾ ತಪ್ಪಲನ್ನು ಕೈಯಲ್ಲಿ ವರೆಸಿ ಚೇಳು ಕಡಿದ ವಿರೋಧ ಕಿವಿಯಲ್ಲಿ 4-5 ಹನಿ ರಸ ಹಿಂಡಿದರೆ ವಿಷ ಇಳಿದು ಉರಿವ ನೋವು ಕಡಿಮೆಯಾಗುತ್ತದೆ.
- ಹೆಚ್ಚು ನಿಶಾ ಇರುವ ಸೀಗರೇಟನ್ನು ಸೇದಿದರೆ ಚೇಳು ಕಡಿದ ವಿಷದ ಉರಿ ಕಡಿಮೆಯಾಗುತ್ತದೆ.
- ಪಟ್ಟಕಾವನು ಶೋಷಿ ಚೇಳು ಕಡಿದ ಜಾಗಕ್ಕೆ ಹಚ್ಚಿದರೆ ವಿಷ ಮಾಯವಾಗಿ ನೋವು ನಿವಾರಣೆಯಾಗುತ್ತದೆ.

- ಚೇಳು ಕಡಿದ ಜಾಗಕ್ಕೆ ಯೂರಿಯಾ ಗೊಬ್ಬರವನ್ನು ಹಾಕಿ ಅದರ ಮೇಲೆ ಸ್ವಲ್ಪ ನೀರು ಹಾಕಿದರೆ ವಿಷ ಇಳಿದು ಉರಿ ಕಡಿಮೆಯಾಗಿ ನೋವು ನಿವಾರಣೆಯಾಗುತ್ತದೆ.
- ಎಕ್ಕೆಯ ಹಾಲು ಚೇಳು ಕಡಿದ ಜಾಗಕ್ಕೆ ಹಚ್ಚಿದರೆ ವಿಷ ಇಳಿದು ಉರಿ ಕಡಿಮೆಯಾಗುತ್ತದೆ.

5) ಕಾಮಾಲೆಯಾದಾಗ :

- ಕಾಗೆ ಹಣ್ಣಿನ ತಪ್ಪಲನ್ನು ತಂದು ಬೆಲ್ಲದಲ್ಲಿ ಹಾಕಿ, ಮುಂಜಾನೆ ಖಾಲಿ ಹೊಟ್ಟೆಯಲ್ಲಿ ತಿನ್ನಬೇಕು. ಹೀಗೆ 3 ದಿನ ಮಾಡಿದರೆ ಕಾಮಾಲೆ ರೋಗ ನಿವಾರಣೆಯಾಗುತ್ತದೆ.
- ಗಜುಗದ ತಪ್ಪಲನ್ನು ತಂದು ನೀರಿನ ಸಹಾಯದಿಂದ ಚೆನ್ನಾಗಿ ಕುಟ್ಟಿ. ಒಂದು ಬಿಳಿ ಬಟ್ಟೆಯಲ್ಲಿ ಹಾಕಿ ಒಂದು ಕಪ್ಪು ರಸ ತೆಗೆದು ರವಿವಾರ ಮುಂಜಾನೆ ಏನು ತಿನ್ನದೇ ರಸ ಕೊಂಡರೆ ಕಾಮಾಲೆ ರೋಗ ನಿವಾರಣೆಯಾಗುತ್ತದೆ.
- ನಂಜು ಪುಡಿಯನ್ನು ತಂದು ದಿನಾಲು ಮುಂಜಾನೆ ಒಂದು ಚಮಚ ತಿಂದು. ನಂತರ ಸ್ವಲ್ಪ ನೀರು ಕುಡಿಯಬೇಕು. ಹೀಗೆ ಮೂರು ದಿನ ಮಾಡಿದರೆ ಕಾಮಾಲೆ ರೋಗ ನಿವಾರಣೆಯಾಗುತ್ತದೆ.
- ಪಟಕಾವನ್ನು ಕುಟ್ಟಿ ಚೂರ್ಣ ಮಾಡಿ ಎರಡು ದಿನ ಮುಂಜಾನೆ ಒಂದು ಚಿಟಕಿಯಷ್ಟು ತಿಂದರೆ ಕಾಮಾಲೆ ರೋಗ ನಿವಾರಣೆಯಾಗುತ್ತದೆ.

6) ಮೈ ಕೈ ನೋವು ಆದಾಗ :

ಗುಟಗುಟಿನ ತಪ್ಪಲನ್ನು ತಂದು ನೆರಳಿನಲ್ಲಿ ಒಣಗಿಸಿ ಪುಡಿ ಮಾಡಿ ಚೂರ್ಣ ತಯಾರಿಸಿ. ಪಟಕಾ 100 ಗ್ರಾಂ. ಕುಟ್ಟಿ ಪುಡಿ ಮಾಡಿ ಈ ಎರಡು ಜೇನು ತುಪ್ಪದಲ್ಲಿ ಕಲೆಸಿ ಒಂದು ಚಮಚ ದಿನಾಲು ಮುಂಜಾನೆ ಸೇವಿಸಬೇಕು. ಹೀಗೆ 4 ದಿನ ತಿಂದರೆ ಮೈ ಕೈ ನೋವು ನಿವಾರಣೆಯಾಗುತ್ತದೆ.

7) ಧಾತು ತೆಳುವಾದಾಗ (ಕಂಜೋರ ಆದಾಗ) :

ಬ್ರಹ್ಮದಂಡಿ ಬೇರು ತಂದು ಒಣಗಿಸಿ ಕುಟ್ಟಿ, ಖಡಿಸಕ್ಕರೆಯನ್ನು ಕುಟ್ಟಿ ನಂತರ ಜೇನುತುಪ್ಪದಲ್ಲಿ ಕಲೆಸಿ ದಿನಾಲು ಮುಂಜಾನೆ ಎರಡು ಚಮಚದಂತೆ 3 ದಿನ ತಿಂದರೆ ಈ ರೋಗ ನಿವಾರಣೆಯಾಗುತ್ತದೆ.

8) <u>ಕಣ್ಣಾಗ ಹೂವಾ ಬಿದ್ದಾಗ :</u>

- ಕೊಡಪತ್ರಿ ಎಲೆಯ ರಸ ತೆಗೆದು ಸೋಸಿ ಸೂರ್ಯೋದಯಕ್ಕೆ ಮುಂಚೆ (ಮೊದಲು) ಕಣ್ಣಲ್ಲಿ ಹಾಕಿದರೆ ಕಣ್ಣಲಿರುವ ಹೂವಾ ಮಾಯವಾಗುತ್ತದೆ.
- ಕಬ್ಬಿನ ಎಲೆಯ ಸುಳಿಯಲ್ಲಿನ ನೀರನ್ನು ಹೂವಾ ಬಿದ್ದ ಕಣ್ಣಿಗೆ 7 ದಿವಸ ಮುಂಜಾನೆ ಹಾಕಿದರೆ ಈ ರೋಗ ನಿವಾರಣೆಯಾಗುತ್ತದೆ.
- ಆಕಳ ಹಾಲಿನ ಬುರುಗನ್ನು ಹೂವಾ ಬಿದ್ದ ಕಣ್ಣಿಗೆ ಮುಂಜಾನೆ ಮತ್ತು ಸಾಯಂಕಾಲ ಹಾಕಿಕೊಂಡರೆ ಹೂವಾ ಮಾಯವಾಗಿ ಕಣ್ಣು ಸ್ವಚ್ಛವಾಗುತ್ತವೆ.

9) <u>ಬಿಳಿ ಸೆರಗು :</u>

ಜೀರಗಿ 50 ಗ್ರಾಂ. ಖಡಿಸಕ್ಕರೆ 50 ಗ್ರಾಂ. ಕಾರೆ ತಪ್ಪಲು 50 ಗ್ರಾಂ. ಈ ಮೂರನ್ನು ಕಲೆಸಿ ಚೆನ್ನಾಗಿ ಕುಟ್ಟಿ ದಿನಾಲು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಒಂದು ಚಮಚ ತಿನ್ನಬೇಕು. ಹೀಗೆ 3 ದಿನ ತಿಂದರೆ ಬಿಳಿಸೆರಗು ನಿಲ್ಲುತ್ತದೆ.

10) <u>ಸೆಕೆ ಹೊಡೆದಾಗ :</u>

ಕಹಿ ಸೌತೇಕಾಯಿಯ ಬೀಜವನ್ನು ಚೆನ್ನಾಗಿ ಅರೆದು ನಂತರ ಸ್ವಲ್ಪ ಸಕ್ಕರೆಯನ್ನು ಹಾಕಿ ಮೂರು ದಿನ ತಿಂದರೆ ಉರಿವ ನೋವು ಕಡಿಮೆಯಾಗುತ್ತದೆ.

11) <u>ಕೊಡಲಿ ಪೆಟ್ಟು ಬಿದ್ದಾಗ :</u>

ಐದು ಛಾಲಿಯ್ ಅಡಿಕೆಯನ್ನು ತಂದು ಸುಟ್ಟು ಕರುಕು ಮಾಡಿ ಕೊಡಲಿ ಹತ್ತಿದ ಜಾಗಕ್ಕೆ ಈ ಕರುಕನ್ನು ಕೊಬ್ಬರಿ ಎಣ್ಣೆಯಲ್ಲಿ ಕಲೆಸಿ ಮನಮಿನಂತೆ ಮಾಡಿ ಹಚ್ಚಿದರೆ ನೋವು, ಗಾಯ ಕಡಿಮೆಯಾಗಿ ರೋಗ ನಿವಾರಣೆಯಾಗುತ್ತದೆ.

12) <u>ನಾಸರ ಹುಣ್ಣು ಆದಾಗ :</u>

- ನಗರೇನ ಗಿಡದ ಒಣಗಿದ ತಪ್ಪಲನ್ನು ತಂದು ಚೆನ್ನಾಗಿ ಕುಟ್ಟಿ ಪುಡಿ ಮಾಡಿ ನಾಸರ ಹುಣ್ಣು ಆದ ಜಾಗಕ್ಕೆ ಹಚ್ಚಿದರೆ ಹುಣ್ಣು ಕಡಿಮೆಯಾಗುತ್ತದೆ.

- ಬೇವಿನ ಗಿಡದ ತೊಗಟೆಯನ್ನು ತಂದು ನೀರಿನ ಸಹಾಯದಿಂದ ಸೋಸಿ ಗಂಧ ತೆಗೆದು ನಾಸರ ಹುಣ್ಣು ಆದ ಜಾಗಕ್ಕೆ ದಿನಾಲು ಹಚ್ಚಿದರೆ ಹುಣ್ಣು ಕಡಿಮೆಯಾಗಿ ರೋಗ ನಿವಾರಣೆಯಾಗುತ್ತದೆ.
- ಕಹಿ ಬಾದಮ ಬೀಜವನ್ನು ತಂದು ನೀರಿನ ಸಹಾಯದಿಂದ ಸೋಸಿ ಗಂಧ ತೆಗೆದು ನಾಸರ ಹುಣ್ಣು ಆದ ಜಾಗಕ್ಕೆ ದಿನಾಲು ಹಚ್ಚಿದ್ದರೆ ಹುಣ್ಣು ಮಾಯವಾಗಿ ರೋಗ ನಿವಾರಣೆಯಾಗುತ್ತದೆ.

13) <u>ಹಲ್ಲು ಬೇನೆ :</u>

ದೊಡ್ಡ ಜುಂಜುರೇನ ತಪ್ಪಲಿಗೆ ಅಡಿಗೆ ಉಪ್ಪನ್ನು ಬೆರೆಸಿ ಚೆನ್ನಾಗಿ ಅರೆದು ಹಲ್ಲಿನ ಸಂದಿಯಲ್ಲಿ ಟೊಕಲಿ ಇದ್ದ ಜಾಗದಲ್ಲಿ ಇಡಬೇಕು. ಆ ಜೊಲ್ಲು ಸೋರುತ್ತದೆ. ನಂತರ ಹಲ್ಲು ನೋವು ಕಡಿಮೆಯಾಗುತ್ತದೆ.

14) **<u>ಕಾಲಲ್ಲಿ ಮುಳ್ಳು ಮುರಿದಾಗ :</u>**

- ಕಾರಿ ಗಿಡದ ತಪ್ಪಲಿಗೆ ಕುಟ್ಟಿ ಪುಡಿಮಾಡಿ ನಂತರ ಅಡಿಗೆ ಉಪ್ಪನ್ನು ಸ್ವಲ್ಪ ಅರಿಶಿನ ಸೇರಿಸಿ ಕುಟ್ಟಿ ಪುಡಿ ಮಾಡಿ ನಂತರ ಇವೆಲ್ಲಗಳನ್ನು ಸ್ವಲ್ಪ ಕಾಯಿಸಿ ಮುಳ್ಳು ಮುರಿದ ಜಾಗಕ್ಕೆ ಕಟ್ಟಬೇಕು. ಇದನ್ನು 3 ದಿನ ಬಿಡಬಾರದು. ಹೀಗೆ ಮಾಡಿದರೆ ಮುಳ್ಳು ಹೊರಗೆ ಬರುತ್ತದೆ. ಇಲ್ಲವೇ ಅಲ್ಲೆ ಕರಗುತ್ತದೆ.
- ಧತ್ತರಿ ಗಿಡದ ತಪ್ಪಲನ್ನು ತಂದು ಚೆನ್ನಾಗಿ ಅರೆದು ಮುಳ್ಳುನೆಟ್ಟಿದ ಜಾಗಕ್ಕೆ ಕಟ್ಟಬೇಕು. ಎರಡು ದಿವಸ ಬಿಡಬಾರದು ಮತ್ತು ನೀರಿನಿಂದ ತೋಯಿಸಬಾರದು. ಇದರಿಂದ ಮುಳ್ಳು ಹೊರಗಡೆ ಬರುತ್ತದೆ ಇಲ್ಲವೆ ಇಲ್ಲಿಯೇ ಸುಟ್ಟುಹೋಗುತ್ತದೆ.

15) <u>ಖಂಡಕಿ ಹುಣ್ಣು ಆದಾಗ :</u>

ಕಾರೇ ಗಿಡದ ತಪ್ಪಲನ್ನು ತಂದು ಚೆನ್ನಾಗಿ ಅರೆದು ಅದರಲ್ಲಿ ಔಡಲ ಎಣ್ಣೆಯನ್ನು ಕಲೆಸಿ. ನಂತರ ಸ್ವಲ್ಪ ಕಾಯಿಸಿ ಖಂಡಕಿ ಹುಣ್ಣು ಆದ ಜಾಗಕ್ಕೆ ಕಟ್ಟಬೇಕು. ಅದರ ಮೇಲೆ ಔಡಲ ಎಲೆ ಇಟ್ಟು ಬಿಳಿ ಬಟ್ಟೆಯಿಂದ ಕಟ್ಟಬೇಕು. ಹೀಗೆ ಮಾಡಿದರೆ ಹುಣ್ಣು ಮಾಯವಾಗುತ್ತದೆ.

16) <u>ಗಜಕರ್ಣ ಆದಾಗ :</u>

- ಕೊತ್ತಂಬರಿ ಸಸ್ಯದ ತಪ್ಪಲನ್ನು ತಂದು ಚೆನ್ನಾಗಿ ಅರೆದು ಗಜಕರ್ಣ ಆದ ಜಾಗಕ್ಕೆ ಕಡಿಮೆ ಯಾಗುವವರೆಗೆ ಹಚ್ಚಿದರೆ ಈ ರೋಗ ಗುಣಮುಖವಾಗುತ್ತದೆ.

- ಸಿಂಪ್‌ರೇಟಿನ ಎಳೆಯ (ಚಿಗುರು) ಹುಲ್ಲನ್ನು ಚೆನ್ನಾಗಿ ಅರೆದು ಗಜಕರ್ಣ ಆದ ಜಾಗಕ್ಕೆ ಹಚ್ಚಿದರೆ ರೋಗ ನಿವಾರಣೆಯಾಗುತ್ತದೆ.
- ಮಲ್ಲದ ಹಕ್ಕಿ (ಮಲ್ಲ) ಯನ್ನು ಆಯ್ದು ತಂದು ಇವೆಲ್ಲವನ್ನು ಸುಟ್ಟು ಕರುಕುಮಾಡಿ ನಂತರ ಕೊಬ್ಬರೆ ಎಣ್ಣೆಯಲ್ಲಿ ಕಲೆಸಿ ಗಜಕರ್ಣ ಆದ ಜಾಗಕ್ಕೆ 7 ದಿನ ಹಚ್ಚಿದರೆ ಗಜಕರ್ಣ ಇಲ್ಲವಾಗುತ್ತದೆ.

17) <u>ಕುರು ಆದಾಗ :</u>

- ಎಕ್ಕೆ ಗಿಡದ ಹಾಲು ಕುರು ಇದ್ದ ಜಾಗಕ್ಕೆ ಹಚ್ಚಬೇಕು. ನಂತರ ಅದರ ಮೇಲೆ ಸ್ವಲ್ಪ ಮಣ್ಣನ್ನು ಉದರಿಸಬೇಕು. ಇದರಿಂದ ಕುರು ದೊಡ್ಡದಿದ್ದರೆ ಒಡೆಯುತ್ತದೆ. ಚಿಕ್ಕದಿದ್ದರೆ ಅಲ್ಲೇ ಕರಗಿ ಹೋಗುತ್ತದೆ.
- ಅತ್ತಿ ಗಿಡದ ಹಾಲನ್ನು ತೆಗೆದು ಕುರು ಇದ್ದ ಜಾಗಕ್ಕೆ ಹಚ್ಚಿ ಮೇಲೆ ಕಾಗದ ಹಚ್ಚಬೇಕು. ಹೀಗೆ ಮಾಡಿದರೆ ಸಣ್ಣದಾದ ಕುರು ಕರಗಿ ಹೋಗುತ್ತದೆ. ದೊಡ್ಡದಾದರೆ ಒಡೆಯುತ್ತದೆ. ನೋವು ಕಡಿಮೆಯಾಗುತ್ತದೆ.
- ಹಜ್ಜೋ (ಹಳದಿ ಹಸಿರು) ಕಳಕಿಯ ಬೆಂಡನ್ನು ಸುಡಬೇಕು. ನಂತರ ನೋವು ಕೊಬ್ಬರಿ ಎಣ್ಣೆಯಲ್ಲಿ ಕಲೆಸಬೇಕು. ಕುರು ಇದ್ದ ಜಾಗಕ್ಕೆ ಹಚ್ಚಿದರೆ ಕುರು ಒಡೆದು ಕೆಟ್ಟ ರಕ್ತ ಹೊರ ಬಂದು ನಿವಾರಣೆಯಾಗುತ್ತದೆ.
- ಶೇಂಗಾ ಕಾಯಿ ಬೀಜವನ್ನು ನೀರಿನ ಸಹಾಯದಿಂದ ಸೋಸಿ ಕುರು ಇದ್ದ ಜಾಗಕ್ಕೆ ಹಚ್ಚಬೇಕು. ಸಣ್ಣದಾದ ಕುರು ಅಲ್ಲೆ ಕರಗಿ ಹೋಗುತ್ತದೆ. ಇದರಿಂದ ನೋವು ನಿವಾರಣೆಯಾಗುತ್ತದೆ.
- ಔಡಲ ಗಿಡದ ಬೀಜವನ್ನು ನೀರಿನ ಸಹಾಯದಿಂದ ಶೋಸಿ ಹಚ್ಚಿದರೆ ಸಣ್ಣದಾದ ಕುರು ಅಲ್ಲೇ ಮಾಯವಾಗುತ್ತದೆ. ಇದರಿಂದ ಈ ನೋವು ನಿವಾರಣೆಯಾಗುತ್ತದೆ.

18) <u>ದೇಹಕ್ಕೆ ಯಾವುದೇ ಗಡ್ಡೆ ಆದಾಗ :</u>

ಹೆಣ್ಣು ಎಕ್ಕಿ ಗಿಡದ ಬೇರನ್ನು ತಂದು, ಅಂಟಿನೊಂದಿಗೆ ಗೋಮೂತ್ರದಲ್ಲಿ ಸೋಸಿ (ಆಕಳ ಗ್ವಾತ) ಗಡ್ಡೆಯಾದ ಜಾಗಕ್ಕೆ ಗಂಧವನ್ನು ಹಚ್ಚಿದರೆ ಗಡ್ಡೆಯು ಕರಗಿ ಹೋಗುತ್ತದೆ. ಇದರಿಂದ ಗಡ್ಡೆ ಕರಗಿ ರೋಗ ನಿವಾರಣೆಯಾಗುತ್ತದೆ.

19) <u>ನಾಯಿ ಕಡಿದಾಗ :</u>

ಸರಕಾರಿ ಬಬಲಿ ಗಿಡದ ತಪ್ಪಲನ್ನು ನೀರಿನ ಸಹಾಯದಿಂದ ಚೆನ್ನಾಗಿ ಕುಟ್ಟಿ ಬಟ್ಟೆಯಲ್ಲಿ ಹಾಕಿ ಒಂದು ಬಟ್ಟಲು ರಸ ತೆಗೆದು ಮುಂಜಾನೆ ಕುಡಿಯಬೇಕು. ನಂತರ ಸ್ವಲ್ಪ ಬೆಲ್ಲ ತಿನ್ನಬೇಕು. ಹೀಗೆ ಮಾಡಿದರೆ ವಿಷ ಇಳಿದು ಅಪಾಯ ತಪ್ಪುತ್ತದೆ.

ಸೂಚನೆ : ಆ ದಿನ ಪೂರ್ತಿ ರೋಟ್ಟಿ ಮತ್ತು ಸಪ್ಪನ ಬೇಳೆ ಊಟ ಮಾಡಬೇಕು.

20) **ಕಜ್ಜಿಯಾದಾಗ :**

ಲಕ್ಕಿ ಗಿಡದ ಎಳೆಯ ಕೊಂಡುರು, ಬಬಲೆ ಗಿಡದ ಕೊಂಡುರು, ಬಾರೆ ಗಿಡದ ಕೊಂಡರು, ಬನ್ನಿ ಗಿಡದ ಕೊಂಡುರು. ಇವೆಲ್ಲ ಚೆನ್ನಾಗಿ ಅರೆದು ಕೊಬ್ಬರೆಣ್ಣೆಯಲ್ಲಿ ಕಲೆಸಿ ಕಜ್ಜಿಯಾಗಿರುವ ಜಾಗಕ್ಕೆ ಸವರಬೇಕು. ಹೀಗೆ 5 ದಿನ ಮಾಡಿದರೆ ಕಜ್ಜಿ ನಾಶವಾಗಿ ರೋಗ ನಿವಾರಣೆಯಾಗುತ್ತದೆ.

21) **ಬೆನ್ನು, ಹೆಡಕು ಹಿಡಿದುಕೊಂಡಾಗ :**

ಮಾಹಾನಾರಾಯಣ ತೇಲನ್ನು ತಂದು ಚೆನ್ನಾಗಿ ಒರೆಸಬೇಕು. ಹೀಗೆ ಎರಡು ದಿವಸ ಒರೆಸಿದರೆ ಬೆನ್ನು ನೋವು ಕಡಿಮೆಯಾಗುತ್ತದೆ.

22) **ಕೂಸಿಗೆ ಹೊಟ್ಟೆ ನೋವು ಆದಾಗ :**

ಕೊಡಪತ್ರಿ ಎಲೆ, ಬೆಳ್ಳಗಡಡ್ಡಿ ಎಸಳು. ಈ ಎರಡನ್ನು ಚೆನ್ನಾಗಿ ಕುಟ್ಟಿ ನಂತರ ಅದರಲ್ಲಿ ಸ್ವಲ್ಪ ಜೇನುತಪ್ಪ ಕಲೆಸಿ ಮಗುವಿಗೆ 3 ದಿನ ನೆಕ್ಕಿಸಬೇಕು. ಕೂಸಿಗೆ ಹೊಟ್ಟೆ ನೋವು ನಿಲ್ಲುತ್ತದೆ.

23) **ಕಿವಿ ಒಡೆದಾಗ :**

ಝುಂಡೇನ ಹೂವು (ಚೆಂಡು ಹೂವಿನ) ಗಿಡದ ತಪ್ಪಲನ್ನು ಚೆನ್ನಾಗಿ ಕುಟ್ಟಿ ಒಡೆದ ಕಿವಿಗೆ ನಾಲ್ಕು ಹನಿ ರಸ ಹಿಂಡಿದರೆ ಕಿವಿ ನೋವು ಕಡಿಮೆಯಾಗುತ್ತದೆ.

24) **ಇಸಬು ಆದಾಗ :**

- ಮೂರುತೊತ್ತಿ ಬೇರು, ಕರೆ ಬೆನ್ನಿನ ಕೊಬ್ಬರಿ ಗುಂಡು. ಈ ಎರಡನ್ನು ಚೆನ್ನಾಗಿ ಸುಟ್ಟು ಕರಕು ಮಾಡಿ ಕೊಬ್ಬರಿ ಎಣ್ಣೆಯಲ್ಲಿ ಈ ಎರಡನ್ನು ಕಲೆಸಿ ಇಸಬು ಆದ ಜಾಗಕ್ಕೆ ಹಚ್ಚಬೇಕು. ಹೀಗೆ 5 ದಿನ ಹಚ್ಚಿದರೆ ಇಸುಬು ರೋಗ ಮಾಯವಾಗುತ್ತದೆ.

  ಸೂಚನೆ : ಈ ಔಷಧ ಹಚ್ಚಿದ ಮೇಲೆ ಚುಟು ಚುಟು ಆಗುತ್ತದೆ ಕೆದರಿಕೊಳ್ಳಬಾರದು.

- ಮೊಲದ ಹಿಕ್ಕೆ (ಮಲ) ಯನ್ನು ಸುಟ್ಟು ಕರುಕು ಮಾಡಿ ಕೊಬ್ಬರೆಣ್ಣೆಯಲ್ಲಿ ಬೆರೆಸಿ ಇಸಬು ಇದ್ದ ಜಾಗಕ್ಕೆ 7 ದಿನ ಹಚ್ಚಿದರೆ ರೋಗ ನಿವಾರಣೆಯಾಗುತ್ತದೆ.

- ಮುತ್ತಿನ ಗಿಡದ ಬೀಜ ನಿಂಬೆ ರಸದಲ್ಲಿ ನೋಸಿ ಇಸುಬು ಇರುವ ಜಾಗಕ್ಕೆ ಹಚ್ಚಿದರೆ ಇಸುಬು ರೋಗ ನಿವಾರಣೆಯಾಗುತ್ತದೆ.

25) **<u>ದೇಹಕ್ಕೆ ಪೆಟ್ಟು ಆದಾಗ</u>** :

ಬಾಂಬಿ ಹುಲ್ಲನ್ನು ತೆಗೆದುಕೊಂಡು ಹಂಚಿನ ಮೇಲೆ ಕಾಯಿಸಿ ಪೆಟ್ಟು ಆದ ಜಾಗಕ್ಕೆ ಸ್ಪರ್ಶಿಸಬೇಕು. ಹೀಗೆ 5 ದಿನ ಲೇಪಿಸಬೇಕು ಇದರಿಂದ ಮಾಡಿದರೆ ನೋವು ನಿವಾರಣೆಯಾಗುತ್ತದೆ.

ನವಳಸರದ ರಸವನ್ನು ತೆಗೆದು ಗಾಯದ ಮೇಲೆ ಹಚ್ಚಿದರೆ (ಲೇಪಿಸಿದರೆ) ನೋವು ನಿವಾರಣೆಯಾಗುತ್ತದೆ.

26) **<u>ಕೆಮ್ಮು ಆದಾಗ</u>** :

ಕ್ಯಾರಳನ್ನು ಸೂಜಿಗೆ ಚುಚ್ಚಿ ದೀಪದ (ಮುಂಬತ್ತಿ) ಮೇಲೆ ಹಿಡಿದರೆ ಅದರ ರಸ ಸೋರುತ್ತದೆ. 3 ಹನಿ ರಸ ಒಂದು ಗ್ಲಾಸ ನೀರಿನಲ್ಲಿ ಹಾಕಿ ಕುಡಿಯಬೇಕು. ಇದರಿಂದ ಕೆಮ್ಮು ರೋಗ ನಿವಾರಣೆಯಾಗುತ್ತದೆ.

27) **<u>ಮುಖದ ಮೇಲೆ ಪಕ್ಕ (ಮೊಡವೆ) ಆದಾಗ</u>** :

ಒಂದು ಬೆಳ್ಳಗಡ್ಡಿಯ ರಸವನ್ನು ಮುಖದ ಗುಳ್ಳೆಯ ಮೇಲೆ ಹಚ್ಚಿಕೊಂಡರೆ ಗುಳ್ಳೆ ಮೊಡವೆ ಮಾಯವಾಗುತ್ತವೆ.

28) **<u>ಅಜೀರ್ಣ ಆದಾಗ</u>** :

- ಕೊಡಪತ್ರಿ ಗಿಡದ ತಪ್ಪಲನ್ನು ತಿಂದರೆ ಅಜೀರ್ಣ ರೋಗ ನಿವಾರಣೆಯಾಗುತ್ತದೆ. ಇದರಿಂದ ಜೀರ್ಣ ಶಕ್ತಿ ಹೆಚ್ಚುತ್ತದೆ.

- ಭಾಸ್ಕರ ಲವಣ್ ಚೂರ್ಣ ಮುಂಜಾನೆ ಮತ್ತು ರಾತ್ರಿ 2 ಚಮಚ 5 ದಿನ ತಿಂದರೆ ಅಜೀರ್ಣತೆ ನಿವಾರಣೆಯಾಗುತ್ತದೆ.

29) <u>ಚೇರ್ (ಭುರಂಡಿ) ಇಳಿದಾಗ :</u>

- ಒಂದು ಕಡೆ ಚೇರ್ ಇಳಿದರೆ ಅದರ ವಿರುದ್ಧ ಭಾಗದ ಮೊಲೆಯ ಚೆಂಡಿ ಮೇಲೆ ಕ್ಯಾರಳದ ಚುಕ್ಕೆಯನ್ನು ಹಾಕಬೇಕು. ಇದರಿಂದ ಚೇರ್ ಸಮವಾಗುತ್ತದೆ.
- ಅತ್ತಿಯ ಹಾಲು ಚೇರ್‌ನಿಂದ ಉಬ್ಬಿದ ನರಕ್ಕೆ ಹಚ್ಚಿದ್ದರೆ ಗುಣಮುಖವಾಗುತ್ತದೆ.

30) <u>ಹಾವು ಕಡಿದ್ದಾಗ :</u>

ಬೇವಿನ ಗಿಡದ ಮೇಲೆ ಏರಿದ (ಹಬ್ಬಿದ) ಹೆಣ್ಣು ಮೊತೇನ ಬೆಳ್ಳಿಯ ಗಡ್ಡಿಯ (ಬೇರು) ಸೋಸಿ ಗಂಧ ತೆಗೆದು ಹಾವು ಕಡಿದ ಜಾಗಕ್ಕೆ ಹಚ್ಚಿದರೆ ವಿಷ ಇಳಿದು ಅಪಾಯ ತಪ್ಪುತ್ತದೆ.

ಸೂಚನೆ : ಇಡೀ ರಾತ್ರಿ ನಿದ್ದೆ ಮಾಡಬಾರದು.

31) <u>ಮೊಲೆ (ಸ್ಥನ) ತುದಿಯಲ್ಲಿ ಬಿರುಕಾಗಿ ನೋವೆನೆಸಿದರೆ :</u>

ಒಂದು ಚಮಚ ಕರಿ ಮಿಶ್ರಿತ ಕಾಚನ್ನು ನುಣ್ಣಗೆ ಅರೆದು ಒಂದು ಬಟ್ಟಲು ನೀರಲ್ಲಿ ಕುದಿಸಿ ಆರಿಸಿ 5 ದಿನಗಳವರೆಗೆ ಮೊಲೆಯ ತುದಿಯನ್ನು ತೊಳೆದರೆ ನೋವು ಮಾಯವಾಗುತ್ತದೆ.

32) <u>ಬೆನ್ನು ನೋವಿದ್ದಾಗ :</u>

ಒಂದು ಗ್ಲಾಸು ಬಿಸಿ ಹಾಲಿಗೆ ಒಂದು ತೊಲೆ ಅಶ್ವಗಂಧದ ಚೂರ್ಣ ಮತ್ತು ಒಂದು ತೊಲೆ ಕೆಂಪು ಖಡಿಸಕ್ಕರೆಯ ಪುಡಿಯನ್ನು ಬೆರೆಸಿ ಪ್ರತಿ ದಿನ ಮುಂಜಾನೆ ಮತ್ತು ಸಾಯಂಕಾಲ ಕುಡಿಯಬೇಕು. ಹೀಗೆ 7 ದಿವಸ ಕುಡಿದರೆ ಬೆನ್ನು ನೋವು ನಿವಾರಣೆಯಾಗುತ್ತದೆ.

33) <u>ಗಾಯವಾದಾಗ :</u>

ಕರಿ ಎಳ್ಳು ಮತ್ತು ಬೇವಿನ ಎಲೆಗಳನ್ನು ತೆಗೆದುಕೊಂಡು ಔಡಲ ಎಣ್ಣೆಯಲ್ಲಿ ಹುರಿದು ನಂತರ ಅರಿಸಿನ ಮತ್ತು ಕರ್ಪೂರ ಬೆರೆಸಿ ಚೆನ್ನಾಗಿ ಅರೆದು ಮಲಾಮನಂತೆ ಮಾಡಿಕೊಳ್ಳಬೇಕು. ಗಾಯಗಳಿಗೆ ಹಚ್ಚಿದರೆ ಗಾಯ ಮಾಯವಾಗುತ್ತವೆ.

34) <u>ಗಜಕರ್ಣ ಮತ್ತು ಕಜ್ಜಿಯಾದಾಗ :</u>

ಅರಳಿಗಿಡದ ಚಕ್ಕಿಯನ್ನು ತಂದು ಸುಟ್ಟು ಕರುಕನ್ನು ಬೆಣ್ಣೆ ಮತ್ತು ಸುಣ್ಣದೊಂದಿಗೆ ಸಮ ಪ್ರಮಾಣದಲ್ಲಿ ಮಿಶ್ರಣ ಮಾಡಿ ಗಜಕರ್ಣ ಮತ್ತು ಕಜ್ಜಿಯಾದ ಜಾಗಕ್ಕೆ ಹಚ್ಚಿದರೆ ಈ ರೋಗ ನಿವಾರಣೆಯಾಗುತ್ತದೆ.

35) <u>ಮಲವಿಸರ್ಜನೆ ಸಮಯದಲ್ಲಿ ರಕ್ತ ಸ್ರಾವವಾಗುತ್ತಿದ್ದಾಗ:</u>

ನೇಳ (ನೇರಳೆ) ಗಿಡದ ಎಲೆ (ಚಿಗುರು) ಎಲೆಗಳನ್ನು ಕುಟ್ಟಿ ಅರ್ಧ ಬಟ್ಟಲು ರಸ ತೆಗೆದು ಒಂದು ಚಮಚ ಸಕ್ಕರೆಯನ್ನು ಬೆರೆಸಿ ಚೆನ್ನಾಗಿ ಕರಗಿಸಿ ಸೇವಿಸಿದರೆ ಮಲವಿಸರ್ಜನೆ ಸಮಯದಲ್ಲಿ ಆಗುವ ರಕ್ತಸ್ರಾವ ರೋಗವನ್ನು ನಿವಾರಣೆಯಾಗುತ್ತದೆ.

36) <u>ದೃಷ್ಟಿಮಾಂಧ್ಯ ವಿದ್ದಾಗ:</u>

ಅಮೃತ ಬಳ್ಳಿ, ತ್ರಿಫಳ ಚೂರ್ಣ ಮತ್ತು ಹಿಪ್ಪಲಿ ಇವೆಲ್ಲವುಗಳನ್ನು ಸಮ ಪ್ರಮಾಣದಲ್ಲಿ ಸೇರಿಸಿ ಕುಟ್ಟಿ ನೀರಿನಲ್ಲಿ ಹಾಕಬೇಕು. ಅರ್ಧ ಬಟ್ಟಲು ರಸಕ್ಕೆ 3 ಚಮಚ ಜೇನುತುಪ್ಪ ಸೇರಿಸಿ ಕುಡಿಯಬೇಕು. ಹೀಗೆ ಕಡಿಮೆಯಾಗುವವರೆಗೂ ಕುಡಿದರೆ ಈ ರೋಗ ನಿವಾರಣೆಯಾಗುತ್ತದೆ.

37)<u>ಮೂಗು ಮತ್ತು ಬಾಯಿಯಿಂದ ರಕ್ತ ಸೋರುತ್ತಿದ್ದಾಗ:</u>

ತುಪ್ಪದ ಹೀರೆಕಾಯಿಯನ್ನು ತಂದು ಪಲ್ಯ ಮಾಡಿ ಬಿಳಿ ಜೋಳದ ರೊಟ್ಟಿಯೊಂದಿಗೆ ಊಟ ಮಾಡಿದರೆ ಮೂಗು ಮತ್ತು ಬಾಯಿಂದ ರಕ್ತ ಬಿಳುವುದು ಕಡಿಮೆಯಾಗುತ್ತದೆ.

38) <u>ಮುಖದ ಮೇಲೆ ಗುಳ್ಳೆ ಇದ್ದಾಗ:</u>

ಅರ್ಧ ಬಟ್ಟಲು ಒಣಗಿದ ಬಬ್ಬಲೆ ಗಿಡದ ಹೂಗಳನ್ನು ಕುಟ್ಟಿ ಪುಡಿ ಮಾಡಿ 2 ಚಮಚ ಜೇನು ತುಪ್ಪ ಬೆರೆಸಿ ಚೆನ್ನಾಗಿ ಕಲೆಸಿ ಮಲಾಮಿನಂತೆ ಮಾಡಿ ಮುಖದ ಮೇಲಿರುವ ಗುಳ್ಳೆಗಳಿಗೆ ಹಚ್ಚಿದರೆ ಗುಳ್ಳೆಗಳು ಮಾಯವಾಗುತ್ತದೆ.

39) <u>ದೊಡ್ಡ ದೊಡ್ಡ ಹುಣ್ಣುಗಳಾದಾಗ:</u>

ಬೇವಿನ ಗಿಡದ ಎಲೆಯನ್ನು ತಂದು ಚೆನ್ನಾಗಿ ಕುಟ್ಟಿ ಅರೆದು ಹುಣ್ಣುಗಳಾದ ಜಾಗಕ್ಕೆ ಹಚ್ಚಬೇಕು. ಹೀಗೆ ಕಡಿಮೆಯಾಗುವವರೆಗೆ ಹಚ್ಚಿದರೆ ಹುಣ್ಣುಗಳು ನಿವಾರಣೆಯಾಗುತ್ತವೆ.

40) <u>ಫೆಪ್ರಿ (ಮೂರ್ಛೆ) ರೋಗವಿದ್ದಾಗ:</u>

ಮೂರ್ಛೆ ರೋಗದಿಂದ ಬಳಲುತ್ತಿದ ವ್ಯಕ್ತಿಗೆ ಅವನ ಕೈಗೆ ಕಬ್ಬಿಣದ ವಸ್ತುವನ್ನೋ, ಕೀಲಿ ಕೈಯನ್ನೋ, ಕೊಡಬೇಕು. ಹೀಗೆ ಕೊಟ್ಟರೆ ಈ ರೋಗ ಅರ್ಧ ಗಂಟೆ ಒಳಗಾಗಿ ಕಡಿಮೆಯಾಗುತ್ತದೆ.

41) <u>ನಾರುಣ್ಣು ಆದಾಗ:</u>

ಬೆಲ್ಲವನ್ನು ಕಬ್ಬಿಣದ ಹಂಚಿನಲ್ಲಿ ಹುರಿದು ಕರುಕು ಮಾಡಿ. ಆಕಳ ಹಾಲಿನಿಂದ ತಯಾರಿಸಿದ ಬೆಣ್ಣೆಯಲ್ಲಿ ಕಲೆಸಿ ಅಗತ್ಯ ಇದ್ದಷ್ಟು ದಿವಸ ಹಚ್ಚಬೇಕು. ಹೀಗೆ ಹಚ್ಚಿದರೆ ನಾರುಣ್ಣು ಕಡಿಮೆಯಾಗಿ ನೋವು ನಿವಾರಣೆಯಾಗುತ್ತದೆ.

42) <u>ಕಾಮಾಲೆ ಆದಾಗ:</u>

ರಾತ್ರಿ ತಾಮ್ರದ ಚರಿಗೆಯಲ್ಲಿ ಕಡ್ಡಿಯ ಬೀಜವನ್ನು ನೆನೆಸಿಟ್ಟು ಮುಂಜಾನೆ ನೀರುಜಾನಿ ಊಟಕ್ಕೆ ಮುಂಚೆ ಆ ನೀರನ್ನು ಕುಡಿಯುವುದರಿಂದ ಕಾಮಾಲೆ ರೋಗ ನಿವಾರಣೆಯಾಗುತ್ತದೆ.

43) <u>ಕಣ್ಣಿಗೆ ಪೊರೆ ಬಂದಾಗ:</u>

ಕಂಚಿನ ಬಟ್ಟಲಿನಲ್ಲಿ ನೀರು ಹಾಕಿ ಬಂಗಾರದ ಕಡ್ಡಿಯನ್ನು ಎದ್ದಿ ಕಣ್ಣಂಚಿನಲ್ಲಿ ಆಡಿಸುವುದರಿಂದ ಕಣ್ಣಿನ ಪರೆ ಹರಿದು ಸ್ವಚ್ಛವಾಗಿ ಕಾಣುತ್ತದೆ.

44) <u>ಕುಷ್ಟ ರೋಗ ಅಥವಾ ಹೊಟ್ಟೆ ಉಬ್ಬರ ಇದ್ದಾಗ:</u>

ತಾಮ್ರದ ಗಂಗಳದಲ್ಲಿ ಅತ್ತಿಕಾಯಿ, ಖಡಿಸಕ್ಕರೆ, ಜೀರ್ಗಿ, ನಿಂಬೆರಸ ಹಾಕಿ ಅರೆದು ಅದರಲ್ಲಿಯೇ ಇಟ್ಟು ಎರಡು ಗಂಟೆಗಳ ನಂತರ ನೀರಿನಲ್ಲಿ ಹಾಕಿ ಚೆನ್ನಾಗಿ ಕಲೆಸಿ ಕುಡಿಯುವುದರಿಂದ ಕುಷ್ಠ ರೋಗ ಅಥವಾ ಹೊಟ್ಟೆ ಉಬ್ಬು ನಿವಾರಣೆಯಾಗುತ್ತದೆ.

45) <u>ಬೆಂಕಿಯಿಂದ ಸುಟ್ಟು ಗಾಯವಾದಾಗ:</u>

ನವಳಸರ (ಲೋಳೆಸರ) ದ ಎಲೆಯಿಂದ ಬರುವ ರಸವನ್ನು ಸುಟ್ಟು ಗಾಯಕ್ಕೆ 15 ದಿವಸ ಹಚ್ಚಿದರೆ ಗಾಯಗೊಂಡ ಚರ್ಮದ ಭಾಗದಲ್ಲಿ ಹೊಸ ಚರ್ಮ ಬೆಳೆಯುತ್ತದೆ ಗಾಯ ನಿವಾರಣೆಯಾಗುತ್ತದೆ.

46) **ಹೊಟ್ಟೆ ಹುಣ್ಣು, ಕರುಳಿನ ತೊಂದರೆ ಇದ್ದಾಗ:**

ಅಶ್ವಗಂಧದ ಬೇರನ್ನು ತಂದು ಕುಟ್ಟಿ ಚೂರ್ಣವನ್ನು ತಯಾರಿಸಿ ಪ್ರತಿದಿನ ಮುಂಜಾನೆ ಮತ್ತು ಸಾಯಂಕಾಲ ಒಂದೊಂದು ಚಮಚ ತಿಂದ ನಂತರ ನೀರು ಕುಡಿಯಬೇಕು. ಹೀಗೆ ರೋಗ ಕಡಿಮೆಯಾಗುವವರೆಗೂ ಸೇವಿಸಿದರೆ ಹೊಟ್ಟೆ ಹುಣ್ಣು ಕರುಳಿನ ತೊಂದರೆ, ಗರ್ಭಪಾತ, ಇತ್ಯಾದಿ ರೋಗಗಳು ಕಡಿಮೆಯಾಗುತ್ತವೆ.

47) **ರಕ್ತದ ಒತ್ತಡ (ಬಿ.ಪಿ.) ಇದ್ದಾಗ :**

ಸರ್ವ ಗಂಧ ಗಿಡದ ಬೇರನ್ನು ತಂದು ಚೂರ್ಣವನ್ನು ತಯಾರಿಸಿ ಪ್ರತಿದಿನ ಮುಂಜಾನೆ ಮತ್ತು ಸಾಯಂಕಾಲ ಎರಡು ಚಮಚ ತಿಂದು ನಂತರ ನೀರು ಕುಡಿಯಬೇಕು. ಹೀಗೆ ರೋಗ ಕಡಿಮೆಯಾಗುವವರೆಗೆ ಮಾಡಿದರೆ ಬಿ.ಪಿ. ನಿವಾರಣೆಯಾಗುತ್ತದೆ.

48) **ಸ್ತ್ರೀಗೆ ಬಿಳುಪು ಹೋಗುತ್ತಿದ್ದಾಗ :**

ದಾಸವಾಳ ಗಿಡದ ಬೇರನ್ನು ೨ ದಿವಸಗಳವರೆಗೆ ಆಕಳ ಹಾಲ್ಲಿನಲ್ಲಿ ನೆನೆಸಿ ೨ ದಿವಸದ ನಂತರ ಮುಂಜಾನೆ ಈ ಬೇರನ್ನು ಕುಟ್ಟಿ ಪುಡಿ ಮಾಡಿ ಹಾಲಿನಲ್ಲಿ ಹಾಕಿ ಊಟ ಮಾಡದೇ ಕುಡಿಬೇಕು. ಹೀಗೆ ಮಾಡಿದರೆ ಬಿಳಪು ನಿಲ್ಲುತ್ತದೆ.

49) **ಕಫ ಮತ್ತು ನೆಗಡಿ ಆದಾಗ :**

ಸಾಂಬರ ತಪ್ಪಲನ್ನು ಅರೆದು ನಿಂಬೆ ಹುಳಿ, ಜೇನುತುಪ್ಪ ದೊಂದಿಗೆ ಬೆರೆಸಿ ನಂತರ ಸ್ವಲ್ಪ ಸಕ್ಕರೆ ಹಾಕಿ. ಒಂದು ಗ್ಲಾಸ್ ನೀರಿನೊಂದಿಗೆ ಕುಡಿದರೆ ಕಫ ಮತ್ತು ನೆಗಡಿ ಮಾಯವಾಗುತ್ತದೆ.

50) **ಅರ್ಧ ತಲೆ ನೋವಿಗೆ :**

ಅರ್ಧ ತಲೆ ನೋವು ಇರುವ ವಿರೋಧ ಭಾಗಕ್ಕೆ ಯಾವುದೇ ಗಿಡದ ಬೇರನ್ನು ಕಿವಿಯಲ್ಲಿ ಇಟ್ಟುಕೊಂಡರೆ ಅರ್ಧ ತಲೆ ನೋವು ನಿವಾರಣೆಯಾಗುತ್ತದೆ.

51) **ಅಮ ಶಂಕೆ :**

ದಾಳಿಂಬೆ ಕಾಯಿಯ ಸಿಪ್ಪೆಯನ್ನು ಆಕಳ ಹಾಲಿನಿಂದ ತಯಾರಿಸಿದ ಮೊಸರಿನಲ್ಲಿ ಅರೆದು ಕುಡಿಯಬೇಕು. ಹೀಗೆ ರೋಗ ಕಡಿಮೆಯಾಗುವವರೆಗೂ ಕುಡಿದರೆ ಈ ರೋಗ ನಿವಾರಣೆಯಾಗುತ್ತದೆ.

52) **ಹಲ್ಲು ನೋವು** :

ಲವಂಗನ್ನು ಕುಟ್ಟಿ ಹತ್ತಿಯಲ್ಲಿ ಹಾಕಿ ಹಲ್ಲು ನೋವು ಇರುವ ಜಾಗಕ್ಕೆ ಇಡಬೇಕು. ಜೊಲ್ಲು ಸೋರುತ್ತದೆ. ನಂತರ ನೋವು ನಿವಾರಣೆಯಾಗುತ್ತದೆ.

53) **ಚಿಕ್ಕ ಮಕ್ಕಳಿಗೆ ಕೆಮ್ಮು ಆದಾಗ** :

ಕಪ್ಪು ತುಳಸಿ ಗಿಡದ ಎಲೆಯ 2 ಹನಿ ರಸ ತೆಗೆದು ಎದೆ ಹಾಲಿನಲ್ಲಿ ಕಲೆಸಿ ಮಗುವಿಗೆ ಕುಡಿಸಿದರೆ ಕೆಮ್ಮು ರೋಗ ನಿವಾರಣೆಯಾಗುತ್ತದೆ.

54) **ಹೊಟ್ಟೆಯಲ್ಲಿ ಗಟ್ಟಿಯಾದಾಗ** :

ಬಾಳೆ ದಿಂಡಿನ ಪಲ್ಯವನ್ನು ಮಾಡಿ ತಿಂದರೆ ಹೊಟ್ಟೆಯಲ್ಲಿರುವ ಗಡ್ಡಿಯು ಕರಗುತ್ತದೆ.

55) **ದೇಹದ ಮೇಲೆ ಯಾವುದೇ ಕಲೆಯಾದಾಗ** :

ಶ್ರೀ ಗಂಧವನ್ನು ನೀರಿನಲ್ಲಿ ತೋಯಿಸಿ ಸೋಸಿ ಗಂಧವನ್ನು ತೆಗೆದು, ದೇಹದ ಯಾವುದೇ ಭಾಗದಲ್ಲಿ ಇದ್ದ ಕಲೆಗಳ ಮೇಲೆ ಲೇಪಿಸಿದರೆ ಕಲೆ ಮಾಯವಾಗುತ್ತವೆ.

56) **ಮುಖದ ಮೇಲೆ ಕಲೆಗಳಾದಾಗ** :

ಎರಡು ಚಮಚ ಟೊಮ್ಯಾಟೊ ರಸಕ್ಕೆ ಎರಡು ಚಮಚ ಮಜ್ಜಿಗೆಯನ್ನು ಬೆರೆಸಿ ಚೆನ್ನಾಗಿ ಮಿಶ್ರಣಮಾಡಿ ಮುಖದ ಮೇಲಿರುವ ಕಲೆಗಳಿಗೆ ಮುಂಜಾನೆ ಮತ್ತು ಸಾಯಂಕಾಲ ಹಚ್ಚಬೇಕು. ಹೀಗೆ ಕಡಿಮೆಯಾಗುವವರೆಗೆ ಹಚ್ಚಿದರೆ ಕಲೆಗಳು ಇಲ್ಲವಾಗುತ್ತವೆ.

57) **ಕೀಲು ನೋವು ಇದ್ದಾಗ** :

ನಿಂಬೆ ಹಣ್ಣಿನಿಂದ ರಸವನ್ನು ತೆಗೆದು ಅದರಷ್ಟೇ ಪ್ರಮಾಣದ ಔಡಲ ಎಣ್ಣೆಯನ್ನು ಕಲೆಸಿ ಕೀಲು ನೋವು ಇರುವ ಸ್ಥಳಕ್ಕೆ ತಿಕ್ಕಿ ಮಾಲೀಶು ಮಾಡುವುದರಿಂದ ನೋವು ನಿವಾರಣೆಯಾಗುತ್ತದೆ.

58) <u>ಕಿವಿಯಲ್ಲಿ ಠಣ್, ಠಣ್ ಹೊಡೆಯುತ್ತಿದ್ದಾಗ :</u>

ತುಳಸಿ ಎಲೆಯ ರಸ, ನಿಂಬೆರಸ ಮತ್ತು ಎಳ್ಳೆಣ್ಣೆಯನ್ನು ಸಮ ಪ್ರಮಾಣದಲ್ಲಿ ಮಿಶ್ರಣ ಮಾಡಿಕೊಂಡು ಚೆನ್ನಾಗಿ ಕುದಿಸಿ ಆರಸಿದನಂತರ 5-6 ಹನಿ ಉಗುರು ಬೆಚ್ಚಗಿರುವ ಎಣ್ಣೆಯನ್ನು ದಿನಕ್ಕೆ ಎರಡು ಸಲದಂತೆ ಕಡಿಮೆಯಾಗುವವರೆಗೆ ಕಿವಿಯೊಳಗೆ ಹಾಕಿಕೊಂಡರೆ ಕಿವಿ ನೋವು ನಿವಾರಣೆಯಾಗುತ್ತದೆ.

59) <u>ಕೂದಲು ಉದುರುತ್ತಿದ್ದಾಗ:</u>

ಕೊಬ್ಬರಿ ಎಣ್ಣೆ 110 ಗ್ರಾಂ. ನಿಂಬೆರಸ ಒಂದು ಚಮಚ ಹಾಕಿ ನಂತರ ಎಣ್ಣೆಯಲ್ಲಿ ಅಷ್ಟೇ ಪ್ರಮಾಣದ ಸುಣ್ಣದ ಬಿಳಿ ನೀರನ್ನು ಮಿಶ್ರಮಾಡಿ ಕೂದಲಿಗೆ ಹಚ್ಚುತ್ತಿದ್ದರೆ ಕೂದಲು ಉದುರುವುದು ನಿಲ್ಲುವುದು. ಮತ್ತು ಕೂದಲು ಉದ್ದವಾಗಿ ಬೆಳೆಯುವವು.

60) <u>ಹೊಟ್ಟೆ ಉಬ್ಬರವಾದಾಗ:</u>

ಒಂದು ಚಮಚ ಹಸಿ ಶುಂಠಿ ರಸ ಎರಡು ಚಮಚ ಪುದಿನಾ ತಪ್ಪಲು ರಸ ಅಷ್ಟೇ ಪ್ರಮಾಣ ನಿಂಬೆ ರಸವನ್ನು ಜೇನುತುಪ್ಪದೊಂದಿಗೆ ಕೂಡಿಸಿಕೊಂಡು ನಾಲ್ಕು ದಿವಸಗಳ ಕಾಲ ಮುಂಜಾನೆ ಬರೀ ಹೊಟ್ಟೆಯಲ್ಲಿ ಸೇವಿಸಿದರೆ ಹೊಟ್ಟೆ ಉಬ್ಬರದ ರೋಗ ನಿವಾರಣೆಯಾಗುತ್ತದೆ.

61) <u>ರಕ್ತ ಭೇದಿ ಆದಾಗ:</u>

ಅರಿಶಿಣದ ಗೊನೆಯನ್ನು ನುಣ್ಣಗೆ ಅರೆದು ಆಕಳ ಮಜ್ಜಿಗೆಗೆ ಹಾಕಿ ಹತ್ತು ದಿನಗಳ ಕಾಲ ಕುಡಿದರೆ ರಕ್ತ ಭೇದಿ ರೋಗ ನಿವಾರಣೆಯಾಗುತ್ತದೆ.

62) <u>ವಸಡು ಉಬ್ಬಿದಾಗ:</u>

ಉಳ್ಳಗಡ್ಡಿ, ಬೆಳ್ಳಗಡ್ಡಿ ಮತ್ತು ಹೆಸರಿನ ಕಾಲು ಈ ಎಲ್ಲವನ್ನು ಸೇರಿಸಿ ತುಪ್ಪದಲ್ಲಿ ಅರೆದು ವಸಡಿನ ಮೇಲೆ ಹಚ್ಚಿದರೆ ಬರುವ ಉಗುಳು ಉಬ್ಬಿರುವ ಸ್ಥಳ ಇಳಿಯುತ್ತದೆ.

63) <u>ಮೈನೆರೆದ ಹುಡುಗಿಯರಲ್ಲಿ ಹೆಚ್ಚು ರಕ್ತ ಸ್ರಾವವಾಗುತ್ತಿದ್ದರೆ:</u>

ತೆಂಗಿನ ಗುಂಜನು (ನಾರ) ಸುಟ್ಟು ಬೂದಿಮಾಡಿಕೊಂಡು ಎಳೆ ನೀರಿಗೆ ಹಾಕಿ ನಂತರ ಖಡಿಸಕ್ಕರೆ ಬೆರೆಸಿ ದಿನಕ್ಕೆ ಎರಡು ಬಾರಿ ಕುಡಿಯುವದರಿಂದ ಹೆಚ್ಚು ರಕ್ತ ಸ್ರಾವವಾಗುತ್ತಿರುವುದನ್ನು ಕಡಿಮೆಯಾಗುತ್ತದೆ.

64) **ಜಠರದಲ್ಲಿ ಗಾಳಿ ತುಂಬಿಕೊಂಡಾಗ :**

ತೆಂಗಿನ ಖಫರನ್ನು ಸುಟ್ಟು ಬೂದಿ ಮಾಡಿಕೊಂಡು ಊಟವಾದ ಮೇಲೆ ಮಜ್ಜಿಗೆಗೆ ಕಲಿಸಿ ಕುಡಿಯುವುದರಿಂದ ಜಠರದಲ್ಲಿ ಗಾಳಿ ತುಂಬಿ ಕೊಂಡಿರುವುದನ್ನು ಮಾಯವಾಗುತ್ತದೆ.

65) **ಧೂಮಪಾನದಿಂದ ಆಗುವ ಕೆಮ್ಮು ಮತ್ತು ಎದೆ ನೋವು :**

ಒಂದು ಗ್ಲಾಸ್ ತೆಂಗಿನ ನೀರಿನಲ್ಲಿ ಕಸಕಸಿಯ ಪುಡಿ ಮತ್ತು ಸ್ವಲ್ಪ ಜೇನು ತುಪ್ಪ ಬೆರೆಸಿ ಕುಡಿಯುವುದರಿಂದ ಕೆಮ್ಮು ಎದೆ ನೋವು ನಿವಾರಣೆಯಾಗುತ್ತದೆ.

66) **ಹೊಟ್ಟೆ ನೋವು ಆದಾಗ :**

ಬೆಟ್ಟದ ನೆಲ್ಲಿಕಾಯಿ ಸ್ವಲ್ಪ ಕುಟ್ಟಿ ಎರಡು ಚಮಚ ರಸವನ್ನು ತೆಗೆದು ಅದಕ್ಕೆ ತಕ್ಕಂತೆ ಸಕ್ಕರೆಯನ್ನು ಕಲೆಸಿ ದಿನಾಲು ಮುಂಜಾನೆ ಊಟ ಮಾಡದೇ ಈ ರಸ ಸೇವಿಸಿದರೆ ಪಿತ್ತ ಮತ್ತು ಹೊಟ್ಟೆ ನೋವು ಶಾಂತವಾಗಿ ರೋಗ ನಿವಾರಣೆಯಾಗುತ್ತದೆ.

67)**ಗಂಟಲಲ್ಲಿ ಹುಣ್ಣು ಆದಾಗ :**

ಸ್ವಲ್ಪ ಅಡಿಗೆ ಉಪ್ಪನ್ನು ಬಿಸಿ ನೀರಿನಲ್ಲಿ ಕರಗಿಸಿ ಬಾಯಿ ಮುಕ್ಕಳಿಸಿ ಉಗುಳುವದರಿಂದ ಗಂಟಲು ಹುಣ್ಣಿ ಮಾಯವಾಗುತ್ತದೆ.

68) **ಪುರುಷರಲ್ಲಿ ವೀರ್ಯಾಣುವಿನ ಕೊರತೆ ಇದ್ದಾಗ :**

ಅಶ್ವಗಂಧಿ, ನೆಗ್ಗೆಲು, ವಿದಾರಿಕಾಂಡ ಮತ್ತು ಕಾಮೆ ಈ ಎಲ್ಲಾ ಬೀಜಗಳನ್ನು ಸಮ ಪ್ರಮಾಣದಲ್ಲಿ ಸೇರಿಸಿ ಚೆನ್ನಾಗಿ ಅರೆದು ಚೂರ್ಣ ತಯಾರಿಸಬೇಕು. ಈ ಚೂರ್ಣಕ್ಕೆ ಜೇನುತುಪ್ಪ ಬೆರೆಸಿ ಮುಂಜಾನೆ ಮತ್ತು ಸಾಯಂಕಾಲ ಎರಡು ತಿಂಗಳಗಳ ಕಾಲ ಸೇವಿಸಿದರೆ ವೀರ್ಯವೃದ್ಧಿಯಾಗಿ ರೋಗ ನಿವಾರಣೆಯಾಗುತ್ತದೆ.

69) **ಬಾವು ಮತ್ತು ನೋವು ಇದ್ದಾಗ :**

ಅಶ್ವಗಂಧಿ ಬೇರನ್ನು ಸೋಸಿ ಗಂಧ ತೆಗೆದು ಒಂದು ಗ್ಲಾಸ್ ನೀರಿನಲ್ಲಿ ಹಾಕಿ ಕುಡಿಯಬೇಕು. ನಂತರ ಅದರ ಎಲೆಯನ್ನು ಕುಟ್ಟಿ ರಸ ತೆಗೆದು ಬಾವು ಇದ್ದ ಜಾಗಕ್ಕೆ ಹಚ್ಚಿದರೆ ಈ ರೋಗ ನಿವಾರಣೆಯಾಗುತ್ತದೆ.

70) <u>ಉಬ್ಬಸ ರೋಗಕ್ಕೆ :</u>

ನುಗ್ಗೆ ಗಿಡದ ತಪ್ಪಲನ್ನು ನೀರಿನಲ್ಲಿ ಹಾಕಿ ಕುದಿಸಿ ನಂತರ ಆರಿಸಿ ರಸ ತೆಗೆದು. ಆ ರಸಕ್ಕೆ ಕರಿ ಮೆಣಸಿನ ಪುಡಿ, ನಿಂಬೆರಸ ಮತ್ತು ಅಡಿಗೆ ಉಪ್ಪನ್ನು ಸೇರಿಸಿ ಪ್ರತಿದಿನ ಮುಂಜಾನೆ ಸೇವಿಸಿದರೆ ಉಬ್ಬಸ ರೋಗ ಹೇಳ ಹೆಸರಿಲ್ಲದಂತೆ ಮಾಯವಾಗುತ್ತದೆ.

71) <u>ಬಸುರಿಗೆ ವಾಂತಿ :</u>

ಮಾದಲ ಬೇರನ್ನು ನಿಂಬೆಹುಳಿಯಲ್ಲಿ ಸೋಸಿ ಗಂಧವನ್ನು ತೆಗೆದು ವಾಂತಿಯಾಗುತ್ತಿರುವ ಬಸುರಿಗೆ ನೆಕ್ಕಿಸಿದರೆ ವಾಂತಿ ಕಡಿಮೆಯಾಗುತ್ತದೆ.

72) <u>ಸಕ್ಕರೆ ರೋಗ :</u>

ಬೇವಿನ ಗಿಡದ ಚಿಗುರೆಲೆಗಳನ್ನು ನುಣ್ಣಗೆ ಅರೆದು ಸಣ್ಣ ಅಡಿಕೆಗಳಷ್ಟು ಗಾತ್ರ ಗುಳಿಗೆಗಳನ್ನು ಮಾಡಿಟ್ಟುಕೊಂಡು ದಿನಾಲು ಉಪಹಾರ ಮಾಡದೇ ಮುಂಜಾನೆ ಒಂದೊಂದು ಗುಳಿಗೆಯನ್ನು ನುಂಗಬೇಕು. ರೋಗ ಕಡಿಮೆಯಾಗುವವರೆಗೆ ಸೇವಿಸಿದರೆ ಸಕ್ಕರೆ ರೋಗ ನಿವಾರಣೆಯಾಗುತ್ತದೆ.

21) **ವಕ್ತಾರರು : ಸಾದರ ಕಲೀಂ**

ವಯಸ್ಸು : 35 ವರ್ಷ

ಊರು : ಕೋಸಂ

ತಾಲೂಕಾ : ಭಾಲ್ಕಿ

ಜಿಲ್ಲಾ : ಬೀದರ.

1) **<u>ಬಿಳಿ ಸೆರಗು</u>** :

ಬಿಳಿ ಹುಳಿ ಹಣ್ಣಿನ ರಸ, ಜೀರಿಗೆ, ಬಿಳಿ ಕಾಚು ಒಟ್ಟಿಗೆ ಸೇರಿಸಿ ಅರೆದು ಚೂರ್ಣ ತಯಾರಿಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಒಂದು ಚಮಚ ರಸ ಸೇವಿಸಬೇಕು. ಕಡಿಮೆಯಾಗುವವರೆಗೆ ಸೇವಿಸಿದರೆ ಬಿಳಿ ಸೆರಗು ನಿಲ್ಲುತ್ತದೆ.

2) **<u>ಕೆಂಪು ಸೆರಗು</u>** :

ಕರೆ ಹುಳಿ ಹಣ್ಣಿನ ಗಿಡದ ಹಣ್ಣಿನ ರಸ ತೆಗೆದು ಕಾನಪೂರಿ ಕಾಚ ಅರೆದು ಈ ರಸದಲ್ಲಿ ಹಾಕಿ, ನಾಲ್ಕು ದಿವಸಗಳ ಕಾಲ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಸೇವಿಸಿದರೆ ಕೆಂಪು ಸೆರಗು ನಿಲ್ಲುತ್ತದೆ.

ಪಥ್ಯ : ಉಪ್ಪು, ಖಾರ, ಹುಳಿ ಊಟ ಮಾಡಬಾರದು.

ಸೂಚನೆ : ಬಿಳಿ ಜೋಳದ ರೊಟ್ಟಿ ಮತ್ತು ಸಪ್ಪನಬೇಳೆ ಊಟ ಮಾಡಬೇಕು.

3) **<u>ಹಾವು ಕಡಿದಾಗ</u>** :

ಬಿಳಿ ಈಶ್ವರ, ಕರಿ ಈಶ್ವರಿ, ಕೆಂಪು ಈಶ್ವರಿ ಈ ಮೂರನ್ನು ಒಂದೊಂದಾಗಿ ಅರೆದು ಗಂಧ ತೆಗೆದು ಇವೆಲ್ಲ ಒಟ್ಟಿಗೆ ಸೇರಿಸಿ ರೋಗಿಗೆ ತಿನ್ನಲು ಕೊಡಬೇಕು. ಸ್ವಲ್ಪ ಸಮಯದ ನಂತರ ವಾಂತಿಯಾಗುತ್ತದೆ. ಆಗ ವಿಷ ಹೊರಗೆ ಬೀಳುತ್ತದೆ. ಅಪಾಯ ತಪ್ಪುತ್ತದೆ.

ಪಥ್ಯ : ಬೆಂಡಿಕಾಯಿ, ಹಾಲು, ಉದ್ದಿನ ಬೆಳೆ, ಅನ್ನ ಇವೆಲ್ಲವನ್ನು ಒಂದು ವರ್ಷಗಳ ಕಾಲ ತಿನ್ನಬಾರದು.

ಸೂಚನೆ : ಆ ದಿನ ರಾತ್ರಿ ನಿದ್ದೆ ಮಾಡಬಾರದು. ಬೀಳಿ ಜೋಳದ ರೊಟ್ಟಿ ಮತ್ತು ಸಪ್ಪನ ಬೆಳೆ ಊಟ ಮಾಡಬೇಕು.

4) <u>ಚೇಳು ಕಡಿದಾಗ :</u>

ಕಾಡು ತುಳಸಿ ಗಿಡದ ಬೇರನ್ನು ತಂದು ನೀರಿನ ಸಹಾಯದಿಂದ ಸೋಸಿ ಗಂಧವನ್ನು ತೆಗೆದು ಚೇಳು ಕಡಿದ ಜಾಗಕ್ಕೆ ಹಚ್ಚಿದರೆ, ವಿಷ ಇಳಿದು ಉರಿ ಕಡಿಮೆಯಾಗುತ್ತದೆ.

5) <u>ಖಂಡಕಿ ಹುಣ್ಣು ಆದಾಗ :</u>

ಫಡ ಪತ್ರಿ ಗಿಡದ ಎಲೆಗಳನ್ನು ತಂದು ಚೆನ್ನಾಗಿ ಕುಟ್ಟಿ ಔಡಲ ಎಣ್ಣೆಯಲ್ಲಿ ಕಲೆಸಿ ಖಂಡಕಿ ಹುಣ್ಣು ಆದ ಜಾಗಕ್ಕೆ ಕಟ್ಟಬೇಕು. ಹಾಗೆ ಒಂದು ದಿನಾ ಆದ ಮೇಲೆ ಮೊದಲಿನ ಪಟ್ಟಿಯನ್ನು ಬಿಟ್ಟು ಮತ್ತ ಹೊಸ ಔಷಧವನ್ನು ಕಲೆಸಿ ಮೊದಲಿನ ಹಾಗೆ 3 ದಿನ ಪಟ್ಟಿಯನ್ನು ಕಟ್ಟಬೇಕು. ಖಂಡಕಿ ಹುಣ್ಣು ಮಾಯವಾಗುತ್ತದೆ.

ಪಥ್ಯ : ಕಡಲೆ ಬೇಳೆ ಇತ್ಯಾದಿ ಕೀವು ತುಂಬುವ ಪದಾರ್ಥ ತಿನ್ನಬಾರದು.

6) <u>ನಪುಂಸಕತ್ವ ಇದ್ದಾಗ :</u>

ಬ್ರಹ್ಮ ದಂಡಿ ಗಿಡದ ಬೇರು, ಈಶ್ವರಿ ಗಿಡದ ಬೇರು, ಎರಡನ್ನೂ ನೆರಳಿನಲ್ಲಿ ಒಣಗಿಸಿ ಕುಟ್ಟಿ ಚೂರ್ಣವನ್ನು ತಯಾರಿಸಿಕೊಂಡು ನಿತ್ಯ ಎರಡು ತೊಲೆ ಚೂರ್ಣ ಒಂದು ಗ್ಲಾಸ ಆಕಳ ಹಾಲಿನಲ್ಲಿ ಸಕ್ಕರೆಯೊಂದಿಗೆ ಬೆರೆಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಕುಡಿಯಬೇಕು. ಅಥವಾ ಈ ಚೂರ್ಣವನ್ನು ಜೇನು ತುಪ್ಪದಲ್ಲಿ ಚೆನ್ನಾಗಿ ಕಲೆಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ತಿನ್ನಬೇಕು. ಹೀಗೆ 21 ದಿನಗಳ ಕಾಲ ಸೇವಿಸಿದರೆ ನಪುಂಸಕತ್ವ ಹೋಗಿ ಪುರುಷತ್ವ ಬರುತ್ತದೆ.

ಪಥ್ಯ : ನಂಜಿನ ಪದಾರ್ಥ, ಎಣ್ಣೆ, ಹುಳಿ ತಿನ್ನಬಾರದು.
ಹಾಗೂ 21 ದಿವಸಗಳ ಕಾಲ ಸ್ತ್ರೀ ಸಂಪರ್ಕ ಮಾಡಬಾರದು.

7) <u>ಸ್ತ್ರೀ ಸರಿಯಾಗಿ ಋತುಮತಿಯಾಗದಿದ್ದಾಗ :</u>

ಬ್ರಹ್ಮದಂಡಿ ಗಿಡದ ಬೇರನ್ನು ನೀರಿನೊಂದಿಗೆ ಕುಟ್ಟಿ ನಂತರ ಒಳ್ಳೆಯ ಬೆಲ್ಲವನ್ನು ಕಲೆಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಸೇವಿಸಬೇಕು. ಈ ಔಷಧವನ್ನು ತಿಂಗಳ ಕೊನೆಯಲ್ಲಿ ಋತುಮತಿಯಾಗುವ ಮೂರು ದಿನ ಮೊದಲೆ ಸೇವಿಸಬೇಕು. ಇದರಿಂದ ಸಮಯಕ್ಕೆ ಸರಿಯಾಗಿ ಋತುಮತಿಯಾಗುತ್ತಾಳೆ.

8) <u>ಬಿಳಿ ತದ್ದು ಆದಾಗ :</u>

ಚಿತ್ರ ಮೂಲಗಿಡದ ಎಲೆ ಮತ್ತು ಕಾಂಡ ನಾಲ್ಕು ತೊಲೆ, ಕಪ್ಪು ಕ್ಯಾರಳ 4 ತೊಲೆ, ಅಡಿಗೆ ಉಪ್ಪು 4 ತೊಲೆ, ಇವೆಲ್ಲವುಗಳನ್ನು ಚೆನ್ನಾಗಿ ಕುಟ್ಟಿ ಮಾಡಿ ದಿನಕ್ಕೆ ಒಂದರಂತೆ 30 ಗುಳಿಗೆಯನ್ನು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ತಿನ್ನಬೇಕು. ಇದರಿಂದ ಬಿಳಿ ತದ್ದು ರೋಗ ಮಾಯವಾಗುತ್ತದೆ.

22) **ವಕ್ತಾರರು : ಸಿದ್ರಾಮ ದಂಡೆ**

ವಯಸ್ಸು : 70 ವರ್ಷ

ಊರು : ಕೋಸಂ

ತಾಲೂಕಾ : ಭಾಲ್ಕಿ

ಜಿಲ್ಲಾ : ಬೀದರ.

1) **ಫೇಪರಿ (ಮೂರ್ಛೆ) ರೋಗ** :

ಪುದೀನಾ ಫುಲ್, ಅಜಿವಾನ ಫುಲ್, ದೇಶಿ ಕರ್ಪೂರ, ಈ ಮೂರನ್ನು ಪ್ರತ್ಯೇಕವಾಗಿ ತಂದು ಒಂದು ಸ್ವಚ್ಛವಾದ ಶೀಸೆಯಲ್ಲಿ ಹಾಕಿದರೆ ಸ್ವಲ್ಪ ಸಮಯದ ನಂತರ ಎಣ್ಣೆ ತಯಾರಾಗುತ್ತದೆ. ಎಣ್ಣೆಯನ್ನು ರೋಗಿಯ ಮೈ ತುಂಬಾ ಹಚ್ಚಬೇಕು. ನಂತರ ಅಮೃತ ಬಳ್ಳಿಯ ಒಂದು ಗ್ಲಾಸ ರಸ ತೆಗೆದು ರೋಗಿಗೆ 3 ದಿನ ಕುಡಿಸಬೇಕು. ಫೇಪರಿ ರೋಗ ಮಾಯವಾಗುತ್ತದೆ.

ಪಥ್ಯ : ಹುಳಿ, ಖಾರ, ಎಣ್ಣೆ ಇತ್ಯಾದಿ ಜಿಡ್ಡು ಪದಾರ್ಥ ಸೇವಿಸಬಾರದು.

2) **ಪುರುಷತ್ವ ಕಳೆದುಕೊಂಡಾಗ** :

ಕೊಬ್ಬರಿ 500 ಗ್ರಾಂ. ಕಸಕಸಿ 500 ಗ್ರಾಂ. ಬಾದಾಮ ಬೀಜ 500 ಗ್ರಾಂ. ವರಲಕ್ಷ್ಮಿ ಗಿಡದ ಎಲೆ ಕಾಂಡ ಬೇರನ್ನು ತಂದು ನೆರಳಿನಲ್ಲಿ ಒಣಗಿಸಿ ಇವೆಲ್ಲವನ್ನು ಬೇರೆ ಬೇರೆಯಾಗಿ ಕುಟ್ಟಿ ಚೂರ್ಣ ತಯಾರಿಸಿ ಎಲ್ಲವನ್ನು ಬೆರೆಸಿ ಒಂದು ಶುದ್ಧವಾದ ಗ್ಲಾಸಿನಲ್ಲಿ ಹಾಕಿ ಮುಚ್ಚಿಡಬೇಕು. ದಿನಾಲು ಮುಂಜಾನೆ ಎರಡು ಚಮಚ ಚೂರ್ಣ 21 ದಿನ ತಿನ್ನಬೇಕು ನಂತರ ನೀರು ಕುಡಿಯಬೇಕು. ಇದರಿಂದ ಪುರಷತ್ವ ತಾನಾಗಿಯೇ ಬರುತ್ತದೆ.

ಪಥ್ಯ : 21 ದಿನಗಳ ಕಾಲ ಸ್ತ್ರೀ ಸಂಪರ್ಕ ಹೊಂದಬಾರದು.

3) **ನಪುಂಸಕತ್ವ ಇದ್ದಾಗ ಮೂರು ಗಂಟೆ ಒಳಗಾಗಿ ಪುರುಷತ್ವ** :

ಕೊಬ್ಬರಿ 100 ಗ್ರಾಂ. ಕಸಕಸಿ 100 ಗ್ರಾಂ. ಬಾದಾಮ ಬೀಜ 100 ಗ್ರಾಂ. ಅಫ್‌ರಸ 10 ಗ್ರಾಂ. ರಸಕರ್ಪೂರ 10 ಗ್ರಾಂ. ವರಲಕ್ಷ್ಮ ಗಿಡದ ಎಲೆ, ಕಾಂಡ ಬೇರು ತಂದು ನೆರಳಿನಲ್ಲಿ ಒಣಗಿಸಿ ಕುಟ್ಟಿ ಚೂರ್ಣ ತಯಾರಿಸಿ ಈ ಎಲ್ಲವನ್ನು ಚೆನ್ನಾಗಿ ಕಲೆಸಿ ತಿನ್ನಬೇಕು. ನಂತರ ನೀರು ಕುಡಿಯಬೇಕು. ಹೀಗೆ ಮಾಡಿದರೆ ನಪುಂಸಕತ್ವ ಹೋಗಿ ಪುರುಷತ್ವ ಮೂರು ಗಂಟೆಯಲ್ಲಿ ಬರುತ್ತದೆ.

4) ಗಂಟ ಮಲ್ಲಿ ಆದಾಗ :

ಕಳೇರ ಚೆಂಡಕಿ (ಗಿಡ ಖಡಿಹೋಗಿ ಹೂ ಒಂದೇ ಇರುತ್ತದೆ) ಇದರ ಗಡ್ಡೆಯನ್ನು ತಂದು ಸೋಸಿ ಗಂಧವನ್ನು ತೆಗೆದು ಔಡಲ ಎಣ್ಣೆಯನ್ನು ಕಲಸಿ ಗಂಟಮಲ್ಲಿ ಆದ ಜಾಗಕ್ಕೆ ಹಚ್ಚಿ ಮೇಲೆ ಬಟ್ಟೆ ಕಟ್ಟಬೇಕು. ಮೂರು ದಿನ ನಂತರ ಬಿಡಬೇಕು. ಮತ್ತೆ ಹೊಸ ಪಟ್ಟಿಯನ್ನು ಕಟ್ಟಬೇಕು. ಹೀಗೆ ಮೂರು ಪಟ್ಟಿ ಕಟ್ಟಿದರೆ ಗಂಟಮಲ್ಲಿ ರೋಗ ಮಾಯವಾಗುತ್ತದೆ.

ಪಥ್ಯ : ಕೀವು ತುಂಬುವ ಪದಾರ್ಥಗಳನ್ನು ತಿನ್ನಬಾರದು.

5) ತಲೆಡೋಗಿ ಹುಣ್ಣು ಆದಾಗ (ಹಂದಿ ಮರಿ ಹುಣ್ಣು)

ಹುಲ್ಲ ಗಡ್ಡಿಯನ್ನು ತಂದು ನೆರಳಿನಲ್ಲಿ ಒಣಗಿಸಿ ಸುಟ್ಟು ಕರಕು ಮಾಡಿ, ಪುಡಿಯನ್ನು ಔಡಲ ಎಣ್ಣೆಯಲ್ಲಿ ಕಲೆಸಿ ತಲೆ ಡೋಗಿ ಹುಣ್ಣಿಗೆ ಏಳು ದಿನ ಹಚ್ಚಿದರೆ ತಲೆ ಡೋಗಿ ಹುಣ್ಣು ನಿವಾರಣೆಯಾಗುತ್ತದೆ.

6) ಖಂಡಕಿ ಹುಣ್ಣು ಆದಾಗ :

ಖಂಡಕಿ ಮಂಗಳೂರಿ ಸಸ್ಯವನ್ನು ತಂದು ಚೆನ್ನಾಗಿ ಕುಟ್ಟಿ ಇದರಲ್ಲಿ ಒಂದು ಹಳ್ಳ ಅಡಿಗೆ ಉಪ್ಪನ್ನು ಅರಿಶಿಣವನ್ನು ಕಲಸಿ ಅರೆಯಬೇಕು. ಖಂಡಕಿ ಹುಣ್ಣಿಗೆ ಕಟ್ಟಬೇಕು. ಹೀಗೆ ಕಟ್ಟಿದನ್ನು ಮೂರು ದಿನ ಬಿಡಬಾರದು. ನಂತರ ಮತ್ತೆ ಪಟ್ಟಿ ಕಟ್ಟಬೇಕು. ಹೀಗೆ ಮೂರು ಪಟ್ಟಿಯನ್ನು ಕಟ್ಟಿದರೆ ಖಂಡಕಿ ಹುಣ್ಣು ನಿವಾರಣೆಯಾಗುತ್ತದೆ. ಈ ಪಟ್ಟಿಗೆ ನೀರಿನಿಂದ ತೋಯಿಸಬಾರದು.

7) ಬಾಯಿ ಹುಣ್ಣು, ಬಾಯಿ ದುರ್ಗಂಧವಾದಾಗ :

ಶಂಖವನ್ನು ನೀರಿನ ಸಹಾಯದಿಂದ ಸೋಸಿ ಗಂಧವನ್ನು ತೆಗೆದು ಅಥವಾ ಸಿಂಪಿಯನ್ನು ನೀರಿನ ಸಹಾಯದಿಂದ ಸೋಸಿ ಗಂಧವನ್ನು ತೆಗೆದು ನೆರಳಿನಲ್ಲಿ ಒಣಗಿಸಿ ಅದರಲ್ಲಿ ಕೊಬ್ಬರಿ ಎಣ್ಣೆಯನ್ನು ಕಲಸಿ ಮಲಾಮಿನಂತೆ ಮಾಡಿ ಬಾಯಿ, ವಸಡು ಹುಣ್ಣಿಗೆ ಈ ಮಲಾಮನ್ನು 7 ದಿನ ಹಚ್ಚಿದರೆ ಬಾಯಿ ಹುಣ್ಣು, ಬಾಯಿ ದುರ್ಗಂಧ ನಿವಾರಣೆಯಾಗುತ್ತದೆ.

8) ಬಿಳಿ ಸೆರಗು :

ಬಿಳಿ ದಾಸಿವಾಳ ಗಿಡದ ತಪ್ಪಲನ್ನು ತಂದು ನೀರಿನೊಂದಿಗೆ ಚೆನ್ನಾಗಿ ಕುಟ್ಟಿ ಒಂದು ಗ್ಲಾಸ ರಸ ತೆಗೆದು ಮೂರು ದಿನ ಕೂಡಿದರೆ ಬಿಳಿ ಸೆರಗು ನಿಲ್ಲುತ್ತದೆ.

9) **ಕೆಂಪು ಸೆರಗು** :

ಕೆಂಪು ದಾಸಿವಾಳ ಗಿಡದ ತಪ್ಪಲನ್ನು ತಂದು ನೀರಿನ ಸಹಾಯದಿಂದ ಚೆನ್ನಾಗಿ ಕುಟ್ಟಿ ಒಂದು ಗ್ಲಾಸ ರಸ ಮೂರು ದಿನ ಕೂಡಿದರೆ ಈ ರೋಗ ನಿವಾರಣೆಯಾಗುತ್ತದೆ.

10) **ದನಗಳಿಗೆ ಹೊಟ್ಟೆ ನೋವು, ಉರಿ ಆದಾಗ** :

ಅಜವಾನ 50 ಗ್ರಾಂ. ಶುಂಠಿ 50 ಗ್ರಾಂ. ಕಾಳಿಮಿರ್ಚಿ 50 ಗ್ರಾಂ. ಸೊಪ 50 ಗ್ರಾಂ. ಕಾಲಾ ನಮಕ್ 50 ಗ್ರಾಂ. ಸಿಂದೆಲೋನ 50 ಗ್ರಾಂ. ಇಂಗ 50 ಗ್ರಾಂ. ಇವೆಲ್ಲವನ್ನು ಬೇರೆ ಬೇರೆಯಾಗಿ ಕುಟ್ಟಿ ಒಂದೆಡೆ ಬೆರೆಸಿ ರೊಟ್ಟಿಯಲ್ಲಿ ಈ ಚೂರ್ಣ ಹಾಕಿ ಮೂರು ದಿನ ತಿನ್ನಲು ಕೊಡಬೇಕು. ಹೀಗೆ ಮಾಡಿದರೆ ದನಗಳಿಗೆ ಹೊಟ್ಟೆಯಲ್ಲಿ ಯಾವುದೇ ರೋಗವಿದ್ದರೂ ಕೂಡ ನಿವಾರಣೆಯಾಗುತ್ತದೆ.

23) **ವಕ್ತಾರರು : ಲಾಲ ಮಹಮದ ತಂದೆ ಅಲಿಸಾಬ ಬಂಗಲೆವಾಲೆ**

ವಯಸ್ಸು : 81 ವರ್ಷ

ಊರು : ಅಮಲಾಪೂರ

ತಾ: ಜಿ: : ಬೀದರ

ಫೋನ : 234494 ಪಿ.ಪಿ.

1) **<u>ಹಾವು ಕಡಿದರೆ</u>** :

ಆಡು ಮುಟ್ಟದ ಗಿಡದ ಸೋಪು (ತಪ್ಪಲನ್ನು) ಚೆನ್ನಾಗಿ ಕುಟ್ಟಿ ಎರಡು ಚಮಚ ರಸ ತೆಗೆದು ರೋಗಿಗೆ ಕುಡಿಸಬೇಕು. ಈ ಸಂದರ್ಭದಲ್ಲಿ ರೋಗಿ ಕಣ್ಣು ಮುಚ್ಚಬೇಕು. ಕೆಲವೇ ಸೆಂಕೆಡಗಳಲ್ಲಿ ವಾಂತಿಯಾಗಿ. ವಿಷ ಹೊರಗೆ ಬಂದು ಅಪಾಯ ತಪ್ಪುತ್ತದೆ.

ಪಥ್ಯ : ಆ ರಾತ್ರಿ ನಿದ್ದೆ ಮಾಡಬಾರದು. ಸ್ವಲ್ಪ ದಿನಗಳ ಕಾಲ ಉಪ್ಪು ಖಾರಾ ಹುಳ್ಳಿ ಹೆಚ್ಚು ಪ್ರಮಾಣದಲ್ಲಿ ತಿನ್ನಬಾರದು.

2) **<u>ಖಂಡಕಿ ಹುಣ್ಣು ಆದಾಗ</u>** :

ಖಂಡಕಿ ಗಿಡವನ್ನು ಸೀಳಿ ಅದರಲ್ಲಿ ಸ್ವಲ್ಪ ಅರಿಶಣ ಮತ್ತು ಎರಡು ಹಳ್ಳ ಉಪ್ಪನ್ನು ಬೆರೆಸಿ ಖಂಡಕಿ ಹುಣ್ಣಿಗೆ ಕಟ್ಟಬೇಕು. ಎರಡು ದಿನ ನಂತರ ಮತ್ತೆ ಇದೇ ಔಷಧ ಕಟ್ಟಬೇಕು. ಹೀಗೆ ಮೂರು ಸಲ ಈ ಔಷಧ ಕಟ್ಟಿದರೆ ಹುಣ್ಣು ಮಾಯುತ್ತದೆ.

3) **<u>ಕಾಮಾಲೆ</u>** :

ಪಟಕಾವನ್ನು ತಂದು ಚೆನ್ನಾಗಿ ಕುಟ್ಟಿ ಚೂರ್ಣ ತಯಾರಿಸಬೇಕು. ಕೋಳಿ ಅಂಡಿಯನ್ನು ಒಡೆದು ಸಿಪ್ಪೆಯನ್ನು ತೆಗೆದು ರಸಕ್ಕೆ ಪಟಕಾ ಚೂರ್ಣವನ್ನು ಬೆರೆಸಿ ಅಲ್ಲಾಡಿಸಿ ರೋಗಿಗೆ ಮುಂಜಾನೆ ಖಾಲಿ ಹೊಟ್ಟೆಯಲ್ಲಿ 3 ದಿನ ಕುಡಿಸಬೇಕು. ಇದರಿಂದ ಕಾಮಾಲೆ ನಿವಾರಣೆಯಾಗುತ್ತದೆ.

ಪಥ್ಯ : ಜಿಡ್ಡು ಪದಾರ್ಥ ಸೇವಿಸಬಾರದು.

4) ಬಾಯಿ ವಾಸನೆ ಇದ್ದಾಗ :

ಪುದಿನ ತಪ್ಪಲನ್ನು ತಂದು ಚೆನ್ನಾಗಿ ಕುಟ್ಟಿ ಮೂರು ಹಳ್ಳ ಅಡಿಗೆ ಉಪ್ಪನ್ನು ಚೂರ್ಣ ಮಾಡಿ ಬೆರೆಸಿ ದಿನಾಲು ಮುಂಜಾನೆ 6 ದಿನ ನೆಕ್ಕಬೇಕು. ಇದರಿಂದ ಬಾಯಿ ವಾಸನೆ ರೋಗ ನಿವಾರಣೆಯಾಗುತ್ತದೆ.

5) ಮೂಲವ್ಯಾಧಿ ಆದಾಗ :

ಉಳ್ಳಗಡ್ಡಿಯನ್ನು ಕುಟ್ಟಿ ಐದು ಚಮಚ ರಸವನ್ನು ತೆಗೆದು ಕುಡಿಯಬೇಕು. ಮಲ ವಿಸರ್ಜನೆ ನಂತರ ಎರಡು ಚಮಚ ರಸವನ್ನು ಮೂಲವ್ಯಾಧಿ ಇರುವ ಜಾಗಕ್ಕೆ ಹಚ್ಚಬೇಕು. ಹೀಗೆ 7 ದಿನ ಮಾಡಿದರೆ ಈ ರೋಗ ನಿವಾರಣೆಯಾಗುತ್ತದೆ.

6) ಸಕ್ಕರೆ ಬೇನೆ ಆದಾಗ :

ಒಂದು ಚರಿಗೆ ನೀರನ್ನು ಕುದಿಸಿ ಒಂದು ಹಿಡಿ ಉಪ್ಪನ್ನು ಹಾಕಿ, ಇನ್ನು ಸ್ವಲ್ಪ ಕಾಸಿ ಆ ನೀರನ್ನು ಆರಿಸಿ, ರೋಗಿ ಖುರ್ಚಿ ಮೇಲೆ ಕುಳಿತು ಎರಡೂ ಕಾಲನ್ನು ಈ ನೀರಿನಲ್ಲಿ ಇಡಬೇಕು. ಇದರಿಂದ ಸಕ್ಕರೆ ಬೇನೆ ರೋಗ ನಿವಾರಣೆಯಾಗುತ್ತದೆ. ಹೀಗೆ 7 ದಿನ ಮಾಡಬೇಕು.

7) ರಕ್ತ ಮೂಲವ್ಯಾಧಿ ಯಾದಾಗ :

ಉಳ್ಳಗಡ್ಡಿ ಕೆಳಗಡೆ ಇರುವ ಬೇರನ್ನು ಕೊಯ್ದು, ಬೇರನ್ನು ಒಂದು ಹಿಡಿ ಮಾಡಿ ನಂತರ ಇದರಲ್ಲಿ ಆರತಿ ಕರ್ಪೂರನ್ನು ಹಾಕಿ ಕುಟ್ಟಿ ಅರೆಯಬೇಕು. ಹೀಗೆ ಅರೆದಿದ್ದನ್ನು ಮೂಲವ್ಯಾಧಿ ಇರುವ ಜಾಗಕ್ಕೆ ಕಟ್ಟಿದರೆ ಮೂಲವ್ಯಾಧಿ ಮಾಯವಾಗುತ್ತದೆ.

8) ಗರ್ಮಿಯಾದಾಗ, ಮೂತ್ರ ಬಂದ ಆದಾಗ :

ಬುರುಗ್ಯಾನ ಗಿಡದ ತೊಗಟೆಯನ್ನು ತಂದು ಚೆನ್ನಾಗಿ ಕುಟ್ಟಿದರೆ ಜಿಗಿಯಾಗುತ್ತದೆ. ಇದರಲ್ಲಿ ಧಾರ ಪತ್ತಲಿಯನ್ನು ಕಲಸಿ ಮೂರು ದಿನ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಕುಡಿದರೆ ರೋಗ ನಿವಾರಣೆಯಾಗುತ್ತದೆ.

9) <u>ದನದ ಕಣ್ಣಿನಲ್ಲಿ ಹೂವು ಬಿದ್ದಾಗ :</u>

ಗುಟಗುಟ್ಯಾನ ತಪ್ಪಲನ್ನು ಚೆನ್ನಾಗಿ ಕುಟ್ಟಿ, ರಸ ತೆಗೆದು ಹತ್ತಿಯಿಂದ ಕಣ್ಣಿನಲ್ಲಿ ಈ ರಸ ಹಿಂಡಬೇಕು. ದನಕ್ಕೆ ತುಂಬಾ ನೋವು ಆಗುತ್ತದೆ. ಒಂದು ನಿಮಿಷದ ನಂತರ ದನದ ಕಣ್ಣಿನಲ್ಲಿ ಇರುವ ಹೂವಾ ಕರಗಿ ಹೋಗುತ್ತದೆ.

10) <u>ದೃಷ್ಠಿ ಮಂದವಾದರೆ :</u>

ಕೋಳಿಯ ಅಬಿಡಿ (ಮೊಟ್ಟೆ) ಯ ರಸವನ್ನು ಮಲಗಿ ಒಂದು ಕಿವಿಗೆ ಹಾಕಿಕೊಂಡು ಒಂದು ಕಡೆ ಕಿವಿ ಮುಚ್ಚಿಕೊಳ್ಳಬೇಕು. ಹೀಗೆ 3 ದಿನ ಮಾಡಿದರೆ ದೃಷ್ಟಿ ಮಂದವಾಗಿದ್ದನ್ನು ದೃಷ್ಠಿ ಚುರುಕು ಆಗುತ್ತದೆ.

11) <u>ಕಣ್ಣಿನಲ್ಲಿ ಹೂವೂ ಬಿದ್ದಾಗ :</u>

ಸೀಲಿಜ್‌ಗ್ಯಾನ ಗಿಡದ ತಪ್ಪಲನ್ನು ತಂದು ಕುಟ್ಟಿ ರಸ ತೆಗೆದು ಕಣ್ಣಿಗೆ ಈ ರಸ ಹಾಕಬೇಕು. ಹೀಗೆ ಎರಡು ದಿವಸ ಹಾಕಿದರೆ ಕಣ್ಣಿನಲ್ಲಿರುವ ಹೂವಾ ಮಾಯವಾಗಿ ರೋಗ ನಿವಾರಣೆಯಾಗುತ್ತದೆ.

12) <u>ಚೇಳು ಕಡಿದಾಗ :</u>

ಕೆಂಪು ಪಟ್ಟಕಾವನ್ನು ಸೋಸಿ ಚೇಳು ಕಡಿದ ಜಾಗಕ್ಕೆ ಹಚ್ಚಬೇಕು. ನಂತರ ವಿಷ ಇಳಿದು ಉರಿ ನಿವಾರಣೆಯಾಗುತ್ತದೆ.

13) <u>ಹೊಟ್ಟೆ ನೋವು ಆದಾಗ :</u>

ಪಾಪಡ ಖಾರ, ನಿಂಬೆರಸ ಅಥವಾ ಹುಂಚೆ (ಹುಣಸೆ) ಕಾಯಿ ನೀರಿನಲ್ಲಿ ಕಲಸಿ ರಸ ತೆಗೆದು ಈ ಎರಡನ್ನು ಚೆನ್ನಾಗಿ ಕಲಸಿ ಕರಗಿಸಿ ನಂತರ ಕುಡಿಯಬೇಕು. ಹೀಗೆ 3 ದಿನ ಕುಡಿದರೆ ಈ ರೋಗ ನಿವಾರಣೆಯಾಗುತ್ತದೆ.

14) <u>ಒಸಡು ನೋವು ಆದಾಗ :</u>

ಕೆಂಪು ಪಟ್ಟಕಾವನ್ನು ಚೆನ್ನಾಗಿ ಕುಟ್ಟಿ ಚೂರ್ಣ ತಯಾರಿಸಿ ನಂತರ ವಸಡಿಗೆ ವರೆಸಿಕೊಳ್ಳಬೇಕು. ಹೀಗೆ ಮೂರು ದಿನ ಒವರೆಸಿಕೊಂಡರೆ ಒಸಡು ನೋವು ಮಾಯವಾಗುತ್ತದೆ.

15) <u>ಕೆಮ್ಮು ಮತ್ತು ನೆಗಡಿ ಆದಾಗ</u> :

ಕಕ್ಕೆನಕಾಯಿ ಗಿಡದ ತೊಗಟೆಯನ್ನು ಚೆನ್ನಾಗಿ ಕುಟ್ಟಿ ಚೂರ್ಣ ತಯಾರಿಸಿ ಇಟ್ಟುಕೊಂಡು 3 ದಿನ ಸೇವಿಸಬೇಕು. ನಂತರ ಜಾಜುಕಾಯಿ 2. ಲವಂಗ 3 ಕುಟ್ಟಿ ಪುಡಿ ಮಾಡಿ ಚುರ್ಣದಲ್ಲಿ ಕಲಸಿ ಇದರಿಂದ ಕೆಮ್ಮು ಮತ್ತು ನೆಗಡಿ ಮಾಯವಾಗುತ್ತದೆ.

16) <u>ಗಂಟಮಲ್ಲಿ ಆದಾಗ</u> :

- ಗುಲಾಜಡಿ ಸಸ್ಯದ ತಪ್ಪಲೋಂದಿಗೆ ಒಳ್ಳೆಯ ಬೆಲ್ಲವನ್ನು ಬೆರೆಸಿ ಚೆನ್ನಾಗಿ ಕುಟ್ಟಬೇಕು. ನಂತರ ಗುಳಿಗೆ ಮಾಡಿ ಗುಳಿಗೆಗಳನ್ನು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಮಂಗಳವಾರ ರವಿವಾರ ಮಂಗಳವಾರ ದಿನಕ್ಕೆ 2 ರಂತೆ ತಿನ್ನಬೇಕು. ಹೀಗೆ ಈ ಮೂರು ದಿನ ತಿನ್ನಬೇಕು. ಮತ್ತು ಗುಲಾಜ ಡಿ ಸಸ್ಯದ ಬೇಳೆ ತಂದು ನೀರಿನ ಸಹಾಯದಿಂದ ಚೆನ್ನಾಗಿ ಸೋಸಿ ಗಂಟಮಲ್ಲಿ ಆದ ಜಾಗಕ್ಕೆ ಈ ಗಂಧವನ್ನು ಹಚ್ಚಬೇಕು. ಹೀಗೆ ಮಾಡಿದರೆ ಈ ರೋಗ ನಿವಾರಣೆಯಾಗುತ್ತದೆ.

17) <u>ಮಲಜರಿ</u> :

- ದೊಡ್ಡ ಧತ್ತರಿ ಗಿಡದ ತಪ್ಪಲನ್ನು ತಂದು ಚೆನ್ನಾಗಿ ಕುಟ್ಟಿ ರಸ ತೆಗೆದು ಮಲಜರಿ ಆದ ಜಾಗಕ್ಕೆ 3 ದಿನ ಹಚ್ಚಿದರೆ ಮಲಜರಿ ರೋಗ ನಿವಾರಣೆಯಾಗುತ್ತದೆ.

  ಗೇಝೆಟಿಕ್ಯಾನ ತಪ್ಪಲ ರಸ ಮಲಜರಿ ಆದ ಜಾಗಕ್ಕೆ ಹಚ್ಚಿದರೆ ರೋಗ ನಿವಾರಣೆಯಾಗುತ್ತದೆ.

18) <u>ಚೇರ ಇಳಿದಾಗ</u> :

ಗಜಗಾ ಗಿಡದ ತಪ್ಪಲನ್ನು ಚೆನ್ನಾಗಿ ನೀರಿನ ಸಹಾಯದಿಂದ ಕುಟ್ಟಿ ರೊಟ್ಟಿ ತರಹದ ಬಿಲ್ಲೆ ಮಾಡಿ ಒಂದು ಕಡೆ ಮಾತ್ರ ಬೇಯಿಸಿಬೇಕು. ತೊಡ್ಡಿಗೆ (ವೃಷಣಕ್ಕೆ) ಕಟ್ಟಬೇಕು. ಇದನ್ನು ಎರಡು ದಿವಸ ಬಿಡಬಾರದು ನಂತರ ಇದೇ ರೀತಿ ನಾಲ್ಕು ಸಲ ಕಟ್ಟಿದರೆ ಚೇರ ಕಡಿಮೆಯಾಗುತ್ತದೆ.

19) <u>ಮೂರ್ಛೆ ರೋಗಕ್ಕೆ</u> :

ಬೆಳ್ಳಗಡ್ಡಿಯನ್ನು (ಬೆಳ್ಳೊಳ್ಳಿ) ಸುಲಿದು ಕುಟ್ಟಿ ಎರಡು ಹನಿ ರಸ ತೆಗೆದು ಮೊದಲು ಬಿಗಿಯಾಗಿ ಹೆಡಕಿಗೆ ಹಿಡಿದು ಎರಡೂ ಮೂಗಿಗೆ ಒಂದೊಂದು ಹನಿ ಹಾಕಿದರೆ ಮೂರ್ಛೆ ರೋಗ ನಿವಾರಣೆಯಾಗುತ್ತದೆ.

20) <u>ರಕ್ತದ ಒತ್ತಡಕ್ಕೆ :</u>

ಬೂರುಗ್ಯಾನ ಗಿಡದ ತಪ್ಪಲು ಚೆನ್ನಾಗಿ ಕುಟ್ಟಿ ಇದನ್ನು ಮಜ್ಜಿಗೆ ಅಥವಾ ಮೊಸರಿನಲ್ಲಿ ಕಲಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ 15 ದಿನಗಳ ಕಾಲ ಸೇವಿಸಿದರೆ ರಕ್ತದ ಒತ್ತಡ ನಿವಾರಣೆಯಾಗುತ್ತದೆ.

21) <u>ಕಫ್ ರೋಗ ಬಿದ್ದಾಗ :</u>

ಸೋಪು, ಕರಿ ಉಪ್ಪು, ಅಜಿವಾನ ಇವೆಲ್ಲವನ್ನು ಚೆನ್ನಾಗಿ ಕುಟ್ಟಿ ಚೂರ್ಣ ತಯಾರಿಸಿ ಸೇವಿಸಬೇಕು. ಆನಂತರ ಹೊಟ್ಟೆ ತುಂಬ ನೀರು ಕುಡಿಯಬೇಕು. ಹೀಗೆ 15 ದಿವಸ ಮಾಡಿದರೆ ಈ ರೋಗ ಹೇಳ ಹೆಸರಿಲ್ಲದಂತೆ ಮಾಯವಾಗುತ್ತದೆ.

22) <u>ಕೈಕಾಲು ಬಿಚ್ಚಿದಾಗ :</u>

ಸಿಂಪಿಯನ್ನು ತಂದು ಚೆನ್ನಾಗಿ ಸುಟ್ಟು ಪುಡಿ ಮಾಡಿ ಕೊಬ್ಬರಿ ಎಣ್ಣೆಯಲ್ಲಿ ಚೆನ್ನಾಗಿ ಕಲಸಿ (ಮಲಾಮಿನಂತೆ) ಮುಂಜಾನೆ ಸ್ವಚ್ಛವಾಗಿ ಕಾಲು ತೊಳೊದುಕೊಂಡು ಮಲಾಮನ್ನು ಹಚ್ಚಿಕೊಂಡರೆ ಕೈ ಕಾಲು ಬಿಚ್ಚಿದನ್ನು ಚೆನ್ನಾಗಿ ಆಗುತ್ತದೆ.

23) <u>ದಮ್ಮು ಇದ್ದಾಗ :</u>

ಜೀರಿಗೆ ಖಡಿಸಕ್ಕರೆ ಅರೆದು ಆಡಿನ (ಮೇಕೆ) ಮೂತ್ರದಲ್ಲಿ ಹಾಕಿ ಏಳುದಿನ ಕುಡಿದರೆ ದಮ್ಮು ರೋಗ ಮಾಯವಾಗುತ್ತದೆ.

24) <u>ಬಿಳಿ ಸೆರಗು :</u>

ಬಿಳಿ ಜಾಟಗ್ಯಾನ ಗಿಡದ ತಪ್ಪಲನ್ನು ನೀರಿನ ಸಹಾಯದಿಂದ ಚೆನ್ನಾಗಿ ಕುಟ್ಟಿ, ಚಹಾ ಕುಡಿಯುವ ಗ್ಲಾಸಿನಷ್ಟು ರಸ ತೆಗೆದು ಮಜ್ಜಿಗೆ ಅಥವಾ ಮೊಸರಿನಲ್ಲಿ ಬೆರೆಸಿ 7 ದಿನ ಕುಡಿದರೆ ಬಿಳಿ ಸೆರಗು ನಿಲ್ಲುತ್ತದೆ.

25) <u>ಸರಕಾರಿ ಮುಳ್ಳು ನಟ್ಟಾಗ (ಚುಚ್ಚಿದಾಗ) :</u>

ಒಂದು ಎಮ್ಮೆ ಕೋಣ ಈದರೆ (ಹೆರಿಗೆ) ಎಮ್ಮೆಯ ಹೆಂಡವನ್ನು ತಂದು ಸರಕಾರಿ ಮುಳ್ಳು ನಟ್ಟ ಜಾಗಕ್ಕೆ ಕಟ್ಟಬೇಕು. ಮುಳ್ಳ ಹೊರಗಡೆ ಬರುತ್ತದೆ. ಇದರಿಂದ ನೋವು ನಿವಾರಣೆಯಾಗುತ್ತದೆ.

26) <u>ಮುಳ್ಳು ಮತ್ತು ಜೋಳದ ಕೊಯಿಲು ನಟ್ಟಾಗ :</u>

ಕಾರೆ ತಪ್ಪಲು ತಂದು ಅದರಲ್ಲಿ 4 ತಪ್ಪಲು ಮತ್ತು 3 ಹಳ್ಳ ಅಡಿಗೆ ಉಪ್ಪನ್ನು ಸೇರಿಸಿ ತಿನ್ನಬೇಕು. ಹಾಗೆ ಆ ತಪ್ಪಲು ಮತ್ತು ಉಪ್ಪು ಕುಟ್ಟಿ ಮುಳ್ಳು ನಟ್ಟ ಜಾಗಕ್ಕೆ ಸ್ವಲ್ಪ ಕೆದರಿ ಅರೆದು ತಪ್ಪಲು ಕಟ್ಟಬೇಕು. ಹೀಗೆ 3 ದಿನ ಕಟ್ಟಿದರೆ ಮುಳ್ಳು ಹೊರಗಡೆ ಬರುತ್ತದೆ. ಇದರಿಂದ ಈ ನೋವು ನಿವಾರಣೆಯಾಗುತ್ತದೆ.

27) <u>ಕೆಂಪು ಸೆರಗು ಹೋಗುತ್ತಿದ್ದಾಗ :</u>

ಕೆಂಪು ಜಾಟಗ್ಯಾನ ಗಿಡದ ತಪ್ಪಲನ್ನು ತಂದು ನೀರಿನ ಸಹಾಯದಿಂದ ಚೆನ್ನಾಗಿ ಕುಟ್ಟಿ ಒಂದು ಸಣ್ಣ ಗ್ಲಾಸ ತುಂಬ ರಸತೆಗೆದು. ಮಜ್ಜಿಗೆ ಅಥವಾ ಮೊಸರಿನಲ್ಲಿ ಬೆರೆಸಿ 7 ದಿನ ಕುಡಿದರೆ ಈ ರೋಗ ನಿವಾರಣೆಯಾಗುತ್ತದೆ.

28) <u>ಸೆಕೆ ಹೊಡೆದಾಗ :</u>

ಅತ್ತಿ ಗಿಡದ ಕಾಯಿಯನ್ನು ತಂದು ನೆರಳಿನಲ್ಲಿ ಒಣಗಿಸಿ ಕುಟ್ಟಿ ಚೂರ್ಣ ತಯಾರಿಸಿಟ್ಟಿಕೊಂಡು ಇಲಾಚಿ, ಜೀರಿಗೆ, ಖಡಿಸಕ್ಕರೆ ಇವೆಲ್ಲ ಕುಟ್ಟಿ ಒಂದಡೆ ಚೆನ್ನಾಗಿ ಕಲೆಸಿ ಅದೇ ಚೂರ್ಣದಲ್ಲಿ ಬೆರೆಸಬೇಕು. ಇದನ್ನು ಒಂದು ಗ್ಲಾಸ ನೀರಿನಲ್ಲಿ ಹಾಕಿ 7 ದಿನ ಕುಡಿಯಬೇಕು. ಹೀಗೆ ಕುಡಿದರೆ ಸೆಕೆ ಹೊಡೆತದಿಂದಾಗುವ ನೋವು ನಿವಾರಣೆಯಾಗುತ್ತದೆ.

29) <u>ಕುರು ಆದಾಗ :</u>

ಸೈತುತ ಬಳ್ಳಿಯನ್ನು ತಂದು ಏಳು ಹಳ್ಳ ಅಡಿಗೆ ಉಪ್ಪನ್ನು ಸೇರಿಸಿ ಚೆನ್ನಾಗಿ ಕುಟ್ಟಿ ಕುರು ಆದ ಜಾಗಕ್ಕೆ ಕಟ್ಟಬೇಕು. ಹೀಗೆ ಮೂರು ದಿನ ಕಟ್ಟಿದರೆ ಕುರು ಒಡೆಯುತ್ತದೆ. ಇಲ್ಲವೆ ಕರಗಿ ಹೋಗುತ್ತದೆ.

30) <u>ನಾಯಿ ಕಡಿದಾಗ :</u>

ಹುಚ್ಚ ಬಬ್ಬಲೆ ಗಿಡದ ಕಾಯಿಯನ್ನು ಚೆನ್ನಾಗಿ ಕುಟ್ಟಿ ಚೂರ್ಣ ತಯಾರಿಸಿಟ್ಟುಕೊಂಡು, ಮೊಸರಿನಲ್ಲಿ ಅಥವಾ ಮಜ್ಜಿಗೆಯಲ್ಲಿ ಒಂದು ಚಮಚ ಹಾಕಿ 7 ದಿನ ಕುಡಿಯಬೇಕು.

31) <u>ಕಜ್ಜಿ ಆದಾಗ :</u>

ಕಡಲೆಗೆ ಹಾಕುವ (BHC) ಪೌಡರನ್ನು ತಂದು ಅದರಲ್ಲಿ ಸೀಮೆ ಎಣ್ಣೆ (ಗ್ಯಾಸಲೇಟ್) ಯನ್ನು ಹಾಕಿ ಚೆನ್ನಾಗಿ ಕಲಸಿ ಮಲಮನ್ನಾಗಿ ಮಾಡಿ ಕಜ್ಜಿ ಇರುವ ಜಾಗಕ್ಕೆ 7 ದಿನ ಹಚ್ಚಿದರೆ ಕಜ್ಜಿ ರೋಗ ನಿವಾರಣೆಯಾಗುತ್ತದೆ.

32) **ಕೂಸಿಗೆ ಹೊಟ್ಟೆ ನೋವು ಆದಾಗ :**

ಬಬಲೆ ಗಿಡಕ್ಕೆ ಬೇರೆ ಹುಳುವಿನ ಮನೆ ಇರುತ್ತದೆ. ಆ ಮನೆಯ ಮೇಲಿನ ಚೂರ್ಣವನ್ನು ತಂದು ಅದನ್ನು ಚೆನ್ನಾಗಿ ಅರೆದು ಮೊಲೆ ಹಾಲಿನಲ್ಲಿ 3 ದಿನ ಕೂಡಿಸಿದರೆ ಹೊಟ್ಟೆ ನೋವು ನಿವಾರಣೆಯಾಗುತ್ತದೆ.

33) **ದೇಹಕ್ಕೆ ಗಡ್ಡೆಯಾಗುತ್ತಿದ್ದಾಗ :**

ಸಾಫಿಯಾ ಚೂರ್ಣವನ್ನು ತಂದು ಒಂದು ಗ್ಲಾಸಿನಲ್ಲಿ ಒಂದು ಚಮಚ ಚೂರ್ಣ ಹಾಕಿ 7 ದಿನ ಕುಡಿದರೆ ಈ ರೋಗ ನಿವಾರಣೆಯಾಗುತ್ತದೆ.

34) **ಬಿದ್ದು ಗಾಯವಾದಾಗ :**

ಹುತ್ತದ ಮಣ್ಣಿಗೆ ಅಡಿಗೆ ಉಪ್ಪು ನೀರಿನೊಂದಿಗೆ ಬೆರೆಸಿ ಗಾಯದ ಮೇಲೆ ಮೂರು ದಿನ ಹಚ್ಚಿದರೆ ಗಾಯ ನಿವಾರಣೆಯಾಗುತ್ತದೆ.

35) **ರಕ್ತ ಭೇದಿ ಆದಾಗ :**

ಹುಲಿಹಣ್ಣಿನ ಗಿಡದ ತಪ್ಪಲನ್ನು ತಂದು ನೀರಿನ ಸಹಾಯದಿಂದ ಚೆನ್ನಾಗಿ ಕುಟ್ಟಿ ಅರ್ಧ ಗ್ಲಾಸ್ ರಸ ತೆಗೆದು ಮಜ್ಜಿಗೆ ಅಥವಾ ಮೊಸರಿನಲ್ಲಿ ಬೆರೆಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಏಳು ದಿನ ಕುಡಿಸಿದರೆ ರಕ್ತ ಭೇದಿ ನಿವಾರಣೆಯಾಗುತ್ತದೆ.

36) **ಗಂಟಲ ಹುಣ್ಣು ಆದಾಗ :**

ಒಂದು ತಂಬಿಗೆ ನೀರಲ್ಲಿ ಅರಿಶಿಣ ಮತ್ತು ಉಪ್ಪನ್ನು ಚೆನ್ನಾಗಿ ಕಲಸಿ. ಈ ನೀರನ್ನು ಮೂರು ದಿನ ಬಾಯಿಯಲ್ಲಿ ಹಾಕಿ ಉಗುಳಬೇಕು. ಇದರಿಂದ ಗಂಟಲ ಹುಣ್ಣು ಮಾಯುತ್ತದೆ.

37)**ಕೂದಲು ಉದರುತ್ತಿದ್ದಾಗ :**

ನಿಂಬೆ ರಸ ಬಿಳಿ ಜೋಳದ ಹಟ್ಟನ್ನು ಹಿಟ್ಟನ್ನು ತಲೆಗೆ ಒರೆಸಿ 3 ನಿಮಿಷ ಹಾಗೆ ಬಿಡಬೇಕು. ಆನಂತರ ತಲೆಯನ್ನು ತೊಳೆದುಕೊಳ್ಳಬೇಕು. ಹೀಗೆ 7 ದಿನ ಮಾಡಿದರೆ ಕೂಡಲು ಉದರುವದು ನಿಲ್ಲುತ್ತದೆ.

38) **ಕಿವಿ ಬೇನೆ :**

ರೋಗನ ಎಣ್ಣೆಯನ್ನು ತಂದು ಸ್ವಲ್ಪ ಬೆಚ್ಚಗೆ ಮಾಡಿ ಕಿವಿಗೆ ಎರಡು ಹನಿ ಎಣ್ಣೆ ಹಾಕಿದರೆ ಕಿವಿ ಬೇನೆ ನಿವಾರಣೆಯಾಗುತ್ತದೆ.

39) **ಕಿವಿ ಒಡೆದರೆ :**

ಮರಹಂ ಕಾಪೂರ ಮತ್ತು ಬೇವಿನ ತಪ್ಪಲನ್ನು ಕುಟ್ಟಿ ಎರಡನ್ನು ನೀರಿನಲ್ಲಿ ಹಾಕಿ ಮೊದಲು ಕಿವಿ ತೊಳೆಯಬೇಕು. ಸಹೇದಾಸೂಪಿ, ಜೋಫಾದಿ ಇವೆಲ್ಲವನ್ನು ಕಿವಿಗೆ 7 ದಿನ ಹಾಕಿದರೆ ರೋಗ ನಿವಾರಣೆಯಾಗುತ್ತದೆ.

40) **ಕಿವಿ ಗುದ್ ಗುದ್ ಮಾಡುತ್ತಿದ್ದಾಗ :**

ಎರಡು ಲವಂಗನ್ನು ಚೆನ್ನಾಗಿ ಅರೆದು ಆಕಳ ಹಾಲನಲ್ಲಿ ಹಾಕಿ ನಂತರ ಅಲ್ಲಾಡಿಸಿ ಕಲಸಿ ನೋವು ಇರುವ ಕಿವಿಗೆ ಮೂರು ದಿನ ಹಾಕಿದರೆ ಕಿವಿ ಗುದ್ ಗುದ್ ಮಾಡುವುದನ್ನು ಕಡಿಮೆಯಾಗುತ್ತದೆ.

41) **ನಾಸರ ಹುಣ್ಣು ಮೂಗಿನಲ್ಲಿ ಆದಾಗ :**

ಬಿಳಿ ಉಳ್ಳಗಡ್ಡಿಯನ್ನು ಚೆನ್ನಾಗಿ ಕುಟ್ಟಿ ಒಂದು ಚಮಚ ರಸ ತೆಗೆದು ಹುಣ್ಣು ಆದ ಮೂಗಿನಲ್ಲಿ ಎರಡು ಎರಡೆರಡು ಹನಿ ಎರಡೂ ಮೂಗಿನಲ್ಲಿ ಮೂರು ದಿನ ಹಾಕಿದರೆ ನಾಸರ ಹುಣ್ಣು ರೋಗ ನಿವಾರಣೆಯಾಗುತ್ತದೆ.

42) **ಮೂಗಿನಲ್ಲಿ ಕೊಳೆತ ವಾಸನೆ ಬರುತ್ತಿದ್ದರೆ :**

ರೋಗ್ಯಾನ ಅನಕ ಬೇರನ್ನು ತಂದು ಚೆನ್ನಾಗಿ ಕುಟ್ಟಿ ರಸ ತೆಗೆದು ರೋಗಿಯ ಮೂಗಿಗೆ ಮೂರು ದಿನ ಹಾಕಿದರೆ ಮೂಗಿನ ಕೊಳೆತ ವಾಸನೆ ನಿವಾರಣೆಯಾಗುತ್ತದೆ.

43) **ಇಸಬು, ಗಜಕರ್ಣ ಆದಾಗ :**

ರೋಗ್ಯಾನ ಚೂರಕ ಚೂರ್ಣ ಮಾಡಿ ಕೊಬ್ಬರಿ ಎಣ್ಣೆಯಲ್ಲಿ ಕಲಸಿ ಮಲಾಮಿನಂತೆ ಮಾಡಿ ಇಸಬು ಗಜಕರ್ಣ ಇದ್ದ ಜಾಗಕ್ಕೆ 7 ದಿನ ಹಚ್ಚಿದರೆ ಇಸಬು ಮತ್ತು ಗಜಕರ್ಣ ರೋಗ ನಿವಾರಣೆಯಾಗುತ್ತದೆ.

44) **ಲಕ್ವ ಹೊಡೆದಾಗ :**

ಕರಂಚಿಕಿ ಕ್ವಟಿ ತಪ್ಪಲನ್ನು ತಂದು ಚೆನ್ನಾಗಿ ಕುಟ್ಟಿ ಆಡಿನ ಹಾಲಿನಲ್ಲಿ ಹಾಕಿ 15 ದಿವಸಗಳು ಅಂದರೆ ರವಿವಾರ, ಸೋಮವಾರ ಕುಡಿಸಬೇಕು. ಹೀಗೆ ಕುಡಿಸಿದರೆ ಲಕ್ವ ರೋಗ ನಿವಾರಣೆಯಾಗುತ್ತದೆ.

ಪಥ್ಯ : ನೆರಳು ಬಿಳಬಾರದು.

45) <u>ನಾಲಿಗೆಗೆ ಲಕ್ವ</u> :

ಕೆಂಪು ಜಾಜ, ಬಿಳಿ ಸಾಸಿವೆ, ಚೆನ್ನಾಗಿ ಕುಟ್ಟಬೇಕು. ನಂತರ ಜೇನು ತುಪ್ಪದಲ್ಲಿ ಕಲಸಿ ನಾಲಿಗಿಗೆ 15 ದಿವಸ ನೆಕ್ಕಿಸಬೇಕು. ನಾಲಿಗೆ ಲಕ್ವ ನಿವಾರಣೆಯಾಗುತ್ತದೆ.

46) <u>ಕೀಲು ನೋವು ಆದಾಗ</u> :

ಕತ್ತೆ ಕಿವಿ ಸಸ್ಯದ ತಪ್ಪಲನ್ನು ತಂದು ನೀರಿನೊಂದಿಗೆ ಕುಟ್ಟಿ ಸಣ್ಣ ಗ್ಲಾಸ್ ರಸ ತೆಗೆದು ಅದರಲ್ಲಿ ಜೀರಿಗೆ ಮತ್ತು ಖಡಿಸಕ್ಕರೆಯ ಚೂರ್ಣವನ್ನು ರಸದಲ್ಲಿ ಬೆರೇಸಿ ಚೆನ್ನಾಗಿ ಕಲಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಏಳು ದಿನ ಕೂಡಿದರೆ ಕೀಲು ನೋವು ನಿವಾರಣೆಯಾಗುತ್ತದೆ.

47)<u>ಕನಸಿನಲ್ಲಿ ವೀರ್ಯ ಹೋಗುತ್ತಿದ್ದಾಗ</u> :

ಮಾವಿನ ಗಿಡದ ತೊಗಟೆ, ಅತ್ತಿ ಗಿಡ ತೊಗಟೆ, ಬಾಳೆ ಗಿಡದ ತೊಗಟೆ, ಇವೆಲ್ಲವನ್ನು ಬೇರೆ ಬೇರೆ ಯಾಗಿ ಕುಟ್ಟಿ ಒಂದಡೆ ಕಲಸಿ ನಂತರ ಒಂದು ಗ್ಲಾಸ ಮಜ್ಜಿಗೆ ಅಥವಾ ಮೊಸಲಿನಲ್ಲಿ ಕಲಸಿ 7 ದಿನ ಕುಡಿದರೆ ಕನಸಿನಲ್ಲಿ ವೀರ್ಯ ಹೋಗುವುದು ನಿವಾರಣೆಯಾಗುತ್ತದೆ.

48) <u>ನಪುಸಕತ್ವ ಇದ್ದಾಗ</u> :

ಬಿಲ್ವ ಪತ್ರಿ ಗಿಡದ ಕಾಯಿಯನ್ನು ತಂದು ಸುಡಬೇಕು. ನಂತರ ಅದರ ತಿರುಳನ್ನು ಹಾಲಿನಲ್ಲಿ ಅಥವಾ ಮೊಸಲಿನಲ್ಲಿ ಹಾಕಿ 21 ದಿನಗಳವರೆಗೆ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಸೇವಿಸಿದರೆ ನಪುಸಕತ್ವ ಕಳೆದು ಪುರುಷತ್ವ ಬರುತ್ತದೆ.

ಟರಬೂಜ ಬೀಜ, ಕಾಜು, ಖರಬುಜ ಬೀಜ, ಅಕ್ರೋಟ, ಮನಿಕಾ, ಮಳ್ಳೆ ಹಣ್ಣಿನ ಬೀಜ, ಬಾದಾಮ ಬೀಜ, ಖಜೂರ ಬೀಜ ಇವೆಲ್ಲವನ್ನು ಒಂದೆಡೆ ಸೇರಿಸಿ ಒಂದು ಗಡಿಗೆ (ಮಡಿಕೆ) ಯಲ್ಲಿ ಹಾಕಿ ಬಾಯಿ ಕಟ್ಟಿ ಬೋಳ ಹಾಕಿ ನಂತರ ಇದರ ಮೇಲೆ ಉರಿ ಹಚ್ಚಬೇಕು. ಹೀಗೆ 5 ನಿಮಿಷ ಕಾಸಿ ಆರಿಸಿ ಇದರಲ್ಲಿ ಅರ್ಧ ಕಿಲೋ ಆಕಳ ಹಾಲಿನಿಂದ ತಯಾರಿಸಿದ ಬೆಣ್ಣೆಯನ್ನು ಕಲಸಿ ಪ್ರತಿ ದಿನ ಮುಂಜಾನೆ ಖಾಲಿ ಹೊಟ್ಟೆಯಲ್ಲಿ 21 ದಿನಗಳು ತಿಂದರೆ ಸಂಪೂರ್ಣ ಪುರುಷತ್ವ ಬರುತ್ತದೆ.

ಪಥ್ಯ : 21 ದಿನಗಳು ಸ್ತ್ರೀ ಸಂಪರ್ಕ ಹೊಂದಬಾರದು.

24) **ವಕ್ತಾರರು : ಅಬ್ದುಲ ರಜಾಕ್ ಪಾಟೀಲ**

ವಯಸ್ಸು : 88 ವರ್ಷ

ಊರು : ಅಮಲಾಪೂರ

ತಾ: ಜಿ: : ಬೀದರ

1) <u>ಕಣ್ಣಲ್ಲಿ ಹೂವು ಬಿದ್ದಾಗ :</u>

ಕರ್ಕಿಯನ್ನು ತಂದು ನೀರಿನೊಂದಿಗೆ ಚೆನ್ನಾಗಿ ಕುಟ್ಟಿ ಒಂದು ತೆಳವಾದ ಬಟ್ಟೆಯಿಂದ ರಸ ಹಿಂಡಬೇಕು. ಈ ರಸವನ್ನು ಹೂವಾ ಬಿದ್ದ ಕಣ್ಣಿಗೆ 4 ದಿನ ಮುಂಜಾನೆ ಹಾಕಿದರೆ ಕಣ್ಣಿನಲ್ಲಿರುವ ಹೂವು ಮಾಯವಾಗುತ್ತದೆ.

2) <u>ಗರ್ಮಿಯಾಗಿ ಕೈ ಕಾಲು ಬಿಚ್ಚಿದಾಗ :</u>

ಬೇವಿನ ಗಿಡದ ತೊಗಟೆಯನ್ನು ಒಣಗಿಸಿ ಚೆನ್ನಾಗಿ ಕುಟ್ಟಿ ಚೂರ್ಣ ತಯಾರಿಸಿ ಈ ಚೂರ್ಣದಲ್ಲಿ ಖಡಿಸಕ್ಕರೆ 20 ಗ್ರಾಂ. ಜೀರಿಗೆ 10 ಗ್ರಾಂ. ಬೆರೆಸಿ ಚನ್ನಾಗಿ ಅರೆದು ತೆಳುವಾದ ಬಟ್ಟೆಯಲ್ಲಿ ಈ ಚೂರ್ಣವನ್ನು ತೆಗೆದುಕೊಂಡು ನೀರಿನಲ್ಲಿ ಎದ್ದಿ ರಸ ಹಿಂಡಬೇಕು. ಈ ರಸವನ್ನು ಒಂದು ಸೀಸದಲ್ಲಿ ಹಾಕಿ ಇಡಬೇಕು. ಇದನ್ನು ದಿನಾಲು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಒಂದು ಗ್ಲಾಸ ರಸ 8 ದಿನ ಕುಡಿದರೆ ಗರ್ಮಿಯಿಂದ ಕೈ ಕಾಲು ಬಿಚ್ಚಿರುವುದು ಕಡಿಮೆಯಾಗುತ್ತದೆ.

3) <u>ಬಾಯಿ ಹುಣ್ಣು :</u>

ಆಕಳ ಹಾಲಿನಿಂದ ತಯಾರಿಸಿದ ಬೆಣ್ಣೆ ಮತ್ತು ಸುಫೇದಾ ಇವೆರಡನ್ನು ಚೆನ್ನಾಗಿ ಕಲಸಿ ಮಲಾಮಿನಂತೆ ಮಾಡಿ ಬಾಯಿಯಲ್ಲಿರುವ ಹುಣ್ಣಿಗೆ 7 ದಿನಗಳವರೆಗೆ ಹಚ್ಚಿದರೆ ಬಾಯಿ ಹುಣ್ಣು ಮಾಯವಾಗುತ್ತದೆ.

4) <u>ಮನುಷ್ಯ ಇತರ ರೋಗಗಳಿಂದ ತೆಳ್ಳಗೆ ಆದಾಗ :</u>

ವಿಭೂತಿ ಗಿಡದ ತಪ್ಪಲನ್ನು ತಂದು ಚೆನ್ನಾಗಿ ಕುಟ್ಟಿ ರಸ ತೆಗೆದು ಒಂದು ಸ್ವಚ್ಛವಾದ ಶೀಸೆಯಲ್ಲಿ ಹಾಕಿಟ್ಟು ದಿನಾಲು ಒಂದು ಗ್ಲಾಸ ಕುಡಿಯಬೇಕು. ಕರಿ ಬೆಸ್ನಿನ ಕೊಬ್ಬರಿಯನ್ನು ದಿನಕ್ಕೆ ಒಂದರಂತೆ 15 ದಿವಸಗಳ ಕಾಲ ತಿನ್ನಬೇಕು ಇದರಿಂದ ಶಕ್ತಿ ಬಂದು ದಪ್ಪನಾಗಿ ದೇಹದಲ್ಲಿನ ರೋಗಗಳು ನಿವಾರಣೆಯಾಗುತ್ತದೆ.

5) <u>ದಮ್ಮು ಅಥವಾ ದಾಪು ಇದ್ದಾಗ :</u>

ದೇಶಿ ಕೋಳಿಯ ಅಂಡಿ (ಮೊಟ್ಟಿ)ಯ ರಸವನ್ನು ಒಂದು ಗ್ಲಾಸಿನಲ್ಲಿ ಹಾಕಬೇಕು. ನಂತರ ಒಂದು ಚಮಚೆ ತೆಗೆದುಕೊಂಡು ಆ ರಸಕ್ಕೆ ಚೆನ್ನಾಗಿ ಅರೆದು ನೀರಿನ ತರಹ ಮಾಡಬೇಕು. ಮೂರು ಚಮಚೆ ಸಕ್ಕರೆಯನ್ನು ಬೆರೆಸಿ ಕರಗಿಸಬೇಕು. ಒಂದು ಗ್ಲಾಸ ಆಕಳ ಹಾಲು ಸ್ವಲ್ಪ ತುಪ್ಪ ಹಾಕಿ ಕಲಸಿ ದಿನಾಲು ಮುಂಜಾನೆ ಖಾಲಿ ಹೊಟ್ಟೆಯಲ್ಲಿ 7 ದಿನಗಳು ಕುಡಿದರೆ ದಮ್ಮು ರೋಗ ಮಾಯವಾಗುತ್ತದೆ.

ಪಥ್ಯ : ಎಣ್ಣೆ ಪದಾರ್ಥ, ಬದನೆಕಾಯಿ ತಿನ್ನಬಾರದು.

6) <u>ಮೂರ್ಛೆ ರೋಗ ವಿದ್ದಾಗ :</u>

5-6 ಬೆಳ್ಳಗಡ್ಡಿಯ ಎಸಳುಗಳನ್ನು ತೆಗೆದುಕೊಂಡು ಚೆನ್ನಾಗಿ ಕುಟ್ಟಿ ಒಂದು ತೆಳುವಾದ ಬಟ್ಟೆಯಲ್ಲಿ ಹಾಕಿ ರಸ ಹಿಂಡಿ ಒಂದು ಶೀಸೆಯಲ್ಲಿ ಹಾಕಿಡಬೇಕು. ಮೂರ್ಛೆ ರೋಗ ಬಂದ ತಕ್ಷಣವೇ ಈ ರಸವನ್ನು ರೋಗಿಯ ಎರಡು ಮೂಗಿಗೆ ನಾಲ್ಕನಾಲ್ಕು ಹನಿ ಹಾಕಬೇಕು. ಕೆಲವೇ ನಿಮಿಷಗಳಲ್ಲಿ ಮೇಲೆದ್ದು ಸೀನುತ್ತಾನೆ. ಆಗ ಒಳಗಡೆ ಇರುವ ಜಿಡು ಹೊರಗೆ ಬಂದು ಮೂರ್ಛೆ ರೋಗ ಮಾಯವಾಗುತ್ತದೆ.

7) <u>ಸಕ್ಕರೆ ಬೇನೆ ಇದ್ದಾಗ :</u>

ಸಪ್ಪನ ತಪ್ಪಲು (ಮಿಠೆಕಾ ಪತ್ತಾ) ಚೆನ್ನಾಗಿ ಕುಟ್ಟ, ಬೋರೆಕಾಯಿ ಹಣ್ಣಿನಷ್ಟು ಗುಳಿಗೆಯನ್ನು ಮಾಡಿ ಈ ಗುಳಿಗೆಯನ್ನು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಮತ್ತು ರಾತ್ರಿ ಊಟವಾದ ನಂತರ ಒಂದೊಂದು ಗುಳಿಗೆಯನ್ನು ತಿನ್ನಬೇಕು. ಹೀಗೆ ಒಂದು ತಿಂಗಳ ಕಾಲ ತಿಂದರೆ ಸಕ್ಕರೆ ರೋಗ ಮಾಯವಾಗುತ್ತದೆ.

8) <u>ಸುಟ್ಟಿ ಗಾಯವಾದಾಗ :</u>

ನಗರ್ಯಾನ್ ಗಿಡದ ತಪ್ಪಲನ್ನು ತಂದು. 20 ದಿನಗಳ ಕಾಲ ನೆರಳಿನಲ್ಲಿ ಒಣಗಿಸಿ ಚೂರ್ಣ ತಯಾರಿಸಿ (ಬುಕಣಿ ಮಾಡಿ) ಒಂದು ಡಬ್ಬಿಯಲ್ಲಿ ತುಂಬಿಡಬೇಕು. ಚೂರ್ಣವನ್ನು ಸುಟ್ಟ ಗಾಯದ ಮೇಲೆ ದಿನಕ್ಕೆ ಒಂದು ಸಲದಂತೆ ಮೂರು-ನಾಲ್ಕು ದಿನಗಳು ಈ ಚೂರ್ಣ ಹಾಕಿದರೆ ಸುಟ್ಟ ಗಾಯ ಮಾಯವಾಗಿ ರೋಗ ನಿವಾರಣೆಯಾಗುತ್ತದೆ.

9) <u>ಗಜಕರ್ಣ ಮತ್ತು ಇಸಬು ಆದಾಗ :</u>

ಅಂಗುರಿನ ರಸವನ್ನು ತೆಗೆದು ಗಜಕರ್ಣ ಅಥವಾ ಇಸಬು ಆದ ಜಾಗಕ್ಕೆ 7 ದಿನಗಳ ಕಾಲ ಹಚ್ಚಿದರೆ ಈ ರೋಗ ನಿವಾರಣೆಯಾಗುತ್ತದೆ.

10) <u>ಹಲ್ಲು ಬೇನೆ ಆದಾಗ :</u>

ಲಕ್ಕಿ ಗಿಡದ ತಪ್ಪಲನ್ನು ತಂದು ಚೆನ್ನಾಗಿ ಒರೆಸಿ ಗುಳಿಗೆ ತರಹ ಮಾಡಿ ಹಲ್ಲು ನೋವು ಇರುವ ಜಾಗಕ್ಕೆ ಒಂದು ಗಂಟೆಯವರೆಗೆ ಇಡಬೇಕು. ಆಗ ಬರುವ ಉಗುಳನ್ನು ಉಗಳಬೇಕು. ಹಲ್ಲು ನೋವು ನಿವಾರಣೆಯಾಗುತ್ತದೆ.

11) <u>ಅರ್ಧ ತಲೆ ನೋವು ಆದಾಗ :</u>

ಸಾಬುನಕಾಯಿ (ರೀಠಾ) ತಂದು ನೀರಿನ ಸಹಾಯದಿಂದ ಗಂಧವನ್ನು ತೆಗೆದು ಎರಡು ಮೂಗಿನಲ್ಲಿ 4-4 ಹನಿ ಈ ಗಂಧದ ನೀರಿನಲ್ಲಿ ಕಲಸಿ ಹಾಕಬೇಕು. ಆಗ ಜಿಡ್ಡು ಹೊರಗೆ ಬಂದು ನೋವು ನಿವಾರಣೆಯಾಗುತ್ತದೆ.

12) <u>ಬಂಜೆತನಕ್ಕೆ :</u>

ಕುದರೆ ಗಿಡದ ಬೇರಿನ ಗಡ್ಡೆ ಮೂರು ಭಾಗ ಮಾಡಿ ಅದರಲ್ಲಿ ಒಂದು ಭಾಗ ತೆಗೆದುಕೊಂಡು ಚೆನ್ನಾಗಿ ಕುಟ್ಟಿ ಒಂದು ಬಟ್ಟಲಿನಲ್ಲಿ ರಸ ತೆಗೆಯಬೇಕು. ನಂತರ ಸ್ವಲ್ಪ ಜೀರಗಿಯನ್ನು ಅರೆದು ಈ ರಸದಲ್ಲಿ ಹಾಕಬೇಕು. ಹೀಗೆ ತಯಾರಿಸಿದ ರಸವನ್ನು ಮುಂಜಾನೆ ಖಾಲಿ ಹೊಟ್ಟೆಯಲ್ಲಿ 7 ದಿನಗಳು ಕುಡಿದರೆ ಬಂಜೆತನ ನಿವಾರಣೆಯಾಗುತ್ತದೆ.

ಪಥ್ಯ : ಗರ್ಮಿ ಪದಾರ್ಥಗಳನ್ನು ತಿನ್ನಬಾರದು ಮತ್ತು 7 ದಿನಗಳ ಕಾಲ ಪುರುಷ ಸಂಪರ್ಕ ಹೊಂದಬಾರದು.

13) <u>ಮೂಲವ್ಯಾಧಿ :</u>

ನೀರಿಗೆ ಹಾಕುವ ಪೌಡರನ್ನು ತಂದು ಗಟ್ಟಿಯಾಗಿ ನೀರಿನಲ್ಲಿ ಕಲಸಿ. ಮೂಲ ವ್ಯಾಧಿ ಇರುವ ಜಾಗಕ್ಕೆ ಹಚ್ಚಿದರೆ ಮೂಲವ್ಯಾಧಿ ನಿವಾರಣೆಯಾಗುತ್ತದೆ.

14) <u>ಕೆಂಪು ಸೆರಗು ಮತ್ತು ಬಿಳಿ ಸೆರಗು :</u>

ಹೌವಳದ ಗಡ್ಡೆಯನ್ನು ತಂದು ಕುಟ್ಟಿ ಚೂರ್ಣ ಮಾಡಿ ಮೊಸರು ಅಥವಾ ಮಜ್ಜಿಗೆಯಲ್ಲಿ ಚೂರ್ಣವನ್ನು ಚೆನ್ನಾಗಿ ಕಲಸಿ 7 ದಿನ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಕುಡಿದರೆ ಕೆಂಪು ಸೆರಗು ಮತ್ತು ಬಿಳಿ ಸೆರಗು ಮಾಯವಾಗುತ್ತದೆ.

15) <u>ಪುರುಷತ್ವ ಇಲ್ಲದಿದ್ದಾಗ :</u>

ವಿಭೂತಿ ಗಿಡದ ತಪ್ಪಲು (ಕೊಂಗೈಕಾ ಪತ್ತಾ) ವನ್ನು ನೀರಿನ ಸಹಾಯದಿಂದ ಚೆನ್ನಾಗಿ ಕುಟ್ಟಿ ಒಂದು ಬಿಳಿ ಹೊಸ ಬಟ್ಟೆಯಲ್ಲಿ ಹಾಕಿ ಒಂದು ಗ್ಲಾಸ ರಸ ತೆಗೆದು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಕುಡಿಯಬೇಕು. ನಂತರ ಕರೆ ಬೆನ್ನಿನ ಕೊಬ್ಬರಿಯನ್ನು ತಿನ್ನಬೇಕು. ಹೀಗೆ 15 ದಿವಸಗಳ ಕಾಲ ತಿಂದರೆ ಸಂಪೂರ್ಣ ಪುರುಷತ್ವ ಬರುತ್ತದೆ.

ಪಥ್ಯ : ಬದನೆಕಾಯಿ, ಚಹಾ, ಬಾಳೆ ಹಣ್ಣು ತಿನ್ನಬಾರದು ಮತ್ತು ಒಂದು ತಿಂಗಳು ಸ್ತ್ರೀ ಸಂಪರ್ಕ ಹೊಂದಬಾರದು.

16) <u>ದಾರದ ಬೇನೆ ಆದಾಗ :</u>

ಜಂಗಲಿ ಬಬಲೆ ಗಿಡದ ತೊಗಟೆಯಿಂದ ಕೈ ಕಡಗ, ಕಾಲು ಕಡಗ, ಟೊಂಕದ ಉಡುದಾರ ಮತ್ತು ಕೊರಳ ಸರ ತಯಾರಿಸಿ ರವಿವಾರ, ಮಂಗಳವಾರ ಮತ್ತು ರವಿವಾರ ಹೀಗೆ ಮೂರು ದಿನ ತೊಡಿಸಿದರೆ ದಾರದ ಬೇನೆ ಗುಣಮುಖವಾಗುತ್ತದೆ.

17) <u>ಚೇಳು ಕಡಿದಾಗ :</u>

ಎಮ್ಮೆ ಅಥವಾ ಆಕಳ (ಗುದ್ದಕ್ಕೆ) ಸವರಬೇಕು. ನಂತರ ಸ್ವಲ್ಪ ಬೆಂಕಿಯಿಂದ ಕಾಸಬೇಕು. ಇದರಿಂದ ವಿಷ ಇಳಿದು ಉರಿ ಕಡಿಮೆಯಾಗುತ್ತದೆ.

18) <u>ಕಾಮಲೆ ಆದಾಗ :</u>

ಗೆಝೋಟಿಕಾ ತಪ್ಪಲನ್ನು ಒರೆಸಿ ಆಡಿನ ಹಾಲಿನಲ್ಲಿ ಹಾಕಬೇಕು. ಆಗ ಹಾಲು ಅರಿಸಿಣ ಬಣ್ಣಕ್ಕೆ ತಿರುಗುತ್ತದೆ. ನಂತರ ದಿನಾಲು ಮುಂಜಾನೆ ಖಾಲಿ ಹೊಟ್ಟೆಯಲ್ಲಿ 3 ದಿನ ಕುಡಿದರೆ ಈ ರೋಗ ಮಾಯವಾಗುತ್ತದೆ.

ಪಥ್ಯ : ಎಣ್ಣೆ ಪದಾರ್ಥ ಬದನೆಕಾಯಿ ಊಟ ಮಾಡಬಾರದು.

19) ಖಂಡಕಿ ಹುಣ್ಣು ಆದಾಗ :

ಖಂಡಕಿ ಗಿಡದ ಧಂಟನ್ನು ತಂದು ಮೇಲ ಭಾಗದಲ್ಲಿ 4 ಭಾಗ ಮಾಡಿ ಅದರಲ್ಲಿ ಅರಿಶಿಣ ಮತ್ತು ಅಡಿಗೆ ಉಪ್ಪನ್ನು ಹಾಕಿ ಈ ಧಂಟಿಗೆ ಕಟ್ಟಿ ಬೆಂಕಿಯಲ್ಲಿ ಹಾಕಬೇಕು. ಬೇಯಿಸಿ ನಂತರ ಬೆಂಕಿಯಿಂದ ಹೊರಗೆ ತೆಗೆದು ಖಂಡಕಿ ಹುಣ್ಣು ಆದ ಜಾಗಕ್ಕೆ ಕಟ್ಟಿದರೆ ಖಂಡಕಿ ಹುಣ್ಣು ನಿವಾರಣೆಯಾಗುತ್ತದೆ.

20) **ಹೊಟ್ಟೆ ನೋವು ಆದಾಗ (ಗ್ಯಾಸ್ ಟ್ರಬಲ್):**

ಪಾದಲವಣ, ಹಳ್ಳಕಾಯಿ, ಸೋಪ 500 ಗ್ರಾಂ. ಕಾಚ 500 ಗ್ರಾಂ. ಇವೆಲ್ಲವನ್ನು ತಂದು ಬೇರೆ ಬೇರೆಯಾಗಿ ಕುಟ್ಟಿ ನಂತರ ಒಂದು ಕಡೆ ಬೆರೆಸಬೇಕು. ನಂತರ ಒಂದು ಗಾಜಿನ ಡಬ್ಬಿಯಲ್ಲಿ ತುಂಬಿ ಇಡಬೇಕು. ಚೂರ್ಣವನ್ನು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಒಂದು ಚಮಚ ರಾತ್ರಿ ಊಟವಾದ ನಂತರ ಒಂದು ಚಮಚದಂತೆ ಎರಡು ತಿಂಗಳ ಕಾಲ ತಿಂದರೆ, ಹೊಟ್ಟೆನೋವು ರೋಗ ಮಾಯವಾಗುತ್ತದೆ.

21) **ಹೊಟ್ಟೆ ಶೂಲ :**

ಲಕ್ಕಿ ಗಿಡದ ಚಿಗುರೆಲೆಗಳನ್ನು ಕುಟ್ಟಿ ಎದೆ ಹಾಲು ಅಥವಾ ಆಕಳ ಹಾಲಲ್ಲಿ ಎದ್ದಿ, ಹಿಂಡಿದ ರಸವನ್ನು ಮಗುವಿಗೆ ಕುಡಿಸಿದರೆ ವಾಂತಿಯಾಗಿ ಕೆಟ್ಟ ಜಿಗುಟು ಪದಾರ್ಥ ಹೊರಬಿದ್ದು ಹೊಟ್ಟೆ ನೋವು ಕಡಿಮೆಯಾಗುತ್ತದೆ.

22) ಗಡ್ಡೆ ಆದಾಗ :

ಜೇನು ತುಪ್ಪವನ್ನು ನೀರಿನಲ್ಲಿ ಹಾಕಿ 8 ದಿನ ಮುಂಜಾನೆ ಬರೀ ಹೊಟ್ಟೆಯಲ್ಲಿ 8 ದಿನ ಕುಡಿದರೆ ಗಡ್ಡೆ ಕರಗಿ ಹೋಗುತ್ತದೆ.

23) ಪರಿ (ಪೊರೆ) ಬಂದಾಗ :

ಕಡವಾ ಸುರ್ಮಾವನ್ನು ಕಣ್ಣಿನ ಹುಬಿಗೆ ಹಚ್ಚಿಕೊಳ್ಳಬೇಕು. ನಂತರ ನೀರು ಸೋರುತ್ತದೆ. ಎರಡು ದಿನಗಳ ಕಾಲ ಹಚ್ಚಿಕೊಂಡರೆ ಕಣ್ಣಿನ ಪರಿ ರೋಗ ನಿವಾರಣೆಯಾಗಿ ಕಣ್ಣು ಚೆನ್ನಾಗಿ ಕಾಣುತ್ತದೆ.

24) <u>ಅರ್ಧ ತಲೆ ನೋವು</u> :

ಸಾಬುನ ಕಾಯಿ (ರೀಟಾ) ಗಿಡದ ಕಾಯಿಯನ್ನು ತಂದು ನೆರಳಿನಲ್ಲಿ ಒಣಗಿಸಿ ನೀರಿನ ಸಹಾಯದಿಂದ ಗಂಧವನ್ನು ತೆಗೆದು. ಗಂಧ ಸ್ವಲ್ಪ ನೀರಿನಲ್ಲಿ ಕಲಸಿ ಎರಡು ಮೂಗಿನಲ್ಲಿ 4-4 ಹನಿ ಹಾಕಿದರೆ ಜಿಡ್ಡು ಬರುತ್ತದೆ. ಆಗ ಅರ್ಧ ತಲೆ ನೋವು ನಿವಾರಣೆಯಾಗುತ್ತದೆ.

25) <u>ಮೈ ಕೈ ಕೆರೆತ</u> :

ಕಡ್ಡಿಗೆ ಹಾಕುವ ಪೌಡರನ್ನು ತಂದು ಗಾಸಲೇಟ (ಸೀಮೆ ಎಣ್ಣೆ) ಎಣ್ಣೆಯಲ್ಲಿ ಚೆನ್ನಾಗಿ ಕಲಸಿ ಮಲಾಮಿನಂತೆ ಮಾಡಿ ಮೈ ಕೈ ಗೆ ಹಚ್ಚಿಕೊಂಡ ನಂತರ ಎರಡು ಗಂಟೆಗಳ ಕಾಲ ಬಿಸಿಲಿನಲ್ಲಿ ಕೂಡಬೇಕು. ನಂತರ ಆಕಳ ಹೆಂಡಿ (ಮಲ) ಮೈತುಂಬ ಒರಸಿಕೊಂಡು ಸ್ನಾನ ಮಾಡಬೇಕು. ಹೀಗೆ ಮಾಡಿದರೆ ಮೈ ಕೈ ಕೆರೆತ ನಿವಾರಣೆಯಾಗುತ್ತದೆ.

24) **ವಕ್ತಾರರು** : **ಶೇಖ್ ಖುರ್ಶೀದ ಪಾಟೀಲ ಅಲ್ಲೂರಕರ್**

ವಯಸ್ಸು : 54 ವರ್ಷ

ವಿಳಾಸ : ರಾಯವೇಲ ಗಲ್ಲಿ, ಬೀದರ.

ಫೋನ್ : 223157

1) <u>ಗರ್ಮಿ ಆದಾಗ :</u>

ಮಾವಿನ ಗಿಡದ ತಪ್ಪಲನ್ನು ನೀರಿನೊಂದಿಗೆ ಕುಟ್ಟಿ ಒಂದು ಗ್ಲಾಸ ರಸ ತೆಗೆದು ಮುಂಜಾನೆ ಖಾಲಿ ಹೊಟ್ಟೆಯಲ್ಲಿ 8 ದಿವಸ ಕುಡಿದರೆ ಈ ರೋಗ ನಿವಾರಣೆಯಾಗುತ್ತದೆ.

2) **<u>ಹೊಟ್ಟೆ ಬೇನೆ ಆದಾಗ</u>** :

ಚುಡಿಯಾಲ್ ಪತ್ತವನ್ನು ತಂದು ನೀರಿನ ಸಹಾಯದಿಂದ ಚೆನ್ನಾಗಿ ಕುಟ್ಟಿ ಅರ್ದ ಗ್ಲಾಸ ರಸ ತೆಗೆದು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಮತ್ತು ರಾತ್ರಿ ಊಟವಾದ ನಂತರ ಹೀಗೆ 7 ದಿವಸ ಕುಡಿಯಬೇಕು ಹೊಟ್ಟೆ ಬೇನೆ ನಿವಾರಣೆಯಾಗುತ್ತದೆ.

3) **<u>ಲಕ್ವ ಹೊಡೆದಾಗ</u>** :

ಹುಲಿ ಗಿಡದ ತಪ್ಪಲನ್ನು ತಂದು ನೀರಿನೊಂದಿಗೆ ಚೆನ್ನಾಗಿ ಕುಟ್ಟಬೇಕು. ಒಂದು ತೆಳುವಾದ ಬಟ್ಟೆಯಲ್ಲಿ ಹಾಕಿ ಒಂದು ಗ್ಲಾಸ ರಸ ತೆಗೆದು ನಂತರ ಖಾಲಿ ಹೊಟ್ಟೆಯಲ್ಲಿ ಒಂದು ತಿಂಗಳ ಕಾಲ ಕುಡಿಸಿದರೆ ಈ ರೋಗ ನಿವಾರಣೆಯಾಗುತ್ತದೆ.

4) **<u>ಡೋಗಿ ಹುಣ್ಣು</u>** :

ಬೇವಿನ ಗಿಡದ ಎಲೆಗಳನ್ನು ಚೆನ್ನಾಗಿ ಕುದಿಸಿ ನೆರಳಿನಲ್ಲಿ ಒಣಗಿಸಿ ಆನಂತರ ಕುಟ್ಟಿ ತಲೆ ಮೇಲೆ ಹುಣ್ಣು ಆದ ಜಾಗಕ್ಕೆ ಈ ಚೂರ್ಣವನ್ನು 10 ದಿವಸ ಹಚ್ಚಿದರೆ ಡೋಗಿ ಹುಣ್ಣು ನಿವಾರಣೆಯಾಗುತ್ತದೆ.

5) <u>ನಾಸೂರ ಹುಣ್ಣು ಆದಾಗ</u> :

ಬೇವಿನ ಗಿಡದ ಎಲೆಗಳನ್ನು ಚೆನ್ನಾಗಿ ನೀರಿನೊಂದಿಗೆ ಕುಟ್ಟಬೇಕು. ಚೂರ್ಣ ಮಲಾಮಿನಂತೆ ತಯಾರಿಸಿ ನಾಸೂರ ಹುಣ್ಣು ಆದ ಜಾಗಕ್ಕೆ 8 ದಿವಸ ಹಚ್ಚಿದರೆ ಈ ರೋಗ ನಿವಾರಣೆಯಾಗುತ್ತದೆ.

6) ಹುಣ್ಣು (ಹತ್ತುವುದು) ಆದಾಗ :

ಮಾವಿನ ಗಿಡದ ಎಲೆಗಳನ್ನು ತಂದು ನೀರಿನ ಸಹಾಯದಿಂದ ಚೆನ್ನಾಗಿ ಕುಟ್ಟಿ ಮಲಾಮಿನಂತೆ ತಯಾರಿಸಿ ಹುಣ್ಣು ಆದ ಜಾಗಕ್ಕೆ ಹಚ್ಚಬೇಕು. ಇದನ್ನು ರಾತ್ರಿ ಮಲಗುವಾಗ ಹಚ್ಚಿ ಮಲಗಿಕೊಳ್ಳಬೇಕು. ಹೀಗೆ 7 ದಿನ ಹಚ್ಚಿದರೆ ಹುಣ್ಣು ನಿವಾರಣೆಯಾಗುತ್ತದೆ.

7) ಹೆಣ್ಣು ಮಕ್ಕಳ ರೋಗ ವಿದ್ದಾಗ :

ನೇರಳೆ ಗಿಡದ ಎಲೆಯನ್ನು ತಂದು ನೀರಿನ ಸಹಾಯದಿಂದ ಚೆನ್ನಾಗಿ ಕುಟ್ಟಿ ಇದನ್ನು ಬಿಳಿ ತೆಳುವಾದ ಬಟ್ಟೆಯಲ್ಲಿ ಒಂದು ಗ್ಲಾಸ ರಸ ತೆಗೆದು 15 ದಿವಸ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಕುಡಿದರೆ ಹೆಣ್ಣು ಮಕ್ಕಳ ರೋಗಗಳು ನಿವಾರಣೆಯಾಗುತ್ತವೆ.

8) ಮೂಲವ್ಯಾಧಿ ರೋಗ ಆದಾಗ :

ಅವಲಾ ತಪ್ಪಲನ್ನು ತಂದು ನೀರಿನ ಸಹಾಯದಿಂದ ಚೆನ್ನಾಗಿ ಕುಟ್ಟಿ ಒಂದು ಗ್ಲಾಸ ರಸ ತೆಗೆದು 15 ದಿವಸಗಳು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಕುಡಿದರೆ ಈ ರೋಗ ನಿವಾರಣೆಯಾಗುತ್ತದೆ.

25) **ವಕ್ತಾರರು** : **ಶ್ರೀಮತಿ ಕುಂದನಬಾಯಿ ಗಂಡ ಸುರೇಶಚಂದ್ರ**

ವಯಸ್ಸು : 39 ವರ್ಷ

ವಿಳಾಸ : ಮನೆ ನಂ. 19-2-4, ನ್ಯೂ ಆದರ್ಶ ಕಾಲೋನಿ,

ಏರ್ ಫೋರ್ಸ್ ರಸ್ತೆ, ಬೀದರ.

ಫೋನ್ : 228133

1) **ಎಂ. ಸಿ ಆಗಿ ಹೊಟ್ಟೆ ನೋವು ಇದ್ದಾಗ :**

ರಕ್ತ ಭೂತಾಳೆ ಗಿಡದ ಬೇರನ್ನು ತಂದು ಇದನ್ನು ನೆರಳಿನಲ್ಲಿ ಒಣಗಿಸಿ ಸ್ವಲ್ಪ ತುಂಡು ಮಾಡಿ ಬಾಯಿಯಲ್ಲಿ ಇಟ್ಟುಕೊಂಡು ರಸ ಹೀರಿದರೆ 1 ಗಂಟೆ ಒಳಗಾಗಿ ಕಡಿಮೆಯಾಗುತ್ತದೆ. ಹೆಚ್ಚು ನೋವು ಇದ್ದಾಗ ಇನ್ನೊಂದು ತುಂಡು ಬಾಯಲಿ ಹಿಡಿದು ರಸ ಹೀರಿದರೆ ನೋವು ಮಾಯವಾಗುತ್ತದೆ.

ಪಥ್ಯ : ಆಲ್ಲುಗಡ್ಡೆ ಮತ್ತು ಬದನೆಕಾಯಿ ಉಪಯೋಗಿಸಬಾರದು.

2) **ಮೂರು ತಿಂಗಳಲ್ಲಿ ಋತು ಚಕ್ರ ಆಗದಿದ್ದಾಗ :**

ಕಲೆಂಜಿಕಾ ತೇಲ ಒಂದು ಗ್ಲಾಸ ನೀರನಲ್ಲಿ ಕುದಿಸಿ ಈ ಎಣ್ಣೆಯನ್ನು ಅರ್ಧ ಚಮಚ ಹಾಕಿ ನಂತರ ಎರಡು ಚಮಚ ಜೇನು ತುಪ್ಪ ಹಾಕಿ ಚೆನ್ನಾಗಿ ಕಲಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಮತ್ತು ರಾತ್ರಿ ಊಟವಾದ ನಂತರ ಮಲಗುವಾಗ ಹೀಗೆ ಒಂದು ತಿಂಗಳಗಳ ಕಾಲ ಕುಡಿದರೆ ಹೆಣ್ಣು ಋತುಮತಿಯಾಗುತ್ತಾಳೆ.

ಪಥ್ಯ : ಆಲುಗಡ್ಡೆ ಬದನೆಕಾಯಿ ತಿನ್ನಬಾರದು.

3) **ಬಿಳಿ ಸೆರಗು ಮತ್ತು ಕೆಂಪು ಸೆರಗು ಆದಾಗ :**

ಕಚ್ಚಾ ಪುದೀನಾ, ಕಲೋಚೀಕಾ ತೇಲ, ಅರ್ಧ ಚಮಚ ತೆಗೆದುಕೊಂಡು ಒಂದು ಗ್ಲಾಸ ಬಿಸಿ ಮಾಡಿದ ನೀರಿಗೆ ಹಾಕಿ ಮತ್ತೆ ನೀರು ಅರ್ಧ ಗ್ಲಾಸ ಆಗುವವರೆಗೆ ಕುದಿಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಮತ್ತು ರಾತ್ರಿ ಊಟವಾದ ನಂತರ ಕುಡಿಯಬೇಕು. ಹೀಗೆ 40 ದಿನ ಕುಡಿದರೆ ಈ ರೋಗ ನಿವಾರಣೆಯಾಗುತ್ತದೆ.

4) <u>ಮನುಷ್ಯ ತೆಳ್ಳಗೆ ಆಗಬೇಕಾದರೆ :</u>

ಮಧ್ಯ ರಾತ್ರಿ ಎದ್ದು ಒಂದು ತುಂಬಿದ ತಂಬಿಗೆ ನೀರನ್ನು ತೆಗೆದುಕೊಂಡು ಇದರಲ್ಲಿ ಮೂರು ಚಮಚ ಜೇನುತುಪ್ಪ ಮತ್ತು ಮೂರು ಚಮಚ ನಿಂಬೆ ರಸ ಹಾಕಿ ಚೆನ್ನಾಗಿ ಕಲಸಿ ಕುಡಿಯಬೇಕು. ನಂತರ ಎಷ್ಟು ನೀರು ಕುಡಿಯಬೇಕೆನ್ನುಸುತ್ತದೆಯೋ ಅಷ್ಟು ನೀರು ಕುಡಿದು ನಿದ್ದೆ ಮಾಡಬೇಕು. ಹೀಗೆ ಎರಡು ತಿಂಗಳಗಳ ಕಾಲ ಮಾಡಿದರೆ ದೇಹ ತೆಳುವಾಗುತ್ತದೆ.

5) <u>ರಕ್ತ ಕೆಟ್ಟಾಗ :</u>

ಒಂದು ಗ್ಲಾಸ ನೀರನ್ನು ತೆಗೆದುಕೊಂಡು ಇದರಲ್ಲಿ ૩ ಚಮಚ ಜೇನು ತುಪ್ಪ ಹಾಕಿ-ಚೆನ್ನಾಗಿ ಮಿಶ್ರ ಮಾಡಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಒಂದು ತಿಂಗಳಗಳ ಕಾಲ ಕುಡಿಯಬೇಕು. ಇದರಿಂದ ರಕ್ತ ಶುದ್ಧವಾಗುತ್ತದೆ.

6) <u>ಅರ್ಧ ತಲೆ ನೋವು :</u>

ಅಲ್ಲದ (ಹಸಿ ಶುಂಠಿಯನ್ನು) ಚೆನ್ನಾಗಿ ಕುಟ್ಟಿ ಒಂದು ಬಿಳಿ ಬಟ್ಟೆಯಿಂದ ರಸ ತೆಗೆದು ತಲೆ ನೋವು ಇರುವ ವಿರುದ್ಧ ಭಾಗದ ಮೂಗಿನಲ್ಲಿ ಮೂರು ಹನಿ ರಸ ಹಾಕಿದರೆ ಅರ್ಧ ತಲೆ ನೋವು ನಿವಾರಣೆಯಾಗುತ್ತದೆ.

7) <u>ಮೂಗಿನಲ್ಲಿ ಗುದ್ ಗುದ್ ಅನುತ್ತಿದ್ದಾಗ :</u>

ಹಸಿ ಕೊತ್ತಂಬರಿ ಎಲೆಗಳನ್ನು ತಂದು ಇದರಿಂದ ರಸವನ್ನು ತೆಗೆದು ಬೆರಳಿಗೆ ಹಚ್ಚಿ ಮೂಗಿಗೆ ಒರೆಸಿಕೊಳ್ಳಬೇಕು. ಉಳಿದ ರಸವನ್ನು ತಲೆಗೆ ಹಚ್ಚಿಕೊಳ್ಳಬೇಕು. ಹೀಗೆ ಮಾಡಿದರೆ ಮೂಗಿನಲ್ಲಿ ಇರುವ ರೋಗಗಳು ನಾಶವಾಗುತ್ತವೆ.

8) <u>ಬಾಣತನ ತೊಂದರೆ ಇದ್ದಾಗ :</u>

ದೇಶಿ ಆಕಳ ಹೆಂಡಿ (ಸಗಣಿ) ಯನ್ನು ತಂದು ನೀರಿನಲ್ಲಿ ಹಾಕಿ ಚೆನ್ನಾಗಿ ಕಲಸಿ ಒಂದು ತೆಳುವಾದ ಬಟ್ಟೆಯನ್ನು ತೆಗೆದುಕೊಂಡು ರಸ ಹಿಂಡಬೇಕು. ಒಂದು ಗ್ಲಾಸ್ ಆಕಳ ಹಾಲಿನೊಂದಿಗೆ ರಸವನ್ನು ಬೆರೆಸಬೇಕು. ನಂತರ ಗರ್ಭಿಣಿ ಸ್ತ್ರೀಗೆ ಕೊಟ್ಟರೆ ತಕ್ಷಣವೇ ಅರ್ಧ ಗಂಟೆ ಒಳಗಾಗಿ ಬಾಣತನವಾಗುತ್ತದೆ.

ಉತ್ತಾರಣಿ ಗಿಡದ ಬೇರನ್ನು ತಂದು ಗರ್ಭಿಣಿ ಸ್ತ್ರೀ ಮೊಳಕಾಲು ಮೇಲೆ ಕಟ್ಟಬೇಕು. ಸ್ವಲ್ಪ ಸಮಯದ ನಂತರ ಬಾಣತನ ಆಗುತ್ತದೆ. ಬಾಣತನ ಆದ ಮೇಲೆ ಆ ಬೇರನ್ನು ತಕ್ಷಣವೇ ಬಿಚ್ಚು ಹಾಕಬೇಕು.

9) <u>ತುಟಿ ಒಡೆದರೆ :</u>

ಸಾಸಿವೆ ಎಣ್ಣೆಯನ್ನು ತಂದು ಹೊಕ್ಕಳಿಗೆ ದಿನಕ್ಕೆ ಮೂರು ಸಲ 20 ದಿವಸಗಳ ಕಾಲ ಹಚ್ಚಿದರೆ ತುಟಿ ಒಡೆವುದು ಕಡಿಮೆಯಾಗುತ್ತದೆ.

10) <u>ತಲೆ ಕೂದಲು ಉದರುತ್ತಿದ್ದಾಗ :</u>

ಕೆಂಪು ಕೋತಿಯ ಮಲಾಮು ತಂದು ತಲೆ ಕೂದಲು ಹೋಗುತ್ತಿದ್ದ ಅಥವಾ ಹೊರ ಜಾಗಕ್ಕೆ 15 ದಿವಸ ಹಚ್ಚಿದರೆ ಕೂದಲು ಉದರುವುದು ನಿಲ್ಲುತ್ತದೆ.

26) **ವಕ್ತಾರರು** : **ಶಿವಾಜಿರಾವ ತುಕಾರಾಮ ಚೌವ್ಹಾಣ್**

ವಯಸ್ಸು : 53 ವರ್ಷ

ವಿಳಾಸ : ಶ್ರೀ ಧನವಂತರಿ ಆಯುರ್ವೇದಿಕ ಚಿಕಿತ್ಸಾಲಯ

ಮ.ನಂ. 1-5-49/50, ಪಾಠಕ ಗಲ್ಲಿ, ಬೀದರ.

ಫೋನ್ : 228631

1) **ಆನೆ ಕಾಲು ಆದಾಗ** :

ಬಾಳಹರಡಾ 20 ಗ್ರಾಂ. ತೆಗೆದುಕೊಂಡು ಗೋಮೂತ್ರ 100 ಗ್ರಾಂ. ಇವರೆಡನ್ನು ಚೆನ್ನಾಗಿ ಕಲಸಿ ರಸವನ್ನು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಮತ್ತು ರಾತ್ರಿ ಊಟವಾದ ನಂತರ 4 ತಿಂಗಳಗಳು ಕುಡಿದರೆ ಆನೆಕಾಲು ರೋಗ ನಿವಾರಣೆಯಾಗುತ್ತದೆ.

2) **ಮೂಲವ್ಯಾಧಿ** :

ಹಿಂಗಾಷ್ಟಕ ಚೂರ್ಣ 5 ಗ್ರಾಂ. ಉಗುರು ಬೆಚ್ಚಗಿರುವ ಒಂದು ಗ್ಲಾಸ ನೀರಿನಲ್ಲಿ ಕಲಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಕುಡಿಯಬೇಕು. ಅನರ ಭಾಲ್ 20 ಗ್ರಾಂ. ಬೆಲ್ಲ 40 ಗ್ರಾಂ. ತೆಗೆದುಕೊಂಡು ಒಂದು ಕಡೆ ಕಲಸಿ ಗುಳಿಗೆಯನ್ನು ತಯಾರಿಸಿಕೊಂಡು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಒಂದು ಗುಳಿಗೆ ಮಧ್ಯಾಹ್ನ ಒಂದು ಗುಳಿಗೆ ಸಾಯಂಕಾಲ ಊಟವಾದ ನಂತರ ಒಂದು ಗುಳಿಗೆ, ಹೀಗೆ ಏಳು ದಿನ ಈ ಗುಳಿಗೆ ನುಂಗಿದರೆ ಈ ರೋಗ ನಿವಾರಣೆಯಾಗುತ್ತದೆ.

3) **ಕಾಮಾಲೆ ರೋಗ ವಿದ್ದಾಗ** :

ತಿನ್ನುವ ಸೋಡಾ 3 ಗ್ರಾಂ. ತೆಗೆದುಕೊಂಡು 100 ಗ್ರಾಂ. ಮೊಸರಿಗೆ ಕಲಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ 7 ದಿನ ಕುಡಿದರೆ ಕಾಮಾಲೆ ರೋಗ ನಿವಾರಣೆಯಾಗುತ್ತದೆ.

4) **ಅರ್ಧ ತಲೆ ನೋವು ಇರುವಾಗ** :

ಲಕ್ಕಿ ತಪ್ಪಲನ್ನು ಚೆನ್ನಾಗಿ ಕುಟ್ಟಿ ಬಿಳಿಯಾದ ತೆಳ್ಳಗಿರುವ ಬಟ್ಟೆಯಲ್ಲಿ ಹಾಕಿ ಹಿಂಡಬೇಕು ರಸ ಬರುತ್ತದೆ. ಅರ್ಧ ತಲೆ ನೋವು ಇರುವ ವಿರುದ್ಧ ಭಾಗದ ಮೂಗನಲ್ಲಿ ಮೂರು ಹನಿ ಹಾಕಿದರೆ ಜಿಡ್ಡು ಬರುತ್ತದೆ. ಕಾಮಾಲೆ ರೋಗ ಕಡಿಮೆಯಾಗುತ್ತದೆ.

5) <u>ನಾಅಗೆಗೆ ಗುಳ್ಳೆ ಆದಾಗ</u> :

ಲಕ್ಕಿ ತಪ್ಪಲನ್ನು ತಂದು ಚೆನ್ನಾಗಿ ಕುದಿಸಿ ಆರಿಸಿ ಈ ನೀರಿನಿಂದ ಬಾಯಿ ಮುಕ್ಕಳಿಸಬೇಕು. ಹೀಗೆ ಪ್ರತಿ ದಿನ ಮುಂಜಾನೆ ಮಾಡಿದರೆ ಈ ರೋಗ ಮಾಯವಾಗುತ್ತದೆ.

6) <u>ದಮ್ಮು ಮತ್ತು ಕೆಮ್ಮು ಬಂದಾಗ</u> :

ಮೆಂತ್ಯೆ 20 ಗ್ರಾಂ. ತೆಗೆದುಕೊಂಡು ನೀರಿನಲ್ಲಿ ಚೆನ್ನಾಗಿ ಕುದಿಸಿ. ಜೇನುತುಪ್ಪ 20 ಗ್ರಾಂ. ತೆಗೆದುಕೊಂಡು ದಿನಾಲು ಮುಂಜಾನೆ 2 ಚಮಚ ಮೆಂತ್ಯೆ ನೀರಿನ ರಸದಲ್ಲಿ ಒಂದು ಚಮಚ ಜೇನುತುಪ್ಪ ಕಲಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಸೇವಿಸಬೇಕು ಮತ್ತು ರಾತ್ರಿ ಊಟವಾದ ನಂತರ ಸೇವಿಸಬೇಕು. ಹೀಗೆ ಈ ರೋಗ ಕಡಿಮೆಯಾಗುವವರೆಗೆ ಸೇವಿಸಿದರೆ ಈ ರೋಗ ಮಾಯವಾಗುತ್ತದೆ.

7) <u>ಮೊಳಕಾಲು ನೋವು ಇದ್ದಾಗ</u> :

ದಿನಾಲು 5 ಮೇಂತ್ಯೆವನ್ನು ಚೂರ್ಣ ಮಾಡಿ ತಿಂದು ನೀರು ಕುಡಿಯಬೇಕು. ಹೀಗೆ ಮುಂಜಾನೆ ಮತ್ತು ರಾತ್ರಿ ಒಂದು ತಿಂಗಳು ಸೇವಿಸಿದರೆ ಈ ರೋಗ ಮಾಯವಾಗುತ್ತದೆ.

8) <u>ಹಾವು ಅಥವಾ ಚೇಳು ಕಡಿದಾಗ</u> :

ಬೆಳ್ಳಗಡ್ಡಿಯನ್ನು ಸುಲಿದು ಎಳಸು ತೆಗೆದು ಇದನ್ನು ಚೆನ್ನಾಗಿ ಕುಟ್ಟಿ ಒಂದು ಬಿಳಿ ತೆಳುವಾದ ಬಟ್ಟೆಯಲ್ಲಿ ಹಾಕಿ ಹಿಂಡಿ 20 ಗ್ರಾಂ. ರಸ ತೆಗೆದು ಹಾವು ಅಥವಾ ಚೇಳು ಕಡಿದ ಜಾಗಕ್ಕೆ ಹಚ್ಚಬೇಕು. ನಂತರ 20 ಗ್ರಾಂ. ಈ ರಸವನ್ನು ಜೇನುತುಪ್ಪದಲ್ಲಿ ಮಿಶ್ರಣಮಾಡಿ ರೋಗಿಗೆ ಕುಡಿಸಬೇಕು. ಹೀಗೆ ಕುಡಿಸಿದರೆ ವಿಷ ಇಳಿದು ಉರಿ ಕಡಿಮೆಯಾಗುತ್ತದೆ.

ತುಳಸಿ ಗಿಡದ ಬೇರನ್ನು ತಂದು ನೀರಿನ ಸಹಾಯದಿಂದ ಸೋಸಿ, ಗಂಧವನ್ನು ತೆಗೆದು ಹಾವು ಅಥವಾ ಚೇಳು ಕಡಿದ ಜಾಗಕ್ಕೆ ಹಚ್ಚಬೇಕು. ಆನಂತರ ತುಳಸಿ ಗಿಡದ ತಪ್ಪಲನ್ನು ತಿನ್ನಬೇಕು. ಇದರಿಂದ ವಿಷ ಇಳಿದು ಉರಿ ಕಡಿಮೆಯಾಗಿ ರೋಗ ನಿವಾರಣೆಯಾಗುತ್ತದೆ.

9) <u>ಗಂಟಲ ಬೇನೆ</u> :

ಬೆಳ್ಳಗಡ್ಡಿಯನ್ನು ಸುಲಿದು ಎಳಸು ತೆಗೆದು ಚೆನ್ನಾಗಿ ಅರೆದು ಮಲಾಮಿನಂತೆ ಮಾಡಿ ಗಂಟಲು ನೋವು ಇರುವ ಜಾಗಕ್ಕೆ ಹಚ್ಚಬೇಕು. ಹೀಗೆ 3-4 ದಿವಸ ಹಚ್ಚುವುದರಿಂದ ರೋಗ ಮಾಯವಾಗುತ್ತದೆ.

10) **ಟೊಂಕ ನೋವು ಆದಾಗ** :

ಧತ್ತರಿ ಗಿಡದ ತಪ್ಪಲನ್ನು ತಂದು ಚೆನ್ನಾಗಿ ಕುಟ್ಟಿ 400 ಗ್ರಾಂ. ರಸ ತೆಗೆದು ಅಫೀಮು 10 ಗ್ರಾಂ. ಅಡಿಗೆ ಉಪ್ಪು 50 ಗ್ರಾಂ. ಇವೆಲ್ಲವನ್ನು ಮಿಶ್ರಣಮಾಡಿ ಬೆಂಕಿ ಮೇಲೆ ಇಡಬೇಕು. ಚೆನ್ನಾಗಿ ಕುದಿಸಿದ ನಂತರ ಗಂಧದ ತರಹ ಆಗುತ್ತದೆ. ಆಗ ಅದರಿಂದಲೇ ಮೂರು ವೇಳೆ 7 ದಿನ ಟೊಂಕ ನೋವು ಇರುವ ಜಾಗದ ಮೇಲೆ (ಮಾಲಿಸ) ಒರೆಸಬೇಕು. ಟೊಂಕನೋವು ನಿವಾರಣೆಯಾಗುತ್ತದೆ.

11) **ಮಧುಮೇಹ ಆದಾಗ** :

ಜಾಮುನ, ಮಾವಿನ ಗಿಡದ ಸಣ್ಣ ಕಾಯಿ, ಬಿಲ್ವ ಪತ್ರಿ ಗಿಡದ ಕಾಯಿಯ ಒಳಗಿನ ತಿರುಳು, ಈ ಎಲ್ಲವನ್ನು ಒಂದು ಕಡೆ ಸೇರಿಸಿ ಚೆನ್ನಾಗಿ ಕುಟ್ಟಿ ಕಲೆಸಿ ಒಂದು ಚಲಿಗೆಯಲ್ಲಿ ಹಾಕಿ ಅರ್ಧ ಚಲಿಗೆ ನೀರಲ್ಲಿ ಚೆನ್ನಾಗಿ ಕಲೆಸಿ ಮೇಲೆ ಮುಚ್ಚಬೇಕು. 24 ಗಂಟೆ ನಂತರ ತೆಗೆದು ಇದರ ಮೇಲೆ ನಿಂತ ನೀರನ್ನು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಮತ್ತು ರಾತ್ರಿ ಊಟವಾದ ನಂತರ 3 ದಿನ ಕುಡಿದರೆ ಈ ರೋಗ ಮಾಯವಾಗುತ್ತದೆ.

12) **ಮೂಗಿನಲ್ಲಿ ಗುದ್ ಗುದ್ ಮಾಡುತ್ತಿದ್ದಾಗ** :

ಕುಸುಬಿ ಎಣ್ಣೆಯನ್ನು ತೆಗೆದುಕೊಂಡು 4-5 ಹನಿ ಮೂಗಿನಲ್ಲಿ ಹಾಕುವುದರಿಂದ ಮೂಗಿನಲ್ಲಿನ ಗುದ್ ಗುದ್ ರೋಗ ನಿವಾರಣೆಯಾಗುತ್ತದೆ.

13) **ಕೂದಲು ಉದುರುತ್ತಿದ್ದಾಗ** :

ಆನೆ ವಸಡನ್ನು ತಂದು ಚೆನ್ನಾಗಿ ಸುಟ್ಟಿ ಇದನ್ನು ಕುಟ್ಟಿ ಪೌಡರನ್ನು ಮಾಡಿ ಅದರ ಜೊತೆಯಲ್ಲಿ ಅಷ್ಟೇ ಪ್ರಮಾಣದ ರಸವತ ಹಾಕಿ ಚೆನ್ನಾಗಿ ಕಲಸಿ ಈ ಚೂರ್ಣವನ್ನು ಆಡಿನ ಹಾಲಿನಲ್ಲಿ ಹಾಕಿ ಚೆನ್ನಾಗಿ ಕಲಸಿ ಮಲಾಮಿನಂತೆ ಮಾಡಿ ಕುದಲು ಹೋದ ಭಾಗಕ್ಕೆ ದಿನಕ್ಕೆ 3 ಸಲದಂತೆ ಹಚ್ಚಬೇಕು ಇದರಿಂದ ಕೂದಲು ಉದುರುವುದು ನಿಲ್ಲುತ್ತದೆ.

14) **ಕಿವಿ ಕಿವುಡ ಆದಾಗ** :

ಉಳ್ಳಗಡ್ಡಿಯನ್ನು ಕುಟ್ಟಿ ರಸವನ್ನು ತೆಗೆದು, ಬೇವಿನ ಎಣ್ಣೆಯೊಂದಿಗೆ ಸಮ ಪ್ರಮಾಣದಲ್ಲಿ ಮಿಶ್ರಮಾಡಿ ದಿನಕ್ಕೆ 2 ಸಲದಂತೆ ಎರಡು ತಿಂಗಳು ಈ ಎಣ್ಣೆ ಕಿವಿಯಲ್ಲಿ ಹಾಕಬೇಕು. ಹೀಗೆ ಹಾಕಿದರೆ ಕಿವಿ ಕೇಳಿಸುತ್ತದೆ.

27) **ವಕ್ತಾರರು** : **ಅಂಬಾಜಿ ಪೆಂಟಪ್ಪ ದುಬಲಗುಂಡೆ**

ವಯಸ್ಸು : 55 ವರ್ಷ

ವಿಳಾಸ : ಮ.ನಂ. 5, ಅೀಡಕರ್ ಕಾಲೋನಿ,

ಮೈಲೂರ ರಸ್ತೆ, ಬೀದರ.

ಫೋನ್ : 221873

1) **ಲಕ್ವಾ ಹೊಡೆದಾಗ** :

ಜಾಜ ಕಾಯಿ ವಾರಕ್ಕೆ ಮೂರು ತಿನ್ನಬೇಕು. ಮಾಹಾ ರಸನಾರಿ ಕಾಡದ ರಸವನ್ನು ರಾತ್ರಿ ಮತ್ತು ಮುಂಜಾನೆ ಎರಡು – ಎರಡು ಚಮಚ ಕುಡಿಯಬೇಕು. ಯೌವನ ಅವಸ್ಥೆಯಲ್ಲಿ ಇದ್ದಾಗ ಮಾಹಾ ಚಿಂತಾಮಣಿ ರಸ ದಿನಕ್ಕೆ ಒಂದು ಚಮಚ ಕುಡಿಯಬೇಕು. ಸ್ವಲ್ಪ ಇಳಿ ವಯಸ್ಸು ಇದ್ದಾಗ ದಿನಕ್ಕೆ ಒಂದು ಚಮಚ ಸೇವಿಸಬೇಕು. ಇಳಿ ವಯಸ್ಸು (ಮುದುಕ) ಆದಾಗ ಏಕಾಂಗಿ ವೀರರಸ 1 ಚಮಚ ಮುಂಜಾನೆ ಕುಡಿಯಬೇಕು. ಹೀಗೆ 21 ದಿವಸಗಳವರೆಗೆ ಮಾಡಿದರೆ ಲಕ್ವ ರೋಗ ಮಾಯವಾಗುತ್ತದೆ.

ಪಥ್ಯ: ಮೈಅಗೆ ನೆರಳು ಬೀಳಬಾರದು. ಗಾಳಿಗೆ ಹೋಗಬಾರದು. ಜಿಡ್ಡು ಪದಾರ್ಥ ತಿನ್ನಬಾರದು.

2) **ಕಾಮಾಲೆ ಆದಾಗ** :

ಒಂದು ಗಜಗವನ್ನು ತೆಗೆದುಕೊಂಡು ಅದನ್ನು ಒಡೆದು ಅದರಲ್ಲಿನ ಬೀಜ (ಪಲಕಾ) ತೆಗೆದು. ಬೀಜ ಸ್ವಲ್ಪ ಒಡೆದು ಅನ್ನದಲ್ಲಿ ಗುಳಿಗೆಯನ್ನು ಮಾಡಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಸೇವಿಸಬೇಕು. ಒಂದೇ ಗಜಗದಲ್ಲಿನ ಬೀಜ 7 ದಿನ ಅನ್ನದ ಜೊತೆ ಗುಳಿಗೆಯನ್ನು ಮಾಡಿ ತಿಂದರೆ ಕಾಮಾಲೆ ರೋಗ ಹೇಳ ಹೆಸರಿಲ್ಲದಂತೆ ಮಾಯವಾಗುತ್ತದೆ.

3) **ಲಕ್ವ ಹೊಡೆದು ಕೈ ಕಾಲು ಬಿದ್ದಾಗ** :

ಅಡಿತಂಬಾಕು ಗಿಡದ ಎಲೆಗಳನ್ನು ತಂದು ಪಾದ ರಸದಲ್ಲಿ ಈ ಎಲೆಗಳನ್ನು ಒಂದು ಬಟ್ಟಲಲ್ಲಿ ಕರಗಿಸಿ. ಕರಗಿದ ನಂತರ ಈ ರಸವನ್ನು ಕೈ ಅಥವಾ ಕಾಲು ಬಿದ್ದ ಕಡೆ ಚೆನ್ನಾಗಿ ಒರೆಸಬೇಕು. ಹೀಗೆ ಒರೆಸಿದರೆ ರಕ್ತ ಸರಳವಾಗಿ ಕೈ ಕಾಲುಗಳಲ್ಲಿ ಶಕ್ತಿ ಬಂದು ಈ ರೋಗ ನಿವಾರಣೆಯಾಗುತ್ತದೆ.

ವಿ.ಸೂಚನೆ : ಇದನ್ನು ವರೆಸುವಾಗ ಮೈ ಮೇಲೆ ಬಂಗಾರ ಇರಬಾರದು. ಇದ್ದರೆ ಬೆಳ್ಳಗೆ ಆಗುತ್ತದೆ.

4) <u>ಬಿಳಿ ಸೆರಗು :</u>

ಪ್ರದಾಂತಕ ರಸವನ್ನು ತೆಗೆದುಕೊಂಡು ಇದನ್ನು ಅಕ್ಕಿ ತೊಳೆದ ನೀರಿನಲ್ಲಿ ಹಾಕಿ ಚೆನ್ನಾಗಿ ಕಲಸಿ ಕುಡಿಯಬೇಕು. ಮತ್ತು ಪತ್ರಾಂಕ ಸಾವ ಟಾನಿಕ ದಿನಾಲು ಮುಂಜಾನೆ ಒಂದು ಚಮಚ 7 ದಿವಸ ಕುಡಿದರೆ ಈ ರೋಗ ಮಾಯವಾಗುತ್ತದೆ.

5) <u>ಕೆಂಪು ಸೆರಗು :</u>

ಪ್ರದಾಂತಕ ರಸವನ್ನು ಅಕ್ಕಿ ತೊಳೆದ ನೀರಿನಲ್ಲಿ ಹಾಕಿ ಚೆನ್ನಾಗಿ ಕಲಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಕುಡಿಯಬೇಕು. ಮತ್ತು ಪತ್ರಾಂಕ ಸಾವ ಟಾನಿಕ ದಿನಾಲು ಮುಂಜಾನೆ ಒಂದು ಚಮಚ ಕುಡಿಯಬೇಕು. ಮತ್ತು ಫೇಮಿಟಾಬ್ ರಸವನ್ನು ದಿನಾಲು 2 ಹೊತ್ತು ನೀರಿನ ಸಹಾಯದೊಂದಿಗೆ 7 ದಿವಸ ಕುಡಿದರೆ ಈ ರೋಗ ನಿವಾರಣೆಯಾಗುತ್ತದೆ.

6) <u>ಇಸಬು ಇದ್ದಾಗ :</u>

ಮೃದಾರ ಸಿಂದ್ 1 ತೊಲೆ. ಪಚಿಕಪೂರ 100 ಗ್ರಾಂ. ಬಿಳಿ ಕಾಚು 100 ಗ್ರಾಂ. ಕರ್ಪೂರ ಪುಡಿ 2. ಇವೆಲ್ಲವನ್ನು ಚೆನ್ನಾಗಿ ಕುಟ್ಟಿ ಪೌಡರ ತಯಾರಿಸಿ 100 ಗ್ರಾಂ. ಬೆಣ್ಣೆಯಲ್ಲಿ ಕಡ್ಡಿಯಿಂದ ಕಲಿಸಬೇಕು. ನಂತರ ಇಸಬು ಇದ್ದ ಜಾಗ ಚೆನ್ನಾಗಿ ತೊಳೆದು ಕೋಳಿ ಫಂಕದ ಕಡ್ಡಿಯಿಂದ ಇಸುಬು ಇದ್ದ ಜಾಗಕ್ಕೆ ದಿನಾಲು ಮುಂಜಾನೆ ಹಚ್ಚಿದರೆ ಈ ರೋಗ ಮಾಯವಾಗುತ್ತದೆ.

7) <u>ಗಜಕರ್ಣ :</u>

ರಂಗವರ್ಮ ಮತ್ತು ತೊಟಿಯಾ ಇವೆರಡನ್ನು ಚೆನ್ನಾಗಿ ಕಲಸಿ ಗಜಕರ್ಣ ಇದ್ದ ಜಾಗಕ್ಕೆ ಹಚ್ಚಿದರೆ ಒಳಗೆ ಇರುವ ಹುಳ್ಳು ರೋಗ ನಾಶವಾಗಿ ಗಜಕರ್ಣ ನಿವಾರಣೆಯಾಗುತ್ತದೆ.

8) <u>ಮೆದಳು ತೊಂದರೆ ಇದ್ದಾಗ (ಮಾತನಾಡುವಾಗ) :</u>

ಶಂಖಪುಷ್ಠಿ ಗುಳಿಗೆಯನ್ನು ದಿನಕ್ಕೆ 2 ಸಲ ಮುಂಜಾನೆ ಮತ್ತು ರಾತ್ರಿ ಮಲಗುವಾಗ ತೆಗೆದುಕೊಂಡರೆ ಮೆದಳು ತೊಂದರೆಯಿಂದ ಮತ್ತು ಚೆನ್ನಾಗಿ ಮಾತು ಆಡದಿದ್ದರೆ ಈ ಗುಳಿಗೆ ಕೊಟ್ಟರೆ ತೊಂದರೆ ನಿವಾರಣೆಯಾಗುತ್ತದೆ.

9) <u>ಗರ್ಭ ಧಾರಣೆಯಾಗದಿದ್ದಾಗ :</u>

ಹೆಣ್ಣು ಋತುಮತಿಯಾದ ನಂತರ ದಾಸಿವಾಳ ಗಿಡದ 3 ಹೂ, ಖಡಿಸಕ್ಕರೆ 50 ಗ್ರಾಂ. ಇವೆರಡೂ ಒಂದು ಗ್ಲಾಸ್ ನೀರಿನಲ್ಲಿ ಕಲಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಕುಡಿಯಬೇಕು. ಹೀಗೆ 7 ದಿವಸ ಋತುಮತಿಯಾದ ನಂತರ 5 ತಿಂಗಳು ಕುಡಿದರೆ ಹೆಣ್ಣು ಗರ್ಭಧರಿಸುತ್ತಾಳೆ.

ಪಥ್ಯ : ಗರ್ಮಿ ಪದಾರ್ಥ ಸೇವಿಸಬಾರದು.

10) <u>ಮೂಲ ವ್ಯಾಧಿ :</u>

ಆರೋಗ್ಯ ವಾರ್ಧನಿ ಭಟ್ಟ ಮುಂಜಾನೆ ಒಂದು ಚಮಚ ತೆಗೆದುಕೊಳ್ಳಬೇಕು. ಅಭಾಯಾ ಅರಿಷ್ಠ ಮುಂಜಾನೆ, ಮಧ್ಯಾಹ್ನ, ಸಂಜೆ ತೆಗೆದುಕೊಳ್ಳಬೇಕು. ತ್ರಿಫಲ್ ಗುಗ್ಗಳ ಮಧ್ಯಾಹ್ನ ಒಂದು ಚಮಚ ತೆಗೆದುಕೊಳ್ಳಬೇಕು. ಕಾಸಿ ನಾಥಿ ತೇಲ್ ಮೂಲವ್ಯಾಧಿ ಮುಳ್ಳಿಗೆ ಹಚ್ಚಬೇಕು. ಹೀಗೆ 15 ದಿವಸಗಳ ಕಾಲ ಮಾಡಿದರೆ ಮೂಲವ್ಯಾಧಿ ರೋಗ ನಿವಾರಣೆಯಾಗುತ್ತದೆ.

11) <u>ರಕ್ತ ಮೂಲವ್ಯಾಧಿ :</u>

ಖಿಸೆ ಭಂದಿಸ್‌ಕುನ್ ಗುಳಿಗೆ 8 ತೆಗೆದುಕೊಂಡು ಪ್ರತಿದಿನ ಮುಂಜಾನೆ, ಮಧ್ಯಾಹ್ನ, ರಾತ್ರಿ ಒಂದೊಂದು ಗುಳಿಗೆ 3 ದಿನ ತೆಗೆದುಕೊಂಡರೆ ರಕ್ತ ಮೂಲವ್ಯಾಧಿ ರೋಗ ನಿವಾರಣೆಯಾಗುತ್ತದೆ.

12) <u>ಮೈ ಸುಟ್ಟಾಗ :</u>

ತಲೆಯ ಮೇಲಿನ ಕುದಲನ್ನು ತೆಗೆದು ನೀರಿನ ಸಹಾಯದಿಂದ ಚೆನ್ನಾಗಿ ಅರೆದು, ಗಂಧ ತೆಗೆದು ಸುಟ್ಟ ಗಾಯಗಳಿಗೆ ಹಚ್ಚಿದರೆ ಗಾಯ ಮಾಯವಾಗುತ್ತದೆ.

13) <u>ಗರ್ಮಿ ಆದಾಗ :</u>

ಹವಳದ ಗಡ್ಡೆಯನ್ನು ತಂದು ನೆರಳಿನಲ್ಲಿ ಒಣಗಿಸಿ ಚೆನ್ನಾಗಿ ಕುಟ್ಟಿ 250 ಗ್ರಾಂ. ಪೌಡರನ್ನು ತೆಗೆದು, 400 ಗ್ರಾಂ. ಉಮ್ರಾವತಿ ಸಕ್ಕರೆಯೊಂದಿಗೆ ಚೆನ್ನಾಗಿ ಕಲಸಿ 3, 3 ಚಮಚ ಮುಂಜಾನೆ, ಮಧ್ಯಾಹ್ನ ಮತ್ತು ರಾತ್ರಿ ತಿಂದು ನಂತರ ನೀರು ಕುಡಿಯಬೇಕು. ಹೀಗೆ 5 ದಿವಸ ತಿಂದರೆ ಗರ್ಮಿ ರೋಗ ಮಾಯವಾಗುತ್ತದೆ.

14) <u>ಸಕ್ಕರೆ ಬೇನೆ</u> :

ದಿನಾಲು 5 ಬಿಲ್ವ ಪತ್ರಿ ಗಿಡದ ಎಲೆಗಳನ್ನು ದಿನಾಲು 6 ತಿಂಗಳುಗಳ ಕಾಲ ತಿಂದರೆ ಸಕ್ಕರೆ ರೋಗ ಕಡಿಮೆಯಾಗುತ್ತ ಬರುತ್ತದೆ.

15) <u>ಸರಾಯಿ ಬಿಡಿಸುವುದಕ್ಕಾಗಿ</u> :

ಹರಬನ ಡಿಟಸ್ ದಿನಕ್ಕೆ ಎರಡು ಸಲ ನೀರಿನೊಂದಿಗೆ ತೆಗೆದುಕೊಳ್ಳಬೇಕು. ಹೀಗೆ 5 ತಿಂಗಳು ತೆಗೆದುಕೊಂಡರೆ ಊಟದ ಪ್ರಮಾಣ ಹೆಚ್ಚಾಗಿ ಸರಾಯಿ ತಾನಾಗಿಯೇ ಬಿಡುತ್ತಾರೆ.

16) <u>ಮಲಜೇರಿ ಆದಾಗ</u> :

ನೆಲದ ಮೇಲೆ ಉಪ್ಪು, ಅರಶಿಣ ಮತ್ತು ನೀರು ಹಾಕಿ ಸ್ವಲ್ಪ ಅದಕ್ಕೆ ಕೈಯಿಂದ ತಿಕ್ಕಿ ನಂತರ ಮಲಜೇಲಿಯಿಂದ ಉಬ್ಬಿದ ಜಾಗಕ್ಕೆ 3 ದಿವಸ ಹಚ್ಚಿದರೆ ಈ ರೋಗ ನಿವಾರಣೆಯಾಗುತ್ತದೆ.

17) <u>ತೊಡ್ಡು ಮೇಲು ಕೆಳಗೆ ಆದಾಗ</u> :

ವೃದ್ಧಿ ವಾದಿಕಾ ಭಟ ಗುಳಿಗೆಯನ್ನು ತೆಗೆದುಕೊಂಡು ಮುಂಜಾನೆ ಒಂದು ರಾತ್ರಿ ಮಲಗುವಾಗ ಒಂದು ಗುಳಿಗೆ ತಿನ್ನಬೇಕು. ತೊಡ್ಡಿಗೆ ಸಂಧಿವಾಧಿ ಎಣ್ಣೆ 7 ದಿವಸ ಹಚ್ಚಿದರೆ ಈ ರೋಗ ನಿವಾರಣೆಯಾಗುತ್ತದೆ.

18) <u>ಕೀಲು ನೋವು</u> :

ಔಡಲ ಎಣ್ಣೆ 100 ಗ್ರಾಂ. ಇದರಲ್ಲಿ ನಿಂಬೆರಸ 25 ಗ್ರಾಂ. ಎರಡು ಕರ್ಪೂರ ಸಣ್ಣ ಪುಡಿ ಕಲಸಿ ನಂತರ ಒಲೆಯ ಮೇಲೆ ಇಟ್ಟು ಮಂದಾಗ್ನಿಯಿಂದ ಕಾಯಿಸಬೇಕು. ಅದು ಮಲಾಮಿನಂತೆ ಆಗುತ್ತದೆ. ಆಗ ಒಲೆಯ ಮೇಲಿಂದ ತೆಗೆದು ಆರಿಸಿ ಕೀಲು ನೋವು ಇರುವ ಜಾಗಕ್ಕೆ 7 ದಿವಸ ಹಚ್ಚಿದರೆ ಸಳಕಿ ರೋಗ, ಕೀಲು ನೋವು ಇವು ಮಾಯವಾಗುತ್ತವೆ.

19) <u>ನಪುಂಸಕತ್ವ ಇದ್ದಾಗ</u> :

ತೋಟಿಲು ಬಳ್ಳಿಯ ತೊಗಟೆಯನ್ನು ನೀರಿನ ಸಹಾಯದಿಂದ ಚೆನ್ನಾಗಿ ಕುಟ್ಟಿ ಒಂದು ಬಿಳಿ ತೆಳುವಾದ ಬಟ್ಟೆಯಲ್ಲಿ ಹಾಕಿ 250 ಗ್ರಾಂ. ರಸ ಹಿಂಡಿ ಉಮ್ರಾವತಿ ಸಕ್ಕರೆ 50 ಗ್ರಾಂ. ಖಡಿಸಕ್ಕರೆ 50 ಗ್ರಾಂ. ಖೈ ಜೀರಿಗೆ 50 ಗ್ರಾಂ. ಇವೆಲ್ಲವನ್ನು ಕಲಸಿ ಏಳು ದಿವಸ ಮುಂಜಾನೆ ಮಧ್ಯಾಹ್ನ, ರಾತ್ರಿ, ಕುಡಿದರೆ ಈ ರೋಗ ನಿವಾರಣೆಯಾಗುತ್ತದೆ.

ಪಥ್ಯ : ಒಂದು ತಿಂಗಳು ಸ್ತ್ರೀ ಸಂಪರ್ಕ ಹೊಂದಬಾರದು.

೨೦) <u>ಹಲ್ಲು ಬೇನೆ ಇದ್ದಾಗ :</u>

ಅಡಿ ಔಡಲ ಗಿಡದ ಈ ಹಾಲಿನಿಂದ ಹಲ್ಲನ್ನು ಮೂರು ದಿವಸ ತಿಕ್ಕಿದರೆ ಹಲ್ಲು ನೋವು ನಿವಾರಣೆಯಾಗುತ್ತದೆ. ಮಧ್ಯದಲ್ಲಿ ನಪುಂಸಕತ್ವ ಬಂದಾಗ.

ಹಜ್ಜೆ ಮಾಸಿಕ ತಿಲಾಯಿ ಅಂಬಾರಿ ಅದರಕ, ಮಕ್ಕರ ಧ್ವಜ, ಸ್ವರ್ಣ ಮಕ್ಕರ ಧ್ವಜ, ಪೂಣಚಂದ್ರ ರಸ, ಮಸ್ಲಿ ಪಾಕಾಜ, ಸೆಬಾ ಜವಾರ ಇವೆಲ್ಲ 50 ಗ್ರಾಂ. ತೆಗೆದುಕೊಂಡು ಚೆನ್ನಾಗಿ ಕುಟ್ಟಿ ಚೂರ್ಣ ತಯಾರಿಸಿ 21 ದಿವಸ ಮುಂಜಾನೆ ದಿನಾಲು 2 ಚಮಚ ತಿಂದರೆ ನಪುಂಸಕತ್ವ ನಿವಾರಣೆಯಾಗುತ್ತದೆ.

28) **ವಕ್ತಾರರು** : **ಸೈಯದ್ ಶಾ ದುರ್ವೇಶ ಖಾದ್ರಿ**

ವಯಸ್ಸು : 39 ವರ್ಷ

ವಿಳಾಸ : ಮ.ನಂ. 5-3-100, ಗೋಲೇ ಖಾನಾ,

ಖಾದ್ರಿಪುರಾ, ಬೀದರ.

ಫೋನ್ : 230926

1) **ಕಾಮಣಿ ಆದಾಗ** :

ಖಸೋಂದಿ ಗಿಡದ ಏಳು ಎಲೆಗಳನ್ನು ಅದರಲ್ಲಿ 4 ಕಿ ಮೆಣಸು ಹಾಕಿ ಇವೆರಡೂ ಚೆನ್ನಾಗಿ ಕುಟ್ಟಿ 250 ಗ್ರಾಂ. ನೀರಿನೊಂದಿಗೆ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಕುಡಿಸಬೇಕು. ಹಾಗೂ ರಾತ್ರಿ ಊಟವಾದ ನಂತರ ಹೀಗೆ 3-7 ದಿವಸ ಕುಡಿಸುವುದರಿಂದ ಈ ರೋಗ ನಿವಾರಣೆಯಾಗುತ್ತದೆ.

ಪಥ್ಯ: ಎಣ್ಣೆ ಪದಾರ್ಥ ತಿನ್ನಬಾರದು.

2) **ಲಕ್ವ ಹೊಡೆದಾಗ** :

ಕರಿ ಮೆಣಸು 50 ಗ್ರಾಂ. ಹಬ್ಬೆ ಅಜರಕಿ 50 ಗ್ರಾಂ. ಭಜಿ 50 ಗ್ರಾಂ. ಇವೆಲ್ಲವನ್ನು ಬೇರೆ ಬೇರೆಯಾಗಿ ಕುಟ್ಟಿ ಜೇನು ತುಪ್ಪ ಕಲೆಸಿ ಒಂದಡೆ ಕಲಸಿ ಒಳ್ಳೆಯ ಶುದ್ಧವಾದ ಡಬ್ಬಿಯಲ್ಲಿ ಹಾಕಿ ತೊಗರೆ ಬೆಳೆಯಷ್ಟು ಗುಳಿಗೆಯನ್ನು ಮಾಡಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಒಂದು ಗುಳಿಗೆ ರಾತ್ರಿ ಊಟವಾದ ನಂತರ ಒಂದು ಗುಳಿಗೆ, ಹೀಗೆ ರೋಗ ಕಡಿಮೆಯಾಗುವವರೆಗೆ ಸೇವಿಸಿದರೆ ಈ ರೋಗ ನಿವಾರಣೆಯಾಗುತ್ತದೆ.

ಕುಡಿಯಲು :- ಜೇನುತುಪ್ಪ 1 ಕಿಲೋ. ನೀರು 2 ಲೀಟರ ಎರಡು ಚೆನ್ನಾಗಿ ಕಲಸಿ. ಒಲಿಯ ಮೇಲೆ ಇಟ್ಟು ಮಂದಾಗ್ನಿಯಿಂದ ಕುದಿಸುತ್ತಾ 2 ಲೀಟರ ಆದ ನಂತರ ಕೆಳಗೆ ಇಳಿಸಿ. ಆರಿಸಿ ಹಸಿವೆಯಾದಾಗ ಈ ನೀರು ಕುಡಿಯಬೇಕು. ಹೀಗೆ ರೋಗ ನಿವಾರಣೆಯಾಗುವವರೆಗೆ ಮಾಡಬೇಕು.

- ಕುಳನಜಾನ 50 ಗ್ರಾಂ. ಅವೇಲ್ 50 ಗ್ರಾಂ. ಭಜಿ 50 ಗ್ರಾಂ. ಸೊಂಟ್ 50 ಗ್ರಾಂ. ಇವೆಲ್ಲವನ್ನು ಚೆನ್ನಾಗಿ ಕುಟ್ಟಿ ಪೌಡರ ತಯಾರಿಸಿ ಇದರಲ್ಲಿ 400 ಗ್ರಾಂ. ಜೇನು ತುಪ್ಪ ಕಲಸಿ ದಿನಾಲು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಒಂದು ಚಮಚ ಈ ರಸ ಒಂದು ಗ್ಲಾಸ್ ಆಕಳ ಹಾಲಿನಲ್ಲಿ ಹಾಕಿ ಚೆನ್ನಾಗಿ ಕಲೆಸಿ ರೋಗ ನಿವಾರಣೆಯಾಗುವವರೆಗೆ ಕುಡಿಯಬೇಕು.

ಒರೆಸಲು ಎಣ್ಣೆ : ಧತ್ತುರಿ ಎಲೆ, ಆಕತ್ರಾ, ಲೆಕ್ಕಿ ಗಿಡದ ಎಲೆ, ಎರಂಡಿಕಾ ಪತ್ತಾ, ನಿಂಬ ಎಲೆ, ನುಗ್ಗೆ ಎಲೆ, ಇವೆಲ್ಲವನ್ನು ಚೆನ್ನಾಗಿ ಕುಟ್ಟಿ ಎಳ್ಳಿನ ಎಣ್ಣೆಯಲ್ಲಿ ಹಾಕಿ ಮಂದಾಗ್ನಿಯಿಂದ ಕುದಿಸಬೇಕು. ಕುದ ನಂತರ ಕೆಳಗೆ ಇಳಿಸಿ ಆರಿಸಿ. ಲಕ್ವ ಹೊಡೆದ ಜಾಗಕ್ಕೆ ಈ ಎಣ್ಣೆ ಒರೆಸಬೇಕು. ಹೀಗೆ 40 ದಿವಸ ಮಾಡಿದರೆ ರೋಗ ನಿವಾರಣೆಯಾಗುತ್ತದೆ.

3) <u>ಮೂಲ ವ್ಯಾಧಿ :</u>

ತ್ರಿಫಲ ಚೂರ್ಣ 50 ಗ್ರಾಂ. ತ್ರಿಫಲ್ ಕಿಸನಿಜ್ 50 ಗ್ರಾಂ. ಆಮ್ಲ 50 ಗ್ರಾಂ. ಹಳ್ಳ 50 ಗ್ರಾಂ. ಬಳ್ಳಾ 50 ಗ್ರಾಂ. ಗುಗ್ಗುಳ 50 ಗ್ರಾಂ. ಇವೆಲ್ಲವನ್ನು ಚೆನ್ನಾಗಿ ಕುಟ್ಟಿ ಪುಡಿ ಮಾಡಿ ಒಂದು ಒಳ್ಳೆಯ ಶುದ್ಧವಾದ ಡಬ್ಬಿಯಲ್ಲಿ ಹಾಕಿ ನಂತರ ಜೇನು ತುಪ್ಪದಲ್ಲಿ ಚೆನ್ನಾಗಿ ಕಲಸಿ ದಿನಾಲು ಮುಂಜಾನೆ ಮತ್ತು ರಾತ್ರಿ ಒಂದೊಂದು ಚಮಚ 15 ದಿವಸ ಸೇವಿಸಿದರೆ ಮುಲಾ ವ್ಯಾಧಿ ರೋಗ ನಿವಾರಣೆಯಾಗುತ್ತದೆ.

4) <u>ರಕ್ತ ಮೂಲವ್ಯಾಧಿ :</u>

ಸೆರಬತ ಅಂಜಬಿರ 20 ಎಮ್.ಎಲ್. ಮೂರು ದಿವಸ ಮುಂಜಾನೆ ಕುಡಿಯಬೇಕು. ಗೇರು 50 ಗ್ರಾಂ. ಸಂಜೀರಾ 50 ಗ್ರಾಂ. ರಾಲ್ 50 ಗ್ರಾಂ. ಇವೆಲ್ಲವನ್ನು ಚೆನ್ನಾಗಿ ಕುಟ್ಟಿ ದಿನಾಲು ಅರ್ಧ ಚಮಚ ತಿಂದು ನಂ ತರ ನೀರು ಕುಡಿಯಬೇಕು. ಹೀಗೆ ಈ ರೋಗ ನಿವಾರಣೆಯಾಗುವವರೆಗೆ ಮಾಡಿದರೆ ರಕ್ತ ಮೂಲವ್ಯಾಧಿ ನಿವಾರಣೆಯಾಗುತ್ತದೆ.

5) <u>ಸ್ತ್ರೀ ಬಿಳಿ ಸೆರಗು :</u>

ಬಬುಲ್ ಗೊಂಜ್ 50 ಗ್ರಾಂ. ಚುನಿಯಾ ಗೋನ 50 ಗ್ರಾಂ. ಕಂಗಿಕಾ ಬೀಜ 50 ಗ್ರಾಂ. ಅಶಗಂಧ ನಾಗೂರಿ 50 ಗ್ರಾಂ. ಮಾಯಿಟಕುದ್ 50 ಗ್ರಾಂ. ಸತ್ವ ಬೈರೋಜ್ 50 ಗ್ರಾಂ. ಸಂಜೀರಾ 50 ಗ್ರಾಂ. ಇವೆಲ್ಲವನ್ನು ಚೆನ್ನಾಗಿ ಕುಟ್ಟಿ ಸಕ್ಕರೆ ಕಲಸಿ ಒಂದು ಚಮಚ ಚೂರ್ಣವನ್ನು ಒಂದು ಗ್ಲಾಸ ಆಕಳ ಹಾಲಿನಲ್ಲಿ ಹಾಕಿ 21 ದಿವಸ ಕುಡಿದರೆ ಈ ರೋಗ ನಿವಾರಣೆಯಾಗುತ್ತದೆ.

6) <u>ಹಾವು ಕಡಿದಾಗ :</u>

ಸಾಬುನ ಗಿಡದ ಕಾಯಿಯನ್ನು (ರೀಟಾ) ತಂದು ಚೆನ್ನಾಗಿ ಕುಟ್ಟಿ ಚೂರ್ಣ ತಯಾರಿಸಿ ತಿಂದು ನೀರು ಕುಡಿಯಬೇಕು. ಹೀಗೆ ತಿಂದ ಸ್ವಲ್ಪ ಸಮಯದ ನಂತರ ವಾಂತಿಯಾಗುತ್ತದೆ. ಆಗ ವಿಷ ಹೊರಗಡೆ ಬರುತ್ತದೆ. ಹೀಗೆ 4 ದಿವಸ ಮುಂಜಾನೆ ಮತ್ತು ಸಾಯಂಕಾಲ ಕುಡಿಸುವುದರಿಂದ ಸಂಪೂರ್ಣ ವಿಷ ಹೊರಗಡೆ ಬಂದು ಅಪಾಯ ತಪ್ಪುತ್ತದೆ.

7) <u>ಅಜೀರ್ಣ (ಯಸಿಡಿಟಿ)</u>

ಸೊಂಟ 50 ಗ್ರಾಂ. ಬರೇಗ ಸೇಸ 50 ಗ್ರಾಂ. ಕಾಲಿ ನಮಕ 50 ಗ್ರಾಂ. ಕಾಲಿ ಮಿರ್ಚಿ 50 ಗ್ರಾಂ. ಪಿಪ್ಪಲ್ 25 ಗ್ರಾಂ. ಸೋಪ 25 ಗ್ರಾಂ. ಧನಿಯಾ 50 ಗ್ರಾಂ. ಇವೆಲ್ಲವನ್ನು ತಂದು ಚೆನ್ನಾಗಿ ಕುಟ್ಟಿ ಚೂರ್ಣ ತಯಾರಿಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಒಂದೊಂದು ಚಮಚ ತಿಂದರೆ ಅಜೀರ್ಣತೆ ನಿವಾರಣೆಯಾಗುತ್ತದೆ.

8) <u>ನಪುಂಸಕತ್ವ ಇದ್ದಾಗ :</u>

ಶಂಗ್ರಮ ಭಸ್ಮ ಭನ್ನಿ ತೊಟ್ಟೆ, ಚಾಂದಿ ಭಸ್ಮ, ಬಾದಾಮ 50 ಗ್ರಾಂ. ಪಿಸ್ತಾ 50 ಗ್ರಾಂ. ಲವಂಗ 50 ಗ್ರಾಂ. ಇಲಾಚಿ 10 ಗ್ರಾಂ. ಸಾಲ ಮಿಶ್ರಿ 50 ಗ್ರಾಂ. ಸಫೇದ ಮುಸ್ಲಿ 50 ಗ್ರಾಂ. ಸಿಮಾಮಸಿ 50 ಗ್ರಾಂ. ಸಳಾಖುಲ್ ಮಸ್ಲಿ 50 ಗ್ರಾಂ. ಪಿಪ್ಪಲಿ 50 ಗ್ರಾಂ. ಕಾಲಮಿರ್ಚಿ 50 ಗ್ರಾಂ. ಕೂಲಂಚನ 50 ಗ್ರಾಂ. ದಾಲಚಿನಿ 50 ಗ್ರಾಂ. ರೂಮಿ ಮಸ್ತಾಗಿ 25 ಗ್ರಾಂ ಜಾಫರಂಧ 10 ಗ್ರಾಂ. ಜಾಜಕಾಯಿ 50 ಗ್ರಾಂ. ಜವತ್ತಿ 5 ಗ್ರಾಂ. ಸಂಪಳ ತಿಪ್ಪ 25 ಗ್ರಾಂ. ಇವೆಲ್ಲವನ್ನು ಚೆನ್ನಾಗಿ ಕುಟ್ಟಿ ಸ್ವಚ್ಛವಾದ ಡಬ್ಬಿಯಲ್ಲಿ ಹಾಕಿಟ್ಟು ನಂತರ 3 ಕಿಲೋ ಚೂರ್ಣಕ್ಕೆ 1 ಕಿಲೋ ಜೇನುತುಪ್ಪ ಹಾಕಿ ಚೆನ್ನಾಗಿ ಕಲಿಸಬೇಕು. ಹೀಗೆ ಕಲಸಿರುವುದನ್ನು ಮುಂಜಾನೆ ಖಾಲಿ ಹೊಟ್ಟೆಯಲ್ಲಿ 40 ದಿವಸಗಳ ಕಾಲ ಸೇವಿಸಿದರೆ ಪುರುಷತ್ವ ಬರುತ್ತದೆ.

ಪಥ್ಯ: 40 ದಿನಗಳ ಕಾಲ ಸ್ತ್ರೀ ಸಂಪರ್ಕ ಹೊಂದಬಾರದು. ಗರ್ಮಿ ಪದಾರ್ಥಗಳನ್ನು ತಿನ್ನಬಾರದು.

9) <u>ತಿಂಗಳಿಗೆ ಸರಿಯಾಗಿ ಮುಟ್ಟು ಆಗದಿದ್ದಾಗ :</u>

ನವಸಾಗರ 250 ಗ್ರಾಂ. ಜಾಫರಂಗ 2 ಗ್ರಾಂ. ಇವೆರಡೂ ಚೆನ್ನಾಗಿ ಕಲಸಿ ಚೂರ್ಣ ತಯಾರಿಸಿ 9 ಪುಡಿ ಮಾಡಿ ಋತುಮತಿ ಆಗುವ ಸಮಯ ಬಂದಾಗ ಮೂರು ದಿನ ದಿನಕ್ಕೆ 3 ಪುಡಿ ತಿನ್ನಬೇಕು. ಹೀಗೆ ತಿಂದರೆ ಹೆಣ್ಣು ಋತುಮತಿಯಾಗುತ್ತಾಳೆ.

10) <u>ಮೂಗಿನಲ್ಲಿ ನೋವು ಇದ್ದಾಗ</u> :

ನಿಂಬೆ ಎಲೆ, ಅಭಾನ ಬೆಳ್ಳಿ, ತ್ರಿಫಲ ಇವೆಲ್ಲವನ್ನು ಒಂದ ಗ್ಲಾಸ್ ನೀರಿನೊಂದಿಗೆ ಚೆನ್ನಾಗಿ ಕುಟ್ಟಿ ಹೀಗೆ 3 ತಿಂಗಳು ಮುಂಜಾನೆ ಸೇವಿಸಿದರೆ ಈ ರೋಗ ನಿವಾರಣೆಯಾಗುತ್ತದೆ.

11) <u>ಕಣ್ಣಿನಲ್ಲಿ ಹೂವು ಬಿದ್ದಾಗ</u> :

ತ್ರಿಫಲವನ್ನು ನೀರಿನಲ್ಲಿ ಹಾಕಿ ಕಣ್ಣಿನಲ್ಲಿ 7 ದಿವಸ ಹಾಕಿದರೆ ಕಣ್ಣಿನಲ್ಲಿರುವ ಹೂವು ಮಾಯವಾಗುತ್ತದೆ. ಹಳ್ಳವನ್ನು ಸೋಸಿ ಗಂಧವನ್ನು ತೆಗೆದು ಕಣ್ಣಿನ ರೆಪ್ಪೆಗೆ 7 ದಿವಸ ಹಚ್ಚಿದರೆ ಈ ರೋಗ ನಿವಾರಣೆಯಾಗುತ್ತದೆ.

12) <u>ಬಿ.ಪಿ. ಆದಾಗ</u> :

ಅಸರೋಲ್ 1/2 ಗ್ರಾಂ. ದಿನಾಲು 2 ವೇಳೆ ಕುಡಿಯಬೇಕು. ಮತ್ತು ಬೆಳ್ಳಗಡ್ಡಿಯನ್ನು ಸುಲಿದು 4 ಎಸಳುಗಳನ್ನು ತಿನ್ನುವುದರಿಂದ ಬಿ.ಪಿ. ಮಾಯವಾಗುತ್ತದೆ.

13) <u>ಚೇರ್ ಇಳಿದಾಗ (ಹೈಡ್ರೋಸಿಲ್)</u> :

- ಎಳ್ಳಿನ ಎಣ್ಣೆ, ನಿಂಬೆ ಎಲೆ, ಉಳ್ಳಗಡ್ಡಿ ರಸ, ಇವೆಲ್ಲವನ್ನು ಚೆನ್ನಾಗಿ ಅರೆದು ತೊಡ್ಡಿಗೆ ಹಚ್ಚಿ ಚೆನ್ನಾಗಿ ಲಂಗೋಟಿ ಬಿಗಿದು 7 ದಿವಸ ಕಟ್ಟಿದರೆ ಈ ರೋಗ ನಿವಾರಣೆಯಾಗುತ್ತದೆ.
- ಗಜ್ಜಗವನ್ನು ಒಡೆದು ಒಳಗಿನ ತಿರುಳನ್ನು ತೆಗೆದು ಗಜುಗಾ ಗಿಡದ ಎಲೆಯ ಮೇಲೆ ಉದುರಿಸಿ ತೊಡ್ಡಿಗೆ 15 ದಿವಸ ರಾತ್ರಿ ಮಲಗುವಾಗ ಕಟ್ಟಬೇಕು ರೋಗ ನಿವಾರಣೆಯಾಗುತ್ತದೆ.

14) <u>ಮೊದಲಿನಿಂದಲೆ ಪುರುಷತ್ವ ಇಲ್ಲದಿದ್ದಾಗ</u> :

ಪಂಜಾಬಮಿಶ್ರ 1 ತೊಲೆ, ಸಾಲನ ಮಿಶ್ರಿ 1 ತೊಲೆ, ಸಪೂರ ಮಿಶ್ರಿ – 1 ಬೀಜಬಂದ 50 ಗ್ರಾಂ. ಬಾಜೂವಂತಿ 50 ಗ್ರಾಂ. ಬಾದಾಮ ಬೀಜ 50 ಗ್ರಾಂ. ಖಾರೀಖ ಹುರಂಜೀ 50 ಗ್ರಾಂ. ಹೌವಳದ ಗಡ್ಡೆ 200 ಗ್ರಾಂ. ಕಮ್ಮರತೋಡ ಅರ್ಧ ತೊಲಿ. ಪಲ್ಲಂಗ ತೇಜ ಅರ್ಧ ತೊಲಿ, ಖಡಿಸಕ್ಕರೆ 250 ಗ್ರಾಂ. ಕರಿಬೆನ್ನಿನ ಕೊಬ್ಬರಿ 50 ಗ್ರಾಂ. ಮದನ ಮಸ್ತ 50 ಗ್ರಾಂ. ತಾಲೀಮ್ ಖಾನ 50 ಗ್ರಾಂ. ಸೀಲಾಜೀತ 10 ಗ್ರಾಂ. ಜೈಫಲ 2 ಗ್ರಾಂ. ಇವೆಲ್ಲವುಗಳನ್ನು ಬೇರೆ ಬೇರೆಯಾಗಿ ಕುಟ್ಟಿ ಚೂರ್ಣ ತಯಾರಿಸಿ ನಂತರ ಒಂದೆಡೆ ಕಲಿಸಿ ಒಂದು ಶುದ್ಧವಾದ ಡಬ್ಬಿಯಲ್ಲಿ ಹಾಕಿ ಮುಚ್ಚಿಡಬೇಕು. ಮುಂಜಾನೆ ನಸುಕಿನ ಜಾವ 4 ಗಂಟೆಗೆ ಎದ್ದು 3 ಚಮಚ ಚೂರ್ಣ ಆಕಳ ಹಾಲಿನಿಂದ ತಯಾರಿಸಿದ ತುಪ್ಪ 50 ಗ್ರಾಂ. ಕಲಿಸಿ ತಿನ್ನಬೇಕು. ನಂತರ ಬಿಸಿ ಮಾಡಿದ ಹಾಲು ಕುಡಿಯಬೇಕು. ಆ ಮೇಲೆ ನಿದ್ದೆ ಮಾಡಬೇಕು. ಹೀಗೆ ಮೂರು ತಿಂಗಳುಗಳ ಕಾಲ ಪುರುಷತ್ವ ಬರುತ್ತದೆ.

ಪಥ್ಯ : ಗರ್ಮಿ ಪದಾರ್ಥಗಳನ್ನು ತಿನ್ನಬಾರದು.

15) ಮೂರ್ಛೆ ರೋಗ ಇದ್ದಾಗ :

ಸಾಬೂನ ಗಿಡದ ಕಾಯಿಯನ್ನು ಚೆನ್ನಾಗಿ ಕುಟ್ಟಿ ಚೂರ್ಣವನ್ನು ತಯಾರಿಸಿ ದಿನಾಲು ಮುಂಜಾನೆ ಅರ್ಧ ಚಮಚ ತಿನ್ನಬೇಕು. ನಂತರ ಸ್ವಲ್ಪ ಬಿಸಿ ಮಾಡಿದ ನೀರು ಕುಡಿಯಬೇಕು. ಹೀಗೆ 40 ದಿವಸಗಳ ಕಾಲ ಸೇವಿಸಿದರೆ ಈ ರೋಗ ನಿವಾರಣೆಯಾಗುತ್ತದೆ.

16) ಕೂದಲು ಉದುರುತ್ತಿದ್ದರೆ :

ಮೇಂಥಿ 50 ಗ್ರಾಂ. ಸೀಗೆಕಾಯಿ 50 ಗ್ರಾಂ. ಆಮ್ಲ 50 ಗ್ರಾಂ. ಸಾಬೂನ ಗಿಡದ ಕಾಯಿ ಇವೆಲ್ಲವನ್ನು ಚೆನ್ನಾಗಿ ಕುಟ್ಟಿ ನೀರಿನಲ್ಲಿ ಹಾಕಿ ನಂತರ ಕೂದಲಿಗೆ ಹಚ್ಚಿಕೊಳ್ಳಬೇಕು. ಕೂದಲು ಉದರುವದು ನಿಲ್ಲುತ್ತದೆ.

17) ಕೀಲು ನೋವು ಆದಾಗ :

ಸುರಂಜಾನ 50 ಗ್ರಾಂ. ಸಿಬ್ರಾಜದ್‌ಳ 50 ಗ್ರಾಂ. ಹಳ್ಳ 50 ಗ್ರಾಂ. ಇವೆಲ್ಲವನ್ನು ಚೆನ್ನಾಗಿ ಕುಟ್ಟಿ ಕಡ್ಡಿ ಗಾತ್ರದ ಗುಳಿಗೆಯನ್ನು ತಯಾರಿಸಿ ಮುಂಜಾನೆ 2 ಗುಳಿಗೆ, ಮಧ್ಯಾಹ್ನ 2 ಗುಳಿಗೆ, ಹೀಗೆ 8 ದಿವಸ ತಿಂದರೆ ಕೀಲು ನೋವು ನಿವಾರಣೆಯಾಗುತ್ತದೆ.

18) ಸಕ್ಕರೆ ಕಾಯಿಲೆ :

ಸದಾಬಾರಕಾ ಪತ್ತಾ 50 ಗ್ರಾಂ. ದುದಿರಾ ಪತ್ತಾ 50 ಗ್ರಾಂ. ಮೀರೇಕಾ ಪತ್ತಾ 50 ಗ್ರಾಂ. ಜಾಮುನಕಾ ಗುಡ್ಲಿ 50 ಗ್ರಾಂ. ಮೇಂತ್ಯಾ 50 ಗ್ರಾಂ. ಚರಾಯಿತಾ ತೆಲಕ 5 ಗ್ರಾಂ. ಇವೆಲ್ಲವನ್ನು ಚೆನ್ನಾಗಿ ಕುಟ್ಟಿ ಚೂರ್ಣ ತಯಾರಿಸಿ ದಿನಕ್ಕೆ ಎರಡು ಹೊತ್ತು ಮುಂಜಾನೆ ಮತ್ತು ಸಾಯಂಕಾಲ ನೀರಿನಲ್ಲಿ ಹಾಕಿ ಕುಡಿಯಬೇಕು. ಹೀಗೆ 5 ತಿಂಗಳ ಕಾಲ ತಿಂದರೆ ಈ ರೋಗ ಮಾಯವಾಗುತ್ತದೆ.

19) ಖಂಡಕಿ ಹುಣ್ಣು ಆದಾಗ :

ರಾಲ 50 ಗ್ರಾಂ. ಕಾಟ 50 ಗ್ರಾಂ. ಬೀಜ 50 ಗ್ರಾಂ. ತುಪ್ಪ 50 ಗ್ರಾಂ. ಮೊಮು 50 ಗ್ರಾಂ. ಇವೆಲ್ಲವನ್ನು ಚೆನ್ನಾಗಿ ಕುದಿಸಿ ನಂತರ ಖಂಡಕಿ ಹುಣ್ಣು ಆದ ಜಾಗಕ್ಕೆ ಕಟ್ಟಿದರೆ ಈ ರೋಗ ನಿವಾರಣೆಯಾಗುತ್ತದೆ.

20) <u>ಅರ್ಧ ತಲೆ ನೋವು :</u>

ನವಲರಸದ ರಸ ಮತ್ತು ಸುಣ್ಣ ಕಲಸಿ ಹಣೆಗೆ ಹಚ್ಚುವುದರಿಂದ ಈ ರೋಗ ನಿವಾರಣೆಯಾಗುತ್ತದೆ.

29) **ವಕ್ತಾರರು : ಬಲರಾಜ ನಮಶೇಖರ**

ವಯಸ್ಸು : 48 ವರ್ಷ

ವಿಳಾಸ : ಮ.ನಂ. 14-5-170,

ಪ್ಲಾಟ ನಂ.103, ಬೀದರ.

1) <u>ಮೂತ್ರದಲ್ಲಿ ವೀರ್ಯ ಹೋಗುತ್ತಿದ್ದರೆ :</u>

ಅಮೃತ ಬಳ್ಳಿಯ ಸತ್ವವನ್ನು ತೆಗೆದು, ವಂಗ ಭಸ್ಮ ಒಂದು ಗುಂಜೆ, ಸ್ವಲ್ಪ ಜೇನು ತುಪ್ಪದಲ್ಲಿ ಕಲೆಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ 2-2 ಚಮಚ ತಿನ್ನಬೇಕು. ಹೀಗೆ 10 ದಿವಸ ತಿಂದರೆ ವೀರ್ಯ ಗಟ್ಟಿಯಾಗಿ ಮೂತ್ರದಲ್ಲಿ ಹೋಗುವ ವಿರ್ಯ ನಿಲ್ಲುತ್ತದೆ.

ಪಥ್ಯ : 21 ದಿನ ಸ್ತ್ರೀ ಸಂಪರ್ಕ ಹೊಂದಬಾರದು.

2) <u>ದಮ್ಮು, ಕೆಮ್ಮು ಇದ್ದಾಗ :</u>

ತ್ರಿಫಲ ಕಸಾಯ ದಿನಕ್ಕೆ 3 ಸಲ 5 ದಿವಸ ಕುಡಿದರೆ ದಮ್ಮು, ಕೆಮ್ಮು ನಿವಾರಣೆಯಾಗುತ್ತದೆ.

- ಒಂದು ಗ್ಲಾಸ್ ಬಿಸಿ ನೀರನ್ನು ತೆಗೆದುಕೊಂಡು ಅದರಲ್ಲಿ ಒಂದು ಚಮಚ ಜೇನು ತುಪ್ಪ ಬೆರೆಸಿ ಆರಿದ ನಂತರ ಮುಂಜಾನೆ, ಮಧ್ಯಾಹ್ನ, ರಾತ್ರಿ ಹೀಗೆ 3 ದಿನ ಕುಡಿದರೆ ಈ ರೋಗ ನಿವಾರಣೆಯಾಗುತ್ತದೆ.
- ಪಟಕಾವನ್ನು ಹಂಚಿನಲ್ಲಿ ಹಾಕಿ ಅಳ್ಳೆ ತರಹ ಮಾಡಿ ಇದರ ಒಂದು ಗುಂಜಿ ಭಸ್ಮಕ್ಕೆ ಸ್ವಲ್ಪ ಜೇನು ತುಪ್ಪ ಹಾಕಿ ನೆಕ್ಕಿಸಬೇಕು. ಹೀಗೆ ದಿನಕ್ಕೆ 3 ಸಲದಂತೆ 7 ದಿವಸ ತೆಗೆದುಕೊಂಡರೆ ಈ ರೋಗ ನಿವಾರಣೆಯಾಗುತ್ತದೆ.

3) <u>ಜ್ವರ, ಪಿತ್ತ, ಮಲೇರಿಯಾ :</u>

ಮೆಣಸು 50 ಗ್ರಾಂ. ದಾಲಚಿನ್ನಿ 50 ಗ್ರಾಂ. ಶುಂಠಿ 50 ಗ್ರಾಂ. ತುಳಸಿ ತಪ್ಪಲು 50 ಗ್ರಾಂ. ಇವೆಲ್ಲವನ್ನು ಬೇರೆ ಬೇರೆಯಾಗಿ ಕುಟ್ಟಿ ಒಂದೆಡೆ ಕಲೆಸಿ ಅದರಲ್ಲಿ ಜೇನುತುಪ್ಪ ಹಾಕಿ ಗುಳಿಗೆಯನ್ನು ಮಾಡಿಕೊಂಡು ದಿನಕ್ಕೆ 3 ಗುಳಿಗೆ 7 ದಿವಸ ತಿಂದರೆ ಜ್ವರ, ಪಿತ್ತ, ಮಲೇರಿಯಾ ರೋಗ ನಿವಾರಣೆಯಾಗುತ್ತದೆ.

4) <u>ಕಾಮಣಿ ಆದಾಗ :</u>

ಪಟಕಾವನ್ನು ಹಂಚಿನ ಮೇಲೆ ಹಾಕಿ ಹುರಿದು ಅಳ್ಳನ್ನು ಮಾಡಿ. ಇದನ್ನು ಬಾಳೆ ಹಣ್ಣಿನಲ್ಲಿ ಹಾಕಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ತಿನ್ನಿಸಬೇಕು. ಹೀಗೆ 7 ದಿನ ಸೇವಿಸಿದರೆ ಕಾಮಲೆ ರೋಗ ನಿವಾರಣೆಯಾಗುತ್ತದೆ.

5) <u>ಮೂಲವ್ಯಾಧಿ :</u>

ಬಾಳೆ ಹಣ್ಣನ್ನು ಮತ್ತು ಇಲಾಚಿ ಎರಡನ್ನು ಒಂದೆಡೆ ಸೇರಿಸಿ ರೋಗಿಗೆ ತಿನ್ನಲು 8 ದಿವಸ ಕೊಟ್ಟರೆ ಈ ರೋಗ ನಿವಾರಣೆಯಾಗುತ್ತದೆ.

6) <u>ಕೀಲು ನೋವು :</u>

ಅಶ್ವಗಂಧ ಶೇ. 75% ರಷ್ಟು ಬೆಲ್ಲ ಶೇ. 25 ರಷ್ಟು ತೆಗೆದುಕೊಂಡು ಚೆನ್ನಾಗಿ ಕುಟ್ಟಿದ ಪುಡಿಯನ್ನು 21 ದಿವಸ 30 ಗ್ರಾಂ ನಷ್ಟು ಪ್ರತಿದಿನ ತಿಂದರೆ ಈ ರೋಗ ನಿವಾರಣೆಯಾಗುತ್ತದೆ.

7) <u>ಲಕ್ವ ಹೊಡೆದಾಗ :</u>

ಅಶ್ವಗಂಧ 10 ಗ್ರಾಂ. ಜಾವಲೆ 1 ತೊಲೆ, ಜೈಫಳ 10, ಶುಂಠ 10 ಗ್ರಾಂ. ತೆಗೆದುಕೊಂಡು ಚೆನ್ನಾಗಿ ಕುಟ್ಟಿ ಚೂರ್ಣ ತಯಾರಿಸಿ ದಿನಾಲು ಮುಂಜಾನೆ ಎರಡು ಚಮಚ ಹೀಗೆ 1 ತಿಂಗಳು ತಿನ್ನುವುದರಿಂದ ಈ ರೋಗ ನಿವಾರಣೆಯಾಗುತ್ತದೆ.

8) <u>ದೇಹದಲ್ಲಿ ಯಾವುದೇ ಬೇನೆ ಇದ್ದಾಗ :</u>

ಆಕಳ ತುಪ್ಪ – 1 ಕಿ.ಲೋ, ಜೇನುತುಪ್ಪ 25 ಗ್ರಾಂ. ಶುಂಠಿ 25 ಗ್ರಾಂ. ತೆಗೆದುಕೊಂಡು ಸ್ವಚ್ಛವಾದ ಒಂದು ಡಬ್ಬಿಯಲ್ಲಿ ತುಂಬಿ ಇವೇ 11 ದಿವಸ ಹಾಗೇ ಇಡಬೇಕು. ನಂತರ ದಿನಾಲು ಸ್ವಲ್ಪ ಸ್ವಲ್ಪ 21 ದಿವಸ ತಿಂದರೆ ದೇಹದಲ್ಲಿ ಯಾವುದೇ ರೋಗ ಇದ್ದರೂ ಕೂಡ ನಿವಾರಣೆಯಾಗುತ್ತದೆ.

9) <u>ದಮ್ಮು ಕೆಮ್ಮು ಆದಾಗ :</u>

ಬಿಳಿ ಎಕ್ಕಿ ಗಿಡದ ಹೂ ಮತ್ತು ಕರಿ ಮೆಣಸು ಹಾಕಿ ಗುಳಿಗೆಯನ್ನು ಮಾಡಿ ವೀಳ್ಯದೆಲೆಯೊಂದಿಗೆ ಮುಂಜಾನೆ ಮತ್ತು ರಾತ್ರಿ ಊಟವಾದ ನಂತರ ಹೀಗೆ 2-3 ದಿನ ತಿನ್ನುವುದರಿಂದ ದಮ್ಮು ಕೆಮ್ಮು ರೋಗ ನಿವಾರಣೆಯಾಗುತ್ತದೆ.

10) ಸ್ತ್ರೀಯರಿಗೆ ಬಿಳಿ ಸೆರಗು ಮತ್ತು ಕೆಂಪು ಸೆರಗು ರೋಗ ವಿದ್ದಾಗ :

- ಅಶ್ವಗಂಧ 50 ಗ್ರಾಂ. ತೆಗೆದುಕೊಂಡು ಚೂರ್ಣ, ತಯಾರಿಸಿ. ಒಂದು ಗ್ಲಾಸ ಆಕಳ ಹಾಲಿನಲ್ಲಿ ಸ್ವಲ್ಪ ಚೂರ್ಣ ಸ್ವಲ್ಪ ಖಡಿಸಕ್ಕರೆಯನ್ನು ಸೇರಿಸಿ ಚೆನ್ನಾಗಿ ಕಲೆಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ 21 ದಿವಸ ಕುಡಿಯಬೇಕು.
- ಅಲ್ಲಾ ಮತ್ತು ಬೇವಿನ ತಪ್ಪಲು ಎರಡು ತೆಗೆದುಕೊಂಡು ಚೆನ್ನಾಗಿ ಕುಟ್ಟಿ ಗುಳಿಗೆಯನ್ನು ಮಾಡಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಒಂದೊಂದು ಗುಳಿಗೆಯನ್ನು 3 ದಿವಸ ತಿಂದರೆ ಈ ರೋಗ ನಿವಾರಣೆಯಾಗುತ್ತದೆ.

11) ತಲೆ ನೋವು ಆದಾಗ :

ನವಲಸರ ಮತ್ತು ಸುಣ್ಣ ನೆನೆಸಿದ ನೀರು ಇವೆರಡನ್ನೂ ಕಲೆಸಿ ವಾಸನೆ ನೋಡಿ ಇದನ್ನೆ ತಲೆಗೆ ಹಚ್ಚಿಕೊಳ್ಳಬೇಕು. ಹೀಗೆ 2-3 ದಿನ ಮಾಡುವುದರಿಂದ ಈ ರೋಗ ನಿವಾರಣೆಯಾಗುತ್ತದೆ.

12) ಸಕ್ಕರೆ ಬೇನೆ ಇದ್ದಾಗ :

ಹತ್ತಿ ಗಿಡದ ತೊಗಟೆಯನ್ನು ನೆರಳಿನಲ್ಲಿ ಒಣಗಿಸಿ ಚೆನ್ನಾಗಿ ಕುಟ್ಟಿ ಪುಡಿ ಮಾಡಿ ಇದರಲ್ಲಿ ಖಡಿಸಕ್ಕರೆಯನ್ನು ಸೇರಿಸಿ ಕಲಸಿ 48 ದಿವಸಗಳ ಕಾಲ ದಿನಾಲು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಒಂದು ಚಮಚ, ರಾತ್ರಿ ಊಟವಾದ ನಂತರ ಒಂದು ಚಮಚ ತಿಂದರೆ ಸಕ್ಕರೆ ರೋಗ ನಿವಾರಣೆಯಾಗುತ್ತದೆ.

13) ವೀರ್ಯ (ಪತಲಾ ಆದರೆ) ಪಚನವಾಗುತ್ತಿದ್ದಾಗ :

ಉಳ್ಳಗಡ್ಡಿಯನ್ನು ಕುಟ್ಟಿ ಒಂದು ಗ್ರಾಂ. ರಸ ತೆಗೆದು ಇದರಲ್ಲಿ ಸ್ವಲ್ಪ ಬೆಲ್ಲವನ್ನು ಹಾಕಿ ಸ್ವಲ್ಪ ಕಾಯಿಸಿ ತಣ್ಣಗಾದ ನಂತರ 3 ದಿವಸ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ತೆಗೆದುಕೊಂಡರೆ ವೀರ್ಯ ಗಟ್ಟಿಯಾಗುತ್ತದೆ.

14) ಹೊಟ್ಟೆ ನೋವು ಆದಾಗ :

- ಕೋಳಿ ಅಂಡಿಯ (ತತ್ತಿ) ಮೇಲಿನ ಖಪ್ಪರನ್ನು (ಕವಚ) ಒಡೆದು ಅರೆದು ಭಸ್ಮವನ್ನು ತಯಾರಿಸಿ. ಹೆಸರು ಬೆಳೆಯನ್ನು ಅರೆದು ಇದರಲ್ಲಿ ಬೆರೆಸಿ ನಂತರ ಜೇನು ತುಪ್ಪದಲ್ಲಿ ಕಲೆಸಿ 3 ದಿನ ತಿಂದರೆ ಹೊಟ್ಟೆ ನೋವು ನಿವಾರಣೆಯಾಗುತ್ತದೆ.
- ಹೆಗಣ್ಣ ಅಥವಾ ಇಲಿ ಲೆಂಡ್ಡಿ (ಮಲ) ವನ್ನು ತೊಯಿಸಿ ಹೊಕ್ಕಳು ಮೇಲೆ ಇಟ್ಟಿ ನೀರು ಸೋರಿಸಬೇಕು. ಹೀಗೆ ಮಾಡಿದರೆ ಹೊಟ್ಟೆ ನೋವು ರೋಗ ನಿವಾರಣೆಯಾಗುತ್ತದೆ.

15) **ಚೇರ್ ಇಳಿದಾಗ** :

ಕಾಲಿಗೆ ಒಂದು ಬಟ್ಟೆಯನ್ನು ಕಟ್ಟಿ ಮೇಲೆ ಕೆಳಗೆ ಕುಳಿತರೆ ಚೇರ್ ನಿವಾರಣೆಯಾಗುತ್ತದೆ.

16) **ಮೈ ಕೈ ಸುಟ್ಟಾಗ** :

ಒಂದು ಕಂಬುಟಿ (ಕಬ್ಬಿಣ ಬುಟ್ಟಿ) ನೀರು ತುಂಬಿ ಅದರಲ್ಲಿ ಉಪ್ಪನ್ನು ಹಾಕಿ ಮತ್ತು ಸ್ವಲ್ಪ ಪಟಕಾ ಹಾಕಿ ಚೆನ್ನಾಗಿ ಕಲೆಸಿ ಸುಟ್ಟ ಭಾಗವನ್ನು ಈ ನೀರಿನಲ್ಲಿ ಎತ್ತಿ ಹಾಗೆ ಇಡಬೇಕು. ಸ್ವಲ್ಪ ಸಮಯದ ನಂತರ ತೆಗೆಯಬೇಕು. ಹೀಗೆ ಮಾಡಿದರೆ ಗುಳ್ಳೆ ಏಳುವುದು, ಉರಿಯುವದು ಕಡಿಮೆಯಾಗಿ ಗಾಯ ಬೇಗ ಮಾಯವಾಗುತ್ತದೆ.

17) **ಹೊಟ್ಟೆಯಲ್ಲಿ ಕಾಮಣಿ ಇಳಿದಾಗ** :

ಸ್ವಲ್ಪ ಸಕ್ಕರೆಯನ್ನು ನೆಲದ ಮೇಲೆ ಹಾಕಿದಾಗ ನೊಣ ಬರುತ್ತವೆ. ಆ ನೋಣವನ್ನು ಕೊಂದು ಒಂದು ತಂಬಿಗೆ ನೀರಿನಲ್ಲಿ ಹಾಕಿ ಚೆನ್ನಾಗಿ ಕಿವುಚಿ ನಂತರ ಒಂದು ಬಟ್ಟೆಯಲ್ಲಿ ಸೋಸಿ ನೀರು ತೆಗೆದು ರೋಗಿಗೆ ಕುಡಿಸಬೇಕು. ಹೀಗೆ 2-3 ದಿವಸ ಕುಡಿಸುವುದರಿಂದ ಈ ರೋಗ ನಿವಾರಣೆಯಾಗುತ್ತದೆ.

18) **ಕಾಲಲ್ಲಿ ಹುಣ್ಣು ಆದಾಗ** :

ನಾಯಿಯ ಜೊಲ್ಲನ್ನು ಹುಣ್ಣು ಆದ ಜಾಗಕ್ಕೆ 2 ದಿವಸ ಹಚ್ಚುವುದರಿಂದ ಈ ರೋಗ ನಿವಾರಣೆಯಾಗುತ್ತದೆ.

19) **ಹಲ್ಲು ಬೇನೆ ಆದಾಗ** :

ಪಟ್ಟಿಕ ಹುರಿದ ಭಸ್ಮ, ಕ್ಯಾರಳ, ನೆಲ್ಲಿಕಾಯಿ, ಕರಿ ಮೆಣಸು, ಉಪ್ಪು, ಬೇವಿನ ತಪ್ಪಲು, ತೊಗರಿ ಬೆಳೆ ಈ ಎಲ್ಲವನ್ನು ಚೆನ್ನಾಗಿ ಕುಟ್ಟಿ ಪೌಡರನ್ನು ತಯಾರಿಸಿ ಹಲ್ಲಿಗೆ ತಿಕ್ಕುವುದರಿಂದ, ಹಲ್ಲು ಬೇನೆ ರೋಗ ನಿವಾರಣೆಯಾಗುತ್ತದೆ.

20) <u>ಹೊಟ್ಟೆ ಬೇನೆ ಆದಾಗ :</u>

ಮೂರು ಲೀಟರ ಆಕಳ ಹಾಲನ್ನು ತೆಗೆದುಕೊಂಡು ಅದರಲ್ಲಿ 3 ಕ್ಯಾರಳ ಹಾಕಿ ಚೆನ್ನಾಗಿ ಕುದಿಸಿ 3 ಕಪ್ ಹಾಲು ಇರುವಾಗ ಒಲೆಯ ಮೇಲ್ಲಿಂದ ತೆಗೆದು ಆರಿಸಿ ಕುಡಿಸುವುದರಿಂದ ಹೊಟ್ಟೆ ನೋವು ರೋಗ ಮಾಯವಾಗುತ್ತದೆ.

30) **ವಕ್ತಾರರು : ಗೋದಾವರಿ ಗಂಡ ಪ್ರಲ್ಹಾದ**

ವಯಸ್ಸು : 45 ವರ್ಷ

ಊರು : ನಾಗೂರ (ಕೆ)

ತಾಲೂಕಾ : ಭಾಲ್ಕಿ, ಜಿಲ್ಲಾ ಬೀದರ.

1) <u>ತೇಳು ಕಡಿದಾಗ :</u>

ತೇಳು (ಚೇಳು) ಕಡಿದಾಗ ಗೇರುಬಿಕೆ ತಪ್ಪಲನ್ನು ವರೆಸಿ ಕಿವಿಯಲ್ಲಿ ರಸ ಹಿಂಡಿದರೆ ವಿಷ ಮಾಯವಾಗಿ ಈ ರೋಗ ನಿವಾರಣೆಯಾಗುತ್ತದೆ.

2) <u>ಕಾಲಲ್ಲಿ ಮುಳ್ಳು ನಟ್ಟಿ ಬರದೆಇದ್ದಾಗ :</u>

ಉತರಣಿಯ ತಪ್ಪಲನ್ನು ಬೆಲ್ಲದಲ್ಲಿ ಕಲಿಸಿ ಮೂರುದಿನ ತಿಂದರೆ ಆ ಮುಳ್ಳು ಹೊರಗಡೆ ಬರುತ್ತದೆ. ಆಗ ಈ ರೋಗ ನಿವಾರಣೆಯಾಗುತ್ತದೆ.

3) <u>ಹೊಟ್ಟಿ ಸೂಲ (ಚಿಕ್ಕ ಮಕ್ಕಳಿಗೆ) :</u>

ಉತರಣಿ ಗಿಡದ ಬೇರಿನಿಂದ ಗಂಧವನ್ನು ತೆಗೆದು ಮಗುವಿನ ನಾಲಿಗೆಗೆ ನೆಕ್ಕಿಸಿದರೆ ಎರಡು ದಿವಸದಲ್ಲಿ ಈ ರೋಗ ನಿವಾರಣೆಯಾಗುತ್ತದೆ.

31) **ವಕ್ತಾರರು** : **ಇಟಬಾಯಿ ಗಂಡ ನರಸಿಂಗರಾವ**

ವಯಸ್ಸು : 52 ವರ್ಷ

ಊರು : ನಾಗೂರ (ಕೆ)

ತಾಲೂಕಾ : ಭಾಲ್ಕಿ, ಜಿಲ್ಲಾ ಬೀದರ.

1) **ಕಣ್ಣಿಗೆ ನೀರು ಸೊರುತ್ತಿದ್ದರೆ** :

ಘಡ ಪತ್ರಿ ಗಿಡದ ಹಾಲು ಕಣ್ಣು ಹುಬ್ಬಿಗೆ ಹಚ್ಚಿದರೆ ತಕ್ಷಣವೆ ಕಣ್ಣಿನ ನೀರು ನಿಲ್ಲುತ್ತವೆ. ಆಗ ಈ ರೋಗ ನಿವಾರಣೆಯಾಗುತ್ತದೆ.

2) **ಮಲ್ಲಜೆರಿಯಿಂದ ಕೈ ಕಾಲು ಉಬ್ಬಿದರೆ** :

ಧತ್ರಿ ಗಿಡದ ತಪ್ಪಲು ಚನಂಗಿ ತಪ್ಪಲು ಘಡ ಪತ್ರಿ ತಪ್ಪಲು ಈ ಮೂರು ತಪ್ಪಲು ಕುಟ್ಟಿ ಮಲ್ಲಜೆರಿಯಿಂದ ಉಬ್ಬಿದ ಸ್ಥಳಕ್ಕೆ ವರೆಸಿ ನಂತರ ಆ ಜಾಗಕ್ಕೆ ಬೆಂಕಿಯಿಂದ ಕಾವು ಕೊಡಬೇಕು. ಆಗ ಈ ರೋಗ ಹೆಳ ಹೆಸರಿಲ್ಲದಂತೆ ಮಾಯವಾಗುತ್ತದೆ.

3) **ಕಾಮಣಿಯಾದಾಗ** :

ಪತ್ರಿ ಗಿಡದ ತಪ್ಪಲನ್ನು ಕುಟ್ಟಿ ಎರಡು ಚಮಚ 15 ದಿನಗಳ ಕಾಲ ಕುಡಿದರೆ ಆಗ ಈ ರೋಗ ನಿವಾರಣೆಯಾಗುತ್ತದೆ.

4) **ಮಧ್ಯಾನ್ಹದ ವೇಳೆ ಎಮ್ಮೆ ತೊರೆದರೆ** :

ಧತ್ರಿ ಗಿಡದ ಎಲೆಗಳನ್ನು ಕುಟ್ಟಿ ಎಮ್ಮೆಯ ಬೆನ್ನಿಗೆ ಹಚ್ಚಿದರೆ ಈ ರೋಗ ಹೆಳ ಹೆಸರಿಲ್ಲದಂತೆ ಮಾಯವಾಗುತ್ತದೆ.

32) **ವಕ್ತಾರರು : ಉಮಾಕಾಂತ ಕಾರಬಾರಿ**

ವಯಸ್ಸು : 40 ವರ್ಷ

ಊರು : ನಾಗೂರ (ಕೆ)

ತಾಲೂಕಾ : ಭಾಲ್ಕಿ, ಜಿಲ್ಲಾ ಬೀದರ.

1) **ಚೇಳು ಕಡಿದಾಗ** :

ಅಪಟಿ ಗಿಡದ ತಪ್ಪಲನ್ನು ಕುಟ್ಟಿ ಚೆಳು ಕಡಿದ ಸ್ಥಳಕ್ಕೆ ಹಚ್ಚಿದರೆ ನಾಲ್ಕು ಗಂಟೆಯ ಒಳಗಾಗಿ ವಿಷ ಮಾಯವಾಗಿ ನೋವು ಕಡಿಮೆಯಾಗಿ ರೋಗ ನಿವಾರಣೆಯಾಗುತ್ತದೆ.

2) ಹಲ್ಲು ಬೇನೆಯಾದಾಗ :

ಕರ್ಪೂರವನ್ನು ಕುಟ್ಟಿ ಹಲ್ಲು ಬೇನೆ ಇದ್ದ ಜಾಗಕ್ಕೆ ಇಡಬೇಕು ಆಗ ಜೊಲ್ಲು ಸೋರುತ್ತದೆ. ನಂತರ ಹಲ್ಲು ಬೇನೆಯ ರೋಗ ಕಡಿಮೆಯಾಗುತ್ತದೆ.

3) **ಹೊಟ್ಟೆ ನೋವಾದಾಗ** :

ಕೊಡಪತ್ರಿ ಗಿಡದ ಎಲೆಗಳನ್ನು ತಿಂದರೆ ಸಾಮಾನ್ಯ ಹೊಟ್ಟೆ ನೋವು ಆಗಿಂದಾಗೆ ಕಡಿಮೆಯಾಗುತ್ತದೆ.

4) ದನಗಳಿಗೆ ಮುಗಬತ್ತಿ (ಮೂಗಿನಲ್ಲಿ ಗಡ್ಡೆ) ಆದಾಗ :

ಎಕ್ಕಿ ಗಿಡದ ಫಂಟಿಯನ್ನು ದನದ ಮುಗಿನಲ್ಲಿ ತುರುಕಿದರೆ ಮುಗುಬತ್ತಿ ಗಡ್ಡಿ ಪಡೆಯುತ್ತದೆ. ಕೆಟ್ಟ ರಕ್ತ ಹೊರಗೆ ಬರುತ್ತದೆ ಆಗ ರೋಗ ನಿವಾರಣೆಯಾಗುತ್ತದೆ.

5) ಇಸುಬು ಆದಾಗ :

ಕತ್ತೆಯ ಲದ್ದಿಯನ್ನು ಜಮಾಯಿಸಿ ಅದಕ್ಕೆ ಬೆಂಕಿಹಚ್ಚಿ ಅದರ ಮೇಲೆ ಕಂಚಿನ ಗಂಗಳವನ್ನು ಇಟ್ಟು ಗಂಗಳದಲ್ಲಿ ನೀರುಹಾಕಿ ಆಗ ಗಂಗಳ ಬುಡಕ್ಕೆ ಎಣಿ ಬರುತ್ತದೆ. ಆ ಎಣಿಯನ್ನು ಇಸುಬು ಇದ್ದ ಜಾಗಕ್ಕೆ ಹಚ್ಚಿದರೆ ಇಸುಬು ಹೆಳ ಹೆಸರಿಲ್ಲದೆ ಮಾಯವಾಗುತ್ತದೆ.

33) **ವಕ್ತಾರರು** : **ನಾಗಯ್ಯಾ ಸ್ವಾಮಿ**

ವಯಸ್ಸು : 70 ವರ್ಷ

ಊರು : ನಾಗೂರ (ಕೆ)

ತಾಲೂಕಾ : ಭಾಲ್ಕಿ, ಜಿಲ್ಲಾ ಬೀದರ.

1) <u>ಮುಲಾದಿಯಾದಾಗ :</u>

ಬಿಳಿ ಪಾಂಗರರ ಚಕ್ಕಿಯನ್ನು ತಂದು ಕುಟ್ಟಿ ಸ್ವಲ್ಪ ನೀರು ಹಾಕಿ ಆ ರಸಕ್ಕೆ ಖಡಸಕ್ಕರೆ ಮತ್ತು ಆಕಳ ಹಾಲಿನಿಂದ ತೈಯಾರಿಸಿದ ತುಪ್ಪಾಕಲಸಿ ಏಳು ದಿನ ಕುಡಿಯಬೇಕು. (ರೊಟ್ಟಿ ಮಸರು ತುಪ್ಪ ಊಟಮಾಡಬೇಕು – ಉಪ್ಪು ಖಾರಾ ಇತ್ಯಾದಿ ಊಟಮಾಡಬಾರದು)

2) <u>ಕರಿ ಇಸುಬು ಆದರೆ :</u>

ಬಿಳಿ ಪಾಂಗರರ ಚಕ್ಕಿಯನ್ನು ತಂದು ಕುಟ್ಟಿ ಸೋಸಿ, ಹೊಟ್ಟು ಮಾಡಬೇಕು, ನಂತರ ಇಸುಬು ಇದ್ದ ಜಾಗ ಚೆನ್ನಾಗಿ ತೊಳೆದು ಅದನ್ನು ಸೂಟಿ ಇಸುಬು ಆದ ಸ್ಥಳಕ್ಕೆ ಇದನ್ನು ಹಚ್ಚಿದರೆ ಈ ರೋಗ ನಿವಾರಣೆಯಾಗುತ್ತದೆ.

ರಸಕಪೂರನ್ನು ತಂದು ಇಸುಬು ರೋಗ ಇದ್ದವರು ಒಂದು ಕಲ್ಲಿನ ಮೇಲೆ ಉಗುಳಿ, ಆ ರಸಕಪೂರು ಉಗುಳಿದ ಉಗುಳಿನ ಮೇಲೆ ಸೋಸಬೇಕು. ಸೋಸಿ ಬಂದ ಗಂಧವನ್ನು ಇಸುಬು ಇದ್ದ ಸ್ಥಳಕ್ಕೆ ಹಚ್ಚಿದರೆ ಈ ರೋಗ ನಿವಾರಣೆಯಾಗುತ್ತದೆ.

3) <u>ರಕ್ತ ಒತ್ತಡಕ್ಕೆ :</u>

ಸೌತೇಕಾಯಿ ರಸ, ಜೇನು ತುಪ್ಪ ಮತ್ತು ನಿಂಬೆ ರಸ ಬೆರೆಸಿ ಸೇವಿಸುತ್ತಿದ್ದರೆ, ಈ ರೋಗ ಕಡಿಮೆಯಾಗುತ್ತದೆ.

4) <u>ವಾಂತಿಯಾಗುತ್ತಿದ್ದರೆ :</u>

ಸೌತೆ ಬೆಳ್ಳಿಯ ಬೇರನ್ನು ನೀರಿನಲ್ಲಿ ನೆನೆಸಿ ಕುಡಿಯುವುದರಿಂದ ವಾಂತಿ ಹೇಳ ಹೆಸರಿಲ್ಲದಂತೆ ಮಾಯವಾಗುತ್ತದೆ.

5) <u>ಚರ್ಮ ಸೌಮ್ಯಗೊಳಿಸುವುದು :</u>

ಸೌತೆಕಾಯಿಯ ರಸ, ನಿಂಬೆ ರಸ, ಅರಶಿಣ ಪುಡಿ ಇವುಗಳನ್ನು ಕಲಿಸಿ ಚರ್ಮಕ್ಕೆ ಲೇಪಿಸಿಕೊಂಡು ಒಂದು ಗಂಟೆಯನಂತರ ಮುಖ ತೆಳೆದುಕೊಳ್ಳುವುದರಿಂದ ಚರ್ಮ ಸೌಮ್ಯವಾಗುತ್ತದೆ.

6) <u>ಜ್ಞಾಪಕ ಶಕ್ತಿ ವರ್ಧನೆಗೆ :</u>

ಸೌತೆ ಬೀಜ, ಬಾದಾಮಿ ಬೀಜ, ಹಸುವಿನ ಹಾಲು, ಜೇನು ತುಪ್ಪ ಕಲಸಿ ಸೇವಿಸುವುದರಿಂದ ಜ್ಞಾಪಕ ಶಕ್ತಿ ಹೆಚ್ಚಿಸುತ್ತದೆ.

7) <u>ಮುಖದ ಮೇಲೆ ಚಿಬ್ಬು ಆದಾಗ :</u>

ಸೌತೆ ಬೀಜ ಅರೆದು ಚಿಬ್ಬು ಇರುವ ಜಾಗಕ್ಕೆ ಹಚ್ಚಿಕೊಂಡರೆ, ಚಿಬ್ಬು ಹೇಳ ಹೆಸರಿಲ್ಲದಂತೆ ಮಾಯವಾಗುತ್ತದೆ.

8) <u>ಅರ್ಧ ತಲೆ ನೋವಾದಾಗ :</u>

ನಿಂಬೆ ರಸದಲ್ಲಿ ದಾಲ್ಚಿನಿಯನ್ನು ತೇದು ಕಪಾಳಕ್ಕೆ ಹಚ್ಚುವುದರಿಂದ ಅರ್ಧ ತಲೆ ನೋವು ನಿವಾರಣೆಯಾಗುತ್ತದೆ.

9) <u>ಹೊಟ್ಟೆಯಲ್ಲಿ ಜಂತುಹುಳು ಆದಾಗ :</u>

ಪಪಾಯಿಕಾಯಿಯನ್ನು ಸಣ್ಣಗೆ ಹೋಳು ಮಾಡಿ, ಅದಕ್ಕೆ ಬೀಜ ಮೆಣಸಿನ ಪುಡಿ, ಜೀರ್ಗಿ ಪುಡಿ, ಉಪ್ಪು ಮತ್ತು ನಿಂಬೆ ರಸ ಸೇರಿಸಿ ತಿನ್ನುವುದರಿಂದ ಜಂತು ಹುಳು ನಾಶವಾಗುತ್ತವೆ.

ಬೆಳಗಡ್ಡಿಯನ್ನು ಸುಲಿದು, ಹೋಳುಗಳು ತೆಗೆದು ಕುಟ್ಟಿ ಬರುವ ರಸಕ್ಕೆ ಜೇನು ತುಪ್ಪ ಸೇರಿಸಿ ಸೇವಿಸಿದರೆ ಹೊಟ್ಟೆಯಲ್ಲಿರುವ ಜಂತುಗಳು ಮಲದ ಮೂಲಕ ಹೊರಬೀಳುತ್ತವೆ.

10) <u>ಮಗುವಿನ ಹೊಟ್ಟೆ ಉಬ್ಬಿದರೆ :</u>

ಅರಳೆ ಎಣ್ಣೆಯನ್ನು ವಿಳ್ಯೆದೆಲೆಗೆ ಸವರಿ ನಂತರ ಅದಕ್ಕೆ ಬಿಸಿಮಾಡಿ ಹೊಟ್ಟೆಗೆ ಶಾಖ ಕೊಟ್ಟರೆ, ಈ ರೋಗ ನಿವಾರಣೆಯಾಗುತ್ತದೆ.

11) <u>ಬಿದ್ದಿ ಗಾಯವಾದಾಗ :</u>

ನಿಂಬೆ ರಸದಲ್ಲಿ ವಿಳ್ಯೇದೆಲೆ ಕುಟ್ಟಿ, ಗಾಯವಾದ ಜಾಗಕ್ಕೆ ಹಚ್ಚಿದರೆ ಶೀಘ್ರವಾಗಿ ಗಾಯ ಮಾಯವಾಗುತ್ತವೆ.

12) <u>ಗರ್ಭದೋಷವಿದ್ದಾಗ :</u>

ಮುಂಜಾನೆ ಖಾಲಿ ಹೊಟ್ಟೆಯಲ್ಲಿ ೨ ಕೃಷ್ಣ ತುಳಸಿ ದಳಗಳನ್ನು ಕುಟ್ಟಿ ತಿನ್ನಬೇಕು. ಆಗ ರೋಗ ನಿವಾರಣೆಯಾಗುತ್ತದೆ.

ದಾಳಿಂಬೆ ಹಣ್ಣಿನ ರಸವನ್ನು ಸತತವಾಗಿ ಸೇವಿಸುತ್ತ ಬಂದರೆ ಗರ್ಭಕೋಶ ಸೇವಿಸುತ್ತ ಬಂದರೆ ಗರ್ಭಕೋಶ ಸಂಬಂಧಿಸಿದ ದೋಷಗಳೆಲ್ಲವೂ ನಿವಾರಣೆಯಾಗುತ್ತವೆ.

13) <u>ಕಣ್ಣಿಗೆ (ಸಿಳ್ಳು) ಪಿಸುರಾದಾಗ :</u>

ಬೇವಿನ ಎಲೆಗಳನ್ನು ನೀರಿನಲ್ಲಿ ಕುದಿಸಿ, ಆರಿದ ಬಳಿಕ ಸೋಸಿ ತೆಗೆದ ನೀರಿನಿಂದ ಕಣ್ಣನ್ನು ತೊಳೆದರೆ ಈ ರೋಗ ನಿವಾರಣೆಯಾಗುತ್ತದೆ.

14) <u>ಹಳೆಯ ತುರಿಕಜ್ಜಿಗೆ :</u>

ಸ್ನಾನದ ವೇಳೆ ತುರಿಕಜ್ಜಿಯ ಜಾಗವನ್ನು ಸೀಗೆ ಪುಡಿಯಿಂದ ಚೆನ್ನಾಗಿ ತೊಳೆದು, ತೆಂಗಿನ ಎಣ್ಣೆ ಸವರಿ, ಈ ರೀತಿ ಎಡಬಿಡದೆ 7 ದಿನ ಮಾಡಿದರೆ ಈ ರೋಗ ಹೇಳ ಹೆಸರಿಲ್ಲದೆ ಹೋಗುತ್ತದೆ.

15) <u>ಋತುಚಕ್ರ ದೋಷವಿದ್ದಾಗ :</u>

ಇಂತಹ ಮಹಿಳೆಯರು ಮೆಂತೆಯ ತಪ್ಪಲನ್ನು ಆಹಾರದಲ್ಲಿ ಹೆಚ್ಚಾಗಿ ಸೇವಿಸಿದರೆ ಈ ತೊಂದರೆಯಿಂದ ಮುಕ್ತರಾಗುತ್ತಾರೆ.

16) <u>ವೀರ್ಯಪುಷ್ಟಿಗೆ :</u>

ಚೆನ್ನಾಗಿ ಕಾಯಿಸಿದ ಆಕಳ ಹಾಲಿಗೆ 4-5 ನುಗ್ಗೆ ಹೂವುಗಳನ್ನು ಹಾಕಿ, ದಿನ ನಿತ್ಯ ಸೇವಿಸುತ್ತ ಬಂದರೆ ವೀರ್ಯಪುಷ್ಟಿಯಾಗುತ್ತದೆ.

17) <u>ಸ್ತ್ರೀಯರಿಗೆ ಋತುಚಕ್ರದ ಸಮಯದಲ್ಲಿ ಹೆಚ್ಚಿನ ರಕ್ತ ಹೋಗುತ್ತಿದ್ದಾಗ :</u>

ಎರಡು ಕಪ್ಪು ನುಗ್ಗೆ ಹೂವುಗಳನ್ನು ಅರೆದಿಟ್ಟುಕೊಳ್ಳಿ, ಆಕಳ ಹಾಲನ್ನು ಮತ್ತು ತೆಂಗಿನ ಕಾಯಿಯ ನೀರನ್ನು ತಲಾ ಅರ್ಧ ಲೀಟರನಷ್ಟು ತೆಗೆದುಕೊಂಡು ಅದಕ್ಕೆ ಬೆಲ್ಲವನ್ನು ಸೇರಿಸಿ ಈ ಎಲ್ಲವನ್ನು ಕಲಸಿ ಚೆನ್ನಾಗಿ ಕಾಯಿಸಿ ಪ್ರತಿದಿನ ಸಣ್ಣ ನಿಂಬೆಗಾತ್ರದಷ್ಟು ಆರು ತಿಂಗಳಕಾಲ ಸೇವಿಸಿದರೆ ಈ ರೋಗ ನಿವಾರಣೆಯಾಗುತ್ತದೆ.

18) <u>ಸ್ತ್ರೀಯರಿಗೆ ಋತು ಚಕ್ರ ಸಮಯದಲ್ಲಿ ನಾನಾ ತೊಂದರೆಯಾದಾಗ :</u>

ಉಳ್ಳಾಗಡ್ಡಿ ಹೂವನ್ನು ನೀರಿನಲ್ಲಿ ಕುದಿಸಿ, ಆ ನೀರನ್ನು ಬೆಳಿಗ್ಗೆ ಮತ್ತು ಸಂಜೆಯ ವೇಳೆಯಲ್ಲಿ ಸೇವಿಸಿದರೆ ಈ ರೋಗಗಳು ನಿವಾರಣೆಯಾಗುತ್ತವೆ.

19) <u>ಪುರುಷತ್ವ ಕೊರತೆ ಇದ್ದಾಗ :</u>

ನೇಳೆ ಹಣ್ಣು ತಪ್ಪದೇ ಸೇವಿಸಿದರೆ ಈ ರೋಗ ನಿವಾರಣೆಯಾಗುತ್ತದೆ.

20) <u>ಸುಟ್ಟುಗಾಯವಾದಾಗ :</u>

ಬೆಳಗಡ್ಡಿಯ ಎಸಳುಗಳನ್ನು ಕುಟ್ಟಿ, ಅದರ ರಸವನ್ನು ತೆಗೆದುಕೊಂಡು, ಅಷ್ಟೇ ಪ್ರಮಾಣದ ಬೆಣ್ಣೆಯೊಂದಿಗೆ ಅದನ್ನು ಸೇರಿಸಿ, ಕಲಸಿ ಸುಟ್ಟ ಗಾಯದ ಮೇಲೆ ಹಚ್ಚಿದರೆ ಬೇಗ ಗುಣಮುಖವಾಗುತ್ತದೆ.

21) <u>ಮೈಚರ್ಮದ ಮೇಲೆ ಹೊಟ್ಟೇಳುತ್ತಿದ್ದರೆ :</u>

ಸೌತೆಕಾಯಿಯ ರಸ, ತೆಂಗಿನ ಎಳೆ ನೀರು, ನಿಂಬೆ ರಸವನ್ನು ಸಮ ಪ್ರಮಾಣದಲ್ಲಿ ಸೇರಿಸಿ ಗಂಧದ ಪುಡಿ ಕಲಸಿ, ಚರ್ಮಕ್ಕೆ ಲೇಪಿಸುವುದರಿಂದ ರೋಗ ನಿವಾರಣೆಯಾಗುತ್ತದೆ.

34) **ವಕ್ತಾರರು** : **ಬಲರಾಜ ನಮಶೇಖರ**

ವಯಸ್ಸು : 48 ವರ್ಷ

ವಿಳಾಸ : ಮ.ನಂ. 14-5-170,

ಪ್ಲಾಟ ನಂ. 103, ಬೀದರ.

1) **ಮೂತ್ರದಲ್ಲಿ ವೀರ್ಯ ಹೋಗುತ್ತಿದ್ದರೆ :**

ಅಮೃತ ಬಳ್ಳಿಯ ಸತ್ವವನ್ನು ತೆಗೆದು, ವಂಗ ಭಸ್ಮ ಒಂದು ಗುಂಜೆ, ಸ್ವಲ್ಪ ಜೇನು ತುಪ್ಪದಲ್ಲಿ ಕಲೆಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ 2-2 ಚಮಚ ತಿನ್ನಬೇಕು. ಹೀಗೆ 10 ದಿವಸ ತಿಂದರೆ ವೀರ್ಯ ಗಟ್ಟಿಯಾಗಿ ಮೂತ್ರದಲ್ಲಿ ಹೋಗುವ ವಿರ್ಯ ನಿಲ್ಲುತ್ತದೆ.

ಪಥ್ಯ : 21 ದಿನ ಸ್ತ್ರೀ ಸಂಪರ್ಕ ಹೊಂದಬಾರದು.

2) **ದಮ್ಮು, ಕೆಮ್ಮು ಇದ್ದಾಗ :**

ತ್ರಿಫಲ ಕಸಾಯ ದಿನಕ್ಕೆ 3 ಸಲ 5 ದಿವಸ ಕುಡಿದರೆ ದಮ್ಮು, ಕೆಮ್ಮು ನಿವಾರಣೆಯಾಗುತ್ತದೆ.

- ಒಂದು ಗ್ಲಾಸ್ ಬಿಸಿ ನೀರನ್ನು ತೆಗೆದುಕೊಂಡು ಅದರಲ್ಲಿ ಒಂದು ಚಮಚ ಜೇನು ತುಪ್ಪ ಬೆರೆಸಿ ಅಲಿದ ನಂತರ ಮುಂಜಾನೆ, ಮಧ್ಯಾಹ್ನ, ರಾತ್ರಿ ಹೀಗೆ 3 ದಿನ ಕುಡಿದರೆ ಈ ರೋಗ ನಿವಾರಣೆಯಾಗುತ್ತದೆ.
- ಪಟಕಾವನ್ನು ಹಂಚಿನಲ್ಲಿ ಹಾಕಿ ಅಳ್ಳೆ ತರಹ ಮಾಡಿ ಇದರ ಒಂದು ಗುಂಜಿ ಭಸ್ಮಕ್ಕೆ ಸ್ವಲ್ಪ ಜೇನು ತುಪ್ಪ ಹಾಕಿ ನೆಕ್ಕಿಸಬೇಕು. ಹೀಗೆ ದಿನಕ್ಕೆ 3 ಸಲದಂತೆ 7 ದಿವಸ ತೆಗೆದುಕೊಂಡರೆ ಈ ರೋಗ ನಿವಾರಣೆಯಾಗುತ್ತದೆ.

3) **ಜ್ವರ, ಪಿತ್ತ, ಮಲೇರಿಯಾ :**

ಮೆಣಸು 50 ಗ್ರಾಂ. ದಾಲಚಿನ್ನಿ 50 ಗ್ರಾಂ. ಶುಂಠ 50 ಗ್ರಾಂ. ತುಳಸಿ ತಪ್ಪಲು 50 ಗ್ರಾಂ. ಇವೆಲ್ಲವನ್ನು ಬೇರೆ ಬೇರೆಯಾಗಿ ಕುಟ್ಟಿ ಒಂದೆಡೆ ಕಲೆಸಿ ಅದರಲ್ಲಿ ಜೇನುತುಪ್ಪ ಹಾಕಿ ಗುಳಿಗೆಯನ್ನು ಮಾಡಿಕೊಂಡು ದಿನಕ್ಕೆ 3 ಗುಳಿಗೆ 7 ದಿವಸ ತಿಂದರೆ ಜ್ವರ, ಪಿತ್ತ, ಮಲೇರಿಯಾ ರೋಗ ನಿವಾರಣೆಯಾಗುತ್ತದೆ.

4) <u>ಕಾಮಣಿ ಆದಾಗ</u> :

ಪಟಕಾವನ್ನು ಹಂಚಿನ ಮೇಲೆ ಹಾಕಿ ಹುರಿದು ಅಳ್ಳನ್ನು ಮಾಡಿ. ಇದನ್ನು ಬಾಳೆ ಹಣ್ಣಿನಲ್ಲಿ ಹಾಕಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ತಿನ್ನಿಸಬೇಕು. ಹೀಗೆ 7 ದಿನ ಸೇವಿಸಿದರೆ ಕಾಮಲೆ ರೋಗ ನಿವಾರಣೆಯಾಗುತ್ತದೆ.

5) <u>ಮೂಲವ್ಯಾಧಿ</u> :

ಬಾಳೆ ಹಣ್ಣನ್ನು ಮತ್ತು ಇಲಾಚಿ ಎರಡನ್ನು ಒಂದೆಡೆ ಸೇರಿಸಿ ರೋಗಿಗೆ ತಿನ್ನಲು 8 ದಿವಸ ಕೊಟ್ಟರೆ ಈ ರೋಗ ನಿವಾರಣೆಯಾಗುತ್ತದೆ.

6) <u>ಕೀಲು ನೋವು</u> :

ಅಶ್ವಗಂಧ ಶೇ. 75% ರಷ್ಟು ಬೆಲ್ಲ ಶೇ. 25 ರಷ್ಟು ತೆಗೆದುಕೊಂದು ಚೆನ್ನಾಗಿ ಕುಟ್ಟಿದ ಪುಡಿಯನ್ನು 21 ದಿವಸ 30 ಗ್ರಾಂ. ನಷ್ಟು ಪ್ರತಿದಿನ ತಿಂದರೆ ಈ ರೋಗ ನಿವಾರಣೆಯಾಗುತ್ತದೆ.

7) <u>ಲಕ್ವ ಹೊಡೆದಾಗ</u> :

ಅಶ್ವಗಂಧ 10 ಗ್ರಾಂ. ಜಾವಲೆ 1 ತೊಲೆ, ಜೈಫಳ 10, ಶುಂಠಿ 10 ಗ್ರಾಂ. ತೆಗೆದುಕೊಂಡು ಚೆನ್ನಾಗಿ ಕುಟ್ಟಿ ಚೂರ್ಣ ತಯಾರಿಸಿ ದಿನಾಲು ಮುಂಜಾನೆ ಎರಡು ಚಮಚ ಹೀಗೆ 1 ತಿಂಗಳು ತಿನ್ನುವುದರಿಂದ ಈ ರೋಗ ನಿವಾರಣೆಯಾಗುತ್ತದೆ.

8) <u>ದೇಹದಲ್ಲಿ ಯಾವುದೇ ಬೇನೆ ಇದ್ದಾಗ</u> :

ಆಕಳ ತುಪ್ಪ – 1 ಕಿ.ಲೋ, ಜೇನುತುಪ್ಪ 25 ಗ್ರಾಂ. ಶುಂಠಿ 25 ಗ್ರಾಂ. ತೆಗೆದುಕೊಂಡು ಸ್ವಚ್ಛವಾದ ಒಂದು ಡಬ್ಬಿಯಲ್ಲಿ ತುಂಬಿ ಇವೇ 11 ದಿವಸ ಹಾಗೇ ಇಡಬೇಕು. ನಂತರ ದಿನಾಲು ಸ್ವಲ್ಪ ಸ್ವಲ್ಪ 21 ದಿವಸ ತಿಂದರೆ ದೇಹದಲ್ಲಿ ಯಾವುದೇ ರೋಗ ಇದ್ದರೂ ಕೂಡ ನಿವಾರಣೆಯಾಗುತ್ತದೆ.

9) <u>ದಮ್ಮು ಕೆಮ್ಮು ಆದಾಗ</u> :

ಬಿಳಿ ಎಕ್ಕಿ ಗಿಡದ ಹೂ ಮತ್ತು ಕರಿ ಮೆಣಸು ಹಾಕಿ ಗುಳಿಗೆಯನ್ನು ಮಾಡಿ ವೀಳ್ಯದೆಲೆಯೊಂದಿಗೆ ಮುಂಜಾನೆ ಮತ್ತು ರಾತ್ರಿ ಊಟವಾದ ನಂತರ ಹೀಗೆ 2-3 ದಿನ ತಿನ್ನುವುದರಿಂದ ದಮ್ಮು ಕೆಮ್ಮು ರೋಗ ನಿವಾರಣೆಯಾಗುತ್ತದೆ.

10) ಸ್ತ್ರೀಯರಿಗೆ ಬಿಳಿ ಸೆರಗು ಮತ್ತು ಕೆಂಪು ಸೆರಗು ರೋಗ ವಿದ್ದಾಗ :

- ಅಶ್ವಗಂಧ 50 ಗ್ರಾಂ. ತೆಗೆದುಕೊಂಡು ಚೂರ್ಣ, ತಯಾರಿಸಿ. ಒಂದು ಗ್ಲಾಸ ಆಕಳ ಹಾಲಿನಲ್ಲಿ ಸ್ವಲ್ಪ ಚೂರ್ಣ ಸ್ವಲ್ಪ ಖಡಿಸಕ್ಕರೆಯನ್ನು ಸೇರಿಸಿ ಚೆನ್ನಾಗಿ ಕಲೆಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ 21 ದಿವಸ ಕುಡಿಯಬೇಕು.
- ಅಲ್ಲಾ ಮತ್ತು ಬೇವಿನ ತಪ್ಪಲು ಎರಡು ತೆಗೆದುಕೊಂಡು ಚೆನ್ನಾಗಿ ಕುಟ್ಟಿ ಗುಳಿಗೆಯನ್ನು ಮಾಡಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಒಂದೊಂದು ಗುಳಿಗೆಯನ್ನು 3 ದಿವಸ ತಿಂದರೆ ಈ ರೋಗ ನಿವಾರಣೆಯಾಗುತ್ತದೆ.

11) ತಲೆ ನೋವು ಆದಾಗ :

ನವಲಸರ ಮತ್ತು ಸುಣ್ಣ ನೆನೆಸಿದ ನೀರು ಇವೆರಡನ್ನೂ ಕಲೆಸಿ ವಾಸನೆ ನೋಡಿ ಇದನ್ನೆ ತಲೆಗೆ ಹಚ್ಚಿಕೊಳ್ಳಬೇಕು. ಹೀಗೆ 2-3 ದಿನ ಮಾಡುವುದರಿಂದ ಈ ರೋಗ ನಿವಾರಣೆಯಾಗುತ್ತದೆ.

12) ಸಕ್ಕರೆ ಬೇನೆ ಇದ್ದಾಗ :

ಹತ್ತಿ ಗಿಡದ ತೊಗಟೆಯನ್ನು ನೆರಳಿನಲ್ಲಿ ಒಣಗಿಸಿ ಚೆನ್ನಾಗಿ ಕುಟ್ಟಿ ಪುಡಿ ಮಾಡಿ ಇದರಲ್ಲಿ ಖಡಿಸಕ್ಕರೆಯನ್ನು ಸೇರಿಸಿ ಕಲಸಿ 48 ದಿವಸಗಳ ಕಾಲ ದಿನಾಲು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಒಂದು ಚಮಚ, ರಾತ್ರಿ ಊಟವಾದ ನಂತರ ಒಂದು ಚಮಚ ತಿಂದರೆ ಸಕ್ಕರೆ ರೋಗ ನಿವಾರಣೆಯಾಗುತ್ತದೆ.

13) ವೀರ್ಯ (ಪತಲಾ ಆದರೆ) ಪಚನವಾಗುತ್ತಿದ್ದಾಗ :

ಉಳ್ಳಗಡ್ಡಿಯನ್ನು ಕುಟ್ಟಿ ಒಂದು ಗ್ರಾಂ. ರಸ ತೆಗೆದು ಇದರಲ್ಲಿ ಸ್ವಲ್ಪ ಬೆಲ್ಲವನ್ನು ಹಾಕಿ ಸ್ವಲ್ಪ ಕಾಯಿಸಿ ತಣ್ಣಗಾದ ನಂತರ 3 ದಿವಸ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ತೆಗೆದುಕೊಂಡರೆ ವೀರ್ಯ ಗಟ್ಟಿಯಾಗುತ್ತದೆ.

14) ಹೊಟ್ಟೆ ನೋವು ಆದಾಗ :

- ಕೋಳಿ ಅಂಡಿಯ (ತತ್ತಿ) ಮೇಲಿನ ಖಪ್ಪರನ್ನು (ಕವಚ) ಒಡೆದು ಅರೆದು ಭಸ್ಮವನ್ನು ತಯಾರಿಸಿ. ಹೆಸರು ಬೆಳೆಯನ್ನು ಅರೆದು ಇದರಲ್ಲಿ ಬೆರೆಸಿ ನಂತರ ಜೇನು ತುಪ್ಪದಲ್ಲಿ ಕಲೆಸಿ 3 ದಿನ ತಿಂದರೆ ಹೊಟ್ಟೆ ನೋವು ನಿವಾರಣೆಯಾಗುತ್ತದೆ.
- ಹೆಗಣ್ಣ ಅಥವಾ ಇಲಿ ಲೆಂಡ್ಕಿ (ಮಲ) ವನ್ನು ತೊಯಿಸಿ ಹೊಕ್ಕಳು ಮೇಲೆ ಇಟ್ಟಿ ನೀರು ಸೋರಿಸಬೇಕು. ಹೀಗೆ ಮಾಡಿದರೆ ಹೊಟ್ಟೆ ನೋವು ರೋಗ ನಿವಾರಣೆಯಾಗುತ್ತದೆ.

15) **ಚೇರ್ ಇಳಿದಾಗ** :

ಕಾಲಿಗೆ ಒಂದು ಬಟ್ಟೆಯನ್ನು ಕಟ್ಟಿ ಮೇಲೆ ಕೆಳಗೆ ಕುಳಿತರೆ ಚೇರ್ ನಿವಾರಣೆಯಾಗುತ್ತದೆ.

16) **ಮೈ ಕೈ ಸುಟ್ಟಾಗ** :

ಒಂದು ಕಂಬುಟಿ (ಕಬ್ಬಿಣ ಬುಟ್ಟಿ) ನೀರು ತುಂಬಿ ಅದರಲ್ಲಿ ಉಪ್ಪನ್ನು ಹಾಕಿ ಮತ್ತು ಸ್ವಲ್ಪ ಪಟಕಾ ಹಾಕಿ ಚೆನ್ನಾಗಿ ಕಲೆಸಿ ಸುಟ್ಟ ಭಾಗವನ್ನು ಈ ನೀರಿನಲ್ಲಿ ಎತ್ತಿ ಹಾಗೆ ಇಡಬೇಕು. ಸ್ವಲ್ಪ ಸಮಯದ ನಂತರ ತೆಗೆಯಬೇಕು. ಹೀಗೆ ಮಾಡಿದರೆ ಗುಳ್ಳೆ ಏಳುವುದು, ಉರಿಯುವದು ಕಡಿಮೆಯಾಗಿ ಗಾಯ ಬೇಗ ಮಾಯವಾಗುತ್ತದೆ.

17) **ಹೊಟ್ಟೆಯಲ್ಲಿ ಕಾಮಣಿ ಇಳಿದಾಗ** :

ಸ್ವಲ್ಪ ಸಕ್ಕರೆಯನ್ನು ನೆಲದ ಮೇಲೆ ಹಾಕಿದಾಗ ನೊಣ ಬರುತ್ತವೆ. ಆ ನೋಣವನ್ನು ಕೊಂದು ಒಂದು ತಂಬಿಗೆ ನೀರಿನಲ್ಲಿ ಹಾಕಿ ಚೆನ್ನಾಗಿ ಕಿವುಚಿ ನಂತರ ಒಂದು ಬಟ್ಟೆಯಲ್ಲಿ ಸೋಸಿ ನೀರು ತೆಗೆದು ರೋಗಿಗೆ ಕುಡಿಸಬೇಕು. ಹೀಗೆ 2-3 ದಿವಸ ಕುಡಿಸುವುದರಿಂದ ಈ ರೋಗ ನಿವಾರಣೆಯಾಗುತ್ತದೆ.

18) **ಕಾಲಲ್ಲಿ ಹುಣ್ಣು ಆದಾಗ** :

ನಾಯಿಯ ಜೊಲ್ಲನ್ನು ಹುಣ್ಣು ಆದ ಜಾಗಕ್ಕೆ 2 ದಿವಸ ಹಚ್ಚುವುದರಿಂದ ಈ ರೋಗ ನಿವಾರಣೆಯಾಗುತ್ತದೆ.

19) **ಹಲ್ಲು ಬೇನೆ ಆದಾಗ** :

ಪಟ್ಟಿಕ ಹುರಿದ ಭಸ್ಮ, ಕ್ಯಾರಳ, ನೆಲ್ಲಿಕಾಯಿ, ಕರಿ ಮೆಣಸು, ಉಪ್ಪು, ಬೇವಿನ ತಪ್ಪಲು, ತೊಗರಿ ಬೆಳೆ ಈ ಎಲ್ಲವನ್ನು ಚೆನ್ನಾಗಿ ಕುಟ್ಟಿ ಪೌಡರನ್ನು ತಯಾರಿಸಿ ಹಲ್ಲಿಗೆ ತಿಕ್ಕುವುದರಿಂದ, ಹಲ್ಲು ಬೇನೆ ರೋಗ ನಿವಾರಣೆಯಾಗುತ್ತದೆ.

೨೦) **ಹೊಟ್ಟೆ ಬೇನೆ ಆದಾಗ** :

ಮೂರು ಲೀಟರ ಆಕಳ ಹಾಲನ್ನು ತೆಗೆದುಕೊಂಡು ಅದರಲ್ಲಿ ೩ ಕ್ಯಾರಳ ಹಾಕಿ ಚೆನ್ನಾಗಿ ಕುದಿಸಿ ೩ ಕಪ್ ಹಾಲು ಇರುವಾಗ ಒಲೆಯ ಮೇಲ್ಲಿಂದ ತೆಗೆದು ಆರಿಸಿ ಕುಡಿಸುವುದರಿಂದ ಹೊಟ್ಟೆ ನೋವು ರೋಗ ಮಾಯವಾಗುತ್ತದೆ.

೩೫) **ವಕ್ತಾರರು : ಬಸಪ್ಪಾ ಏಸಗೆ**

ವಯಸ್ಸು : ೯೮ ವರ್ಷ

ಊರು : ಬಾಳೂರು,

ತಾ: ಭಾಲ್ಕಿ, ಜಿ: ಬೀದರ.

1) **ಕೈ ಕಾಲು ಮುಟುಕಿ ಆದಾಗ (ವಾಯ್‌ದಿಂದ)** :

ಹೆಬ್ಬೇವು (ಹೆಬ್ಬೆನ ಗಿಡದ) ತಪ್ಪಲು ತಂದು ನೀರಿನ ಜೊತೆ ಕಲಸಿ ಕುಟ್ಟಿ, ಅರಬಿ (ಬಟ್ಟೆ) ಯಲ್ಲಿ ಹಿಂಡಿ ಒಂದು ಸಣ್ಣಾ ಗ್ಲಾಸ್ ರಸ ತೆಗೆಯಬೇಕು. ಅದರಲ್ಲಿ ಲವಂಗ ೮, ಜಾಜುಕಾಯಿ ಅರ್ಧ, ಮೆಣಸು 10 ಇವೆಲ್ಲಾ ಅರೆದು ಆ ರಸದಲ್ಲಿ ಹಾಕಬೇಕು. ನಂತರ ಆ ರಸ ಕುಡಿಯಬೇಕು. ರಸ ಕುಡಿದ ಸ್ವಲ್ಪ ಸಮಯದ ನಂತರ ಮಲೋದಿ ಊಟ ಮಾಡಬೇಕು. ಊಟ ಮಾಡಿದ ಆರು ಗಂಟೆಗಳ ನಂತರ ನವಣೆ ಬಾನ ಊಟ ಮಾಡಬೇಕು. ಆ ದಿನ ಹಾಲು ಮತ್ತು ಇತ್ಯಾದಿ ಪದಾರ್ಥಗಳು ಊಟ ಮಾಡಬಾರದು ಮತ್ತು ಆ ದಿನ ಗಾಳಿಗೆ ಹೊರಗೆ ಬರಬಾರದು. ಹೀಗೆ ಮಾಡುವುದರಿಂದ ಈ ರೋಗ ಹೇಳ ಹೆಸರಿಲ್ಲದಂತೆ ಮಾಯವಾಗುತ್ತದೆ.

೨) **ಮುಳ್ಳು ಮುರಿದರೆ** :

ಬಬಲೆ ಗಿಡದ ಕೊಡರನ್ನು ಸಂಗ್ರಹಿಸಿ ತಿಂದರೆ ಮುಳ್ಳು ತನ್ನಿಂತ ತಾನೆ ಹೊರಗೆ ಬರುತ್ತದೆ.

೩) **ಗರಮಿಯಾಗಿ ಹುಣ್ಣಾಗುತ್ತಿದ್ದರೆ** :

ಬನ್ನಿ ಗಿಡದ ತಪ್ಪಲನ್ನು ಕುಟ್ಟಿ, ಅರೆದು ಅದಕ್ಕೆ ಸ್ವಲ್ಪ ಸಕ್ಕರೆ ಕಲಸಿ ತಿಂದರೆ ಈ ರೋಗ ನಿವಾರಣೆಯಾಗುತ್ತದೆ.

4) <u>ಹೊಟ್ಟೆನೋವಾದಾಗ :</u>

ಅಜುವಾನನ್ನು ಅರೆದು ತಿಂದರೆ ಹೊಟ್ಟೆ ನೋವು ನಿವಾರಣೆಯಾಗುತ್ತದೆ.

5) <u>ಗಜಕರ್ಣ ಆದಾಗ :</u>

ಅಜವಾನದ ಎಣ್ಣೆಯನ್ನು ಗಜಕರ್ಣಆದ ಜಾಗಕ್ಕೆ ಹಚ್ಚಿದರೆ, ಗಜಕರ್ಣ ಹೇಳ ಹೆಸರಿಲ್ಲದೆ ಮಾಯವಾಗುತ್ತದೆ.

6) <u>ಚಿಕ್ಕ ಮಕ್ಕಳು ಬೇಗ ಮಾತಾಡದೇ ಇದ್ದಾಗ :</u>

ಶ್ರೀಗಂಧವನ್ನು ನೀರಿನಲ್ಲಿ ತೇಲಿಸಿ, ಸೋಸಿ ಬರುವ ಗಂಧವನ್ನು ಮಕ್ಕಳ ನಾಲಿಗೆಗೆ ಹಚ್ಚಿದರೆ ಮಕ್ಕಳು ಬೇಗ ಮಾತನಾಡುತ್ತಾರೆ.

7) <u>ಮೂತ್ರದ್ವಾರ ಬಂದಾದಾಗ :</u>

ಬಜಿಯನ್ನು ಕುಟ್ಟಿ, ಪುಡಿಮಾಡಿ ಜೇನು ತುಪ್ಪದೊಂದಿಗೆ ತಿಂದರೆ, ಮೂತ್ರ ನಿಂತಿರುವುದನ್ನು ನಿವಾರಣೆಯಾಗಿ ಮೂತ್ರದೊಂದಿಗೆ ಕಲ್ಲಿನ ಹರಳುಗಳಿದ್ದರೆ ಹೊರಗೆ ಬರುತ್ತದೆ. ಇದರಿಂದ ಈ ರೋಗ ನಿವಾರಣೆಯಾಗುತ್ತದೆ.

8) <u>ಶರೀರದ ಯಾವುದೇ ಭಾಗದಲ್ಲಿ ಬಾವು ಬಂದಿದರೆ :</u>

ಬಜಿಯನ್ನು ನೀರಿನಲ್ಲಿ ಅದ್ದಿ, ಕಲ್ಲಿಗೆ ಸೋಸಿ, ಬಾವು ಇದ್ದ ಜಾಗಕ್ಕೆ ಲೇಪಿಸಿದರೆ, ಬಾವು ಮತ್ತು ಅದರ ನೋವು ಕಡಿಮೆಯಾಗುತ್ತದೆ.

9) <u>ಮೂರ್ಛೆ ರೋಗ ಇದ್ದಾಗ</u> :

ಬಜೆಯನ್ನು ಕುಟ್ಟಿ ಪುಡಿಮಾಡಿ, ಬಿಸಿ ನೀರಿಗೆ ಹಾಕಿ, ಆ ನೀರಿನಿಂದ ಮಕ್ಕಳಿಗೆ ಸ್ನಾನ ಮಾಡಿಸಿದರೆ ಮೂರ್ಛೆ ರೋಗ ನಿವಾರಣೆಯಾಗುತ್ತದೆ.

10) <u>ನೀರು ವಾಂತಿಯಾಗುತ್ತಿದ್ದರೆ</u> :

ಸ್ವಲ್ಪ ಬಜೆಯನ್ನು ಕುಟ್ಟಿ, ಆ ಪುಡಿಯನ್ನು ಜೇನು ತುಪ್ಪಕ್ಕೆ ಕಲಸಿ ತಿಂದರೆ ಈ ರೋಗ ನಿವಾರಣೆಯಾಗುತ್ತದೆ.

11) <u>ಹಳೆವಾತ ಮತ್ತು ಏಟು ತಗಲಿ ಆದ ನೋವಿಗೆ</u> :

ಬಜೆಯನ್ನು ಕುಟ್ಟಿ ಪುಡಿಮಾಡಿ ಆ ಚುರಣವನ್ನು ಸರಾಯಿಯಲ್ಲಿ ಹಾಕಿ ಕಲಿಸಿ ನೋವು ಇರುವ ಜಾಗಕ್ಕೆ ಹಚ್ಚಿದರೆ ಈ ರೋಗಗಳು ನಿವಾರಣೆಯಾಗುತ್ತವೆ.

12) <u>ಮೂಲವ್ಯಾಧಿ</u> :

ಬಜೆಯನ್ನು ಕುಟ್ಟಿ ಪುಡಿಮಾಡಿ ಅದರ ಚುರ್ಣ ಬೆಂಕಿ ಮೇಲೆ ಹಾಕಿ ಗುದದ್ವಾರಕ್ಕೆ ಆ ಹೊಗೆ ಕೊಟ್ಟರೆ ಮೂಲವ್ಯಾಧಿ ಶಮನಗೊಳ್ಳುತ್ತದೆ.

13) <u>ಮಕ್ಕಳಿಗೆ ಕೆಮ್ಮು ಆದಾಗ</u> :

ಬಜೆಯನ್ನು ನೀರಿನಲ್ಲಿ ತೇಲಿಸಿ ಸೊಸಿ ಚಿಕ್ಕ ಮಕ್ಕಳ ಎದೆಗೆ ಲೇಪಿಸಿದರೆ, ಕೆಮ್ಮು ನಿವಾರಣೆಯಾಗುತ್ತದೆ.

14) <u>ಸ್ತ್ರೀಯರು ಬಿಳಿ ಸೆರಗು ಆಗುತಿದ್ದಾಗ</u> :

ನೆರಳೆ (ನೆಲ್ಲೆ) ಗಿಡದ ತೋಗಟೆಯನ್ನು ನೀರಿನಲ್ಲಿ ಕುದಿಸಿ, ನಂತರ ಅದರಲ್ಲಿ ಜೇನು ತುಪ್ಪ ಬೆರಿಸಿ ದಿನಕ್ಕೆ ಎರಡು ಸಲ ಕುಡಿಯುದರಿಂದ ಬಿಳಿ ಸೆರಗನ್ನು ಗುಣಮುಖವಾಗುತ್ತದೆ.

36) **ವಕ್ತಾರರು : ಗೋದಾವರಿ ಗಂಡ ಪ್ರಲ್ಹಾದ**

ವಯಸ್ಸು : 45 ವರ್ಷ

ಊರು : ನಾಗೂರ (ಕೆ),

ತಾಲೂಕಾ : ಭಾಲ್ಕಿ, ಜಿ: ಬೀದರ.

1) **ತೇಳು ಕಡಿದಾಗ** :

ತೇಳು (ಚೇಳು) ಕಡಿದಾಗ ಗೇರುಬಿಕೆ ತಪ್ಪಲನ್ನು ವರೆಸಿ ಕಿವಿಯಲ್ಲಿ ರಸ ಹಿಂಡಿದರೆ ವಿಷ ಮಾಯವಾಗಿ ಈ ರೋಗ ನಿವಾರಣೆಯಾಗುತ್ತದೆ.

2) **ಕಾಲಲ್ಲಿ ಮುಳ್ಳು ನಟ್ಟಿ ಬರದೆ ಇದ್ದಾಗ** :

ಉತರಣಿಯ ತಪ್ಪಲನ್ನು ಬೆಲ್ಲದಲ್ಲಿ ಕಲಸಿ ಮೂರುದಿನ ತಿಂದರೆ ಆ ಮುಳ್ಳು ಹೊರಗಡೆ ಬರುತ್ತದೆ. ಆಗ ಈ ರೋಗ ನಿವಾರಣೆಯಾಗುತ್ತದೆ.

3) **ಹೊಟ್ಟಿ ಸೂಲ (ಚಿಕ್ಕ ಮಕ್ಕಳಿಗೆ)** :

ಉತರಣಿ ಗಿಡದ ಬೇರಿನಿಂದ ಗಂಧವನ್ನು ತೆಗೆದು ಮಗುವಿನ ನಾಲಿಗೆಗೆ ನೆಕ್ಕಿಸಿದರೆ ಎರಡು ದಿವಸಲ್ಲಿ ಈ ರೋಗ ನಿವಾರಣೆಯಾಗುತ್ತದೆ.

37) **ವಕ್ತಾರರು** : **ಇಟಬಾಯಿ ಗಂಡ ನರಸಿಂಗರಾವ**

ವಯಸ್ಸು : 52 ವರ್ಷ

ಊರು : ನಾಗೂರ (ಕೆ),

ತಾಲೂಕಾ : ಭಾಲ್ಕಿ, ಜಿ: ಬೀದರ.

1) **ಕಣ್ಣಿಗೆ ನೀರು ಸೊರುತ್ತಿದ್ದರೆ** :

ಫಡ ಪತ್ರಿ ಗಿಡದ ಹಾಲು ಕಣ್ಣು ಹುಬ್ಬಿಗೆ ಹಚ್ಚಿದರೆ ತಕ್ಷಣವೆ ಕಣ್ಣಿನ ನೀರು ನಿಲ್ಲುತ್ತವೆ. ಆಗ ಈ ರೋಗ ನಿವಾರಣೆಯಾಗುತ್ತದೆ.

2) **ಮಲ್ಲಜೆರಿಯಿಂದ ಕೈ ಕಾಲು ಉಬ್ಬಿದರೆ** :

ಧತ್ರಿ ಗಿಡದ ತಪ್ಪಲು ಚನಂಗಿ ತಪ್ಪಲು ಫಡ ಪತ್ರಿ ತಪ್ಪಲು ಈ ಮೂರು ತಪ್ಪಲು ಕುಟ್ಟಿ ಮಲ್ಲಜೆರಿಯಿಂದ ಉಬ್ಬಿದ ಸ್ಥಳಕ್ಕೆ ವರೆಸಿ ನಂತರ ಆ ಜಾಗಕ್ಕೆ ಬೆಂಕಿಯಿಂದ ಕಾವು ಕೊಡಬೇಕು. ಆಗ ಈ ರೋಗ ಹೆಳ ಹೆಸರಿಲ್ಲದಂತೆ ಮಾಯವಾಗುತ್ತದೆ.

3) **ಕಾಮಣಿಯಾದಾಗ** :

ಪತ್ರಿ ಗಿಡದ ತಪ್ಪಲನ್ನು ಕುಟ್ಟಿ ಎರಡು ಚಮಚ 15 ದಿನಗಳ ಕಾಲ ಕುಡಿದರೆ ಆಗ ಈ ರೋಗ ನಿವಾರಣೆಯಾಗುತ್ತದೆ.

4) <u>ಮಧ್ಯಾನ್ಹದ ವೇಳೆ ಎಮ್ಮೆ ತೊರೆದರೆ :</u>

ಧತ್ರಿ ಗಿಡದ ಎಲೆಗಳನ್ನು ಕುಟ್ಟಿ ಎಮ್ಮೆಯ ಬೆನ್ನಿಗೆ ಹಚ್ಚಿದರೆ ಈ ರೋಗ ಹೆಳ ಹೆಸರಿಲ್ಲದಂತೆ ಮಾಯವಾಗುತ್ತದೆ.

38) **ವಕ್ತಾರರು : ಉಮಾಕಾಂತ ಕಾರಬಾರಿ**

ವಯಸ್ಸು : 40 ವರ್ಷ

ಊರು : ನಾಗೂರ (ಕೆ),

ತಾಲೂಕಾ : ಭಾಲ್ಕಿ, ಜಿ: ಬೀದರ.

1) <u>ಚೇಳು ಕಡಿದಾಗ :</u>

ಅಪಟಿ ಗಿಡದ ತಪ್ಪಲನ್ನು ಕುಟ್ಟಿ ಚೆಳು ಕಡಿದ ಸ್ಥಳಕ್ಕೆ ಹಚ್ಚಿದರೆ ನಾಲ್ಕು ಗಂಟೆಯ ಒಳಗಾಗಿ ವಿಷ ಮಾಯವಾಗಿ ನೋವು ಕಡಿಮೆಯಾಗಿ ರೋಗ ನಿವಾರಣೆಯಾಗುತ್ತದೆ.

2) <u>ಹಲ್ಲು ಬೇನೆಯಾದಾಗ :</u>

ಕರ್ಪೂರವನ್ನು ಕುಟ್ಟಿ ಹಲ್ಲು ಬೇನೆ ಇದ್ದ ಜಾಗಕ್ಕೆ ಇಡಬೇಕು ಆಗ ಜೊಲ್ಲು ಸೋರುತ್ತದೆ. ನಂತರ ಹಲ್ಲು ಬೇನೆಯ ರೋಗ ಕಡಿಮೆಯಾಗುತ್ತದೆ.

3) <u>ಹೊಟ್ಟೆ ನೋವಾದಾಗ :</u>

ಕೊಡಪತ್ರಿ ಗಿಡದ ಎಲೆಗಳನ್ನು ತಿಂದರೆ ಸಾಮಾನ್ಯ ಹೊಟ್ಟೆ ನೋವು ಆಗಿಂದಾಗೆ ಕಡಿಮೆಯಾಗುತ್ತದೆ.

4) <u>ದನಗಳಿಗೆ ಮುಗಬತ್ತಿ (ಮೂಗಿನಲ್ಲಿ ಗಡ್ಡೆ) ಆದಾಗ :</u>

ಎಕ್ಕಿ ಗಿಡದ ಘಂಟಿಯನ್ನು ದನದ ಮುಗಿನಲ್ಲಿ ತುರುಕಿದರೆ ಮುಗುಬತ್ತಿ ಗಡ್ಡಿ ವಡೆಯುತ್ತದೆ. ಕೆಟ್ಟ ರಕ್ತ ಹೊರಗೆ ಬರುತ್ತದೆ ಆಗ ರೋಗ ನಿವಾರಣೆಯಾಗುತ್ತದೆ.

5) ಇಸುಬು ಆದಾಗ :

ಕತ್ತೆಯ ಲದ್ದಿಯನ್ನು ಜಮಾಯಿಸಿ ಅದಕ್ಕೆ ಬೆಂಕಿಹಚ್ಚಿ ಅದರ ಮೇಲೆ ಕಂಚಿನ ಗಂಗಳವನ್ನು ಇಟ್ಟು ಗಂಗಳದಲ್ಲಿ ನೀರುಹಾಕಿ ಆಗ ಗಂಗಳ ಬುಡಕ್ಕೆ ಎಣೆ ಬರುತ್ತದೆ. ಆ ಎಣೆಯನ್ನು ಇಸುಬು ಇದ್ದ ಜಾಗಕ್ಕೆ ಹಚ್ಚಿದರೆ ಇಸುಬು ಹೆಳ ಹೆಸರಿಲ್ಲದೆ ಮಾಯವಾಗುತ್ತದೆ.

39) **ವಕ್ತಾರರು** : **ನಾಗಯ್ಯಾ ಸ್ವಾಮಿ**

ವಯಸ್ಸು : 70 ವರ್ಷ

ಊರು : ನಾಗೂರ (ಕೆ),

ತಾಲೂಕಾ : ಭಾಲ್ಕಿ, ಜಿ: ಬೀದರ.

1) ಮುಲಾದಿಯಾದಾಗ :

ಬಿಳಿ ಪಾಂಗರಗಿ ಚಕ್ಕಿಯನ್ನು ತಂದು ಕುಟ್ಟಿ ಸ್ವಲ್ಪ ನೀರುಹಾಕಿ ಆ ರಸಕ್ಕೆ ಖಡಸಕ್ಕರೆ ಮತ್ತು ಆಕಳ ಹಾಲಿನಿಂದ ತೈಯಾರಿಸಿದ ತುಪ್ಪಾಕಲಸಿ ಏಳು ದಿನ ಕುಡಿಯಬೇಕು. (ರೊಟ್ಟಿ ಮಸರು ತುಪ್ಪ ಊಟಮಾಡಬೇಕು – ಉಪ್ಪು ಖಾರಾ ಇತ್ಯಾದಿ ಊಟಮಾಡಬಾರದು.)

2) ಕರಿ ಇಸುಬು ಆದರೆ :

ಬಿಳಿ ಪಾಂಗರಗಿ ಚಕ್ಕಿಯನ್ನು ತಂದು ಕುಟ್ಟಿ ಸೋಸಿ, ಹೊಟ್ಟು ಮಾಡಬೇಕು, ನಂತರ ಇಸುಬು ಇದ್ದ ಜಾಗ ಚೆನ್ನಾಗಿ ತೊಳೆದು ಅದನ್ನು ಸೂಜಿ ಇಸುಬು ಆದ ಸ್ಥಳಕ್ಕೆ ಇದನ್ನು ಹಚ್ಚಿದರೆ ಈ ರೋಗ ನಿವಾರಣೆಯಾಗುತ್ತದೆ.

ರಸಕಪೂರನ್ನು ತಂದು ಇಸುಬು ರೋಗ ಇದ್ದವರು ಒಂದು ಕಲ್ಲಿನ ಮೇಲೆ ಉಗುಳಿ, ಆ ರಸಕಪೂರು ಉಗುಳಿದ ಉಗುಳಿನ ಮೇಲೆ ಸೋಸಬೇಕು. ಸೋಸಿ ಬಂದ ಗಂಧವನ್ನು ಇಸುಬು ಇದ್ದ ಸ್ಥಳಕ್ಕೆ ಹಚ್ಚಿದರೆ ಈ ರೋಗ ನಿವಾರಣೆಯಾಗುತ್ತದೆ.

3) <u>ರಕ್ತ ಒತ್ತಡಕ್ಕೆ :</u>

ಸೌತೇಕಾಯಿ ರಸ, ಜೇನು ತುಪ್ಪ ಮತ್ತು ನಿಂಬೆ ರಸ ಬೆರೆಸಿ ಸೇವಿಸುತ್ತಿದ್ದರೆ, ಈ ರೋಗ ಕಡಿಮೆಯಾಗುತ್ತದೆ.

4) <u>ವಾಂತಿಯಾಗುತ್ತಿದ್ದರೆ :</u>

ಸೌತೆ ಬೆಳ್ಳಿಯ ಬೇರನ್ನು ನೀರಿನಲ್ಲಿ ನೆನೆಸಿ ಕುಡಿಯುವುದರಿಂದ ವಾಂತಿ ಹೇಳ ಹೆಸರಿಲ್ಲದಂತೆ ಮಾಯವಾಗುತ್ತದೆ.

5) <u>ಚರ್ಮ ಸೌಮ್ಯಗೊಳಿಸುವುದು :</u>

ಸೌತೆಕಾಯಿಯ ರಸ, ನಿಂಬೆ ರಸ, ಅರಶಿಣ ಪುಡಿ ಇವುಗಳನ್ನು ಕಲಿಸಿ ಚರ್ಮಕ್ಕೆ ಲೇಪಿಸಿಕೊಂಡು ಒಂದು ಗಂಟೆಯನಂತರ ಮುಖ ತೆಗೆದುಕೊಳ್ಳುವುದರಿಂದ ಚರ್ಮ ಸೌಮ್ಯವಾಗುತ್ತದೆ.

6) <u>ಜ್ಞಾಪಕ ಶಕ್ತಿ ವರ್ಧನೆಗೆ :</u>

ಸೌತೆ ಬೀಜ, ಬಾದಾಮಿ ಬೀಜ, ಹಸುವಿನ ಹಾಲು, ಜೇನು ತುಪ್ಪ ಕಲಸಿ ಸೇವಿಸುವುದರಿಂದ ಜ್ಞಾಪಕ ಶಕ್ತಿ ಹೆಚ್ಚಿಸುತ್ತದೆ.

7) <u>ಮುಖದ ಮೇಲೆ ಚಿಬ್ಬು ಆದಾಗ :</u>

ಸೌತೆ ಬೀಜ ಅರೆದು ಚಿಬ್ಬು ಇರುವ ಜಾಗಕ್ಕೆ ಹಚ್ಚಿಕೊಂಡರೆ, ಚಿಬ್ಬು ಹೇಳ ಹೆಸರಿಲ್ಲದಂತೆ ಮಾಯವಾಗುತ್ತದೆ.

8) <u>ಅರ್ಧ ತಲೆ ನೋವಾದಾಗ :</u>

ನಿಂಬೆ ರಸದಲ್ಲಿ ದಾಲ್ಚಿನಿಯನ್ನು ತೇದು ಕಪಾಳಕ್ಕೆ ಹಚ್ಚುವುದರಿಂದ ಅರ್ಧ ತಲೆ ನೋವು ನಿವಾರಣೆಯಾಗುತ್ತದೆ.

9) <u>ಹೊಟ್ಟೆಯಲ್ಲಿ ಜಂತುಹುಳು ಆದಾಗ :</u>

ಪಪಾಯಿಕಾಯಿಯನ್ನು ಸಣ್ಣಗೆ ಹೋಳು ಮಾಡಿ, ಅದಕ್ಕೆ ಬೀಜ ಮೆಣಸಿನ ಪುಡಿ, ಜೀರ್ಗಿ ಪುಡಿ, ಉಪ್ಪು ಮತ್ತು ನಿಂಬೆ ರಸ ಸೇರಿಸಿ ತಿನ್ನುವುದರಿಂದ ಜಂತು ಹುಳು ನಾಶವಾಗುತ್ತವೆ.

ಬೆಳಗಡ್ಡಿಯನ್ನು ಸುಲಿದು, ಹೋಳುಗಳು ತೆಗೆದು ಕುಟ್ಟಿ ಬರುವ ರಸಕ್ಕೆ ಜೇನು ತುಪ್ಪ ಸೇರಿಸಿ ಸೇವಿಸಿದರೆ ಹೊಟ್ಟೆಯಲ್ಲಿರುವ ಜಂತುಗಳು ಮಲದ ಮೂಲಕ ಹೊರಬೀಳುತ್ತವೆ.

10) <u>ಮಗುವಿನ ಹೊಟ್ಟೆ ಉಬ್ಬಿದರೆ :</u>

ಅರಳೆ ಎಣ್ಣೆಯನ್ನು ವಿಳ್ಯೆದೆಲೆಗೆ ಸವರಿ ನಂತರ ಅದಕ್ಕೆ ಬಿಸಿಮಾಡಿ ಹೊಟ್ಟೆಗೆ ಶಾಖ ಕೊಟ್ಟರೆ, ಈ ರೋಗ ನಿವಾರಣೆಯಾಗುತ್ತದೆ.

11) <u>ಬಿದ್ದಿ ಗಾಯವಾದಾಗ :</u>

ನಿಂಬೆ ರಸದಲ್ಲಿ ವಿಳ್ಯೇದೆಲೆ ಕುಟ್ಟಿ, ಗಾಯವಾದ ಜಾಗಕ್ಕೆ ಹಚ್ಚಿದರೆ ಶೀಘ್ರವಾಗಿ ಗಾಯ ಮಾಯವಾಗುತ್ತವೆ.

12) <u>ಗರ್ಭದೋಷವಿದ್ದಾಗ :</u>

ಮುಂಜಾನೆ ಖಾಲಿ ಹೊಟ್ಟೆಯಲ್ಲಿ 9 ಕೃಷ್ಣ ತುಳಸಿ ದಳಗಳನ್ನು ಕುಟ್ಟಿ ತಿನ್ನಬೇಕು. ಆಗ ರೋಗ ನಿವಾರಣೆಯಾಗುತ್ತದೆ.

ದಾಳಿಂಬೆ ಹಣ್ಣಿನ ರಸವನ್ನು ಸತತವಾಗಿ ಸೇವಿಸುತ್ತ ಬಂದರೆ ಗರ್ಭಕೋಶ ಸೇವಿಸುತ್ತ ಬಂದರೆ ಗರ್ಭಕೋಶ ಸಂಬಂಧಿಸಿದ ದೋಷಗಳೆಲ್ಲವೂ ನಿವಾರಣೆಯಾಗುತ್ತವೆ.

13) <u>ಕಣ್ಣಿಗೆ (ಸಿಟ್ಟು) ಪಿಸುರಾದಾಗ :</u>

ಬೇವಿನ ಎಲೆಗಳನ್ನು ನೀರಿನಲ್ಲಿ ಕುದಿಸಿ, ಆರಿದ ಬಳಿಕ ಸೋಸಿ ತೆಗೆದ ನೀರಿನಿಂದ ಕಣ್ಣನ್ನು ತೊಳೆದರೆ ಈ ರೋಗ ನಿವಾರಣೆಯಾಗುತ್ತದೆ.

14) <u>ಹಳೆಯ ತುರಿಕಜ್ಜಿಗೆ :</u>

ಸ್ನಾನದ ವೇಳೆ ತುರಿಕಜ್ಜಿಯ ಜಾಗವನ್ನು ಸೀಗೆ ಪುಡಿಯಿಂದ ಚೆನ್ನಾಗಿ ತೊಳೆದು, ತೆಂಗಿನ ಎಣ್ಣೆ ಸವರಿ, ಈ ರೀತಿ ಎಡಬಿಡದೆ 7 ದಿನ ಮಾಡಿದರೆ ಈ ರೋಗ ಹೇಳ ಹೆಸರಿಲ್ಲದೆ ಹೋಗುತ್ತದೆ.

15) <u>ಋತುಚಕ್ರ ದೋಷವಿದ್ದಾಗ :</u>

ಇಂತಹ ಮಹಿಳೆಯರು ಮೆಂತೆಯ ತಪ್ಪಲನ್ನು ಆಹಾರದಲ್ಲಿ ಹೆಚ್ಚಾಗಿ ಸೇವಿಸಿದರೆ ಈ ತೊಂದರೆಯಿಂದ ಮುಕ್ತರಾಗುತ್ತಾರೆ.

16) <u>ವೀರ್ಯಪುಷ್ಟಿಗೆ :</u>

ಚೆನ್ನಾಗಿ ಕಾಯಿಸಿದ ಆಕಳ ಹಾಲಿಗೆ 4-5 ನುಗ್ಗೆ ಹೂವುಗಳನ್ನು ಹಾಕಿ, ದಿನ ನಿತ್ಯ ಸೇವಿಸುತ್ತ ಬಂದರೆ ವೀರ್ಯಪುಷ್ಟಿಯಾಗುತ್ತದೆ.

17) <u>ಸ್ತ್ರೀಯರಿಗೆ ಋತುಚಕ್ರದ ಸಮಯದಲ್ಲಿ ಹೆಚ್ಚಿನ ರಕ್ತ ಹೋಗುತ್ತಿದ್ದಾಗ :</u>

ಎರಡು ಕಪ್ಪು ನುಗ್ಗೆ ಹೂವುಗಳನ್ನು ಅರೆದಿಟ್ಟುಕೊಳ್ಳಿ, ಆಕಳ ಹಾಲನ್ನು ಮತ್ತು ತೆಂಗಿನ ಕಾಯಿಯ ನೀರನ್ನು ತಲಾ ಅರ್ಧ ಲೀಟರನಷ್ಟು ತೆಗೆದುಕೊಂಡು ಅದಕ್ಕೆ ಬೆಲ್ಲವನ್ನು ಸೇರಿಸಿ ಈ ಎಲ್ಲವನ್ನು ಕಲಸಿ ಚೆನ್ನಾಗಿ ಕಾಯಿಸಿ ಪ್ರತಿದಿನ ಸಣ್ಣ ನಿಂಬೆಗಾತ್ರದಷ್ಟು ಆರು ತಿಂಗಳಕಾಲ ಸೇವಿಸಿದರೆ ಈ ರೋಗ ನಿವಾರಣೆಯಾಗುತ್ತದೆ.

18) <u>ಸ್ತ್ರೀಯರಿಗೆ ಋತು ಚಕ್ರ ಸಮಯದಲ್ಲಿ ನಾನಾ ತೊಂದರೆಯಾದಾಗ :</u>

ಉಳ್ಳಾಗಡ್ಡಿ ಹೂವನ್ನು ನೀರಿನಲ್ಲಿ ಕುದಿಸಿ, ಆ ನೀರನ್ನು ಬೆಳಿಗ್ಗೆ ಮತ್ತು ಸಂಜೆಯ ವೇಳೆಯಲ್ಲಿ ಸೇವಿಸಿದರೆ ಈ ರೋಗಗಳು ನಿವಾರಣೆಯಾಗುತ್ತವೆ.

19) <u>ಪುರುಷತ್ವ ಕೊರತೆ ಇದ್ದಾಗ :</u>

ನೇಳೆ ಹಣ್ಣು ತಪ್ಪದೇ ಸೇವಿಸಿದರೆ ಈ ರೋಗ ನಿವಾರಣೆಯಾಗುತ್ತದೆ.

20) <u>ಸುಟ್ಟುಗಾಯವಾದಾಗ :</u>

ಬೆಳಗಡ್ಡಿಯ ಎಸಳುಗಳನ್ನು ಕುಟ್ಟಿ, ಅದರ ರಸವನ್ನು ತೆಗೆದುಕೊಂಡು, ಅಷ್ಟೇ ಪ್ರಮಾಣದ ಬೆಣ್ಣೆಯೊಂದಿಗೆ ಅದನ್ನು ಸೇರಿಸಿ, ಕಲಸಿ ಸುಟ್ಟ ಗಾಯದ ಮೇಲೆ ಹಚ್ಚಿದರೆ ಬೇಗ ಗುಣಮುಖವಾಗುತ್ತದೆ.

21) **ಮೈಚರ್ಮದ ಮೇಲೆ ಹೊಟ್ಟೇಳುತ್ತಿದ್ದರೆ :**

ಸೌತೆಕಾಯಿಯ ರಸ, ತೆಂಗಿನ ಎಳೆ ನೀರು, ನಿಂಬೆ ರಸವನ್ನು ಸಮ ಪ್ರಮಾಣದಲ್ಲಿ ಸೇರಿಸಿ ಗಂಧದ ಪುಡಿ ಕಲಸಿ, ಚರ್ಮಕ್ಕೆ ಲೇಪಿಸುವುದರಿಂದ ರೋಗ ನಿವಾರಣೆಯಾಗುತ್ತದೆ.

40) **ವಕ್ತಾರರು** : **ಮ. ಅಜೀಜ್ ಸೂಫಿ**

ವಯಸ್ಸು : 40 ವರ್ಷ

ವಿಳಾಸ : ಮನೆ ನಂ. 5-1-165,

ಖಾದ್ರಿಪೂರಾ ಗೋಲೆಖಾನಾ, ಬೀದರ.

ದೂರವಾಣಿ : 224405

1) **ಪುರುಷತ್ವ ಕಳೆದುಕೊಂಡಾಗ :**

ಅಶ್ವಗಂಧ ಚೂರ್ಣ 10 ಗ್ರಾಂ, ಸೇತಾವರ 10 ಗ್ರಾಂ, ಬೀಜಭಂಧ 10 ಗ್ರಾಂ, ತಾಲಮಖಲ 10 ಗ್ರಾಂ, ರತನ್ ಪುರುಷ 10 ಗ್ರಾಂ, ಡಮಾಡೋಲ್ 10 ಗ್ರಾಂ, ಕೌಸಬೀಜ 10 ಗ್ರಾಂ, ಅಜಗಂಧ ನಾಗರಿ 10 ಗ್ರಾಂ, ತೋಧರಿ ಸುರಿಖ 10 ಗ್ರಾಂ, ತೋಧರಿ ಸಫೇದ 10 ಗ್ರಾಂ, ಬೈವನಿ ಸಫೇದ 10 ಗ್ರಾಂ, ಸಿಂಗಾಳ 10 ಗ್ರಾಂ, ಖಡಿಸಕ್ಕರೆ 50 ಗ್ರಾಂ ಇವೆಲ್ಲವನ್ನು ಬೇರೆ ಬೇರೆಯಾಗಿ ಕುಟ್ಟಬೇಕು. ನಂತರ ಒಂದು ಕಡೆ ಕಲಸಿ ಒಂದು ಸ್ವಚ್ಛವಾದ ಡಬ್ಬಿಯಲ್ಲಿ ಹಾಕಿ ಮುಚ್ಚಿಡಬೇಕು. ಹೀಗೆ ತಯಾರಿಸಿದ ಚೂರ್ಣವನ್ನು ದಿನಾಲು ಒಂದು ಚಮಚ ಚೂರ್ಣ

ಆಕಳ ಹಾಲಿನಲ್ಲಿ ಹಾಕಿ ಚನ್ನಾಗಿ ಕಲಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಕುಡಿಯಬೇಕು. ಹೀಗೆ 30 ದಿನ ಕುಡಿದರೆ ಸಂಪೂರ್ಣ ಪುರುಷತ್ವ ಬಂದು ಈ ರೋಗ ನಿವಾರಣೆಯಾಗುತ್ತದೆ.

ಪಥ್ಯ : ಒಂದು ತಿಂಗಳು ಸ್ತ್ರೀ ಸಂಪರ್ಕ ಮಾಡಬಾರದು. ಮತ್ತು ಹುಳಿ, ಎಣ್ಣೆ, ಕೊತ್ತಂಬರಿ ಇತರೆ ಜಿಡ್ಡು ಪದಾರ್ಥ ತಿನ್ನಬಾರದು.

2) <u>ವೀರ್ಯ ಹೋಗುತ್ತಿದ್ದಾಗ :</u>

ಸಾಲ ಮಸ್ಲಿ 10 ಗ್ರಾಂ, ಪಂಜಾ ಮಸ್ಲಿ 10 ಗ್ರಾಂ, ಸಫೇದ ಮಸ್ಲಿ 10 ಗ್ರಾಂ, ಸಿಯಾ ಮಸ್ಲಿ 10 ಗ್ರಾಂ, ಲಾಜವಂತಿ 10 ಗ್ರಾಂ, ಖಲೆಕ ಕುಸ್ತಾ 5 ಗ್ರಾಂ ಇವೆಲ್ಲವನ್ನು ಚೆನ್ನಾಗಿ ಕುಟ್ಟಿ ಚೂರ್ಣ ತಯಾರಿಸಿ ಒಂದು ಕಡೆ ಕಲಸಿ ಒಂದು ಸ್ವಚ್ಛವಾದ ಡಬ್ಬಿಯಲ್ಲಿ ಮುಚ್ಚಿಡಬೇಕು. ಈ ಚೂರ್ಣವನ್ನು 15 ದಿವಸ ದಿನಾಲು ಒಂದೊಂದು ಚಮಚ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ತಿನ್ನಬೇಕು. ಹೀಗೆ ತಿಂದರೆ ಕನಸ್ಸಿನಲ್ಲಿ ವೀರ್ಯ ಹೋಗುವುದು ಕಡಿಮೆಯಾಗಿ ವೀರ್ಯ ಗಟ್ಟಿಯಾಗುತ್ತದೆ.

ಪಥ್ಯ : ಚಹಾ, ಚಿಕನ್, ಮೀನು, ಇತರೆ ಗರ್ಮಿ (ಉಷ್ಣ) ಪದಾರ್ಥಗಳು ತಿನ್ನಬಾರದು.

3) <u>ಸಕ್ಕರೆ ಕಾಯಿಲೆ :</u>

ಆಮ್ಲ 50 ಗ್ರಾಂ, ಜಾಪಳ ಹಣ್ಣಿನ ಬೀಜ 50 ಗ್ರಾಂ, ಕೊಡಪತ್ರಿ 50 ಗ್ರಾಂ, ಹಳ್ದ 50 ಗ್ರಾಂ, ಮೆಂತೆ 50 ಗ್ರಾಂ, ಇವೆಲ್ಲವನ್ನು ಬೇರೆ ಬೇರೆಯಾಗಿ ಕುಟ್ಟಿ ಪೌಡರನ್ನು ತಯಾರಿಸಿ ದಿನಾಲು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಒಂದು ಚಮಚ ಮತ್ತು ರಾತ್ರಿ ಊಟವಾದ ನಂತರ ಒಂದು ಚಮಚ ತಿನ್ನಬೇಕು. ನಂತರ ನೀರು ಕುಡಿಯಬೇಕು. ಹೀಗೆ 40 ದಿವಸ ಸೇವಿಸಿದರೆ ಸಕ್ಕರೆ ಕಾಯಿಲೆ ಹತೋಟಿಗೆ ಬರುತ್ತದೆ.

41) **ವಕ್ತಾರರು** : **ಅಂಬಾಜಿ ಪೆಂಟೆಪ್ಪಾ ದುಬಲಗುಂಡೆ**

ವಯಸ್ಸು : 55 ವರ್ಷ

ವಿಳಾಸ : ಮನೆ ನಂ. 5, ಅೀಡಕರ್ ಕಾಲೋನಿ,

ಮೈಲೂರು ರಸ್ತೆ, ಬೀದರ.

ದೂರವಾಣಿ : 221873

1) **ಲಕ್ವ ಹೊಡೆದಾಗ :**

ಜಾಜಕಾಯಿ (ಜಾಯಫಳ) ವಾರಕ್ಕೆ ಮೂರು ತಿನ್ನಬೇಕು. ಮಹಾರಸನಾದಿ ಕಾಡದ ರಸವನ್ನು ರಾತ್ರಿ ಮತ್ತು ಮುಂಜಾನೆ ಎರಡೆರಡು ಚಮಚ ಕುಡಿಯಬೇಕು. ರೋಗಿ ಯೌವ್ವನಾವಸ್ಥೆಯಲ್ಲಿದ್ದಾಗ ಮಹಾಚಿಂತಾಮಣಿ ರಸ ದಿನಕ್ಕೆ ಒಂದು ಚಮಚ ಕುಡಿಯಬೇಕು. ಸ್ವಲ್ಪ ಇಳಿ ವಯಸ್ಸು ಇದ್ದಾಗ ರಸರಾಜ ರಸ ದಿನಕ್ಕೆ ಒಂದು ಚಮಚ ಕುಡಿಯಬೇಕು. ಮುದುಕ ಇದ್ದಾಗ ಏಕಾಂಗಿ ವೀರ ರಸ ಒಂದು ಚಮಚ ಮುಂಜಾನೆ ಕುಡಿಯಬೇಕು. ಹೀಗೆ 21 ದಿವಸ ಕುಡಿದರೆ ಲಕ್ವ ರೋಗ ಮಾಯವಾಗುತ್ತದೆ.

ಪಥ್ಯ : ಮೈಲಿಗ, ನೆರಳು ಬಿಳಬಾರದು, ತಂಪು ಗಾಳಿಗೆ ಹೋಗಬಾರದು, ಜಿಡ್ಡುಪದಾರ್ಥ ತಿನ್ನಬಾರದು.

2) <u>ಕಾಮಾಲೆ ಆದಾಗ :</u>

ಒಂದು ಗಜಗವನ್ನು ಒಡೆದು, ಅದರಲ್ಲಿನ ಬೀಜ (ಪಲ್ಕಾ) ತೆಗೆದು ಬೀಜ ಸ್ವಲ್ಪ ಒಡೆದು, ಅನ್ನದಲ್ಲಿ ಗುಳಿಗೆಯನ್ನು ಮಾಡಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ತಿನ್ನಬೇಕು. ಒಂದು ಗಜಗದಲ್ಲಿನ ಬೀಜ 7 ದಿನ ಮಾಡಬೇಕು. ಹೀಗೆ 7 ದಿನ ತಿಂದರೆ ರೋಗ ಮಾಯವಾಗುತ್ತದೆ.

3) <u>ಲಕ್ವ ಹೊಡೆದು ಕೈಕಾಲು ಬಿದ್ದಾಗ :</u>

ಅಡಿ ತಂಬಾಕು ಗಿಡದ ಎಲೆಗಳನ್ನು ತಂದು ಪಾದರಸದೊಂದಿಗೆ, ಆ ಎಲೆಗಳನ್ನು ಒಂದು ಬಟ್ಟಲಲ್ಲಿ ಒರೆಸಿ, ಕರಗಿಸಿ, ಕರಗಿದ ನಂತರ ಆ ರಸವನ್ನು ಕೈ ಅಥವಾ ಕಾಲು ಬಿದ್ದಕಡೆ ಚೆನ್ನಾಗಿ ಒರೆಸಬೇಕು. ಹೀಗೆ ಒರೆಸಿದರೆ ರಕ್ತ ಸರಳವಾಗಿ ಆಡುತ್ತದೆ. ಇದರಿಂದ ಕೈಕಾಲುಗಳಿಗೆ ಶಕ್ತಿ ಬಂದು ಈ ರೋಗ ನಿವಾರಣೆಯಾಗುತ್ತದೆ.

ಸೂಚನೆ :- ಇದನ್ನು ಒರೆಸುವಾಗ ಮೈ ಮೇಲೆ ಬಂಗಾರ ಇರಬಾರದು.

4) <u>ಬಿಳಿ ಸೆರಗು ಇದ್ದಾಗ :</u>

ಪ್ರದಾಂತಕ ರಸವನ್ನು ಅಕ್ಕಿ ತೊಳೆದ ನೀರಿನಲ್ಲಿ ಹಾಕಿ ಚೆನ್ನಾಗಿ ಕಲಸಿ ಕುಡಿಯಬೇಕು. ಮತ್ತು ಪತ್ತಾಂಕಸಾಬ ಟಾನಿಕ್ ದಿನಾಲು ಮುಂಜಾನೆ ಒಂದು ಚಮಚ ಕುಡಿಯಬೇಕು. ಹೀಗೆ 7 ದಿವಸ ಕುಡಿದರೆ ಈ ರೋಗ ನಿವಾರಣೆಯಾಗುತ್ತದೆ.

5) <u>ಕೆಂಪು ಸೆರಗು ಇದ್ದಾಗ :</u>

ಪ್ರದಾಂತಕ ರಸವನ್ನು ತೆಗೆದುಕೊಂಡು ಇದನ್ನು ಅಕ್ಕಿ ತೊಳೆದ ನೀರಿನಲ್ಲಿ ಹಾಕಿ ಚೆನ್ನಾಗಿ ಕಲಸಿ ಕುಡಿಯಬೇಕು. ಮತ್ತು ಪತ್ರಾಂಕಸಾಬ ಟಾನಿಕ್ ದಿನಾಲು ಮುಂಜಾನೆ ಒಂದು ಚಮಚ ಕುಡಿಯಬೇಕು. ಮತ್ತು ಫೇಮಿಟಾಬ್ ರಸವನ್ನು ದಿನಾಲು ಎರಡು ಹೊತ್ತು ನೀರಿನಲ್ಲಿ ಹಾಕಿ ಕುಡಿಯಬೇಕು. ಹೀಗೆ ಎರಡು ದಿವಸ ಕುಡಿದರೆ ಕೆಂಪು ಸೆರಗು ಮಾಯವಾಗುತ್ತದೆ.

6) <u>ಇಸುಬು ಇದ್ದಾಗ :</u>

ಮ್ಮದಾರಸಿಂದ ಒಂದು ತೋಲೆ, ಪಂಚ ಕಪೂರ 100 ಗ್ರಾಂ, ಬಿಳಿ ಕಾಚು 100 ಗ್ರಾಂ, ಕರ್ಪೂರ ಪುಡಿ ಎರಡು ಇವೆಲ್ಲವನ್ನು ಚೆನ್ನಾಗಿ ಕುಟ್ಟಿ ಪೌಡರ್ ತಯಾರಿಸಿ 100 ಗ್ರಾಂ ಬೆಣ್ಣೆಯಲ್ಲಿ ಹಾಕಿ ಕಡ್ಡಿಯಿಂದ ಕಲಸಬೇಕು. ನಂತರ ಇಸುಬು ಇದ್ದ ಜಾಗ ಚೆನ್ನಾಗಿ ತೊಳೆದು ಕೋಳಿ ಪಂಕದ ಕಡ್ಡಿಯಿಂದ ಈ ಮಲಾಮನ್ನು ಇಸುಬಿಗೆ ಹಚ್ಚಬೇಕು. ಹೀಗೆ ದಿನಾಲು ಬೆಳಗ್ಗೆ ಹಚ್ಚಿದರೆ ಇಸುಬು ಮಾಯವಾಗುತ್ತದೆ.

7) ಗಜಕರ್ಣ :

ರಂಗವರ್ಮ 50 ಗ್ರಾಂ ಮತ್ತು ತೊಟಿಯಾ 50 ಗ್ರಾಂ ಇವೆರಡನ್ನು ಚೆನ್ನಾಗಿ ಕಲಸಿ ಗಜಕರ್ಣಾದ ಜಾಗದಲ್ಲಿ ಹಚ್ಚಿದರೆ ಒಳಗಡೆಯಿರುವ ಹುಳವು ಸತ್ತು ರೋಗ ನಾಶವಾಗುತ್ತದೆ.

8) ಮೆದುಳು ತೊಂದರೆಯಿದ್ದಾಗ (ಮಾತನಾಡುವಾಗ) :

ಶಂಖ ಪುಷ್ಠಿ ಗುಳಿಗೆಯನ್ನು ದಿನಕ್ಕೆ ಎರಡು ಸಲ ಮುಂಜಾನೆ ಮತ್ತು ರಾತ್ರಿ ಮಲಗುವಾಗ ತೆಗೆದುಕೊಂಡರೆ ಮೆದುಳು ತೊಂದರೆಯಿಂದ ಮಾತು ಚೆನ್ನಾಗಿ ಬರದಿದ್ದರೆ ಮಾತು ಚೆನ್ನಾಗಿ.

9) ಸ್ತ್ರೀ ಗರ್ಭಧಾರಣೆಯಾಗದಿದ್ದಾಗ :

ಹೆಣ್ಣು ಋತುಮತಿಯಾದ ನಂತರ ದಾಸಿವಾಳ ಗಿಡದ ಮೂರು ಹೂಗಳನ್ನು 50 ಗ್ರಾಂ, ಖಡಿಸಕ್ಕರೆಯನ್ನು ಒಂದು ಗ್ಲಾಸ್ ನೀರಿನಲ್ಲಿ ಕಲಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ 7 ದಿವಸ ಕುಡಿಯಬೇಕು. ಹೀಗೆ ಐದು ತಿಂಗಳುಗಳ ಕಾಲ ಋತುಮತಿಯಾದ ನಂತರ ಏಳೇಳು ದಿವಸ ಕುಡಿದರೆ ಸ್ತ್ರೀ ಗರ್ಭಧರಿಸುತ್ತಾಳೆ.

ಪಥ್ಯ : ಗರ್ಮಿ ಪದಾರ್ಥ ಸೇವಿಸಬಾರದು.

10) ಮೂಲ ವ್ಯಾಧಿ :

ಆರೋಗ್ಯ ವರ್ಧಿನಿಭಟ್ಟ ಮುಂಜಾನೆ ಒಂದು ಚಮಚ ತೆಗೆದುಕೊಳ್ಳಬೇಕು. ಅಭಾಯಾ ಆರಿಷ್ಠ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಮಧ್ಯಾಹ್ನ, ಸಂಜೆ, ಒಂದೊಂದು ಚಮಚ ತೆಗೆದುಕೊಳ್ಳಬೇಕು. ತ್ರಿಪುಲ್ ಗುಗ್ಗಳ ಮಧ್ಯಾಹ್ನ ಒಂದು ತೆಗೆದುಕೊಳ್ಳಬೇಕು. ಕಾಸಿನಾದಿ ತೇಲ ಮೂಲವ್ಯಾಧಿ ಮುಳ್ಳಿಗೆ ಹಚ್ಚಬೇಕು. ಹೀಗೆ ಹದಿನೈದು ದಿವಸಗಳ ಕಾಲ ಮಾಡಿದರೆ ಮೂಲ ವ್ಯಾಧಿ ರೋಗ ನಿವಾರಣೆಯಾಗುತ್ತದೆ.

11) ರಕ್ತ ಮೂಲ ವ್ಯಾಧಿ :

ಬ್ರಸೆಭಂದಿಸಕುನ್ ಗುಳಿಗೆ ಎಂಟು ತೆಗೆದುಕೊಂಡು ಪ್ರತಿ ದಿನ ಮುಂಜಾನೆ, ಮಧ್ಯಾಹ್ನ ಮತ್ತು ರಾತ್ರಿ ಒಂದೊಂದು ಗುಳಿಗೆಯನ್ನು ತೆಗೆದುಕೊಳ್ಳಬೇಕು. ಹೀಗೆ ಮೂರು ದಿನ ತೆಗೆದುಕೊಂಡರೆ ರಕ್ತ ಮೂಲ ವ್ಯಾಧಿ ರೋಗ ನಿವಾರಣೆಯಾಗುತ್ತದೆ.

12) <u>ಮೈ ಸುಟ್ಟಾಗ :</u>

ಮೈ ಸುಟ್ಟ ವ್ಯಕ್ತಿಯ ತಲೆಯ ಮೇಲಿನ ಕೂದಲನ್ನು ತೆಗೆದು ನೀರಿನ ಸಹಾಯದಿಂದ ಚೆನ್ನಾಗಿ ಅರೆದು ಗಂಧ ತೆಗೆದು ಸುಟ್ಟ ಗಾಯಗಳ ಮೇಲೆ ಹಚ್ಚಿದರೆ ಗಾಯ ಮಾಯವಾಗಿ ರೋಗ ನಿವಾರಣೆಯಾಗುತ್ತದೆ.

13) <u>ಗರ್ಮಿಯಾದಾಗ :</u>

ಹೌವಳದ (ಹವಳದ) ಗಡ್ಡೆಯನ್ನು ತಂದು ನೆರಳಿನಲ್ಲಿ ಒಣಗಿಸಿ ಚೆನ್ನಾಗಿ ಕುಟ್ಟಿ 250 ಗ್ರಾಂ ಚೂರ್ಣವನ್ನು ತಯಾರಿಸಿ ಉಮ್ರಾವತಿ ಸಕ್ಕರೆ 400 ಗ್ರಾಂ ತೆಗೆದುಕೊಂಡು ಇವೆರಡನ್ನು ಚೆನ್ನಾಗಿ ಕಲಸಿ ಮೂರುಮೂರು ಚಮಚ ಮುಂಜಾನೆ ಮಧ್ಯಾಹ್ನ ಹಾಗೂ ರಾತ್ರಿ ತಿಂದು ನಂತರ ನೀರು ಕುಡಿಯಬೇಕು. ಹೀಗೆ ಐದು ದಿವಸ ತಿಂದರೆ ಗರ್ಮಿ ರೋಗ ಮಾಯವಾಗುತ್ತದೆ.

14) <u>ಸಕ್ಕರೆ ಕಾಯಿಲೆ :</u>

ಬಿಲ್ವ ಪತ್ರಿ ಗಿಡದ ಐದು ಎಲೆಗಳನ್ನು ದಿನಾಲು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಆರು ತಿಂಗಳು ತಿಂದರೆ ಸಕ್ಕರೆ ರೋಗ ಹತೋಟಿಗೆ ಬರುತ್ತದೆ.

15) <u>ಸರಾಯಿ ಕುಡಿಯುವುದು ಬಿಡುಸುವುದಕ್ಕಾಗಿ :</u>

ಹರ್ಬನಡಿಟಸ್ ದಿನಕ್ಕೆ ಎರಡು ಸಲ ನೀರಿನೊಂದಿಗೆ ತೆಗೆದುಕೊಳ್ಳಬೇಕು. ಹೀಗೆ ಐದು ತಿಂಗಳು ತೆಗೆದುಕೊಂಡರೆ ಸ್ವಲ್ಪ ಸ್ವಲ್ಪ ಸರಾಯಿ ಕುಡಿಯುವದನ್ನು ಬಿಟ್ಟು ಊಟ ಸೇವಿಸಿ ಸಂಪೂರ್ಣ ಸರಾಯಿ ಕುಡಿಯುವುದು ಬಿಡುತ್ತಾರೆ.

16) <u>ಮಲ್ಜೇರಿ ಆದಾಗ :</u>

ನೆಲದ ಮೇಲೆ ಅಡಿಗೆ ಉಪ್ಪು ಹಾಕಿ ನಂತರ ಅರಸಿಣ ಮತ್ತು ನೀರು ಹಾಕಿ ಚೆನ್ನಾಗಿ ಕಲಸಿ ನಂತರ ಮಲ್ಲೇರಿಯಿಂದ ಉಬ್ಬಿದ ಜಾಗಕ್ಕೆ ಮೂರು ದಿನ ಹಚ್ಚಿದರೆ ಮಲ್ಜೇರಿ ರೋಗ ನಿವಾರಣೆಯಾಗುತ್ತದೆ.

17) **ಹೇರ್ ಇಳಿದಾಗ** :

ವೃದ್ದಿವಾದಿಕಾ ಭಟ್ಟ ಗುಳಿಗೆಯನ್ನು ತೆಗೆದುಕೊಂಡು ಮುಂಜಾನೆ ಒಂದು ರಾತ್ರಿ ಮಲಗುವಾಗ ಒಂದು ಗುಳಿಗೆಯನ್ನು ತಿನ್ನಬೇಕು. ಮತ್ತು ತೊಡ್ಡಿಗೆ ಸಿಂಥಿ ವ್ಯಾದಿಯಲ್ಲಿ ಏಳು ದಿವಸ ಹಚ್ಚಿದರೆ ಈ ರೋಗ ನಿವಾರಣೆಯಾಗುತ್ತದೆ.

18) **ಕೀಲು ನೋವು** :

ಔಡಲ ಎಣ್ಣೆ 100 ಗ್ರಾಂ, ತೆಗೆದುಕೊಂಡು ಅದರಲ್ಲಿ 25 ಗ್ರಾಂ ನಿಂಬೆರಸ ಹಾಕಿ, ಎರಡು ಕರ್ಪೂರ ಸಣ್ಣ ಪುಡಿ ಕಲಸಿ ನಂತರ ಒಲೆಯ ಮೇಲೆ ಇಟ್ಟು ಮಂದಾಗ್ನಿಯಿಂದ ಕಾಯಿಸಬೇಕು. ಹೀಗೆ ಕಾಸಿದ ನಂತರ ಮಲಾಮಿನಂತೆ ಆಗುತ್ತದೆ. ಒಲೆಯ ಮೇಲಿಂದ ಕೆಳಗೆ ಇಳಿಸಿ ಸ್ವಲ್ಪ ಆರಿದ ನಂತರ ಕೀಲು ನೋವು ಇರುವ ಜಾಗಕ್ಕೆ ಏಳು ದಿವಸ ಹಚ್ಚಿದರೆ ಸಳಕಿ ರೋಗ ಕೀಲು ನೋವು ಮಾಯವಾಗುತ್ತವೆ.

19) **ನಪುಂಸಕತೆ ಇದ್ದಾಗ** :

ತೊಟ್ಟಿಲು ಬಳ್ಳಿಯ ತೊಗಟೆಯನ್ನು ತೆಗೆದು ನೀರಿನ ಸಹಾಯದಿಂದ ಚೆನ್ನಾಗಿ ಕುಟ್ಟಿ, ಒಂದು ಬಿಳಿ ತೆಳುವಾದ ಬಟ್ಟೆಯಲ್ಲಿ ಹಾಕಿ 250 ಗ್ರಾಂ ರಸ ಹಿಂಡಿ, ಉಮ್ರಾವತಿ ಸಕ್ಕರೆ 50 ಗ್ರಾಂ ಖಡಸಕ್ಕರೆ 150 ಗ್ರಾಂ ಖೈಜೀರ್ಗಿ 50 ಗ್ರಾಂ ಇವೆಲ್ಲವನ್ನು ಚೆನ್ನಾಗಿ ಕಲಸಿ ಏಳು ದಿವಸ ಮುಂಜಾನೆ ಮಧ್ಯಾಹ್ನ ರಾತ್ರಿ ಒಂದೊಂದು ಸಣ್ಣ ಗ್ಲಾಸ್ ಏಳು ದಿವಸ ಕುಡಿದರೆ ಈ ರೋಗ ನಿವಾರಣೆಯಾಗುತ್ತದೆ.

ಪಥ್ಯ : ಒಂದು ತಿಂಗಳ ಕಾಲ ಸ್ತ್ರೀ ಸಂಪರ್ಕ ಹೊಂದಬಾರದು.

20) **ಹಲ್ಲು ಬೇನೆ ಇದ್ದಾಗ** :

ಅಡಿಔಡಲ ಗಿಡದ ಹಾಲಿನಿಂದ ಹಲ್ಲನ್ನು ಮೂರು ದಿವಸ ತಿಕ್ಕಿದರೆ ಹಲ್ಲು ನೋವು ರೋಗ ನಿವಾರಣೆಯಾಗುತ್ತದೆ.

21) <u>ಮಧ್ಯದಲ್ಲಿ ನಪುಂಸಕತ್ವ ಬಂದಾಗ :</u>

ಹಜ್ಜೆಮಾಸಿಸಿಕ ತಿಲಾಯಿ 50 ಗ್ರಾಂ ಅಂಬಾರಿ ಹಜರದ್ 50 ಗ್ರಾಂ ಮಕರಧ್ವಜ, 50 ಗ್ರಾಂ, ಸ್ವರ್ಣ ಮಕರಧ್ವಜ 50 ಗ್ರಾಂ, ಪೂರ್ಣಚಂದ್ರ ರಸ 50 ಗ್ರಾಂ, ನಸ್ಲಿ ಪಾಕಾಜ 50 ಗ್ರಾಂ, ಸೆಬಾಜವರ 50 ಗ್ರಾಂ ಇವೆಲ್ಲವನ್ನು ತೆಗೆದುಕೊಂಡು ಚೆನ್ನಾಗಿ ಕುಟ್ಟಿ ಚೂರ್ಣವನ್ನು ತಯಾರಿಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಎರಡು ಚಮಚ ಚೂರ್ಣವನ್ನು ತಿನ್ನಬೇಕು. ಹೀಗೆ ಇಪ್ಪತ್ತೊಂದು ದಿವಸಗಳ ಕಾಲ ತಿಂದರೆ ಪುರುಷತ್ವ ಬರುತ್ತದೆ.

42) **ವಕ್ತಾರರು : ನಾಗಣ್ಣಾ ಚಿದ್ರಿ**

ವಯಸ್ಸು : ೬೦ ವರ್ಷ

ಊರು : ಚಾಂಬೋಳ

ತಾಲುಕಾ/ಜಿಲ್ಲೆ : ಬೀದರ.

ದೂರವಾಣಿ : 221873

1) **ಪುರುಷತ್ವ ಇಲ್ಲದಿದ್ದಾಗ** :

ಬುರಗ್ಯಾನ ಗಿಡದ ತೊಗಟೆ, ವದ್ಯೆಗಿಡದ ತೊಗಟೆ, ಬಿಳಿ ಬನ್ನಿ ತೊಗಟೆ, ಬಿಳಿ ಪಾಂಗ್ರಿ ತೊಗಟೆ, ಅತ್ತಿ ತೊಗಟೆ, ಅಪಟಿ ತೊಗಟೆ, ಕುದ್ರಿ ಬೇವಿನ ಗಿಡದ ತೊಗಟೆ, ಈ ಎಲ್ಲಾ ತೊಗಟೆಗಳನ್ನು ತಂದು ಚೆನ್ನಾಗಿ ಒಣಗಿಸಿ ಕುಟ್ಟಬೇಕು, ನಂತರ ಒಂದು ಗಡಿಗೆಯಲ್ಲಿ ಹಾಕಿ ಇಡಬೇಕು. ಇವೆಲ್ಲ ಸೇರಿ ಸುಮಾರು ಒಂದು ಕಿಲೊ ಆಗಬೇಕು. ಇದರಲ್ಲಿ ಉಮ್ರಾವತಿ ಸಕ್ಕರೆ ಮತ್ತು ಭಸ್ಮ ಕಲಸಬೇಕು. ನಂತರ ಬೀಜ ಬಂದ, ತಾಲ್‌ಮಖಲ್ ಶೇಕಡಾ 75 ರಷ್ಟು, ಉಮರಾತಿ ಸಕ್ಕರೆ ಶೇಕಡಾ 25 ರಷ್ಟು, ಎರಡೂ ಕಲಸಿ ಇಡಬೇಕು. ಈ ಚೂರ್ಣ ಹಾಲಿನಲ್ಲಿ ಕಲಸಿ 41 ದಿನಗಳವರೆಗೆ ಕುಡಿಯಬೇಕು.

ಈ ಚೂರ್ಣ ಸೇವಿಸುವವರೆಗೆ ಗಂಡ ಹೆಂಡತಿ ಒಂದು ಕಡೆ ಮಲಗಬಾರದು. ಈ ಎಲ್ಲವನ್ನೂ ತಪ್ಪದೆ ಚೆನ್ನಾಗಿ ಮಾಡಿದರೆ ಈ ರೋಗ ಹೇಳ ಹೆಸರಿಲ್ಲದಂತೆ ಮಾಯವಾಗುತ್ತದೆ.

2) **ಚೇಳು ಕಡಿದಾಗ** :

- ಮೂಲಂಗಿ ಮತ್ತು ಉಪ್ಪನ್ನು ಚೆನ್ನಾಗಿ ಅರೆದು ಚೇಳು ಕಡಿದ ಜಾಗಕ್ಕೆ ಹಚ್ಚಿದರೆ ವಿಷ ಇಳಿದು ಉರಿ ಕಡಿಮೆಯಾಗಿ ರೋಗ ನಿವಾರಣೆಯಾಗುತ್ತದೆ.
- ನಿಂಬೆ ಹಣ್ಣಿನ ಬೀಜಗಳನ್ನು ನುಣ್ಣಗೆ ಅರೆದು ಚೇಳು ಕಡಿದ ಜಾಗಕ್ಕೆ ಹಚ್ಚಬೇಕು, ನಂತರ ಅದಕ್ಕೆ ಶಾಖ ಕೊಡಬೇಕು. ಹೀಗೆ ಮಾಡಿದರೆ ವಿಷ ಇಳಿದು ಉರಿ ಕಡಿಮೆಯಾಗುತ್ತದೆ.

3) **ಕಣ್ಣು ಕೆಂಪಾದರೆ ಅಥವಾ ಕಣ್ಣು ಕಚ ಕಚ ಮಾಡುತ್ತಿದ್ದರೆ** :

ಎದೆ ಹಾಲಿಗೆ ಶುದ್ಧವಾದ ಔಡಲ ಎಣ್ಣೆಯನ್ನು ಮಿಶ್ರಣ ಮಾಡಿ ಕಣ್ಣುಗಳಿಗೆ ಹಾಕಿದರೆ ಶೀಘ್ರವೇ ಎಲ್ಲಾ ಕಣ್ಣು ಬೇನೆಗಳು ನಿವಾರಣೆಯಾಗುತ್ತವೆ.

4) <u>ತಲೆಯಲ್ಲಿ ಹೇನು ಹೆಚ್ಚಾದಾಗ :</u>

ಬೇವಿನ ಬೀಜಗಳನ್ನು ನೀರಿನೊಂದಿಗೆ ನುಣ್ಣಗೆ ಅರೆದು ಕೂದಲಿಗೆ ಹಚ್ಚಿ, 8 ಗಂಟೆಗಳ ನಂತರ ಬೇವಿನ ತಪ್ಪಲಿನಿಂದ ಕುದಿಸಿದ ನೀರಿನಿಂದ ತಲೆ ತೊಳೆದುಕೊಳ್ಳಬೇಕು. ಹೀಗೆ ಎರಡು ದಿವಸ ಮಾಡಿದರೆ ಹೇನು ಮಾಯವಾಗುತ್ತದೆ.

5) <u>ಕಿವಿಯಲ್ಲಿ ಹುಣ್ಣಾದರೆ :</u>

ತುಳಸಿ ಎಲೆಯನ್ನು ಕುಟ್ಟಿ, ಎರಡು ಹನಿ ರಸ ತೆಗೆದು ಕಿವಿಗೆ ಹಿಂಡಿದರೆ ಶೀಘ್ರವೇ ಕಿವಿ ಹುಣ್ಣು ಕಡಿಮೆಯಾಗುತ್ತದೆ.

6) <u>ಸೀನು ಹೆಚ್ಚಾದಾಗ :</u>

ಹೊಸದಾಗಿ ಕಿತ್ತಿತಂದ ಬೇವಿನ ಎಲೆಯನ್ನು ಕುಟ್ಟಿ ನಾಲ್ಕು ಹನಿ ರಸ ತೆಗೆದು, ಮೂಗಿನ ಸೊಳ್ಳೆಗೆ ಹಾಕಿದರೆ ಅತಿಯಾದ ಸೀನು ನಿಲ್ಲುತ್ತದೆ.

7) <u>ವಾಂತಿಯಾಗುತ್ತಿದ್ದರೆ :</u>

ಏಳೆಂಟು ಕರಿ ಮೆಣಸು ಮತ್ತು ಒಂದು ಉಳ್ಳಾಗಡ್ಡಿ ಸೇರಿಸಿ ಅರೆದು ಪದಾರ್ಥವನ್ನು ತೆಳುವಾದ ಬಟ್ಟೆಯಲ್ಲಿ ಗಂಟುಕಟ್ಟಿ, ರಸ ಹಿಂಡಿ ಈ ರಸವನ್ನು ರೋಗಿಗೆ ಕುಡಿಸಬೇಕು. ಅತಿಯಾದ ಕಾರ್ಕಿ (ವಾಂತಿ) ಕೂಡಲೇ ನಿಂತು ರೋಗ ನಿವಾರಣೆಯಾಗುತ್ತದೆ.

8) <u>ಧ್ವನಿ ಕುಂತಾಗ :</u>

ಸ್ವಲ್ಪ ಸುಂಟಿ, ಒಂದೆರಡು ಲವಂಗು ಮತ್ತು ನಾಲ್ಕು ಉಪ್ಪಿನ ಹಳ್ಳವನ್ನು (ಹರಳು) ಚೆನ್ನಾಗಿ ಬಾಯಿಯಲ್ಲಿ ಮೆಲೆದು ನುಂಗಿದರೆ ಧ್ವನಿ ಕುಂತಿರುವುದನ್ನು ಕಡಿಮೆಯಾಗುತ್ತದೆ.

9) <u>ಅರಿಶಿಣ (ಹಳದಿ) ಕಾಮಣಿ (ಕಾಮಾಲೆ) ಯಾದಾಗ :</u>

ಒಂದು ಬಟ್ಟಲು ಆಗತಾನೆ ಹಿಂಡಿದ ಆಕಳ ಹಾಲನ್ನು, ಒಂದು ಚಮಚ ಒಣ ಸುಂಟಿಯನ್ನು ಹಾಕಿ ಒಂದು ವಾರಗಳ ಕಾಲ ಪ್ರತಿನಿತ್ಯ ಮುಂಜಾನೆ ಕುಡಿದರೆ ಅರಿಶಿಣ ಕಾಮಣಿ ರೋಗ ನಿವಾರಣೆಯಾಗುತ್ತದೆ.

10) <u>ಚಿಕ್ಕ ಮಕ್ಕಳಿಗೆ ಕೆಮ್ಮು ಮತ್ತು ಜ್ವರ ಬಂದಾಗ :</u>

ಒಂದು ಚಮಚ ತುಳಸಿ ರಸದಲ್ಲಿ ಹತ್ತು ಹನಿ ಜೇನುತುಪ್ಪವನ್ನು ಬೆರೆಸಿ ಕುಡಿಸಬೇಕು. ದಿನಕ್ಕೆ ಎರಡು ಬಾರಿ ಕುಡಿಸಿದರೆ ಮೂರು ದಿನಗಳಲ್ಲಿ ಗಮನಾರ್ಹ ಬದಲಾವಣೆ ಉಂಟಾಗಿ ಮಕ್ಕಳಿಂದ ಕೆಮ್ಮು, ಜ್ವರ ದೂರ ಸರಿಯುತ್ತವೆ.

11) <u>ರಕ್ತ ಭೇಧಿ (ರಕ್ತದ ಕಾರ್ಕಿ)</u>

ಕುರಿಯ ಹಾಲಿಗೆ ಹಳದಿ ಬಣ್ಣದ ಅರ್ಧ ನಿಂಬೆ ಹಣ್ಣಿನ ರಸವನ್ನು ಹಿಂಡಿ ಒಂದು ವಾರಗಳ ಕಾಲ ಕುಡಿದರೆ ರಕ್ತ ಭೇದಿ ರೋಗ ನಿವಾರಣೆಯಾಗುತ್ತದೆ.

43) **ವಕ್ತಾರರು** : **ದಿಗಂಬರ ಹೊಗಲೆ**

ವಯಸ್ಸು : 45 ವರ್ಷ

ಊರು : ನಾಗೂರ (ಕೆ)

ತಾಲುಕಾ : ಭಾಲ್ಕಿ, ಜಿಲ್ಲೆ ಬೀದರ.

1) **ಲಕ್ವ ಹೊಡೆದಾಗ** :

ಪತ್ರಿ ಗಿಡದ ಎಲೆಯನ್ನು ತಂದು, ನೀರಿನ ಸಹಾಯದಿಂದ ಚೆನ್ನಾಗಿ ಕುಟ್ಟಿ, ಅರೆದು, ಆಗತಾನೆ ನೋಡಿಕೊಂಡಿದ್ದ ಒಂದು ಗ್ಲಾಸ ಆಡಿನ ಹಾಲಿನಲ್ಲಿ ಚೆನ್ನಾಗಿ ಕಲಸಿ ಪ್ರತಿದಿನ ಸೂರ್ಯ ಉದಯ ವಾಗುವುದಕ್ಕಿಂತ ಮುಂಚೆ ಈ ಹಾಲು 15 ದಿವಸಗಳ ಕಾಲ ಕುಡಿಯುವುದರಿಂದ ಈ ರೋಗ ಮಾಯವಾಗುತ್ತದೆ.

ಪಥ್ಯ: ಮನೆಯಿಂದ ಹೊರಗಡೆ ಹೋಗಬಾರದು. ಎಣ್ಣೆ, ಹುಳಿ, ಜೀರಗಿ, ಮಾಂಸ, ಇತ್ಯಾದಿ ಜಿಡ್ಡು ಪದಾರ್ಥಗಳನ್ನು ಸೇವಿಸಬಾರದು.

2) **ಮೂಲವ್ಯಾಧಿ** :

ಡಾಂಗಡೆನ್ ಬಳ್ಳಿಯ ಎಲೆಗಳನ್ನು ಒಂದು ಗ್ಲಾಸು ನೀರಿನೊಳಗೆ ಒಂದು ಮುಷ್ಟಿ ಎಲೆಗಳನ್ನು ಕಿವುಚಿ ರಸವನ್ನು ತೆಗೆದು, ಎರಡು ಚಮಚ ಸಕ್ಕರೆಯನ್ನು ಹಾಕಿ, ಎರಡು ಇಲಾಚಿ ಅರೆದು ಬೆರೆಸಿ, ಈ ಎಲ್ಲವನ್ನು ಚೆನ್ನಾಗಿ ಕಲಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ 7 ದಿವಸ ಕುಡಿಸಿದರೆ ಈ ರೋಗ ನಿವಾರಣೆಯಾಗುತ್ತದೆ.

ಪಥ್ಯ: ಬದನೆಕಾಯಿ, ಬಾಳೆಹಣ್ಣು, ರತ್ನಾಲು, ಆಲುಗಡ್ಡೆ, ಈ ಎಲ್ಲವನ್ನು ಎಂದೆಂದೂ ತಿನ್ನಬಾರದು.

3) **ಟೈಫೈಡ್ ಆದಾಗ** :

ಹುಚ್ಚು ಬಬಲೆ ಗಿಡದ ತೊಗಟೆಯನ್ನು ಚೆನ್ನಾಗಿ ಕುಟ್ಟಿ, ಒಂದು ಗ್ಲಾಸ್ ರಸ ತೆಗೆದು ರೋಗಿಗೆ ಮೂರು ದಿನ ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಕುಡಿಸುವುದರಿಂದ ಟೈಫೈಡ್ ರೋಗ ಮಾಯವಾಗುತ್ತದೆ.

4) **ಹೊಟ್ಟೆ ಹಾರುತ್ತಿರುವಾಗ :**

ಹಗಲಕಾಯಿ ಗಿಡದ ತಪ್ಪಲನ್ನು ಕುಟ್ಟಿ ಎರಡು ಚಮಚ ರಸ ತೆಗೆದು ಬೇನೆ ಎದ್ದಾಗ ಮಾತ್ರ ಈ ರಸ ಕುಡಿಸಿದರೆ ಈ ರೋಗ ಮಾಯವಾಗುತ್ತದೆ.

5) **ದನಕ್ಕೆ ಕರಿಮ ಫೋಡ ಆದಾಗ :**

ಒಂದು ಉಳ್ಳಾಗಡ್ಡಿಯನ್ನು ಚೆನ್ನಾಗಿ ಅರೆದು, ದನದ ಕುಂಡೆಯಲ್ಲಿ (ಗುದದ್ವಾರದಲ್ಲಿ) ಹಾಕಿದರೆ ಈ ರೋಗ ನಿವಾರಣೆಯಾಗುತ್ತದೆ.

6) **ದನದ ಕಾಲಿನಲ್ಲಿ ಮುಳ್ಳು ನಟ್ಟಾಗ :**

ಅತ್ತಿ ಹಾಲನ್ನು ದನದ ಛಪ್ಪೆಯ ಮೇಲೆ ಚೆನ್ನಾಗಿ ಬಡೆದು, ನಂತರ ತೊಂಡೆಕಾಯಿಯ ತಪ್ಪಲನ್ನು ಕುಟ್ಟಿ ರಸ ತೆಗೆದು, ಅದರಲ್ಲಿ ಒಂದು ಹಳ್ಳ ಅಡುಗೆ ಉಪ್ಪನ್ನು ಚೆನ್ನಾಗಿ ಕಲಸಿ ನಂತರ ದನದ ಕಿವಿಯಲ್ಲಿ ಹಾಕಿದರೆ ಮುಳ್ಳು ತಾನಾಗಿಯೇ ಹೊರಗೆ ಬರುತ್ತದೆ ಹಾಗೂ ನೋವು ಕಡಿಮೆಯಾಗುತ್ತದೆ.

44) **ವಕ್ತಾರರು** : **ಕಾಸಯ್ಯ ಸ್ವಾಮಿ**

ವಯಸ್ಸು : 65 ವರ್ಷ

ಊರು : ನಾಗೂರ (ಕೆ)

ತಾಲುಕಾ : ಭಾಲ್ಕಿ, ಜಿಲ್ಲೆ ಬೀದರ.

1) **ಅಜೀರ್ಣವಾಗುತ್ತಿದ್ದರೆ** :

ಕೊಡ ಪತ್ರಿ ಎಲೆಯನ್ನು ತಿಂದರೆ ಅನ್ನ ಜೀರ್ಣವಾಗುತ್ತದೆ.

2) **ಕೂಸಿಗೆ ಕಿಸೂರ ಆದಾಗ** :

ಕಿಸೂರಿನ ಕಾಯಿಯನ್ನು ಒಂದು ಕಡೆ ಪೋಣಿಸಿ, ಸರಮಾಡಬೇಕು, ಕಿಸೂರ ಆದ ಮಗುವಿಗೆ ಈ ಸರವನ್ನು ಹಾಕಬೇಕು. ಹೀಗೆ ಮಾಡಿದರೆ ಈ ರೋಗ ನಿವಾರಣೆಯಾಗುತ್ತದೆ.

3) **ಧಾರದ ಬೇನೆಯಾದಾಗ** :

ಅಂತರಂಗಿ ಬಳ್ಳಿಯ (ಶಾಂವಗಿ ಎಸಳಿನ ಹಾಗೆ ಇರುವ ಬಳ್ಳಿ ಬೇರೆ ಗಿಡದ ಬೇಲಿಯ ಮೇಲೆ ಬೆಳೆಯುತ್ತದೆ) ನ್ನು ತಂದು ಚೆನ್ನಾಗಿ ಕುಟ್ಟಿ, ಮಗುವಿನ ಮೈಗೆ ಹಚ್ಚಿ ಅರ್ಧ ಗಂಟೆಯ ನಂತರ ಮೈ ತೊಳೆಯಬೇಕು. ನಂತರ ಇದರ ರಸ ತೆಗೆದು ಸ್ವಲ್ಪ ಕುಡಿಸಬೇಕು. ಹೀಗೆ ಮಾಡಿದರೆ ಧಾರದ ಬೇನೆ ಮಾಯವಾಗುತ್ತದೆ.

4) **ಬಿಳಿ ಸೆರಗು ಹೋಗುತ್ತಿದ್ದಾಗ** :

ವೀಳೆದೆಲೆ ಒಳ್ಳೆಯ ಬೇರನ್ನು ಚೆನ್ನಾಗಿ ಕುಟ್ಟಿ ರಸ ತೆಗೆದು, ಈ ರಸಕ್ಕೆ ಸ್ವಲ್ಪ ಸಕ್ಕರೆಯನ್ನು ಹಾಕಿ ಚೆನ್ನಾಗಿ ಕಲಸಿ 7 ದಿವಸ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಕುಡಿದರೆ ಬಿಳಿ ಸೆರಗು ನಿಲ್ಲುತ್ತದೆ.

5) **ಕೆಂಪು ಸೆರಗು ಹೋಗುವಾಗ** :

ಬಿಳಿ ಪಾಂಗರಗಿ ಗಿಡದ ತೊಗಟೆಯನ್ನು ತಂದು ಚೆನ್ನಾಗಿ ಕುದಿಸಿ, ಸ್ವಲ್ಪ ಸಕ್ಕರೆಯನ್ನು ಬೆರೆಸಿ 7 ದಿವಸ ಕುಡಿಯುವುದರಿಂದ ಕೆಂಪು ಸೆರಗು ನಿಲ್ಲುತ್ತದೆ.

6) <u>ದನದ ಕಣ್ಣಿನಲ್ಲಿ ಹೂವು ಬಿದ್ದಾಗ :</u>

ಕುದುರೆ ಬೇವಿನ ಗಿಡದ (ತೊಗಟೆ) ಚಕ್ಕಿಯನ್ನು ತಂದು, ಸೋಸಿ, ಗಂಧವನ್ನು ತೆಗೆದು ಒಂದು ಬಟ್ಟಲಿನಲ್ಲಿ ಹಾಕಿ ಹೂ ಬಿದ್ದ ಕಣ್ಣಿಗೆ ಮೂರು ಹನಿ ರಸ ಮೂರು ದಿವಸ ಹಿಂಡಿದರೆ ಕಣ್ಣಿನಲ್ಲಿರುವ ಹೂ ಮಾಯವಾಗುತ್ತದೆ.

7) <u>ಚೇರು ಇಳಿದಾಗ :</u>

- ಸೂಜಿಯಿಂದ ಕ್ಯಾರಳದ ಎಣ್ಣೆಯನ್ನು ತೆಗೆದು ಚೇರು ಇಳಿದ ವಿರೋಧ ಭಾಗದ ಕಾಲಿನ ಹೆಬ್ಬೆರಳಿನ ತುದಿಗೆ ಎಣ್ಣೆಯನ್ನು 3 ದಿವಸಗಳವರೆಗೆ ಹಚ್ಚುವುದರಿಂದ ಚೇರಿನ ಬೇನೆ ನಿವಾರಣೆಯಾಗುತ್ತದೆ.
- ಕ್ಯಾರಳನ್ನು ಒಡೆದು ಸೂಜಿಯಿಂದ ಕ್ಯಾರಳದ ಎಣ್ಣೆಯನ್ನು ಚೇರ ಇಳಿದ ವಿರೋಧ ಭಾಗದ ಕಾಲಿನ ಹಿಮ್ಮಡಿಯಿಂದ ಎಂಟು ಬೆರಳಷ್ಟು (ಅಂಗುಲ) ಜಾಗ ಬಿಟ್ಟು ಸೂಜಿಯಿಂದ ಮೂರು ಅಡ್ಡ ಗೇರೆ ಹಾಕಿದರೆ ನೋವು ನಿವಾರಣೆಯಾಗುತ್ತದೆ.

8) <u>ಕೆಮ್ಮು ಆದಾಗ :</u>

ಕ್ಯಾರಳನ್ನು ಒಡೆದು ಸೂಜಿಯಿಂದ ಎಣ್ಣೆಯನ್ನು ತೆಗೆದು ತಲೆಯ ಸುಳಿಯಲ್ಲಿ ಹಚ್ಚಿದರೆ ಕೆಮ್ಮು ರೋಗ ಮಾಯವಾಗುತ್ತದೆ.

9) <u>ಕಣ್ಣಿಗೆ ಹೂ ಬಿದ್ದಾಗ :</u>

ಕ್ಯಾರಳನ್ನು ಒಡೆದು ಸೂಜಿಯಿಂದ ಅದರ ಎಣ್ಣೆಯನ್ನು ಹೆಡಕಿಗೆ ಹಚ್ಚಿದರೆ ಕಣ್ಣಿನಲ್ಲಿರುವ ಹೂ ಮಾಯವಾಗುತ್ತದೆ.

10) <u>ಹೆಚ್ಚು ಬೆವರು ಬರುತ್ತಿದ್ದರೆ :</u>

ನೆಲ್ಲಿಕಾಯಿಯನ್ನು ಚೆನ್ನಾಗಿ ಕುಟ್ಟಿ, ಅದರಿಂದ ರಸ ತೆಗೆದು, ನಂತರ ಅಂಗಾಲು ಮತ್ತು ಅಂಗೈಗಳಲ್ಲಿ ಹಚ್ಚಿಕೊಂಡರೆ ಅಂಗೈ ಮತ್ತು ಅಂಗಾಲಿನಿಂದ ಬೆವರು ಬರುವುದು ನಿಲ್ಲುತ್ತದೆ.

11) <u>ಅಂಗಾಲು ಒಡೆದು ಬಿರುಕು ಬಿಟ್ಟಾಗ :</u>

ಉಳ್ಳಾಗಡ್ಡಿಯನ್ನು ಚೆನ್ನಾಗಿ ಕುಟ್ಟಿ, ಬಿರುಕು ಬಿಟ್ಟಿರುವ ಅಂಗಾಲಿಗೆ ಹಚ್ಚಿದರೆ ಅಂಗಾಲು ಒಡೆದಿರುವುದು ಕಡಿಮೆಯಾಗುತ್ತದೆ.

12) <u>ಮೂಗಿನಿಂದ ರಕ್ತ ಸೋರುತ್ತಿದ್ದರೆ :</u>

ಎಮ್ಮೆ ಅಥವಾ ಆಕಳ ತಾಜಾ ಹೆಂಡಿ (ಸೆಗಣಿ) ಯನ್ನು ಆಗಾಗ ಮುಸಿ ನೋಡುತ್ತಿದ್ದರೆ ಮೂಗಿನಿಂದ ರಕ್ತ ಸೋರುವುದನ್ನು ನಿಲ್ಲುತ್ತದೆ.

13) <u>ಸೀನು ಹೆಚ್ಚಾದಾಗ :</u>

ತಾಜಾ ಬೇವಿನ ತಪ್ಪಲಿನ ರಸ ತೆಗೆದು, ನಾಲ್ಕೈದು ಹನಿ ಮೂಗಿನಲ್ಲಿ ಹಿಂಡಿದರೆ ಅತಿಯಾದ ಸೀನುವಿಕೆಯು ನಿಲ್ಲುತ್ತದೆ.

14) <u>ಸುಂಬುಳು (ನೆಗಡಿ) ಹೆಚ್ಚಾದಾಗ :</u>

– ಒಂದು ಬಟ್ಟಲು ಮೊಸರಿಗೆ ಸ್ವಲ್ಪ ಬೆಲ್ಲ ಸೇರಿಸಿ, ದಿನಾಲೂ ಒಂದು ಬಟ್ಟಲು ನಾಲ್ಕೈದು ದಿನಗಳು ಕುಡಿದರೆ ಅತಿಯಾದ ಸುಂಬಳು ಸುರಿಯುವುದು ನಿವಾರಣೆಯಾಗುತ್ತದೆ.
– ಬೆಂಕಿ ಕೆಂಡದ ಮೇಲೆ ಸ್ವಲ್ಪ ಅರಿಶಿಣ ಪುಡಿಯನ್ನು ಉದುರಿಸಿ, ಹೊಗೆಯನ್ನು ಮೂಗಿನ ಮೂಲಕ ಎಳೆದುಕೊಂಡರೆ, ಸರಾಗವಾಗಿ ಉಸಿರಾಡಲು ಸಾಧ್ಯವಾಗುವುದು. ನೆಗಡಿಯಿಂದ ಮೂಗು ಕಟ್ಟಿಕೊಂಡಿರುವುದು ಬಿಡುತ್ತದೆ.

15) <u>ಧ್ವನಿ ಕುಂತಾಗ :</u>

ಹಸಿ ಸುಂಟಿಯ ಸಣ್ಣ ಸಣ್ಣ ಚೂರುಗಳನ್ನು ಮಾಡಿ, ಖಡಸಕ್ಕರಿಯೊಂದಿಗೆ ಮೆಲಿಯುತ್ತ ರಸ ಹೀರುತ್ತಿದ್ದರೆ ಧ್ವನಿ ಕುಂತಿರುವುದು ಕಡಿಮೆಯಾಗುತ್ತದೆ.

16) <u>ಹಲ್ಲು ನೋವು :</u>

ಎರಡು ಹನಿ ಲವಂಗದ ಎಣ್ಣೆಯನ್ನು ನೋಯುತ್ತಿರುವ ಹಲ್ಲುಗಳ ಸಂದಿಯಲ್ಲಿ ಹಾಕಿದರೆ ಹಲ್ಲು ನೋವು ಶಮನವಾಗುತ್ತದೆ.

17) <u>ಮೊಡವೆ ಆದಾಗ :</u>

ಇಂಗನ್ನು ನೀರಿನಲ್ಲಿ ತೇಅಿಸಿ, ಸೋಸಿ, ಗಂಧ ತೆಗೆದು ಮೊಡವೆಗಳಿದ್ದ ಜಾಗಕ್ಕೆ ಎರಡು ದಿವಸ ಹಚ್ಚುವುದರಿಂದ ಮೊಡವೆಗಳು ಮಾಯವಾಗುತ್ತವೆ.

18) **ಚೇಳು ಕಡಿದಾಗ** :

ಅಂಬೆ ಹಣ್ಣಿನ ಬೀಜಗಳನ್ನು ನುಣ್ಣಗೆ ಅರೆದು, ಚೇಳು ಕಡಿದ ಭಾಗಕ್ಕೆ ಹಚ್ಚಬೇಕು, ನಂತರ ಅದಕ್ಕೆ ಕಾಯಿಸಬೇಕು. ಇದರಿಂದ ವಿಶ ಇಳಿದು ಉರಿ ನಿವಾರಣೆಯಾಗುತ್ತದೆ.

19) **ಹಾವು ಕಡಿದಾಗ** :

ಒಂದು ಔಡಲ ಗಿಡದ ಎಲೆ, 10 ಕರೆ ಮೆಣಸಿನ ಬೀಜಗಳನ್ನು ತೆಗೆದುಕೊಂಡು ನುಣ್ಣಗೆ ಅರೆಯಬೇಕು, ಈ ಪದಾರ್ಥವನ್ನು ಹಾವು ಕಡಿದ ರೋಗಿಗೆ ತಿನ್ನಿಸುವುದರಿಂದ ವಾಂತಿಯಾಗುತ್ತದೆ, ಹೀಗೆ ಗಂಟೆಗೆ ಒಂದು ಸಲದಂತೆ ನಾಲ್ಕು ಸಲ ವಾಂತಿ ಮಾಡಿಸಿದರೆ ಸಂಪೂರ್ಣ ವಿಷ ಹೊರಗೆ ಬಂದು ಅಪಾಯ ತಪ್ಪುತ್ತದೆ.

20) **ತಲೆಯಲ್ಲಿ ಹೇನು ಹೆಚ್ಚಾದಾಗ** :

ಜಾಪಳ ಗಿಡದ ಎಲೆಯನ್ನು ಅರಿಶಿಣದ ಪುಡಿಯೊಂದಿಗೆ ನುಣ್ಣಗೆ ಅರೆದು, ಇದನ್ನು ರಾತ್ರಿ ಮಲಗುವಾಗ ತಲೆಗೆ ಹಚ್ಚಿ ನಿದ್ರಿಸಬೇಕು. ಮರುದಿನ ಬೆಳಿಗ್ಗೆ ಕೂದಲನ್ನು ತೊಳೆದುಕೊಳ್ಳಬೇಕು. ಹೀಗೆ ಮಾಡಿದರೆ ಹೇನುಗಳು ಮಾಯವಾಗುತ್ತವೆ.

21) **ಕಣ್ಣುಗಳು ಕಚ ಕಚ ಮಾಡುತ್ತಿದ್ದಾಗ** :

ಎದೆಯ ಹಾಲನ್ನು ಎರಡೂ ಕಣ್ಣಿಗೆ ದಿನಕ್ಕೆರಡು ಬಾರಿಯಂತೆ ಐದಾರು ಹನಿ ಹಾಕಿದರೆ, ಕಣ್ಣು ಕಚ ಕಚ ಮಾಡುವುದು ಕಡಿಮೆಯಾಗುತ್ತದೆ.

22) **ವಸಡಿನಿಂದ ರಕ್ತಸ್ರಾವವಾಗುತ್ತಿದ್ದರೆ** :

ನೆಲ್ಲೆ (ನೇರಳೆ) ಗಿಡದ ತೊಗಟೆಯನ್ನು ತಂದು, ಚೆನ್ನಾಗಿ ಕುಟ್ಟಿ ಪುಡಿ ಮಾಡಿ, ನೀರಿನಲ್ಲಿ ಕಲಸಿ, ಬಾಯಿ ಮುಕ್ಕಳಿಸಿದರೆ ವಸಡಿನಿಂದ ರಕ್ತ ಸೋರುವುದು ನಿಂತುಹೋಗಿ, ರೋಗ ನಿವಾರಣೆಯಾಗುತ್ತದೆ.

23) **ಉಗುಳಿನೊಂದಿಗೆ ರಕ್ತ ಬೀಳುತ್ತಿದ್ದರೆ** :

ಕಪ್ಪು ಬಣ್ಣವುಳ್ಳ ಉತ್ತಮ ವರ್ಗದ ಅಂಗೂರನ್ನು 250 ಗ್ರಾಂ ನಷ್ಟು ತೆಗೆದುಕೊಂಡು, ಒಂದಾದ ಮೇಲೆ ಒಂದರಂತೆ ತಿನ್ನುವುದರಿಂದ ಉಗುಳಿನೊಂದಿಗೆ ರಕ್ತ ಬೀಳುವುದು ನಿಲ್ಲುತ್ತದೆ.

24) <u>ಲಕ್ವ ಹೊಡೆದು ಬಾಯಿ, ಕಣ್ಣು ವಿರೂಪಗೊಂಡಾಗ :</u>

ಐದಾರು ಗ್ರಾಮನಷ್ಟು ಬೆಳಗಡ್ಡಿ ಎಸಳುಗಳನ್ನು ನುಣ್ಣಗೆ ಅರೆದು, ಒಂದು ಬಟ್ಟಲು ಹಾಲಿನೊಂದಿಗೆ ಕುದಿಸಿ, ಪ್ರತಿದಿನ ಮಲಗುವಕ್ಕಿಂತ ಮುಂಚೆ ಈ ಹಾಲು ಕುಡಿಯಬೇಕು. ಲಕ್ವ ಹೊಡೆದ ಕಾರಣ ವಿರೂಪಗೊಂಡ ಬಾಯಿ ನಿಧಾನವಾಗಿ ಮೊದಲಿನ ರೂಪಕ್ಕೆ ಬರುತ್ತದೆ.

25) <u>ಸಂಧಿವಾತ ಇದ್ದಾಗ :</u>

ಪ್ರತಿದಿನ ಮುಂಜಾನೆ ಒಂದು ಬಟ್ಟಲು ಮೊಸರಿನೊಂದಿಗೆ ಒಂದು ಚಮಚ ಅರಿಶಿಣ ಪುಡಿಯನ್ನು ಬೆರೆಸಿ ಕುಡಿಯುವುದರಿಂದ ಸಂಧಿವಾತ ರೋಗ ನಿವಾರಣೆಯಾಗುತ್ತದೆ. ಇದನ್ನು ರೋಗ ಕಡಿಮೆಯಾಗುವವರೆಗೆ ಮಾಡಬೇಕು.

26) <u>ನೆಗಡಿ :</u>

- ಕರಿಮೆಣಸನ್ನು ಕುಟ್ಟಿ, ಅದರಲ್ಲಿ ಜೇನುತುಪ್ಪವನ್ನು ಕಲಸಿ ಸೇವಿಸಿದರೆ ಶೀತದಿಂದಾದ ನೆಗಡಿ ನಿವಾರಣೆಯಾಗುತ್ತದೆ.
- ಸಾಧಾರಣ ಗಾತ್ರದ ಉಳ್ಳಾಗಡ್ಡಿಯನ್ನು ತೆಗೆದುಕೊಂಡು ನಾಲ್ಕು ಹೋಳು ಮಾಡಿ, ನಂತರ ಸ್ವಲ್ಪ ಅಪ್ಪಟ ಅರಿಶಿಣ ಪುಡಿಯನ್ನು ತುಂಬಿ ಕೆಂಡದ ಮೇಲೆ ಸುಡಬೇಕು. ಹೀಗೆ ಸಿದ್ಧಗೊಳಿಸಿದ ಉಳ್ಳಾಗಡ್ಡಿಯನ್ನು ಪ್ರತಿದಿನ ರಾತ್ರಿ ಮಲಗುವುದಕ್ಕಿಂತ ಮುಂಚೆ ತಿನ್ನಬೇಕು. ಈ ಸುಟ್ಟ ಉಳ್ಳಾಗಡ್ಡಿ ಸೇವಿಸಿದ ನಂತರ ನೀರು ಕುಡಿಯಬಾರದು, ಹೀಗೆ ಮೂರು ದಿನಗಳ ಕಾಲ ಮಾಡಿದರೆ ನೆಗಡಿ ನಿವಾರಣೆಯಾಗುತ್ತದೆ.

27) <u>ಮಗುವಿಗೆ ನಾಯಿತರಹ ಕೆಮ್ಮು ಬಂದಾಗ :</u>

ಶ್ರೀಗಂಧವನ್ನು ಕುಟ್ಟಿ ಚೆನ್ನಾಗಿ ಪುಡಿ ಮಾಡಿ, ಈ ಪುಡಿಗ ಎ ಜೇನುತುಪ್ಪವನ್ನು ಕಲಸಿ, ದಿನಕ್ಕೆ 4-5 ಬಾರಿ ಮಗುವಿನ ನಾಲಿಗೆಯ ಮೇಲೆ ಹಚ್ಚುವುದರಿಂದ ಮಗುವಿನ ನಾಯಿ ತರಹದ ಕೆಮ್ಮುರೋಗ ನಿವಾರಣೆಯಾಗುತ್ತದೆ.

28) <u>ಗಂಟಲು ಕಟ್ಟಿದಾಗ :</u>

ಲವಂಗನ್ನು ಉಪ್ಪಿನೊಂದಿಗೆ ಅಗಿದು ಚಪ್ಪರಿಸುತ್ತಿದ್ದರೆ ಗಂಟಲು ಕಡಿಯುವುದು ನಿವಾರಣೆಯಾಗುತ್ತದೆ. ಜೊತೆಗೆ ಕಫವನ್ನು ಕೂಡ ಹೊಗಲಾಡಿಸುತ್ತದೆ.

29) **ಬಾಯಿಹುಣ್ಣು ಆದಾಗ :**

ಕೊತ್ತಂಬರಿ (ಧನಿಯಾ) ಬೀಜವನ್ನು ಚೆನ್ನಾಗಿ ಕುಟ್ಟಿ, ಪುಡಿ ಮಾಡಿ, ನಂತರ ಸ್ವಲ್ಪ ಜೇನುತುಪ್ಪದಲ್ಲಿ ಕಲಸಿ ನಾಲಿಗೆಯ ಮೇಲೆ ಹಾಕಿಕೊಂಡು ಬಾಯಿ ಚಪ್ಪರಿಸುತ್ತಿದ್ದರೆ ಬಾಯಿ ಹುಣ್ಣು ರೋಗ ನಿವಾರಣೆಯಾಗುತ್ತದೆ.

30) **ಸಾಧಾರಣ ಎದೆ ನೋವು ಇದ್ದಾಗ :**

ಕೊತ್ತಂಬರಿ ಬೀಜವನ್ನು ಕುಟ್ಟಿ ಪುಡಿಮಾಡಿ ನಂತರ ಈ ಪುಡಿಯನ್ನು ನೀರಿನಲ್ಲಿ ನೆನೆಹಾಕಿ ಚೆನ್ನಾಗಿ ಕಿವುಚಿ ಶೋಸಿ ಈ ರಸವನ್ನು ಹಾಲು ಮತ್ತು ಸಕ್ಕರೆ ಸೇರಿಸಿ ಕಲಸಿ ನಂತರ ಸೇವಿಸಿ ಹೀಗೆ ಮಾಡುವುದರಿಂದ ರೋಗ ನಿವಾರಣೆಯಾಗುತ್ತದೆ.

31) **ಮಲೇರಿಯಾ ಆದಾಗ :**

ನಿಂಬೆ ಹಣ್ಣಿನ ರಸ ಮತ್ತು ಉಳ್ಳಾಗಡ್ಡಿ ರಸವನ್ನು ಸಮ ಪ್ರಮಾಣದಲ್ಲಿ ಮಿಶ್ರಮಾಡಿ ಒಂದು ಬಾರಿಗೆ ಎರಡು ಚಮಚದಂತೆ ದಿನಕ್ಕೆ ಮೂರು ಬಾರಿ ಸೇವಿಸಿದರೆ ಮಲೇರಿಯಾ ರೋಗ ನಿವಾರಣೆಯಾಗುತ್ತದೆ.

32) **ಜೀರ್ಣ ಶಕ್ತಿ ಕಡಿಮೆಯಾದಾಗ :**

ಪ್ರತಿ ದಿನ ಊಟಕ್ಕೆ ಮೊದಲು ಸ್ವಲ್ಪ ಜೀರಿಗೆಯನ್ನು ಬಾಯಿಗೆ ಹಾಕಿ ಕೊಂಡು ಚೆನ್ನಾಗಿ ಮೆಲೆದು ರಸ ನುಂಗುತ್ತಿದ್ದರೆ ಉಂಡ ಆಹಾರ ಚೆನ್ನಾಗಿ ಜೀರ್ಣವಾಗುತ್ತದೆ.

33) **ಅಜೀರ್ಣದಿಂದ ಹೊಟ್ಟೆ ನೋವು ಆದಾಗ :**

ಒಂದು ಚಮಚ ಕೊತ್ತಂಬರಿ ಬೀಜ ಮತ್ತು ಅವರೆ ಬೀಜದಲ್ಲಿ ಒಣಗಿದ ಶುಂಠಿ ಸ್ವಲ್ಪ ಕುಟ್ಟಿ ಎರಡು ಬಟ್ಟಲು ನೀರಿಗೆ ಹಾಕಿ ಚೆನ್ನಾಗಿ ಕುದಿಸಿ ನಂತರ ಇದನ್ನು ಸೋಸಿ ಇದಕ್ಕೆ ಜೇನುತುಪ್ಪ ಸೇರಿಸಿ ಕುಡಿದರೆ ಅಜೀರ್ಣದಿಂದ ಹೊಟ್ಟೆ ನೋವು ನಿವಾರಣೆಯಾಗುತ್ತದೆ.

45) **ವಕ್ತಾರರು : ಚಂದ್ರಪ್ಪಾ ಸುಗ್ರೆ**

ವಯಸ್ಸು : ೬೫ ವರ್ಷ

ಊರು : ಜ್ಯಾಂತಿ

ತಾಲೂಕಾ : ಭಾಲ್ಕಿ, ಜಿಲ್ಲೆ ಬೀದರ.

1) <u>ಗಜಕರ್ಣ :</u>

ಚಂದುರ್ (ಚಂದ), ಒಳ್ಳೆಣ್ಣೆ, ಅಡುಗೆ ಮಾಡಿದ (ಕರ್ಕ್) ಕಾಡಗಿ ಒಂದು ಕಡೆ ಸೇರಿಸಿ ಎಲ್ಲವನ್ನು ಕಲಸಿ, ಮಲಾಮಿನಂತೆ ಮಾಡಿ ದಿನಾಲೂ ಮುಂಜಾನೆ ಮತ್ತು ರಾತ್ರಿ ಗಜಕರ್ಣ ಆದ ಸ್ಥಳಕ್ಕೆ 7 ದಿವಸ ಹಚ್ಚಿದರೆ ಗಜಕರ್ಣ ಮಾಯವಾಗುತ್ತದೆ.

೨) <u>ಗಂಟಮಲಗಿ ಆದಾಗ :</u>

ಮುಳ್ಳು ಧತ್ರಿ ಗಿಡದ ತಪ್ಪಲು, ತೊಟ್ಟಿಲ ಬಳ್ಳಿ, ಔಡಲ ಎಣ್ಣೆ, ಅರಿಶಿಣ ತುಂಡು, ಇವೆಲ್ಲವನ್ನು ಸೇರಿಸಿ ಚೆನ್ನಾಗಿ ಅರೆದು ಗಂಟಮಲಗಿ ಆದ ಜಾಗಕ್ಕೆ ರಾತ್ರಿ ೩ ದಿವಸಕ್ಕೆ ಒಂದು ಪಟ್ಟಿ ಕಟ್ಟಬೇಕು. ಹೀಗೆ ೩ ಪಟ್ಟಿ ಕಟ್ಟಿದರೆ ಗಂಟಮಲಗಿ ರೋಗ ಮಾಯವಾಗುತ್ತದೆ.

೩) <u>ಸುತ್ತ ನಾಗೂರ ಆದಾಗ :</u>

ತೊಂಡೆ ಬೆಳ್ಳಿ, ಅಡುಗೆ ಉಪ್ಪು ಎರಡನ್ನು ಸೇರಿಸಿ ಚೆನ್ನಾಗಿ ಕುಟ್ಟಿ. ಸುತ್ತ ನಾಗೂರ ಆದ ಜಾಗಕ್ಕೆ ಕಟ್ಟಬೇಕು. ಎರಡು ದಿವಸದಲ್ಲಿ ಈ ರೋಗ ನಿವಾರಣೆಯಾಗುತ್ತದೆ.

4) <u>**ಚೇಳು ಅಥವಾ ಜೇನುಹುಳು ಕಡಿದಾಗ :**</u>

ಉಳ್ಳಾಗಡ್ಡಿಯ ಸಿಪ್ಪೆಯನ್ನು ಸುಲಿದು ಸ್ವಲ್ಪ ಕುಟ್ಟಿ ಚೇಳು ಅಥವಾ ಜೇನು ಹುಳು ಕಡಿದ ಜಾಗಕ್ಕೆ ತಿಕ್ಕುವುದರಿಂದ ನೋವು ಶಮನವಾಗುತ್ತದೆ.

5) **ಹೊಟ್ಟೆ ನೋವು, ಉರಿ, ಮಲಬದ್ಧತೆ, ಮೈಕೈ ನೋವು ಇದ್ದರೆ** :

ನೆಲಬೇವು, ಮಂಚಪತ್ರಿ, ಬಿಲ್ವ ಪತ್ರಿ, ಫಡ ಪತ್ರಿ, ಪಾದಲವಣ, ಪಟ್ಟಕಾ, ಈ ಎಲ್ಲವನ್ನೂ ತಂದು ಚೆನ್ನಾಗಿ ಕುಟ್ಟಿ, ಕಲಸಿ ಪುಡಿ ಕಟ್ಟಬೇಕು. 3 ದಿನ ಮುಂಜಾನೆ ಒಂದು ಚಮಚ ತೆಗೆದುಕೊಂಡರೆ ಈ ಎಲ್ಲಾ ರೋಗಗಳು ಮಾಯವಾಗುತ್ತವೆ.

6) **ನೆಗಡಿ ಸಹಿತ ತಲೆನೋವು** :

ಜೀರಗಿ, ಮೆಣಸು, ಕೊತ್ತಂಬರಿ ಬೀಜ, ಒಣ ಶುಂಠಿ, ಪ್ರತ್ಯೇಕವಾಗಿ ಕುಟ್ಟಿ ಪುಡಿ ಮಾಡಿ, ಪ್ರತಿಯೊಂದರ ಪುಡಿಯನ್ನು ಅರ್ಧ ಚಮಚದಷ್ಟು ತೆಗೆದುಕೊಂಡು ನಾಲ್ಕು ಬಟ್ಟಲು ನೀರಿಗೆ ಹಾಕಿ ಚೆನ್ನಾಗಿ ಕುದಿಸಬೇಕು. ಈ ರಸವನ್ನು ಒಂದು ಬಟ್ಟಲು ನೀರಿಗೆ ಹಾಕಿ ನಂತರ ಅದಕ್ಕೆ ಸ್ವಲ್ಪ ಬೆಲ್ಲ ಹಾಕಿ ಕಲಸಿ ಸ್ವಲ್ಪ ಕುದಿಸಿ ನಂತರ ಒಲೆಯಿಂದ ಕೆಳಗಿಳಿಸಿ. ರಾತ್ರಿ ಮಲಗುವುದಕ್ಕಿಂತ ಮುಂಚೆ ಈ ರಸ ಕುಡಿದರೆ ನೆಗಡಿ ಸಹಿತ ತಲೆನೋವು ನಿವಾರಣೆಯಾಗುತ್ತದೆ.

7) **ಕೆಮ್ಮು ಹೆಚ್ಚಾದಾಗ** :

ಜೇನು ತುಪ್ಪ ಮತ್ತು ಮೂಲಂಗಿ ರಸವನ್ನು ಸಮ ಪ್ರಮಾಣದಲ್ಲಿ ಬೆರೆಸಿ ಒಂದು ಚಮಚದಷ್ಟನ್ನು ದಿನಕ್ಕೆ 3 ಬಾರಿ ಕುಡಿದರೆ ಕೆಮ್ಮು ರೋಗ ನಿವಾರಣೆಯಾಗುತ್ತದೆ.

8) **ಕೆಮ್ಮು ಹಾಗೂ ಗಂಟಲು ನೋವು ಆದಾಗ** :

ಹಸಿಯಾಗಿರುವ ಬೆಳ್ಳಾಗಡ್ಡಿಯನ್ನು ತಿನ್ನುವುದರಿಂದ ಕೆಮ್ಮು ಹಾಗೂ ಗಂಟಲು ನೋವು ನಿವಾರಣೆಯಾಗುತ್ತದೆ.

9) **ರಕ್ತಮಲ ರೋಗವಿದ್ದಾಗ** :

ಹಗಲಕಾಯಿ ಅಥವಾ ಎಲೆಯ ರಸವನ್ನು 2 ಚಮಚ ತೆಗೆದುಕೊಂಡು ಅದಕ್ಕೆ 1 ಚಮಚ ಖಡಿಸಕ್ಕರಿ ಸೇರಿಸಿ ಮುಂಜಾನೆ 7 ದಿವಸ ಕುಡಿದರೆ ರಕ್ತ ಮಲವು ವಾಸಿಯಾಗುತ್ತದೆ.

10) **ಛಳಿ ಜ್ವರ ಇದ್ದಾಗ :**

ಹಗಲಕಾಯಿ ಗಿಡದ ಹೂ 9, ನುಗ್ಗೆ ಗಿಡದ ಹೂ 9, ಮತ್ತು ಕರಿ ಮೆಣಸು 9, ಈ ಎಲ್ಲವನ್ನು ಚೆನ್ನಾಗಿ ಅರೆದು ಬಿಸಿ ನೀರಿಗೆ ಹಾಕಿ ಕಲಸಿ ಕುಡಿಯುವುದರಿಂದ ಈ ರೋಗ ನಿವಾರಣೆಯಾಗುತ್ತದೆ.

11) **ಶಿರ ರೋಗಗಳು ಇದ್ದಾಗ :**

ಕೆಂಪು ದಾಸಿವಾಳದ ಹೂವಿನ ರಸವನ್ನು ತೆಗೆದು ಅದಕ್ಕೆ ಎಳ್ಳೆಣ್ಣೆಯನ್ನು ಸೇರಿಸಿ, ತಯಾರಿಸಿದ ಎಣ್ಣೆಯನ್ನು ತಲೆಗೆ ಹಚ್ಚುವುದರಿಂದ ತಲೆಯ ಇತರ ರೋಗಗಳಯ ನಾಶವಾಗುತ್ತವೆ.

46) **ವಕ್ತಾರರು : ಸಿದ್ರಾಮಪ್ಪಾ ನಾಗಶೆಟ್ಟಿ ಪ್ರಭಾ**

ವಯಸ್ಸು : 52 ವರ್ಷ

ಊರು : ಹಲಬರ್ಗಾ

ತಾಲೂಕಾ : ಭಾಲ್ಕಿ, ಜಿಲ್ಲೆ ಬೀದರ.

1) <u>ಮುಕ್ಕುರ ವಾಯ್ (ಹಲ್ಲುಗಳಲ್ಲಿ) :</u>

ನಂದಾಲ್ ಗಿಡದ ತಪ್ಪಲನ್ನು ತೆಗೆದುಕೊಂಡು ಗಡಿಗೆಯಲ್ಲಿ ಹಾಕಿ ಚೆನ್ನಾಗಿ ಕುದಿಸಿ ಎಲೆಯನ್ನು ತೆಗೆದು, ಈ ನೀರಿನಿಂದ ಬಾಯನ್ನು ಮುಕ್ಕಳಿಸಬೇಕು. ಹೀಗೆ ದಿನಕ್ಕೆ ಒಂದು ಸಲದಂತೆ ಮೂರು ದಿನ ಮಾಡಿದರೆ ಈ ರೋಗ ನಿವಾರಣೆಯಾಗುತ್ತದೆ.

ಪಥ್ಯ: ಹಸಿ ಉಳ್ಳಾಗಡ್ಡಿ ತಿನ್ನಬಾರದು.

2) <u>ಗಜಕರ್ಣ :</u>

ನೆಲದ ಗುಳ್ಳೆದ ಕಾಯಿ ರಸವನ್ನು ಗಜಕರ್ಣ ಆದ ಸ್ಥಳಕ್ಕೆ ರಾತ್ರಿ ಮಲಗುವ ಸಮಯದಲ್ಲಿ ಹಚ್ಚಿ ಮುಂಜಾನೆ ತೊಳೆದರೆ ಗಜಕರ್ಣ ಮಾಯವಾಗುತ್ತದೆ.

3) <u>ಖಂಡಕಿ, ಡೋಗಿ ಹುಣ್ಣಾದಾಗ :</u>

ಧತ್ತರಿ ಎಲೆಯನ್ನು ತಂದು ಆ ಎಲೆಯಲ್ಲಿ ಅರಶಿಣ, ಔಡಲ ಎಣ್ಣೆ ಹಾಕಿ ಚೆನ್ನಾಗಿ ಅರೆದು, ಹುಣ್ಣು ಆದ ಸ್ಥಳಕ್ಕೆ ಹಚ್ಚಿ ಅದರ ಮೇಲೆ ವೀಳೆದೆಯಿಂದ ಕಟ್ಟಬೇಕು. ಹೀಗೆ ಮೂರು ದಿವಸ ಮಾಡಿದರೆ ಈ ರೋಗ ನಿವಾರಣೆಯಾಗುತ್ತದೆ.

4) <u>ಕೊಬ್ಬು ಆದಾಗ (ತೊಗಲು ದಪ್ಪವಾದಾಗ):</u>

ಒಂದು ಚಮಚ ಕರಿ ಎಳ್ಳು ಚೆನ್ನಾಗಿ ಅರೆದು, ಅದಕ್ಕೆ ಒಂದು ಚಮಚ ಜೇನು ತುಪ್ಪ ಕಲಸಿ, ದಿನಕ್ಕೆ ಒಂದು ಸಲದಂತೆ ೬೦ ದಿವಸಗಳವರೆಗೆ ತಿಂದರೆ ಕೊಬ್ಬು ಕರಗಿ ತೂಕ ಕಡಿಮೆಯಾಗುತ್ತದೆ.

5) **ಗಲ್ಲದ ಮೇಲೆ ಬಿಳಿ ಮಚ್ಚೆಯಾದರೆ** :

ವಿಭೂತಿ ತಪ್ಪಲನ್ನು ಚೆನ್ನಾಗಿ ತೊಳೆದು, ಐದು ಎಲೆಗಳನ್ನು ದಿನಾಲು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ತಿನ್ನಬೇಕು. ಹೀಗೆ ೬೦ ದಿವಸಗಳವರೆಗೆ ಮಾಡಿದರೆ ಈ ರೋಗ ನಿವಾರಣೆಯಾಗುತ್ತದೆ.

6) **ಮೂಲವ್ಯಾಧಿ** :

ಪಟಕಾವನ್ನು ಚೆನ್ನಾಗಿ ಅರೆದು, ೩೦ ಚಿಟಕಿ ಮಾಡಿ, ಪುಡಿಯನ್ನು ಕಟ್ಟಿ ದಿನಾಲೂ ಜಾಫಳ ಹಣ್ಣಿಗೆ ನಾಲ್ಕು ಭಾಗ ಮಾಡಿ, ಅದಕ್ಕೆ ಹಚ್ಚಬೇಕು. ೩೦ ದಿನಗಳ ಕಾಲ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ತಿಂದರೆ ಈ ರೋಗ ಮಾಯವಾಗುತ್ತದೆ.

ಪಥ್ಯೆ : ಮೊಸರು, ಘುಂಡೆಪಲ್ಯಾ ಇಡೀ ಜೀವನದಲ್ಲೇ ಬಿಟ್ಟು ಬಿಡಬೇಕು.

47) **ವಕ್ತಾರರು** : **ನಾಗಮ್ಮಾ ಬಿರಾದಾರ**

ವಯಸ್ಸು : 52 ವರ್ಷ

ಊರು : ಹಲಬರ್ಗಾ

ತಾಲೂಕಾ : ಭಾಲ್ಕಿ, ಜಿಲ್ಲೆ ಬೀದರ.

1) <u>**ಕುರು ಆದಾಗ** :</u>

ಘೆಜಿಟಿಕ್ಯಾ ಎಲೆಗೆ ಅಡುಗೆ ಉಪ್ಪನ್ನು ಸೇರಿಸಿ, ಚೆನ್ನಾಗಿ ಅರೆದು, ಕುರು ಆದ ಸ್ಥಳಕ್ಕೆ ಕಟ್ಟಿದರೆ ಐದೇ ನಿಮಿಷದಲ್ಲಿ ಗಡ್ಡೆ ಒಡೆದು, ಕೆಟ್ಟ ರಕ್ತ ಹೋಗಿ ರೋಗ ನಿವಾರಣೆಯಾಗುತ್ತದೆ.

2) <u>**ಮೈ ಸುಟ್ಟರೆ** :</u>

ಕುಂಬಳ ಬೆಳ್ಳಿಯ ಎಲೆಯ ರಸವನ್ನು ಸುಟ್ಟ ಗಾಯದ ಮೇಲೆ ಹಾಕಿದರೆ ಗಾಯ ಮಾಯವಾಗಿ ರೋಗ ನಿವಾರಣೆಯಾಗುತ್ತದೆ.

3) <u>**ಖಂಡಕಿ ಹುಣ್ಣು ಆದಾಗ** :</u>

ಅರಿಶಿಣ, ಔಡಲ ಎಣ್ಣೆ, ಧತ್ತರಿ ತಪ್ಪಲು, ಇವೆಲ್ಲವನ್ನು ಚೆನ್ನಾಗಿ ಅರೆದು, ದಿನಕ್ಕೆ ಒಂದು ಪಟ್ಟಿಯಂತೆ ಮೂರು ಪಟ್ಟಿ ಕಟ್ಟಿದರೆ ಈ ರೋಗ ನಿವಾರಣೆಯಾಗುತ್ತದೆ.

4) <u>**ಮೂಲವ್ಯಾಧಿ** :</u>

ಕಾಚನ್ನು ಚೆನ್ನಾಗಿ ಅರೆದು, ಬಿಳಿ ಬಟ್ಟೆಯಲ್ಲಿ ಸೋಸಬೇಕು. ಅದರಲ್ಲಿ ಅರಶಿಣ, ಆಕಳ ಬೆಣ್ಣೆ ಕಲಸಿ ಮಲಾಮಿನಂತೆ ಮಾಡಿ ಮೂಲವ್ಯಾಧಿ ಇರುವ ಜಾಗಕ್ಕೆ ಈ ಮಲಾಮನ್ನು ಹಚ್ಚಬೇಕು. ನಂತರ ಬೆಂಕಿಯಿಂದ

ಕಾಸಬೇಕು, ಮುಂಜಾನೆ ಬಿಸಿನೀರಿನಿಂದ ಚೆನ್ನಾಗಿ ತೊಳೆಯಬೇಕು. ಹೀಗೆ 7 ದಿನ ಮಾಡಿದರೆ ಈ ರೋಗ ನಿವಾರಣೆಯಾಗುತ್ತದೆ.

5) **ಕಾಮಾಲೆ** :

ಔಡಲ ಗಿಡದ ಚಿಗುರನ್ನು ತಂದು ಕೈಯಿಂದ ಚೆನ್ನಾಗಿ ಒರೆಸಿ, 16 ವರ್ಷ ಮೇಲ್ಪಟ್ಟವರಿಗೆ 5 ಹನಿ ರಸ ತೆಗೆದು ಆಡಿನ ಹಾಲಿನಲ್ಲಿ ಹಾಕಿ ಕುಡಿಸಬೇಕು. ಹೀಗೆ ಮೂರು ದಿನ ಮಾಡಿದರೆ ಈ ರೋಗ ಹೇಳ ಹೆಸರಿಲ್ಲದಂತೆ ಮಾಯವಾಗುತ್ತದೆ.

ಪಥ್ಯೆ : ಜಿಡ್ಡು ಪದಾರ್ಥ ತಿನ್ನಬಾರದು.

ಸೂಚನೆ : ಎರಡು ದಿವಸ ಸಪ್ಪನ ಬೇಳೆ ರೊಟ್ಟಿ ಊಟ ಮಾಡಬೇಕು.

6) **ಕಣ್ಣು ಬೇನೆ** :

ಬಬಲೆ ಕೊಂಡುರನ್ನು ಬಟ್ಟೆಯಲ್ಲಿ ಹಾಕಿ ಹಂಚಿನ ಮೇಲೆ ಕಾಯಿಸಿ ನಂತರ ಕಣ್ಣಿಗೆ ಬಿಸಿ ಕೊಡಬೇಕು. ಹೀಗೆ ಎರಡು ದಿವಸ ಮಾಡಿದರೆ ಕಣ್ಣು ಬೇನೆ ನಿವಾರಣೆಯಾಗುತ್ತದೆ.

7) **ಖಂಡಕಿ ಹುಣ್ಣು** :

ಒಂದು ಸಣ್ಣ ಬದನೆಕಾಯಿಯನ್ನು ಸುಟ್ಟು ಆರಿದ ನಂತರ ಬಟ್ಟಿನ ಖಂಡಕಿಯಲ್ಲಿ ಹಾಕಿ ಕಟ್ಟಬೇಕು. ಹೀಗೆ ಮಾಡಿದರೆ ಖಂಡಕಿ ಹುಣ್ಣು ಹೇಳ ಹೆಸರಿಲ್ಲದೆ ಮಾಯವಾಗುತ್ತದೆ.

8) **ಸ್ತ್ರೀಯರ ಮುಟ್ಟು ದೋಷವಿದ್ದಾಗ** :

ದಾಸವಾಳದ ಹೂವನ್ನು ತುಪ್ಪದಲ್ಲಿ ಹುರಿದು ಖಡಿಸಕ್ಕರೆಯನ್ನು ಬೆರೆಸಿ ಅರೆದು, ಅರ್ಧ ತೊಲಿ ಪ್ರಮಾಣದಷ್ಟು ತಯಾರಿಸಿಕೊಂಡು ಪ್ರತಿದಿನ ಮುಂಜಾನೆ ಖಾಲಿ ಹೊಟೆಯಲ್ಲಿ ಮತ್ತು ಸಾಯಂಕಾಲ ಊಟವಾದ ನಂತರ ತಿಂದು ನಂತರ ಸಕ್ಕರೆ ಬೆರೆಸಿದ ಒಂದು ಗ್ಲಾಸ ಹಾಲು ಕುಡಿಯಬೇಕು. ಹೀಗೆ ಒಂದುವಾರ ಮಾಡಿದರೆ ಈ ರೋಗ ನಿವಾರಣೆಯಾಗುತ್ತದೆ.

9) **ಮೂಗು, ಒಸಡು, ಹಲ್ಲುಗಳಿಂದ ರಕ್ತ ಸ್ರಾವವಾಗುತ್ತಿದ್ದರೆ :**

ದಾಸಿವಾಳದ ಹೂಗಳನ್ನು ಚೆನ್ನಾಗಿ ತೊಳೆದು, ಅವುಗಳನ್ನು ಚೆನ್ನಾಗಿ ಅರೆದು, ಅದಕ್ಕೆ ಜೇನುತುಪ್ಪ ಬೆರೆಸಿ, ಸೇವಿಸಬೇಕು. ಹೀಗೆ ಐದು ದಿನ ಸೇವಿಸಿದರೆ ಈ ರೋಗ ನಿವಾರಣೆಯಾಗುತ್ತದೆ.

10) **ಮೂತ್ರ ವಿಸರ್ಜನೆ ಬಂದಾದಾಗ :**

ಬಾಳೆ ದಿಂಡಿನ ರಸವನ್ನು ತೆಗೆದು ಅದರಲ್ಲಿ ಎರಡು ಚಮಚ ತುಪ್ಪವನ್ನು ಬೆರೆಸಿ, ಚೆನ್ನಾಗಿ ಕಲಸಿ, ನಂತರ ಕುಡಿಯಬೇಕು. ಹೀಗೆ ಒಂದು ವಾರಗಳ ಕಾಲ ಮಾಡಿದರೆ ಈ ರೋಗ ನಿವಾರಣೆಯಾಗುತ್ತದೆ.

11) **ಮೊಡವೆಗಳಾದಾಗ :**

ಆಕಳ ಮೊಸರಲ್ಲಿ ಕಡ್ಲಿಯನ್ನು (ಕಡಲೆಯನ್ನು) ಅರೆದು, ಮಲಾಮಿನಂತೆ ತಯಾರಿಸಿ ನಂತರ ಮುಖಕ್ಕೆ ಹಚ್ಚಿಕೊಂಡು 10-15 ನಿಮಿಷಗಳ ಬಿಟ್ಟು ಉಗುರು ಬೆಚ್ಚಗಿರುವ ನೀರಿನಿಂದ ಮುಖ ತೊಳೆಯಬೇಕು. ಹೀಗೆ ಎರಡು ಮೂರು ದಿನ ಮಾಡಿದರೆ ಮೊದವೆಗಳು ಮಾಯವಾಗುತ್ತವೆ.

ಸೂಚನೆ : ಮುಖವನ್ನು ಉಜ್ಜಿ ತೊಳೆಯಬೇಡಿ, ಮೃದುವಾದ ಟಾವೇಲಿನಿಂದ ಒತ್ತಿ ತೆಗೆಯಿರಿ.

12) **ಮೂಲವ್ಯಾಧಿ :**

ಆಕಳ ಮೊಸರನ್ನು ಸ್ವಲ್ಪವೂ ನೀರು ಬೆರೆಸದೆ, ಮಜ್ಜಿಗೆಯನ್ನು ಮಾಡಿ ಬೆಣ್ಣೆ ತೆಗೆಯದೇ ತಯಾರಿಸಿದ ಮಜ್ಜಿಗೆಗೆ ಸ್ವಲ್ಪ ಇಂಗ, ಜೀರಿಗೆ ಪುಡಿ, ಸ್ವಲ್ಪ ಅಡುಗೆ ಉಪ್ಪನ್ನು ಸೇರಿಸಿ ಕುಡಿಯಿರಿ. ದಿನಕ್ಕೆರಡು ಬಾರಿಯಂತೆ ಪ್ರತಿದಿನ ಈ ರೋಗ ಕಡಿಮೆಯಾಗುವವರೆಗೆ ಕುಡಿಯಬೇಕು. ಹೀಗೆ ಮಾಡಿದರೆ ಈ ರೋಗ ಕಡಿಮೆಯಾಗುತ್ತದೆ.

13) **ಹೊಟ್ಟ ಕಬ್ಬ್ ಹಿಡಿದಾಗ :**

ಆಕಳ ಹಾಲಿನಿಂದ ತಾಯರಿಸಿದ ಮೊಸರಿಗೆ, ಅರ್ಧ ಭಾಗದಷ್ಟು ನೀರನ್ನು ಸೇರಿಸಿ, ಚೆನ್ನಾಗಿ ಹೊಸೆದು, ಬೆಣ್ಣೆಯನ್ನು ತೆಗೆದು, ಒಣಗಿದ ಸುಂಟಿ, ಕರೆ ಮೆಣಸು, ಅಡುಗೆ ಉಪ್ಪು ತೆಗೆದುಕೊಂಡು ನುಣ್ಣಗೆ ಅರೆದು ಈ ಮಜ್ಜಿಗೆಯಲ್ಲಿ ಕಲಸಿ, ಕುಡಿಯಬೇಕು. ಹೀಗೆ ಐದು ದಿವಸ ಕುಡಿದರೆ ಈ ರೋಗ ನಿವಾರಣೆಯಾಗುತ್ತದೆ.

14) <u>ಕಣ್ಣು ಕಚ್ ಕಚ್ ಮಾಡುತ್ತಿದ್ದರೆ :</u>

ಒಂದು ಚಮಚ ಔಡಲ ಎಣ್ಣೆಯನ್ನು ತೆಗೆದುಕೊಂಡು, ಅದರಲ್ಲಿ ಅಷ್ಟೇ ಪ್ರಮಾಣದ ಎದೆ ಹಾಲನ್ನು ಸೇರಿಸಿ ಕಣ್ಣಿಗೆ ಹಾಕಿದರೆ, ಕಣ್ಣಿನ ಬೇನೆ ಯಾವುದೇ ಇದ್ದರೂ ಕೂಡ ಕಡಿಮೆಯಾಗುತ್ತದೆ.

15) <u>ಗುದದ್ವಾರದಲ್ಲಿ ಕೆರೆತ ಉಂಟಾದಾಗ :</u>

ಆಕಳ ಕೆನೆಮೊಸರಿನಲ್ಲಿ ಅನ್ನ ಕಲಸಿ, ಈ ಅನ್ನದಲ್ಲಿ ರುಚಿಗೆ ತಕ್ಕಷ್ಟು ಬೆಲ್ಲ ಕರಿ ಮೆಣಸಿನ ಪುಡಿ ಬೆರೆಸಿ, ಹೀಗೆ ತಯಾರಿಸಿದ ಮೊಸರನ್ನವನ್ನು ಪ್ರತಿದಿನ ಮುಂಜಾನೆ ಬರಿ ಹೊಟ್ಟೆಯಲ್ಲಿ ತಿನ್ನಬೇಕು. ಹೀಗೆ ಐದು ದಿನ ತಿಂದರೆ ಈ ರೋಗ ಹೇಳ ಹೆಸರಿಲ್ಲದಂತೆ ಮಾಯವಾಗುತ್ತದೆ.

16) <u>ಕೆಮ್ಮಿದಾಗ ರಕ್ತ ಬೀಳುತ್ತಿದ್ದರೆ :</u>

ದಾಳಿಂಬೆ ಹಣ್ಣಿನಿಂದ ರಸವನ್ನು ತೆಗೆದು, ಅದರಲ್ಲಿ ಸ್ವಲ್ಪ ಸಕ್ಕರೆಯನ್ನು ಬೆರೆಸಿ, ಚೆನ್ನಾಗಿ ಕಲಸಿ, ಹಣ್ಣಿನ ಶರಬತ್ತನ್ನು ಮಾಡಿ ಕುಡಿಯಬೇಕು. ಹೀಗೆ ಒಂದು ವಾರಗಳ ಕಾಲ ಮಾಡಿದರೆ, ಈ ರೋಗ ನಿವಾರಣೆಯಾಗುತ್ತದೆ.

17) <u>ರಕ್ತದ ಭೇದಿಯಾಗುತ್ತಿದ್ದಾಗ :</u>

ದಾಳಿಂಬೆ ಹಣ್ಣಿನ ಸಿಪ್ಪೆಯನ್ನು ಚೆನ್ನಾಗಿ ಒಣಗಿಸಿ, ಕುಟ್ಟಿ ಪುಡಿ ಮಾಡಿ, ಈ ಪುಡಿಯನ್ನು ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಾಯಂಕಾಲ ಅರ್ಧ ಅರ್ಧ ಚಮಚ ಜೇನು ತುಪ್ಪದೊಂದಿಗೆ ಕಲಸಿ, ದಿನಕ್ಕೆ ಮೂರು ಸಲದಂತೆ ಐದು ದಿನ ಸೇವಿಸಿದರೆ ಈ ರೋಗ ನಿವಾರಣೆಯಾಗುತ್ತದೆ.

18) <u>ಹಲ್ಲು ನೋವಾದಾಗ :</u>

ಸ್ವಲ್ಪ ಹತ್ತಿಯನ್ನು ಲವಂಗ ಎಣ್ಣೆಯಲ್ಲಿ ತೋಯಿಸಿ, ನೋವಿರುವ ಸ್ಥಳದಲ್ಲಿ ಇಟ್ಟರೆ, ಹಲ್ಲು ನೋವು ನಿವಾರಣೆಯಾಗುತ್ತದೆ.

19) <u>ಊಟ ಅಜೀರ್ಣವಾಗುತ್ತಿದ್ದರೆ :</u>

ಸುಂಠಿ ರಸವನ್ನಾಗಲಿ ಅಥವಾ ಸುಂಠಿ ಪುಡಿಯನ್ನಾಗಲಿ ಜೇನು ತುಪ್ಪದಲ್ಲಿ ಕಲಸಿ ಸೇವಿಸುವುದರಿಂದ ಈ ರೋಗ ನಿವಾರಣೆಯಾಗುತ್ತದೆ.

20) <u>ಪ್ರಜ್ಞೆ ತಪ್ಪಿದಾಗ :</u>

ಬೆಳ್ಳಗಡ್ಡಿಯನ್ನು ಕುಟ್ಟಿ, ರೋಗಿಯ ಮೂಗಿಗೆ ಹಿಂಡಿದರೆ ಪ್ರಜ್ಞೆ ಮರಳಿ ಬರುತ್ತದೆ.

21) <u>ಕೀಲು ನೋವು ಮತ್ತು ಸಂಧಿವಾತ ಇದ್ದಾಗ :</u>

ಸುಂಠಿಯನ್ನು ಚೆನ್ನಾಗಿ ಕುಟ್ಟಿ ಪುಡಿ ಮಾಡಿ, ನೀರಿನಲ್ಲಿ ಕಲಸಿ, ನಂತರ ಸ್ವಲ್ಪ ಔಡಲ ಎಣ್ಣೆಯನ್ನು ಹಾಕಿ, ರಾತ್ರಿ ಮಲಗುವುದಕ್ಕಿಂತ ಮುಂಚೆ ಸೇವಿಸಬೇಕು. ಹೀಗೆ ಒಂದು ವಾರಕಾಲ ಮಾಡಿದರೆ ಈ ರೋಗ ನಿವಾರಣೆಯಾಗುತ್ತದೆ.

22) <u>ಕುರು ಆದಾಗ :</u>

ಸುಟ್ಟ ಉಳ್ಳಾಗಡ್ಡಿಯನ್ನು ಕುರು ಇರುವ ಜಾಗದ ಮೇಲೆ ಇಟ್ಟು, ಬೆಣ್ಣೆ ಹಚ್ಚಿ ಬಟ್ಟೆಯಿಂದ ಕಟ್ಟಬೇಕು. ಕುರು ಬೇಗೆ ಒಡೆದು ಕೆಟ್ಟ ರಕ್ತ ಹೊರಬಂದು ಈ ರೋಗ ನಿವಾರಣೆಯಾಗುತ್ತದೆ.

23) <u>ಕೆಮ್ಮು, ನೆಗಡಿ, ಗಂಟಲು ಕಡೆಯುತ್ತಿದ್ದರೆ :</u>

ಹಾಲಿನಲ್ಲಿ ಅರಿಶಿಣ ಕೊಂಬನ್ನು ಹಾಕಿ ಚೆನ್ನಾಗಿ ಕುದಿಸಿ ನಂತರ ಕೊಂಬನ್ನು ಹೊರಗೆ ತೆಗೆದು ತಿನ್ನಬೇಕು. ನಂತರ ಆ ಹಾಲು ಕುಡಿಯಬೇಕು. ಹೀಗೆ ಮಾಡಿದರೆ ಈ ರೋಗಗಳು ನಿವಾರಣೆಯಾಗುತ್ತವೆ.

24) <u>ಕೂಸು ಕೆಮ್ಮುತ್ತಿದ್ದಾಗ :</u>

ವೀಳೆದೆಲೆಗೆ ಎಳ್ಳೆಣ್ಣೆಯನ್ನು ಸವರಿ ನಂತರ ಬಿಸಿಮಾಡಿ ಎದೆಗೆ ಹಚ್ಚುವುದರಿಂದ ಕೆಮ್ಮು ರೋಗ ನಿವಾರಣೆಯಾಗುತ್ತದೆ.

25) <u>ಕೀಲು ನೋವು ಇದ್ದಾಗ :</u>

ಔಡಲ ಎಣ್ಣೆಯಲ್ಲಿ ಬೆಳಗಡ್ಡಿಯನ್ನು ಸುಲಿದು, ಸಣ್ಣ ಸಣ್ಣ ಹೋಳುಗಳನ್ನು ಹಾಕಿ, ಬೆಳಗಡ್ಡಿ ಕಂದು ಬಣ್ಣ ಬರುವವರೆಗೆ ಸುಟ್ಟು, ಆ ಎಣ್ಣೆಯನ್ನು ನೋವಿರುವ ಸ್ಥಳಕ್ಕೆ ಹಚ್ಚಿದರೆ ಕೀಲು ನೋವು ಮಾಯವಾಗುತ್ತದೆ.

26) **ಟೊಂಕ, ಮಂಡಿ ನೋವಿದ್ದಾಗ** :

10 ಔಡಲ ಬೀಜದ ಒಳಗಿನ ತಿರುಳು, ಆಕಳ ಹಾಲು 12 ಚಮಚ, ನೀರು 24 ಚಮಚ, ಇವುಗಳನ್ನು ಒಂದು ಕಡೆ ಸೇರಿಸಿ ಚೆನ್ನಾಗಿ ಕುದಿಸಿ, ಅದಕ್ಕೆ ಖಡಿಸಕ್ಕರಿಯನ್ನು ರುಚಿಗೆ ತಕ್ಕಷ್ಟು ಹಾಕಿ ಕುಡಿಯುವುದರಿಂದ ಈ ರೋಗ ನಿವಾರಣೆಯಾಗುತ್ತದೆ.

27) **ಕಾಮಣಿ (ಕಾಮಾಲೆ) ಯಾದಾಗ** :

ಔಡಲ ಗಿಡದ ಚಿಗುರೆಲೆಯನ್ನು ಕಡಿದು, ಚೆನ್ನಾಗಿ ಕುಟ್ಟಿ, ಅರ್ಧ ಬಟ್ಟಲು ರಸ ತೆಗೆದು, ರೋಗಿಗೆ ಕುಡಿಸಬೇಕು. ಹೀಗೆ ಮೂರು ದಿನ ಕುಡಿಸಿದರೆ ಈ ರೋಗ ನಿವಾರಣೆಯಾಗುತ್ತದೆ.

28) **ಅಧಿಕ ರಕ್ತದೊತ್ತಡ ಆದಾಗ** :

ಆರು ಬಿಲ್ವ ಪತ್ರೆ, ಒಂದು ಹಿಡಿ ಅಕ್ಕಿ ಈ ಎರಡನ್ನು ಒಳ್ಳಿನಲ್ಲಿ ಹಾಕಿ, ಒಣಕೆಯಿಂದ ಅಕ್ಕಿ ನುಚ್ಚಾಗುವವರೆಗೆ ಕುಟ್ಟಿ, ನಂತರ ಈ ನುಚ್ಚು ಅಕ್ಕಿಯನ್ನು ನೆರಳಿನಲ್ಲಿ ಚೆನ್ನಾಗಿ ಒಣಗಿಸಿ, ಇಟ್ಟುಕೊಳ್ಳಬೇಕು. ನುಚ್ಚನ್ನು ಗಂಜಿಮಾಡಿ, ಕುಡಿಯುವುದರಿಂದ ಅಧಿಕ ರಕ್ತದೊತ್ತಡವು ನಿಂತು ರೋಗ ನಿವಾರಣೆಯಾಗುತ್ತದೆ.

29) **ರಕ್ತಸ್ರಾವವಾಗುತ್ತಿದ್ದಾಗ** :

ಕರಕಿಯನ್ನು ಚೆನ್ನಾಗಿ ತೊಳೆದು, ನೀರಿನ ಸಹಾಯದಿಂದ ಕುಟ್ಟಿ, ಎರಡು ಚಮಚ ರಸ ತೆಗೆದು, ಅದಕ್ಕೆ ಎರಡು ಚಮಚ ಜೇನುತುಪ್ಪ ಅಥವಾ ಸಕ್ಕರೆ ಕಲಸಿ, ದಿನಕ್ಕೆ ಮೂರುಬಾರಿಯಂತೆ ಹತ್ತು ದಿನ ಸೇವಿಸಿದರೆ ಈ ರೋಗ ನಿವಾರಣೆಯಾಗುತ್ತದೆ.

30) **ಇಸಬು ಆದಾಗ** :

ಕುಂಬಳ ಎಲೆಯ ರಸವನ್ನು ತೆಗೆದು, ಇಸುಬು ಆದ ಸ್ಥಳಕ್ಕೆ ಹಚ್ಚಿದರೆ, ಇಸುಬು ಮಾಯವಾಗುತ್ತದೆ ಮತ್ತು ಇತರ ಚರ್ಮ ರೋಗಗಳು ಕೂಡ ಮಾಯವಾಗುತ್ತವೆ.

31) **ಅಜೀರ್ಣದಿಂದ ಹೊಟ್ಟೆ ನೋವು** :

ಒಂದು ಬಟ್ಟಲು ಬಿಸಿಹಾಲಿಗೆ, ಒಂದು ನಿಂಬೆ ಹಣ್ಣಿನ ರಸವನ್ನು ಹಿಂಡಿ, ಅರ್ಧ ಚಮಚ ಅಡುಗೆ ಸೋಡ ಸೇರಿಸಿ, ಕುಡಿದರೆ, ಶೀಘ್ರವೇ ಗುಣಮುಖ ಕಂಡುಬರುವುದು. ಇದರಿಂದ ಹೊಟ್ಟೆ ನೋವು ನಿಂತು ಈ ರೋಗ ನಿವಾರಣೆಯಾಗುತ್ತದೆ.

32) **<u>ಮೂಲವ್ಯಾಧಿ :</u>**

ಆಕಳ ಹಾಲು ನೊರೆ ಇರುವಾಗಲೇ ಒಂದು ನಿಂಬೆಹಣ್ಣನ್ನು ಅದರಲ್ಲಿ ಹಿಂಡಿ ತಕ್ಷಣ ಕುಡಿಯಬೇಕು. ಹೀಗೆ ಹತ್ತುದಿನಗಳ ವರೆಗೆ ಸೇವಿಸಿದರೆ ಮೂಲವ್ಯಾಧಿ ನಿವಾರಣೆಯಾಗುತ್ತದೆ.

33) **<u>ಹೊಟ್ಟೆ ನೋವು :</u>**

ಜೀರಿಗೆ, ಸಕ್ಕರೆ, ಒಣಗಿದ ಸುಂಠಿ, ಅಡುಗೆ ಉಪ್ಪು ಇವುಗಳನ್ನು ಒಂದು ಚಮಚದಷ್ಟು ತೆಗೆದುಕೊಂಡು, ನುಣ್ಣಗೆ ಪುಡಿ ಮಾಡಿ, ಇದನ್ನು ಅರ್ಧ ಬಟ್ಟಲು ಬಿಸಿನೀರಿಗೆ ಹಾಕಿ, ನಂತರ ಒಂದು ಹೋಳು ನಿಂಬೆ ಹೋಳಿದ ರಸವನ್ನು ಅದಕ್ಕೆ ಹಿಂಡಿ, ಚೆನ್ನಾಗಿ ಕಲಸಿ, ಕುಡಿದರೆ ಹೊಟ್ಟೆ ನೋವು ಮಾಯವಾಗುತ್ತದೆ.

34) **<u>ಕಾಮಾಲೆಯಾದಾಗ :</u>**

ಎರಡು ಚಮಚ ಹುಣಸೆ ಹಣ್ಣಿನ ರಸ ತೆಗೆದುಕೊಂಡು, ಅರ್ಧ ಚಮಚ ಜೀರಗಿಯ ಚೂರ್ಣದೊಂದಿಗೆ ಜೇನು ತುಪ್ಪಹಾಕಿ, ಎಲ್ಲವನ್ನು ಕಲೆಸಿ, ನಾಲ್ಕುದಿನಗಳವರೆಗೆ ಸೇವಿಸಿದರೆ ಅರಿಶಿಣ ಕಾಮಾಲೆ ರೋಗ ನಿವಾರಣೆಯಾಗುತ್ತದೆ.

35) **<u>ಮಲೇರಿಯಾ ಆದಾಗ :</u>**

ಒಂದು ಬಟ್ಟಲು ನೀರಿಗೆ, ಒಂದು ಚಮಚ ಮೆಣಸಿನ ಪುಡಿಯನ್ನು ಹಾಕಿ, ಆರು ಬೆಳಗಡ್ಡಿಯ ಎಸಳನ್ನು ಕುಟ್ಟಿ ನೀರಲ್ಲಿ ಬೆರೆಸಿ, ಐದು ನಿಮಿಷದ ನಂತರ ಈ ನೀರನ್ನು ಸೋಸಿ ಅದಕ್ಕೆ ಸ್ವಲ್ಪ ಜೇನು ತುಪ್ಪವನ್ನು ಸೇರಿಸಿ, ದಿನಕ್ಕೆ ಮೂರು ಬಾರಿಯಂತೆ ಕುಡಿದರೆ ಮಲೇರಿಯಾ ರೋಗ ನಿವಾರಣೆಯಾಗುತ್ತದೆ.

36) **<u>ನೆಗಡಿ ಆದಾಗ :</u>**

ಬಿಸಿ ಹಾಲಿಗೆ ಕರಿ ಮೆಣಸಿನ ಪುಡಿ, ಮತ್ತು ಸ್ವಲ್ಪ ಖಡಿಸಕ್ಕರೆಯನ್ನು ಸೇರಿಸಿ, ಚೆನ್ನಾಗಿ ಕಲಸಿ ಕುಡಿಯುವುದರಿಂದ ನೆಗಡಿ ಕಡಿಮೆಯಾಗುತ್ತದೆ.

37)ಹಲ್ಲುನೋವಾದಾಗ :

ಮೆಣಸನ್ನು ನುಣ್ಣಗೆ ಅರೆದು, ಒಸಡಿಗೆ ತಿಕ್ಕಿಕೊಂಡರೆ, ಕೆಟ್ಟ ಉಗುಳು ಹೊರಬಂದು, ಹಲ್ಲು ನೋವು ಕಡಿಮೆಯಾಗುತ್ತದೆ.

38) ರಕ್ತಭೇದಿಯಾದಾಗ :

ಒಂದು ಚಮಚ ಮೆಂತೆಯನ್ನು ಗಟ್ಟಿ ಮೊಸರಿನಲ್ಲಿ ಬೆರೆಸಿ, ಬಾಯಿಗೆ ಹಾಕಿಕೊಂಡು ನುಂಗುವುದರಿಂದ ರಕ್ತ ಭೇದಿ ಕಡಿಮೆಯಾಗಿ ರೋಗ ನಿವಾರಣೆಯಾಗುತ್ತದೆ.

39) ಗರ್ಭಿಣಿಯರಿಗೆ ವಾಂತಿಯಾಗುತ್ತಿದ್ದರೆ :

ಹಳೆಯ ನುಚ್ಚಕ್ಕಿಯನ್ನು ನೀರಿನಲ್ಲಿ ನೆನೆಹಾಕಿ, ಚೆನ್ನಾಗಿ ಕಿವುಚಿ, ನಂತರ ನೀರನ್ನು ಬೇರೆ ತೆಗೆಯಿರಿ, ಒಂದು ಬಟ್ಟಲು ನೀರನ್ನು ತೆಗೆದು, ಅದಕ್ಕೆ ಒಂದು ಚಮಚ ಕೋತಂಬರಿ ಬೀಜದ ಪುಡಿ, ಮತ್ತು ಸ್ವಲ್ಪ ಖಡಸಕ್ಕರೆಯನ್ನು ಸೇರಿಸಿ, ಚೆನ್ನಾಗಿ ಕಲಸಿ ಕುಡಿಯುವುದರಿಂದ ಗರ್ಭಿಣಿಯರಲ್ಲಿ ತಲೆದೂರುವ ವಾಂತಿ ನಿವಾರಣೆಯಾಗುತ್ತದೆ.

40) ತಲೆನೋವು :

ಹಸಿ ಸುಂಠಿಯನ್ನು ನೀರಿನಲ್ಲಿ ತೋಯಿಸಿ, ಗಂಧ ತೆಗೆದು, ಆ ಗಂಧವನ್ನು ಹಣೆಗೆ ಹಚ್ಚಿ, ಬೆಚ್ಚಗೆ ಹೊದ್ದಿಕೊಂಡು ಮಲಗಿದರೆ ಸ್ವಲ್ಪ ಸಮಯದ ನಂತರ ಬೆವರು ಸುರಿದು ತಲೆನೋವು ಕಡಿಮೆಯಾಗುತ್ತದೆ.

41) ಒಸಡು ಊದಿಕೊಂಡಾಗ :

ಜೇನು ತುಪ್ಪದಲ್ಲಿ ಹತ್ತಿಯನ್ನು ನೆನೆಸಿ, ದಿನಕ್ಕೆ ಆರು ಬಾರಿಯಂತೆ, ಹಲ್ಲಿನಲ್ಲಿ ಇಟ್ಟುಕೊಂಡರೆ, ಕೆಟ್ಟ ಉಗುಳು ಹೋಗಿ, ಹಲ್ಲು ನೋವು ಮತ್ತು ಒಸಡು ಊದಿಕೊಂಡಿರುವುದನ್ನು ಕಡಿಮೆಯಾಗಿ ರೋಗ ನಿವಾರಣೆಯಾಗುತ್ತದೆ.

42) ಮೂಗಿನಿಂದ ರಸ್ತ ಸ್ರಾವವಾಗುತ್ತಿದ್ದರೆ :

ರಕ್ತ ಸ್ರಾವಾಗುತ್ತಿರುವ ಮೂಗಿನಲ್ಲಿ, ಮೂರು ನಾಲ್ಕು ಹನಿ ತಾಯಿಯ ಎದೆ ಹಾಲನ್ನು ಹಾಕಿದರೆ, ಈ ರೋಗ ನಿವಾರಣೆಯಾಗುತ್ತದೆ.

43) **ಚಿಕ್ಕ ಮಕ್ಕಳಿಗೆ ವಾಂತಿಯಾಗುತ್ತಿದ್ದರೆ :**

ಮೊಲೆ ಹಾಲನ್ನು ಕುಡಿಸುವುದನ್ನು ನಿಲ್ಲಿಸಿ, ಸೇಬಿನ ಸಿಪ್ಪೆಯನ್ನು ತೆಗೆದು, ಹೋಳು ಮಾಡಿ, ನಂತರ ಬೇಯಿಸಿ, ಇದನ್ನು ಚೆನ್ನಾಗಿ ಕಿವುಚಿ, ಹಾಲಿನ ಬದಲಿಗೆ ಇದನ್ನು ಕುಡಿಸಬೇಕು. ಆಗ ತಟ್ಟನೆ ವಾಂತಿ ನಿಲ್ಲುತ್ತದೆ. ಆರೋಗ್ಯ ಸುಧಾರಿಸಿ ರೋಗ ನಿವಾರಣೆಯಾಗುತ್ತದೆ.

44) **ಎದೆ ನೋವು :**

ಜಾಪಳದ ಬಲಿತ ಬೀಜವನ್ನು ಚೆನ್ನಾಗಿ ಅರೆದು, ಅದನ್ನು ಮಜ್ಜಿಯೊಂದಿಗೆ ಕುಡಿದರೆ ಎದೆ ನೋವು ಕಡಿಮೆಯಾಗಿ ರೋಗ ನಿವಾರಣೆಯಾಗುತ್ತದೆ.

45) **ಕಿವಿ ನೋವಾದಾಗ :**

ಬೆಳಗಡ್ಡಿಯನ್ನು ಸುಲಿದು, ಔಡಲ ಎಣ್ಣೆಯಲ್ಲಿ ಕಲಿದು, ಆಲಿದ ನಂತರ ಕಿವಿಯಲ್ಲಿ ಒಂದೆರಡು ಹನಿ ಹಾಕಿದರೆ ನೋವು ಕಡಿಮೆಯಾಗಿ ರೋಗ ನಿವಾರಣೆಯಾಗುತ್ತದೆ.

46) **ಜಂತು ಹುಳು ಆದಾಗ :**

ಪಪಾಯಿ ಕಾಯಿಯನ್ನು ಸೀಳಿ ಅದರಲ್ಲಿ ಸಕ್ಕರೆಯನ್ನು ಹಾಕಿ ತಿಂದರೆ, ಜಂತು ಹುಳು ಮಲದಿಂದ ಹೊರಗೆ ಬರುತ್ತದೆ.

47) **ಕೆಮ್ಮು ಆದಾಗ :**

ಒಂದು ಲವಂಗ, ಒಂದು ಉಪ್ಪಿನ ಹಳ್ಳವನ್ನು ಬಾಯಿಯಲ್ಲಿ ಇಟ್ಟುಕೊಂಡು ಮೆಲೆಯುತ್ತಿದ್ದರೆ, ಕೆಮ್ಮು ನಿಂತು ರೋಗ ನಿವಾರಣೆಯಾಗುತ್ತದೆ.

48) **ಏಡ್ಸ್ ಆದಾಗ :**

ಹತ್ತಿ ಬಟ್ಟೆಯನ್ನು ಎಂಟು ಬಾರಿ ಮಡಚಿ, ಆಕಳ ಹೆಂಡಿ (ಸೆಗಣಿ), ಅರ್ಧ ಲೀಟರನಷ್ಟು ನೀರಿನಲ್ಲಿ ಕಲಸಿ, ಸೋಸಬೇಕು. ಮುಂಜಾನೆ ಮತ್ತು ರಾತ್ರಿ ಖಾಲಿ ಹೊಟ್ಟೆಯಲ್ಲಿ ಕುಡಿಯಬೇಕು. 31 ತುಳಸಿ ಎಲೆಯನ್ನು ಕುಟ್ಟಿ, ರಸ ತೆಗೆದು ಅಷ್ಟೆ ಪ್ರಮಾಣದಲ್ಲಿ ಜೇನು ತುಪ್ಪ ಕಲಸಿ, ಕುಡಿಯಬೇಕು. ಸಿಪ್ಪೆ ಸಹಿತ ಸೂರೆಕಾಯಿ, ಐದು ತುಳಸಿ ಎಲೆ ಐದು ಪುದಿನಾ ಎಲೆ ಚೆನ್ನಾಗಿ ಕುಟ್ಟಿ ಒಂದು ಗ್ಲಾಸ ರಸ ತೆಗೆದು ಸ್ವಲ್ಪ ಕರಿ ಮೆಣಸಿನ ಪುಡಿ ಮತ್ತು ಸುಂಠಿ ಪುಡಿ ಹಾಕಿ ತಿನ್ನಬೇಕು. ನೀರು ಕುಡಿದ ನಂತರ ಆಕಳ ಹಾಲಿನ ತಾಜಾ ಮೊಸರನ್ನು ಕುಡಿಯಬೇಕು. ಹೀಗೆ 6 ತಿಂಗಳು ಕಾಲ ಮಾಡಿದರೆ ಈ ರೋಗ ನಿವಾರಣೆಯಾಗುತ್ತದೆ.

49) <u>ಗಜಕರ್ಣ ಮತ್ತು ಇಸುಬಾದಾಗ :</u>

ಆಲು ಗಡ್ಡೆಯನ್ನು ನಿಂಬೆ ಹಣ್ಣಿನ ರಸದಲ್ಲಿ ಚೆನ್ನಾಗಿ ಅರೆದು, ಇಸುಬು, ಗಜಕರ್ಣ, ಆದ ಸ್ಥಳಕ್ಕೆ ಕಟ್ಟಬೇಕು. ಹೀಗೆ ಕಟ್ಟಿರುವಂತಹ ಪಟ್ಟಿಯನ್ನು ಎರಡು ದಿವಸ ಬಿಡಬಾರದು ಹಾಗೂ ತೋಯಿಸಬಾರದು ಇದರಿಂದ ಗಜಕರ್ಣ ಮತ್ತು ಇಸುಬು ನಿವಾರಣೆಯಾಗುತ್ತದೆ.

50) <u>ಎದೆ ಹಾಲಿನ ತೊಂದರೆ ಇದ್ದಾಗ :</u>

ಕೆಲವು ಗಂಟೆಗಳ ಕಾಲ ಉದ್ದಿನ ಬೇಳೆಯನ್ನು ನೆನೆಸಿ, ನಂತರ ತುಪ್ಪದಲ್ಲಿ ಹುರಿದಿಟ್ಟುಕೊಳ್ಳಬೇಕು. ಇದನ್ನು ಚಪಾತಿಯೊಂದಿಗೆ ತಿಂದರೆ ಸ್ತ್ರೀಯರಿಗೆ ಎದೆಯ ಹಾಲು ಹೆಚ್ಚಾಗುತ್ತವೆ ಹೀಗೆ ಎಂಟು ದಿವಸಗಳ ಕಾಲ ಮಾಡಿದರೆ ಈ ರೋಗ ನಿವಾರಣೆಯಾಗುತ್ತದೆ.

51) <u>ಗರ್ಭಪಾತ ಮಾಡಿಕೊಳ್ಳಬೇಕಾದರೆ :</u>

ಗರ್ಭಧರಿಸಿದ ಆರಂಭದ ದಿನಗಳಲ್ಲಿ ಗರ್ಭಪಾತವಾಗಬೇಕೆಂದು ಬಯಸಿದರೆ, ಕರಿ ಎಳ್ಳಿಗೆ ಬೆಲ್ಲವನ್ನು ಸೇರಿಸಿ, ಕುಟ್ಟಿ, ದಿನಕ್ಕೆ ಮೂರುಬಾರಿಯಂತೆ ತಿಂದರೆ ಗರ್ಭಪಾತವಾಗುತ್ತದೆ.

52) <u>ಮೂಲವ್ಯಾಧಿ ಮತ್ತು ರಕ್ತ ಬೀಳುತ್ತಿದ್ದರೆ :</u>

ಕರಿ ಎಳ್ಳನ್ನು ಒಂದು ಚಮಚ ತೆಗೆದುಕೊಂದು, ಅದನ್ನು ಖಡಿ ಸಕ್ಕರಿಯಲ್ಲಿ ಸೇರಿಸಿ, ನಂತರ ಕುಟ್ಟಿ ತಿನ್ನಬೇಕು. ಆಡಿನ ಹಾಲನ್ನು ಒಂದು ಬಟ್ಟಲು ಕುಡಿಯಬೇಕು. ಹೀಗೆ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಹೀಗೆ 13 ದಿನಗಳ ವರೆಗೆ ಸೇವಿಸಿದರೆ ಈ ರೋಗ ನಿವಾರಣೆಯಾಗುತ್ತದೆ.

53) ಜ್ಞಾಪಕ ಶಕ್ತಿ ಹೆಚ್ಚಿಸಲು :

ಆಕಳ ಹಾಲಿಗೆ ಇಲಾಚಿಯನ್ನು ಕುಟ್ಟಿ ಸೇರಿಸಿ, ಕುದಿಸಿದ ನಂತರ ಜೇನುತುಪ್ಪ ಸೇರಿಸಿ ಕುಡಿಯಬೇಕು. ಇದರಿಂದ ಜ್ಞಾಪಕ ಶಕ್ತಿ ಹೆಚ್ಚಾಗುತ್ತದೆ.

54) ಮುಟ್ಟಾಗುವುದನ್ನು ಮುಂದೂಡಬೇಕಾದರೆ :

ದಾಲ್ಚಿನಿಯ ಚಕ್ಕಿಯನ್ನು ತಿನ್ನಬೇಕು. ಹೀಗೆ ತಿಂದರೆ ಮುಟ್ಟಾಗುವುದನ್ನು ಮುಂದಕ್ಕೆ ಹೋಗುತ್ತದೆ. ತಿನ್ನುವುದನ್ನು ನಿಲ್ಲಿಸಿದರೆ ಮತ್ತೆ ಮುಟ್ಟಾಗುತ್ತದೆ.

55) ಹೆಚ್ಚು ಮೂತ್ರ ವಿಸರ್ಜನೆಯಾಗುತ್ತಿದ್ದರೆ :

ದಾಲ್ಚಿನಿ ಚಕ್ಕಿಯನ್ನು ಚೆನ್ನಾಗಿ ಕುಟ್ಟಿ, ಜೇನು ತುಪ್ಪವನ್ನು ಕಲಸಿ, ನೆಕ್ಕುತ್ತಿದ್ದರೆ ಮೂತ್ರ ವಿಸರ್ಜನೆ ಹತೋಟಿಗೆ ಬರುತ್ತದೆ.

56) ಸುಂಬಳು (ನೆಗಡಿ) ಸೋರುತ್ತಿದ್ದರೆ :

ಆಕಳ ಹಾಲಿನಿಂದ ತಯಾರಿಸಿದ ಮೊಸರನ್ನು, ರುಚಿಗೆ ತಕ್ಕಷ್ಟು ಬೆಲ್ಲವನ್ನು ಸೇರಿಸಿ, ಕಲಸಿ, ಕುಡಿದರೆ ಸುಂಬಳು ಸೋರುವುದನ್ನು ನಿಂತು ರೋಗ ನಿವಾರಣೆಯಾಗುತ್ತದೆ.

57)ಅರ್ಧ ತಲೆ ನೋವು :

ಆಕಳ ತುಪ್ಪದಲ್ಲಿ ಒಂದು ಗಜಗದ ಗಾತ್ರದ ಬೆಲ್ಲವನ್ನು ಸೇರಿಸಿ, ಬರಿ ಹೊಟ್ಟೆಯಲ್ಲಿ ನಾಲ್ಕು ದಿನ ಸೇವಿಸಿದರೆ ಈ ರೋಗ ನಿವಾರಣೆಯಾಗುತ್ತದೆ.

58) ಗರ್ಭ ಧರಿಸುವುದನ್ನು ತಡೆಗಟ್ಟಲು :

ಪುದಿನಾ ತಪ್ಪಲನ್ನು ನೆರಳಿನಲ್ಲಿ ಒಣಗಿಸಿ ನುಣ್ಣಗೆ ಪುಡಿ ಮಾಡಿ ಸಂಭೋಗಕ್ಕೆ ಮುಂಚೆ ಸ್ತ್ರೀಯು ಹತ್ತು ಗ್ರಾಮನಷ್ಟು ಚೂರ್ಣವನ್ನು ನೀರಿನೊಂದಿಗೆ ಸೇವಿಸಿದರೆ ಆಕೆಯ ಗರ್ಭವತಿಯಾಗುವುದಿಲ್ಲ.

59) <u>ನಾಲಿಗೆ ರುಚಿ ಗ್ರಹಣ ಶಕ್ತಿ ಕಳೆದುಕೊಂಡಾಗ :</u>

ಒಂದು ಹಿಡಿ ಎಳೆ ಬೇವಿನ ತಪ್ಪಲನ್ನು ತುಪ್ಪದಲ್ಲಿ ಹುರಿದು ಸೇವಿಸಬೇಕು, ಈ ಕ್ರಮವನ್ನು 7-8 ದಿನಗಳ ಕಾಲ ಮಾಡಿದರೆ ಈ ರೋಗ ನಿವಾರಣೆಯಾಗುತ್ತದೆ.

60) <u>ತೊಟ್ಟು ತೊಟ್ಟಾಗಿ ಮೂತ್ರ ವಿಸರ್ಜಿಸುತ್ತಿದ್ದರೆ :</u>

ಪ್ರತಿದಿನ ರಾತ್ರಿ ಮಲಗುವುದಕ್ಕಿಂತ ಮುಂಚೆ ಐದಾರು ಒಣ ದ್ರಾಕ್ಷಿ ಸೇವಿಸುವ ಅಭ್ಯಾಸವಿಟ್ಟುಕೊಂಡರೆ ಈ ರೋಗ ನಿವಾರಣೆಯಾಗುತ್ತದೆ.

61) <u>ಜ್ವರದ ತಾಪ ತಗ್ಗಿಸಲು :</u>

ತಣ್ಣನೆಯ ನೀರಿನಲ್ಲಿ ಅಡುಗೆ ಉಪ್ಪು ಕರಗಿಸಿ, ತೆಳುವಾದ ಬಟ್ಟೆಯನ್ನು ಆ ನೀರಿನಲ್ಲಿ ತೋಯಿಸಿ ಹಣೆಯ ಮೇಲಿಡುವುದರಿಂದ ಈ ರೋಗ ನಿವಾರಣೆಯಾಗುತ್ತದೆ.

62) <u>ನಾಯಿ, ಇಲಿ, ಹೆಗ್ಗಣ ಕಡಿತಕ್ಕೆ :</u>

ಬೇವಿನ ಚಿಕ್ಕೆ, ಬೇರು, ಎಲೆ, ಕಾಯಿ, ಹೂವು ಇವುಗಳನ್ನು ಪ್ರತಿಯೊಂದನ್ನು ಒಂದು ನೂರು ಗ್ರಾಮನಷ್ಟು ತೆಗೆದುಕೊಂಡು ಬಿಸಿಲಿಗಿಟ್ಟು ಚೆನ್ನಾಗಿ ಒಣಗಿಸಿ, ಕುಟ್ಟಿ ಪುಡಿಮಾಡಿ ಚೂರ್ಣ ತಯಾರಿಸಿ, ಇಲಿ ಅಥವಾ ನಾಯಿ ಅಥವಾ ಹೆಗ್ಗಣ ಕಡಿದ ಸಂದರ್ಭದಲ್ಲಿ ಒಂದು ಚಮಚ ಕುಡಿಸಿ ದಿನಕ್ಕೆ ಮೂರು ಸಲ ಈ ಔಷದೋಪಚಾರ ಮಾಡಿದಲ್ಲಿ ಈ ಪ್ರಾಣಿಗಳ ಕಡಿತದಿಂದಾಗುವ ಹಾನಿ ತಪ್ಪುವುದು. ಆದ್ದರಿಂದ ಈ ರೋಗ ನಿವಾರಣೆಯಾಗುವುದು (ಹುಚ್ಚು ನಾಯಿ ಕಡಿತಕ್ಕೆ ಈ ಚಿಕಿತ್ಸೆ ಉಪಯುಕ್ತವಲ್ಲ).

63) <u>ಮಾನಸಿಕ ಬಲವೃದ್ಧಿಗೆ :</u>

ಬಾದಾಮಿ ಬೀಜವನ್ನು ಇಡೀ ರಾತ್ರಿ ಬಿಸಿ ನೀರಿನಲ್ಲಿ ನೆನಸಿ ಮರುದಿನ ಬೆಳಗ್ಗೆ ಬೀಜಗಳ ಮೇಲಿನ ಸಿಪ್ಪೆ ತೆಗೆದು, ನುಣ್ಣಗೆ ಅರೆದು. ಪ್ರತಿ ದಿನವೂ ಒಂದು ಚಮಚದಷ್ಟು ಅರೆದ ಬಾದಾಮು ಸೇವಿಸುತ್ತಿದ್ದರೆ ಮಾನಸಿಕ ಬಲವು ವೃದ್ಧಿಯಾಗುತ್ತದೆ.

64) **ಹೊಟ್ಟೆಯಲ್ಲಿ ಅಜೀರ್ಣದಿಂದ ಗಡಬಡ ಸದ್ದಾಗುತ್ತಿದ್ದರೆ :**

ಒಂದು ಬಟ್ಟಲು ಕುಡಿಯುವ ನೀರಿಗೆ ಒಂದು ಚಮಚ ಸೋಪು (ಸೋಂಪು) ಹಾಕಿ ಕುದಿಸಿ ಒಲೆಯಿಂದ ಕೆಳಗಿಳಿಸಿ 10-12 ಗಂಟೆಗಳ ತರುವಾಯ ಈ ಕಷಾಯಕ್ಕೆ ಸ್ವಲ್ಪ ಜೇನುತುಪ್ಪ ಸೇರಿಸಿ ಸೇವಿಸಿ ಅಜೀರ್ಣದ ದೆಸೆಯಿಂದ ಹೊಟ್ಟೆಯಲ್ಲಿ ಗಡಬಡ ಸದ್ದಾಗುತ್ತಿದ್ದರೆ ಈ ಚಿಕಿತ್ಸೆಯಿಂದ ಉತ್ತಮ ಗುಣ ಕಂಡುಬರುವುದು.

65) **ಜೀರ್ಣ ಶಕ್ತಿ ಕಳೆದುಕೊಂಡಾಗ :**

ಒಂದು ಬಟ್ಟಲಿನಷ್ಟು ಟೊಮೆಟೊ ಹಣ್ಣಿನ ರಸ ಸೇವಿಸಿ, ಜೀರ್ಣ ಶಕ್ತಿ ಉತ್ತಮಗೊಳ್ಳುವ ವರೆಗೂ ಈ ಪದ್ಧತಿಯನ್ನು ಅನುಸರಿಸಿದರೆ ಈ ರೋಗ ಮಾಯವಾಗುತ್ತದೆ.

66) **ಕುರುವಾದಾಗ :**

ಕರಿಬೇವಿನ ಎಲೆಗಳನ್ನು ಅರೆದು ಅದರಲ್ಲಿ ಸ್ವಲ್ಪ ಅರಿಶಿಣದೊಂದಿಗೆ ಕುರು ಇರುವ ಜಾಗಕ್ಕೆ ಹಚ್ಚಿದರೆ ಈ ಕುರುವನ್ನು ಒಡೆದು ನಿವಾರಣೆಯಾಗುತ್ತದೆ.

67) **ಗಜಕರ್ಣ ಆದಾಗ :**

ಕಾಚನ್ನು 8-10 ಬೀಡಿಗಳನ್ನು ಲಿಂಬೆ ಹುಳಿಯ ತೋಯಿಸಿ ಗಜಕರ್ಣ ಇದ್ದ ಜಾಗಕ್ಕೆ ಹಚ್ಚಿದರೆ ಈ ರೋಗ ನಿವಾರಣೆಯಾಗುತ್ತದೆ.

68) **ಕಿರುನಾಲಿಗೆಯ ತೊಂದರೆ :**

ನಯವಾದ ಕಾಚಿನ ಚೂರ್ಣವನ್ನು ಒಂದು ಚಮಚದಲ್ಲಿ ಹಾಕಿ, ಚಮಚದ ಸಹಾಯದಿಂದ ಇಳಿದಿದ್ದ ಕಿರು ನಾಲಿಗೆಗೆ ಮುಟ್ಟಿಸಬೇಕು. ಅದಲ್ಲದೇ ಕಾಚು ಚೂರ್ಣವನ್ನು ನೀರಿಗೆ ಬೆರೆಸಿ ಬಾಯಿ ಮುಕ್ಕಳಿಸಬೇಕು. ಹೀಗೆ ಮಾಡುವುದರಿಂದ ಈ ರೋಗ ನಿವಾರಣೆಯಾಗುತ್ತದೆ.

69) <u>ಒಣ ಕೆಮ್ಮಿದ್ದರೆ :</u>

ಕಾಚು ಮತ್ತು ಅರಿಶಿಣ ಪುಡಿ ಮತ್ತು ಖಡಸಕ್ಕರೆಯನ್ನು ಸಮ ಪ್ರಮಾಣದಲ್ಲಿ ಕುದಿಸಿ, ನುಣ್ಣಗೆ ಅರೆದು ಚೂರ್ಣ ತಯಾರಿಸಿ, ಒಂದು ಚಮಚ ಚೂರ್ಣವನ್ನು ಒಂದು ಗ್ಲಾಸ ನೀರಿಗೆ ಬೆರೆಸಿ ಪ್ರತಿ ಮುಂಜಾನೆ, ಸಂಜೆ ಸೇವಿಸಿದರೆ ಕೆಮ್ಮು ಮಾಯವಾಗುತ್ತದೆ.

70) <u>ಕಿವುಡುತನ ಇದ್ದಾಗ :</u>

4-5 ಬೆಳ್ಳಗಡ್ಡಿ ಎಸಳು 25 ಗ್ರಾಂ ಅಪ್ಪಟ ಬಾದಾಮಿನ ಎಣ್ಣೆಯಲ್ಲಿ ಹಾಕಿ ಬೇಯಿಸಿ ಬೆಳಗಡ್ಡಿ ಸುಟ್ಟು ಹೋದ ಬಳಿದ ಆ ಎಣ್ಣೆಯನ್ನು ಆರಿಸಿ ಬಟ್ಟೆಯಲ್ಲಿ ಶೋಸಿ ಗಾಜಿನ ಬಾಟಲಿಗೆ ತುಂಬಿಡಿ. ಪ್ರತಿ ದಿನವೂ 3-4 ಹನಿ ಎಣ್ಣೆಯನ್ನು ಕಿವಿಗೆ ಹಾಕುತ್ತಿದ್ದರೆ ಪರಿಸ್ಥಿತಿ ಸುಧಾರಿಸುವುದು. ಈ ಚಿಕಿತ್ಸೆಯನ್ನು ಸುದೀರ್ಘ ಕಾಲದವರೆಗೆ ಮುಂದುವರಿಸುವುದರಿಂದ ಈ ರೋಗ ಕಡಿಮೆಯಾಗುತ್ತದೆ.

71) <u>ಮೂಗಿನಿಂದ ರಕ್ತ ಹೋಗುತ್ತಿದ್ದರೆ :</u>

- ಒಂದು ಕರ್ಪೂರದ ಪುಡಿಯನ್ನು ನೀರಿನಲ್ಲಿ ಚೆನ್ನಾಗಿ ಕರಗಿಸಿ, 4-5 ಹನಿ ಕರ್ಪೂರ ಕಲಸಿದ ತಿಳಿಯಾದ ನೀರು ಮೂಗಿನ ಸೊಳ್ಳೆಗೆ ಹಾಕಿದರೆ ರಕ್ತ ಬರುವುದು ನಿಲ್ಲುತ್ತದೆ.
- ಬೇವಿನ ಗಿಡದ ಎಲೆಗಳನ್ನು ಕುಟ್ಟಿ ರಸ ತೆಗೆದು ಆ ರಸವನ್ನು 3-4 ಹನಿ ಮೂಗಿನ ಸೊಳ್ಳೆಗೆ ಬಿಟ್ಟರೆ ರಕ್ತ ನಿಲ್ಲುತ್ತದೆ.

72) <u>ಮೂಗಿನಿಂದ ಕೆಟ್ಟ ವಾಸನೆ ಬರುತ್ತಿದ್ದರೆ :</u>

ಬೇವಿನ ಗಿಡದ ಹಸಿರು ಎಲೆಯನ್ನು ನೆರಳಲ್ಲಿ ಒಣಗಿಸಿ ಪುಡಿ ಮಾಡಿ, ಆ ಪುಡಿಯನ್ನು ಎರಡು ಪದರುಗಳ ಬಟ್ಟೆಯಲ್ಲಿ ಸೋಸಿ, ಸೋಸಿ ಬಂದ ಚೂರ್ಣವನ್ನು ಒಂದು ಗಾಜಿನ ಭರಣಿಯಲ್ಲಿ ತುಂಬಿ. ದಿನಾಲು ನಶ್ಯದಂತೆ ಬಳಸುತ್ತಿದ್ದರೆ ಮೂಗಿನಿಂದ ಕೆಟ್ಟವಾಸನೆ ಹೊರಬರುವುದು ನಿಲ್ಲುತ್ತದೆ.

73)ಕಣ್ಣು ಮಂಜಾದಾಗ :

ಬೇವಿನ ಗಿಡದ ಎಲೆಗಳನ್ನು ಶುಭ್ರವಾಗಿ ನೀರಿನಲ್ಲಿ ತೊಳೆದು ನಂತರ ಒಣಕೆಯಿಂದ ಕುಟ್ಟಬೇಕು. ಹೀಗೆ ತಯಾರಿಸಿದ ತೊಕ್ಕನ್ನ ನೀರಿನಲ್ಲಿ ಹರಡಿ, ಬಟ್ಟೆಯಿಂದ ಶೋಧಿಸಿ ನಂತರ ರಸ ತೆಗೆಯಬೇಕು. ಆ ರಸ ಒಂದು ಗಾಜಿನ ಬಾಟಲಿನಲ್ಲಿ ತಂಬಿಟ್ಟು ಆಗಾಗ ಕಣ್ಣಿಗೆ ಹಾಕಬೇಕು. ಹೀಗೆ ಕಣ್ಣು ಮಂಜಾಗುವುದನ್ನು ನಿಲ್ಲುವವರೆಗೆ ಈ ಕ್ರಿಯೆ ಮುಂದುವರಿಸಬೇಕು ಇದರಿಂದ ಈ ರೋಗ ನಿವಾರಣೆಯಾಗುತ್ತದೆ.

74)ಬಾಯಿ ಹುಣ್ಣು ಆದಾಗ :

ಬೇವಿನ ತಪ್ಪಲನ್ನು ಕುಟ್ಟಿ ರಸ ಹಿಂಡಿ ಈ ರಸ ದೊಂದಿಗೆ ಜೇನು ತುಪ್ಪ ಕಲಸಿ, ಚೆನ್ನಾಗಿ ಬಿಸಿಮಾಡಿ ನಂತರ ಆ ಮಿಶ್ರಣದಿಂದ ಬಾಯಿ ಮುಕ್ಕಳಿಸಿದರೆ, ಬಾಯಿಯ ಹುಣ್ಣು ಮತ್ತು ಗಂಟಲ ನೋವೂ ಕಡಿಮೆಯಾಗುತ್ತದೆ.

75)ಇಳೆಗಣ್ಣಿನ ತೊಂದರೆ ಇದ್ದಾಗ :

5 ಮೆಣಸಿನ ಕಾಳುಗಳನ್ನು ಒಂದು ಚಮಚದ ಮೊಸರಿನಲ್ಲಿ ತೋಯಿಸಿ ಕಣ್ಣಿನಲ್ಲಿ ಗಂಧ ಹಾಕಬೇಕು ಹೀಗೆ ಮಾಡಿದರೆ ಈ ರೋಗ ನಿವಾರಣೆಯಾಗುತ್ತದೆ.

76)ವೀರ್ಯ ಪತನವಾಗುತ್ತಿದ್ದರೆ :

ಎಳ್ಳಿನ ಎಲೆಗಳನ್ನು 10 ನಿಮಿಷಗಳವರೆಗೆ ನೀರಿನಲ್ಲಿ ಬೆರಸಿ ನಂತರ ಆ ನೀರಿಗೆ ಖಡಿಸಕ್ಕರೆ ಹಾಕಿ ತಕ್ಷಣ ಕುಡಿಯಬೇಕು. ಹೀಗೆ ಮಾಡಿದರೆ ಈ ರೋಗ ನಿವಾರಣೆಯಾಗುತ್ತದೆ.

77)ತಿಂಗಳ ಋತು ಸ್ರಾವ ಸರಿಯಾರಿ ಆಗದಿದ್ದಾಗ :

ಸ್ತ್ರೀಯರು ಪ್ರತಿ ರಾತ್ರಿ ಎಳ್ಳು ಮತ್ತು ಬೆಲ್ಲ ಸೇರಿಸಿ ತಯಾರಿಸಿದ ಕಷಾಯವನ್ನು ಒಂದು ವಾರಗಳ ಕಾಲ ಸೇವಿಸಿದರೆ ಋತು ಸ್ರಾವವು ಸರಿಯಾಗಿ ಆಗುವುದು ಮತ್ತು ತೊಂದರೆ ನಿವಾರಣೆಯಾಗುತ್ತದೆ.

78)ಚೇಳು ಕಡಿದಾಗ :

ಕೆಂಪು ಉತ್ತರಣಿ ಎಲೆಗಳನ್ನು ಹಿಂಡಿ ತೆಗೆದ ರಸವನ್ನು ಚೇಳು ಕಡಿದ ಭಾಗಕ್ಕೆ ಹಚ್ಚಿದರೆ ಉರಿ ಮತ್ತು ವಿಷ ಇಳಿದು ನೋವು ಕಡಿಮೆಯಾಗುತ್ತದೆ.

79)<u>ಹಾವು ಕಡಿದಾಗ :</u>

ಕೆಂಪು ಉತ್ತರಣಿ ಎಲೆಗಳಿಂದ ತೆಗೆದ ರಸವನ್ನು ಹಾವು ಕಡಿದ ವ್ಯಕ್ತಿಯ ಕಣ್ಣು, ಕಿವಿ ಮತ್ತು ಮೂಗಿನಲ್ಲಿ ಹಾಕಬೇಕು. ಹೀಗೆ ಮಾಡಿದರೆ ವಿಷ ಇಳಿದು ರೋಗ ನಿವಾರಣೆಯಾಗುತ್ತದೆ.

80) <u>ವಿಪರೀತ ಹೊಟ್ಟೆ ನೋವಿಗೆ :</u>

ನೆಲ್ಲಿಕಾಯಿಗಳ ಬೀಜಗಳನ್ನು ಹೊರತೆಗೆದು ಕೇವಲ ಮೇಲಿನ ತಿರುಳು ಮತ್ತು ಸಿಪ್ಪೆ ಸಮೇತ ಚೆನ್ನಾಗಿ ಅರೆದು ಗಂಧ ಮಾಡಿ. ಗಂಧವನ್ನು ಕಿಬ್ಬೊಟ್ಟೆ ಮತ್ತು ಹೊಕ್ಕಳ ಸುತ್ತ ದಪ್ಪವಾಗಿ ಹಚ್ಚಿರಿ. ಆ ಮೇಲೆ ಅರ್ಧ ಬಟ್ಟಲು ನೆಲ್ಲಿಕಾಯಿ ರಸಕ್ಕೆ 2 ಚಮಚ ಸಕ್ಕರೆ ಸೇರಿಸಿ ಕುಡಿಯಬೇಕು. ಕಿಬ್ಬೊಟ್ಟೆಗೆ ಲೇಪಿಸಿದ ಗಂಧವನ್ನು 3 ಗಂಟೆ ನಂತರ ಬಿಸಿ ನೀರಿನಲ್ಲಿ ತೊಳೆಯಬೇಕು. ಹೀಗೆ ಮಾಡಿದರೆ ಈ ರೋಗ ನಿವಾರಣೆಯಾಗುತ್ತದೆ.

81) <u>ಕಾಮಾಲೆ ಆದಾಗ :</u>

ಔಡಲ ಎಲೆಯ ರಸಕ್ಕೆ ಆ ರಸದ ಎರಡರಷ್ಟು ಜೇನುತುಪ್ಪ ಬೆರೆಸಿ ದಿನದ ಎರಡು ಹೊತ್ತು ಸೇವಿಸಬೇಕು ಹೀಗೆ ಮಾಡಿದರೆ ಈ ರೋಗ ನಿವಾರಣೆಯಾಗುತ್ತದೆ.

82) <u>ಉಬ್ಬಸಕ್ಕೆ :</u>

ಪ್ರತಿದಿನ ಬೆಳಗ್ಗೆ ಮತ್ತು ಸಾಯಂಕಾಲ 4-4 ಚಮಚ ಕರಿಕೆಯ ರಸವನ್ನು ಸ್ವಲ್ಪ ಸಕ್ಕರೆ ಬೆರೆಸಿ ಒಂದು ಗ್ಲಾಸ್ ಹಾಲಿಗೆ ಹಾಕಿ ಕುಡಿಯಬೇಕು. ಹೀಗೆ ಮಾಡಿದರೆ ಈ ರೋಗ ನಿವಾರಣೆಯಾಗುತ್ತದೆ.

83) <u>ಹಾವು ಕಚ್ಚಿದರೆ :</u>

ಹಸಿ ಗರಿಕೆ ಹುಲ್ಲನ್ನು ಅರೆದು ತೆಗೆದ 10 ಗ್ರಾಂ ರಸವನ್ನು ನೇರವಾಗಿ ಸೇವಿಸಬೇಕು ಹೀಗೆ ಮಾಡಿದರೆ ವಿಷವಿಳಿದು ರೋಗ ಮಾಯವಾಗುತ್ತದೆ.

84) <u>ದಮ್ಮು (ಉಬ್ಬಸ್ಸು) ತೊಂದರೆ ಇದ್ದಾಗ :</u>

ಬಾಳೆ ಹಣ್ಣಿನ ಸಿಪ್ಪೆಯನ್ನು ತೆಗೆದು ಹಣ್ಣಿನಲ್ಲಿರುವ ಒಣಗಿದ ಭಾಗದಲ್ಲಿ ಕೆದರಿ ಟೊಳ್ಳು ಮಾಡಿ, ಅದರೊಳಗೆ ಒಂದು ಚಮಚದಷ್ಟು ಕಲಿಮೆಣಸಸಿನ ಚೂರ್ಣವನ್ನು ತುಂಬಿ ರಾತ್ರಿವಿಡೀ ಹಾಗೆಯೇ ಬಿಡಬೇಕು. ಮುಂಜಾನೆ ಆ ಹಣ್ಣನ್ನು ಕೆಂಡದ ಶಾಖೆಯಲ್ಲಿ ಸುಟ್ಟು, ಅದನ್ನು ಸೇವಿಸಬೇಕು. ಹೀಗೆ ಮಾಡಿದರೆ ಈ ರೋಗ ನಿವಾರಣೆಯಾಗುತ್ತದೆ.

85) **ಬಿಕ್ಕಳಿಕೆ ಆದಾಗ** :

ಲವಂಗನ್ನು ಹಲ್ಲುಗಳಿಂದ ಅಗಿದು ಚಪ್ಪಲಿಸುತ್ತಿದ್ದರೆ ಬಿಕ್ಕಳಿಕೆ ನಿಲ್ಲುವುದು.

86) **ಅರ್ಧ ತಲೆ ನೋವಿಗೆ** :

ಒಣಗಿದ ಎಕ್ಕಿ ಗಿಡದ ಬೇರನ್ನು ಕುಟ್ಟಿ ಪುಡಿ ಮಾಡಿ, ಈ ಪುಡಿಯನ್ನು ಬೆಂಕಿಯ ಕೆಂಡದ ಮೇಲೆ ಉದುಲಿಸಿ ಅಗಲವಾದ ಬಾಯಿ ತೆರೆಯಿರಿ, ಹೊಗೆ ಒಳಗಡೆ ಹೋಗುತ್ತದೆ. ಮೂಗಿನ ಮುಖಾಂತರವೂ ಹೊಗೆ ಸೇವಿಸಿರಿ. ಹೀಗೆ ಮಾಡಿದರೆ ಅರ್ಧ ತಲೆನೋವು ಕಡಿಮೆಯಾಗುತ್ತದೆ.

87)**ಮೂಗಿನಿಂದ ರಕ್ತ ಸುರಿಯತ್ತಿದ್ದರೆ** :

ಉತ್ತರಾಣಿ ಗಿಡದ ಚಿಗುರೆಲೆಗಳನ್ನು ಅರೆದು ಅದರ ರಸವನ್ನು ಮೂಗಿನೊಳಗೆ ಹಿಂಡುವುದರಿಂದ ಮೂಗಿನಿಂದ ರಕ್ತ ಸುರಿಯುವುದನ್ನು ನಿಲ್ಲಿಸಬಹುದು.

88) **ಕಿವಿ ತುಂಬಿ ಸೋರುತ್ತಿದ್ದರೆ** :

ಮುಟ್ಟಿದರೆ ಮುನಿ (ಮುದಡುವ) ಗಿಡದ ಎಲೆ ಮತ್ತು ಬೇರನ್ನು ಸೇರಿಸಿ ನುಣ್ಣಗೆ ಅರೆದು ಹಚ್ಚುವುದರಿಂದ ಕೀವ ತುಂಬಿ ಸೋರುತ್ತಿರುವುದನ್ನು ಕಡಿಮೆಯಾಗುತ್ತದೆ.

89) **ರಕ್ತ ಭೇದಿ ಆದಾಗ** :

ಚೆನ್ನಾಗಿ ಬಲಿತ ಬಿಲ್ವ ಪತ್ರಿ ಕಾಯಿಗಳನ್ನು ಒಡೆದು ಒಳಗಿನ ತಿರುಳನ್ನು ಬೇರ್ಪಡಿಸಿ ಒಂದು ಮುಚ್ಚಿದ ಗಡಿಗೆಯಲ್ಲಿ ಹಾಕಿ ಇಡಬೇಕು. ತಿರುಳಿನಷ್ಟೆ ಪ್ರಮಾಣದ ಸಕ್ಕರೆಯನ್ನು ಹಾಕಿ ಕಟ್ಟಿಗೆಯ ಸೌಟಿನಿಂದ ಚೆನ್ನಾಗಿ ಮಿಶ್ರಣ ಮಾಡಿ ಗಡಿಗೆ ಬಾಯಿ ಮುಚ್ಚಿ ಎರಡು ದಿವಸ ಬಿಡಬೇಕು. ಆ ನಂತರ ಪ್ರತಿದಿನ ಒಂದು ಚಹ ಚಮಚದಷ್ಟು

ತಿರುಳನ್ನು ತಿಂದು, ಮೇಲೆ ಸಕ್ಕರೆ ಬೆರೆಸಿದ ಒಂದು ಲೋಟ ಆಕಳ ಹಾಲು ಕುಡಿಯಬೇಕು. ಈ ಚಿಕಿತ್ಸೆಯಿಂದ ರಕ್ತ ಭೇದಿ, ಬಾವು, ಮುಂತಾದ ಸಾಮಾನ್ಯ ತೊಂದರೆಗಳು ವಾಸಿಯಾಗುವವು.

೯೦) <u>ಚರ್ಮ ವ್ಯಾಧಿ ಇದ್ದಾಗ :</u>

ಆಲೂಗಡ್ಡೆಯನ್ನು ನಿಂಬೆ ರಸದಲ್ಲಿ ನುಣ್ಣಗೆ ಅರೆದು, ವ್ಯಾಧಿಗ್ರಸ್ಥ ಚರ್ಮದ ಮೇಲೆ ಲೇಪಿಸಿ ಕಟ್ಟಬೇಕು. ಹೀಗೆ ಮಾಡಿದರೆ ಈ ರೋಗ ನಿವಾರಣೆಯಾಗುತ್ತದೆ.

೯೧) <u>ಹೊಟ್ಟೆ ಉಬ್ಬರ ಮತ್ತು ಅಜೀರ್ಣವಾಗುತ್ತಿದ್ದರೆ :</u>

ಬೆಳ್ಳಾಗಡ್ಡಿಯನ್ನು ಬೆಂಕಿಯಲ್ಲಿ ಹಾಕಿ ಸುಟ್ಟು ತಿನ್ನಬೇಕು. ಹೀಗೆ ಮಾಡಿದರೆ ಈ ರೋಗ ನಿವಾರಣೆಯಾಗುತ್ತದೆ.

೯೨) <u>ವಸಡಿನಿಂದ ರಸ್ತ ಸ್ರಾವಕ್ಕೆ :</u>

ಅಡುಗೆ ಉಪ್ಪು ಮತ್ತು ತಿನ್ನುವ ಸೋಡವನ್ನು ಸಮ ಪ್ರಮಾಣದಲ್ಲಿ ಮಿಶ್ರಣ ಮಾಡಿ ನಿಂಬೆರಸದಲ್ಲಿ ಕಲಸಿ ವಸಡಿಗೆ ತಿಕ್ಕುವುದರಿಂದ ವಸಡಿನಿಂದಾಗುವ ರಸ್ತ ಸ್ರಾವ ಕಡಿಮೆಯಾಗುತ್ತದೆ.

೯೩) <u>ಬಾಯಿ ದುರ್ಗಂಧ ವಾದಾಗ :</u>

ಶ್ರೀಗಂಧ ಕಟ್ಟಿಗೆ (ಕೊರಡು) ಯಿಂದ ಗಂಧವನ್ನು ತೆಗೆದು ಬಿಸಿ ನೀರಿನಲ್ಲಿ ಕಲಸಿ, ಅದಕ್ಕೆ ನಿಂಬೆ ಹಣ್ಣಿನ ರಸವನ್ನು ಸೇರಿಸಿ ಬಾಯಿ ಮುಕ್ಕಳಿಸುವುದರಿಂದ ಬಾಯಿ ದುರ್ಗಂಧ ದೂರವಾಗಿ ವಸಡು ಕೂಡ ಗಟ್ಟಿಯಾಗುತ್ತದೆ.

೯೪) <u>ಮೈಗೆ ತಿಂಡಿಯಿಕ್ಕಿದಾಗ :</u>

ನಿಂಬೆ ಎಲೆ, ನೇರಳೆ ಎಲೆ, ಬೇವಿನ ಎಣ್ಣೆ, ಮಾವಿನ ಚಿಗುರು, ಎಕ್ಕೆದ ಎಲೆ, ತುಳಸಿ ಎಲೆ, ಬಿಲ್ವ ಪತ್ರಿ, ಇವುಗಳನ್ನು ಸ್ವಲ್ಪ ನೀರಿನಲ್ಲಿ ಚೆನ್ನಾಗಿ ಬೇಯಿಸಿ, ನಂತರ ಕಾಯಿಸಿದ ನೀರಿನಲ್ಲಿ ಹಾಕಿ ಸ್ನಾನ ಮಾಡಬೇಕು. ನಂತರ ಮೈ ಒರೆಸಿಕೊಂಡು ಶುಭ್ರವಾದ ಬಟ್ಟೆ ಧರಿಸಿದರೆ ಮೈ ತಿಂಡಿ ನಿವಾರಣೆಯಾಗುತ್ತದೆ.

೯೫) <u>ಲೈಂಗಿಕ ಸಾಮರ್ಥ್ಯ ಅಧಿಕ :</u>

ಬಿಳಿ ಉಳ್ಳಾಗಡ್ಡಿ ರಸ ಒಂದು ಚಮಚ ಆಕಳ ತುಪ್ಪದಲ್ಲಿ ಕೋಳಿ ಮೊಟ್ಟೆಯೊಂದಿಗೆ ಪ್ರತಿದಿನ ಬೆಳಿಗ್ಗೆ ಸೇವಿಸಿದರೆ ಲೈಂಗಿಕ ಸಾಮರ್ಥ್ಯ ಅಧಿಕವಾಗುತ್ತದೆ.

96) **ಉಬ್ಬಸು ಬರುತ್ತಿದ್ದರೆ :**

- ಹಾಲಿನಲ್ಲಿ ಬೆಳ್ಳಗಡ್ಡಿ ಕುದಿಸಿ ನಂತರ ದಿನಾಲೂ ಆ ಎಸಳುಗಳನ್ನು ಸೇವಿಸುವುದರಿಂದ ಉಬ್ಬಸು ರೋಗ ನಿವಾರಣೆಯಾಗುತ್ತದೆ.
- ನೆಲ್ಲಿಕಾಯಿಯನ್ನು ನಿತ್ಯವೂ ಬಳಸುವುದರಿಂದ ಉಬ್ಬಸು ರೋಗ ಕಡಿಮೆಯಾಗುತ್ತದೆ.

97) **ಒಣ ಕೆಮ್ಮಿಗೆ :**

ಒಳ್ಳೆಯ ಅರಿಶಿಣ ಕೊಂಬುಗಳನ್ನು ಆರಿಸಿ, ತುಂಡು ಮಾಡಿ, ಹದವಾಗಿ ಹುರಿದು, ನುಣ್ಣಗೆ ಪುಡಿ ಮಾಡಿ ಒಂದು ಚಮಚದಷ್ಟು, ಚೂರ್ಣವನ್ನು ಬಾಯಿಗೆ ಹಾಕಿಕೊಂಡು ಚಪ್ಪರಿಸಬೇಕು, ದಿನಕ್ಕೆ ಎರಡುಸಲದಂತೆ 3-4 ದಿನಗಳ ಕಾಲ ಹೀಗೆ ಮಾಡಿದರೆ ಕೆಮ್ಮು ನಿವಾರಣೆಯಾಗುತ್ತದೆ.

98) **ಊಟ ಅಜೀರ್ಣವಾಗುತ್ತಿದ್ದರೆ :**

ಹುರಿದ ಕೊತ್ತಂಬರಿ ಬೀಜದ ಕಷಾಯವನ್ನು ಹಾಲು ಮತ್ತು ಸಕ್ಕರೆಯೊಂದಿಗೆ ಸೇವಿಸುತ್ತಿದ್ದರೆ ಅಜೀರ್ಣ ನಿವಾರಣೆಯಾಗುವುದು ಮತ್ತು ಜೀರ್ಣ ಶಕ್ತಿ ಹೆಚ್ಚುವುದು.

99) **ಕಿವಿ ಒಳಗಡೆ ಹುಣ್ಣಾದರೆ :**

ತುಳಸಿ ರಸವನ್ನು ಹನಿ ಹನಿಯಾಗಿ ಕಿವಿಗೆ ಹಿಂಡಿದರೆ, ಒಂದೆರಡು ದಿನಗಳ ಉಪಚಾರದ ನಂತರ ಗುಣ ಕಂಡುಬರುವುದು.

100) **ಕೆಮ್ಮು ಸಹಿತ ಜ್ವರ ನಿವಾರಣೆಗೆ :**

ಕರಿ ಮೆಣಸಿನ ಚೂರ್ಣವನ್ನು ತುಳಸಿ ರಸದಲ್ಲಿ ಕಲಸಿ ಸೇವಿಸುವುದರಿಂದ ಕೆಮ್ಮು ಸಹಿತವಾದ ಜ್ವರ ನಿವಾರಣೆಯಾಗುತ್ತದೆ.

101) **ಪ್ರಜ್ಞೆ ತಪ್ಪಿದ್ದಾಗ :**

ಸ್ವಲ್ಪ ಮೆಣಸು ಕುಟ್ಟಿ ಆ ಪುಡಿಯಲ್ಲಿ ರೋಗಿಯ ಮೂಗಿಗೆ ಏರಿಸಿದಲ್ಲಿ ಬಹುಬೇಗ ಪ್ರಜ್ಞೆ ಬರುತ್ತದೆ.

102) <u>ದೀರ್ಘಕಾಲ ನೆಗಡಿ ಇದ್ದಾಗ :</u>

- ಮೆಣಸನ್ನು ಕುಟ್ಟಿ ಪುಡಿಮಾಡಿ ಆ ಪುಡಿ ಬೆಲ್ಲದೊಂದಿಗೆ ಸೇವಿಸುವುದರಿಂದ ದೀಘಕಾಲದ ನೆಗಡಿ ಗುಣಮುಖವಾಗುತ್ತದೆ.
- ಒಂದು ಬಟ್ಟಲು ಕುದಿಯುವ ನೀರಿಗೆ ಒಂದು ನಿಂಬೆಹಣ್ಣಿನ ರಸ ಹಿಂಡಿ, ರುಚಿಗೆ ತಕ್ಕಷ್ಟು ಸಕ್ಕರೆ ಬೆರೆಸಿ ಪಾಲಕವನ್ನು ರಾತ್ರಿ ಮಲಗುವುದಕ್ಕಿಂತ ಮುಂಚೆ ಸೇವಿಸಿದರೆ ನೆಗಡಿ ಗುಣಮುಖವಾಗುತ್ತದೆ.

48) **ವಕ್ತಾರರು** : **ಆನಂದರಡ್ಡಿ ತಂದೆ ಪಂಚಾರಡ್ಡಿ**

ವಯಸ್ಸು : ೩೫ ವರ್ಷ

ಊರು : ಮಂಗಲಗಿ

ತಾಲೂಕಾ : ಹುಮನಾಬಾದ, ಜಿಲ್ಲೆ ಬೀದರ.

1) <u>ಬಿಳಿ ಸೆರಗು :</u>

- ಕೆಂಪು ತಾಳೇಸರದ ಕೊನೆಯಲ್ಲಿರುವ ಮುಳ್ಳು ತೆಗೆದು 7 ದಿವಸ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಅದರ ತಿರುಳು (ಗಾಬಿ) ತಿಂದರೆ ಬಿಳಿ ಸೆರಗು ನಿಲ್ಲುತ್ತದೆ.
- ಬಿಳಿದಾಸಿವಾಳ ಹೂ 15, ಸ್ವಲ್ಪ ಕಹಿ ಜೀರಿಗೆ ಬೆರೆಸಿ ಮತ್ತು ಅದಕ್ಕೆ ತಕ್ಕಂತೆ ಖಡಿಸಕ್ಕರೆ ಇವೆಲ್ಲವನ್ನು ಮಿಶ್ರಣ ಮಾಡಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ 15 ದಿವಸ ತಿಂದರೆ ಬೆಳಿ ತೆರಗು ತಡೆಯಬಹುದು.
- ಗಜ್ಜುಗದ ಗಿಡದ ತಪ್ಪಲನ್ನು ಕುಟ್ಟಿ ಒಂದು ಗ್ಲಾಸ ರಸ ತೆಗೆದು ಅದರಲ್ಲಿ ಕಹಿ ಜೀರಿಗೆ ಮತ್ತು ಖಡಿ ಸಕ್ಕರೆ (ಕಲ್ಲು ಸಕ್ಕರೆ) ಅರ್ಧ ಚಮಚ ಹಾಕಿ ಕಲಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಮೂರು ದಿನ ಕುಡಿಯಬೇಕು. ಇದರಿಂದ ಬಿಳಿಸೆರಗು ನಿಂತು ಹೋಗುತ್ತದೆ.

  ಸೂಚನೆ : ಮದ್ಯಾಹ್ನದ ವರೆಗೆ ಊಟ ಮಾಡಬಾರದು.

2) **ಕೆಂಪು ಮತ್ತು ಬಿಳಿ ಸೆರಗು** :

- ಔಟಿನಕಾಯಿ ಅಥವಾ ಬಿಲ್ವ ಪತ್ರಿಗಿಡದ ಕಾಯಿ ಒಡೆದು ತಿರುಳನ್ನು (ಗಾಬಿಯನ್ನು) ತೆಗೆದು 30 ದಿನ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ತಿಂದರೆ ಕೆಂಪು ಮತ್ತು ಬಿಳಿ ಸೆರಗು ನಿಲ್ಲುತ್ತದೆ.
- ಔಟಿನ ಕಾಯಿಯನ್ನು ಒಡೆದು ತಿರುಳು ಒಣಗಿಸಿ ಒಂದು ಗ್ಲಾಸ ಕಷಾಯಮಾಡಿ ನಂತರ ಸ್ವಲ್ಪ ಖಡಿ ಸಕ್ಕರೆ ಹಾಕಿ ಮಿಶ್ರಣ ಮಾಡಿ, ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಕುಡಿಯಬೇಕು. ಹೀಗೆ 15 ದಿವಸ ಕುಡಿದರೆ ಕೆಂಪು ಸೆರಗು ಮತ್ತು ಬಿಳಿ ಸೆರಗು ಮಾಯವಾಗುತ್ತದೆ.

  ಪಥ್ಯ : ಉಳ್ಳಾಗಡ್ಡಿ, ರತ್ನಲ, ಕುಟ್ಟಿನ ಗೋಧಿ-ಜವಿ ಹುಗ್ಗಿ, ಆಲುಗಡ್ಡೆ, ಕಡಲೆಬೇಳೆ ತಿನ್ನಬಾರದು.

  ಸೂಚನೆ : ಬಿಳಿ ಜೋಳದ ರೊಟ್ಟಿ ಮತ್ತು ತೊಗರಿ ಬೇಳೆ ಊಟ ಮಾಡಬೇಕು.

3) **ಅಜೀರ್ಣತೆ** :

- ಬಬಲೆ ಗಿಡದ ತಪ್ಪಲನ್ನು ಕುಟ್ಟಿ ದಿನಕ್ಕೆ ಎರಡು ಗುಳಿಗೆಯಂತೆ 8 ದಿವಸ ತಿನ್ನಬೇಕು. ನಂತರ ಬೆಳ್ಳಾಗಡ್ಡಿ ಎಸಳು ಹಾಕಿದ ಜೋಳದ ಗಂಜಿ ಕುಡಿಯಬೇಕು. ಇದರಿಂದ ಅಜೀರ್ಣತೆ ತಪ್ಪುತ್ತದೆ.

  ಸೂಚನೆ : ಜೋಳದ ರೊಟ್ಟಿ, ಗಂಜಿ, ಸಪ್ಪನ ಬೇಳೆ, ಮಜ್ಜಿಗೆ ಸೇವಿಸಬೇಕು.

- ಪಡಪತ್ರಿ ಎಲೆಯನ್ನು ಕುಟ್ಟಿ ಕಡ್ಲಿ ದಾಣಿಯಷ್ಟು ಗುಳಿಗೆ ಮಾಡಿ ದಿನಕ್ಕೆ ಒಂದು ಗುಳಿಗೆಯಂತೆ 15 ದಿವಸ ಸೇವಿಸಿದರೆ ಅಜೀರ್ಣತೆ ನಿವಾರಣೆಯಾಗುತ್ತದೆ.

- ಎರಡು ಚಮಚ ಜೇನು ತುಪ್ಪ ತೆಗೆದುಕೊಂಡು ಅದರಲ್ಲಿ ಅಲ್ಲಾ ಹಾಕಿ, ಎಂಟು ದಿವಸ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಸೇವಿಸಿದರೆ ಜೀರ್ಣ ಶಕ್ತಿ ಹೆಚ್ಚಾಗುತ್ತದೆ.
- ಶಂಖಭಸ್ಮ 50 ಗ್ರಾಂನಷ್ಟರಲ್ಲಿ ನಿಂಬೆರಸ ಸೇರಿಸಿ 15 ದಿವಸ ಸೇವಿಸಿದರೆ ಅಜೀರ್ಣತೆ ನಿವಾರಣೆಯಾಗುತ್ತದೆ.
- ಒಂದು ಗ್ಲಾಸ್ ನೀರಿನಲ್ಲಿ ನಿಂಬೆರಸ ಮತ್ತು ತಿನ್ನುವ ಸೋಡಾ ಹಾಕಿ ಕಲಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ 5 ದಿವಸ ಕುಡಿದರೆ ಅಜೀರ್ಣತೆ ಕಡಿಮೆಯಾಗುತ್ತದೆ.

4) <u>**ಹಾವು ಕಡಿದು ವಿಷ ಹೆಚ್ಚಾಗಿ ಪ್ರಜ್ಞೆ ತಪ್ಪಿದಾಗ** :</u>

- ಬುರಗ್ಯಾನ (ಲೀಟಾ) ಕಾಯಿ ಚೆನ್ನಾಗಿ ಕುಟ್ಟಿ ಪುಡಿಮಾಡಿ, ನೀರು ತುಂಬಿದ ಸೀಸೆಯಲ್ಲಿ ಹಾಕಿ ಚೆನ್ನಾಗಿ ಅಲುಗಾಡಿಸಿ ನೊರೆ ಬಂದ ತಕ್ಷಣ ಕುಡಿಸಬೇಕು. ನಂತರ ವಾಂತಿಯಾಗುತ್ತದೆ. ಇದೆ ರೀತಿ 3-4 ಸಲ ಮಾಡಿದರೆ ಸಂಪೂರ್ಣ ವಿಷ ಹೊರಗೆ ಬಂದು ವ್ಯಕ್ತಿ ಗುಣಮುಖನಾಗುತ್ತಾನೆ.
- ನುಗ್ಗೆ ಗಿಡದ ಎಲೆಗಳನ್ನು ಕುಟ್ಟಿ ಬಿಲ್ಲೆಯನ್ನು ಮಾಡಿ ತಲೆಯ ಮೇಲೆ ಇಟ್ಟು ನಂತರ ಇದರ ಮೇಲೆ ಕಾವು ಮಾಡಿದ ಸೇರನು (ಅಳೆಯುವ ಸಾಧನ) ಬಿಲ್ಲೆಯ ಮೇಲೆ ಇಡಬೇಕು ತಕ್ಷಣವೇ ಪ್ರಜ್ಞೆ ಬರುತ್ತದೆ.
- ಬಿಳಿ ಎಕ್ಕಿ ಗಿಡದ ಹಾಲನ್ನು ಒಂದು ಶೀಸೆಯಲ್ಲಿ (ಬಾಟಲಿಯಲ್ಲಿ) ತುಂಬಿ ನಂತರ 2 ಕಾಳು ಅಕ್ಕಿಯನ್ನು ಹಾಕಿ ಭದ್ರವಾಗಿ ಮುಚ್ಚಿಡಬೇಕು. ನಂತರ ಒಂದು ಸಣ್ಣ ಕುಳ್ಳು (ಆಕಳ ಅಥವಾ ಎಮ್ಮೆಯ ಮಲವನ್ನು ಒಣಗಿಸಿ ಸಾಧನ) ಬೆಂಕಿಯಲ್ಲಿ ಹಾಕಿ ಬೂದಿಯನ್ನು ತಯಾರಿಸಿ. ಚೆನ್ನಾಗಿ ಒಣಗಿಸಿದ ನಂತರ ಜರಡಿ ಹಿಡಿದು. ಈ ಬೂದಿಯನ್ನು ರೋಗಿಯ ಮೂಗಿಗೆ ಹಾಕಿ ಕೊಳವೆಯಿಂದ ಊದಬೇಕು. ಬೂದಿ ಒಳಗೆ ಹೋದ ತಕ್ಷಣ ಸೀನು ಬರುತ್ತದೆ. ನಂತರ ಒಂದು ಗ್ಲಾಸ್ ನೀರಿನಲ್ಲಿ ಒಂದು ಚಮಚ ಬೂದಿ ಹಾಕಿ ಕಲಸಿ ಕುಡಿಸಬೇಕು ಆಗ ಸಂಪೂರ್ಣ ಪ್ರಜ್ಞೆ ಬರುತ್ತದೆ.
- ತನ್ನದೆ ಅಥವಾ ಇನ್ನೊಬ್ಬರ ಒಂದು ಗ್ಲಾಸ ಮೂತ್ರ ಕುಡಿಸಬೇಕು. ಇದರಿಂದ ವಾಂತಿಯಾಗಿ ವಿಷ ಹೊರಗೆ ಬರುತ್ತದೆ.

5) <u>**ಚೇಳು ಕಡಿದಾಗ** :</u>

- ಹಲ್ಲಿಯನ್ನು ಹೊಡೆದು ಒಳ್ಳೆಣ್ಣೆಯಲ್ಲಿ ಹಾಕಿ ಇಡಬೇಕು. ಚೇಳು ಕಡಿದ ಜಾಗಕ್ಕೆ ಈ ಎಣ್ಣೆಯನ್ನು ಕಡ್ಡಿಯಿಂದ ಹಚ್ಚಬೇಕು. ಇದರಿಂದ ವಿಷ ಇಳಿದು ಉರಿ ಕಡಿಮೆಯಾಗುತ್ತದೆ.

– ಹುಣಸೆ ಹಣ್ಣಿನ ಬೀಜವನ್ನು ಸೋಸಿ ಚೇಳು ಕಡಿದ ಜಾಗಕ್ಕೆ ಅಚಿಟಿಸಬೇಕು. ಇದರಿಂದ ವಿಷ ಇಳಿದು ಉರಿ ಕಡಿಮೆಯಾಗುತ್ತದೆ.

6) <u>ಸೆಕೆಯಿಂದ ಮೂತ್ರ ಉರಿಯುತ್ತಿದ್ದರೆ :</u>

– ಒಂದು ಗ್ಲಾಸ್ ನೀರಿನಲ್ಲಿ ಬೆಲ್ಲವನ್ನು ಕಲಸಿ ಕುಡಿಯಬೇಕು. ಇದರಿಂದ ಮೂತ್ರ ಬರುವಾಗ ಉರಿಯುವುದನ್ನು ಕಡಿಮೆಯಾಗುತ್ತದೆ.

– ಹೊಕ್ಕಳ ಮೇಲೆ ತಣ್ಣಗೆ ಇರುವ ತಂಬಿಗೆಯನ್ನು ಇಡಬೇಕು ಮತ್ತು ಹಸಿ ಮಾಡಿದ ಬಟ್ಟೆ ಮೊಣಕಾಲು ತಲೆ ಮೇಲೆ ಅಂಗಾಲಿನಲ್ಲಿ ಇಟ್ಟರೆ ಉರಿ ಮೂತ್ರ ಕಡಿಮೆಯಾಗುತ್ತದೆ.

7) <u>ಮೂತ್ರನಾಳ ತೊಂದರೆ ಇದ್ದಾಗ :</u>

– ಪಚಕರ್ಪೂರನ್ನು ಹಲ್ಲಿಗೆ ಹತ್ತದ ಹಾಗೆ ನಾಲಿಗೆ ಮೇಲೆ ಇಟ್ಟು ನೀರು ಕುಡಿಯಬೇಕು. ಹೀಗೆ 7 ದಿವಸ ಮಾಡಿದರೆ ಮೂತ್ರನಾಳದಲ್ಲಿ ಯಾವುದೇ ರೋಗವಿದ್ದರೂ ಕಡಿಮೆಯಾಗುತ್ತದೆ. ಒಂದು ವೇಳೆ ಕಡಿಮೆಯಾಗದಿದ್ದಲ್ಲಿ ಪುನ: ಅದನ್ನೇ ಮುಂದುವರಿಸಿದರೆ ರೋಗ ನಿವಾರಣೆಯಾಗುತ್ತದೆ.

– ಔಟಿನಕಾಯಿ ಗಿಡದ ಎಲೆಗಳನ್ನು ತೆಗೆದುಕೊಂಡು ಖಡ ಸಕ್ಕರೆ, ಕಹಿ ಜೀರಿಗೆ ಹಾಕಿ ಚೆನ್ನಾಗಿ ಕುಟ್ಟಿ ಕಡ್ಲಿ ದಾಣಿಯಷ್ಟು ಗುಳಿಗೆ ತಯಾರಿಸಿ ದಿನಕ್ಕೆ ಮೂರು ಸಾರಿ ಒಂದೊಂದು ತಿನ್ನಬೇಕು. ಇದರಿಂದ ಮೂತ್ರ ನಾಳದ ತೊಂದರೆ ಕ್ರಮೇಣ ಕಡಿಮೆಯಾಗುತ್ತದೆ.

– ಸಿಂದೆನೀರಾ ದಿನಕ್ಕೆ ಒಂದು ಗ್ಲಾಸನಂತೆ 15-30 ದಿವಸ ಕುಡಿದರೆ ಮೂತ್ರನಾಳದ ತೊಂದರೆ ನಿವಾರಣೆಯಾಗುತ್ತದೆ.

ಸೂಚನೆ : ಬಿಳಿ ಜೋಳದ ರೊಟ್ಟಿ, ಸಪ್ಪನ ಬೇಳೆ ಮತ್ತು ಹಾಲು ಸೇವಿಸಬೇಕು.

8) <u>ಚೆಂಡೋಲಿ ಕಡಿದಾಗ :</u>

ಬಿಳಿ ಏಕ್ಕಿ ಗಿಡದ ಮೊಗ್ಗುಗಳು ಕೈಯಲ್ಲಿ ಒರೆಸಿ ಸೇಂಗಾ ಬೀಜದಷ್ಟು ಗುಳಿಗೆಯನ್ನು ಮಾಡಿ ತಿಂದ ನಂತರ ನೀರು ಕುಡಿಯಬೇಕು. ಹೀಗೆ ಏಳು ದಿವಸ ತಿಂದರೆ ಅಪಾಯ ತಪ್ಪುತ್ತದೆ.

9) <u>ಚೆನ್ನಾಗಿರುವ ನಾಯಿ ಕಚ್ಚಿದಾಗ :</u>

ಬಬಲೆ ಗಿಡದ ಎಲೆಗಳನ್ನು ಚೆನ್ನಾಗಿ ಕುಟ್ಟಿ ಗುಳಿಗೆಯನ್ನು ತಯಾರಿಸಿ, ಒಂದು ವೀಳ್ಯೆದೆಲೆ ಕಾಚು ಬೆರೆಸಿ, ಒಂದು ಗುಳಿಗೆ ಮತ್ತು ಪಚ್ಚ ಕರ್ಪೂರ ಬಿಲ್ಲೆ ಹಾಕಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ತಿನ್ನುತ್ತಾ ರಸ ನುಂಗಬೇಕು. ಹೀಗೆ 3 ರಿಂದ 7 ದಿವಸದವರೆಗೆ ಮಾಡಿದರೆ ವಿಷ ಇಳಿಯುತ್ತದೆ.

ಊಟ : ಸಪ್ಪನ ಬೇಳೆ ಮತ್ತು ರೊಟ್ಟಿ ತಿನ್ನಬೇಕು.

10) <u>ಹುಚ್ಚು ನಾಯಿ ಕಡಿದಾಗ :</u>

ಹುಚ್ಚ ಬಬಲೆ ಗಿಡದ ಎಲೆಗಳನ್ನು ತಂದು ಚೆನ್ನಾಗಿ ಕುಟ್ಟಿ ಗುಳಿಗೆಯನ್ನು ತಯಾರಿಸಿ. ನಂತರ ಒಂದು ವೀಳ್ಯೆದೆಲೆಗೆ ಕಾಚು ಬೆರೆಸಿ ಒಂದು ಗುಳಿಗೆ ಮತ್ತು ಪಚ ಕರ್ಪೂರದ ಬಿಲ್ಲೆಯನ್ನು ಇಟ್ಟು ಮೆಲೆಯುತ್ತ ರಸ ನುಂಗಬೇಕು. ಹೀಗೆ 7 ದಿವಸ ತಿಂದರೆ ವಿಷ ಇಳಿದು ನಂಜು ಮಾಯವಾಗುತ್ತದೆ.

ಸೂಚನೆ : ಏಳು ದಿವಸ ಸಪ್ಪನ ಬೇಳೆ ರೊಟ್ಟಿ ಊಟ ಮಾಡಬೇಕು.

ಪಥ್ಯ : ಕಡ್ಲಿ, ಇತ್ಯಾದಿ ಕಿವಿ ತುಂಬುವ ಪದಾರ್ಥ ತಿನ್ನಬಾರದು. ಆರು ತಿಂಗಳು ಸ್ತ್ರೀ - ಪುರುಷರು ಸಂಪರ್ಕ ಹೊಂದಬಾರದು.

11) <u>ಪುರುಷತ್ವ ವಿಲ್ಲದಿದ್ದಾಗ :</u>

ಬಿಲ್ವ ಪತ್ರಿ ಗಿಡದ ಬೇರನ್ನು ಸ್ವಚ್ಛವಾದ ಸ್ಥಳದಲ್ಲಿ ಇಟ್ಟು. ನಂತರ ನೀರಿನ ಸಹಾಯದಿಂದ 4 ಚಮಚ ಗಂಧ ತೆಗೆದು ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ ನೆಕ್ಕಬೇಕು. ನಂತರ 50 ಗ್ರಾಂ ಕಡಲೆ ಉಸುಳಿ ತಿನ್ನಬೇಕು. ತಕ್ಷಣವೇ ಒಂದು ಗ್ಲಾಸ ಆಕಳ ಹಾಲು ಕುಡಿಯಬೇಕು. ನಂತರ 12 ಗಂಟೆ ಊಟ ಮಾಡಬಾರದು ಹೀಗೆ 21 ದಿವಸ ಮಾಡಿದರೆ ಸಂಪೂರ್ಣ ಪುರುಷತ್ವ ಬರುತ್ತದೆ.

ಪಥ್ಯ : ಆಲುಗಡ್ಡೆ, ಉಳ್ಳಾಗಡ್ಡಿ ತಿನ್ನಬಾರದು. 21 ದಿವಸ ಸ್ತ್ರೀ ಪುರುಷರು ಸಂಪರ್ಕ ಮಾಡಬಾರದು.

12) <u>ಕನಸಿನಲ್ಲಿ ವೀರ್ಯ ಹೋಗುತ್ತಿದ್ದರೆ :</u>

- ಒಟ್ಒಟೇನ್ ಬೇರನ್ನು ಕುಟ್ಟಿ ಮಜ್ಜಿಗೆಯಲ್ಲಿ ಹಾಕಿ ಕುಡಿಯಬೇಕು ಹೀಗೆ 21 ದಿವಸ ಕುಡಿದರೆ ಕನಸಿನಲ್ಲಿ ವೀರ್ಯ ಹೋಗುವುದನ್ನು ನಿಲ್ಲುತ್ತದೆ ಮತ್ತು ವೀರ್ಯ ಗಟ್ಟಿಯಾಗುತ್ತದೆ.
- ದಾಸಿವಾಳದ ಹೂ ಮತ್ತು ಖಡಸಕ್ಕರೆ 21 ದಿವಸ ತಿಂದರೆ ಕನಸಿನಲ್ಲಿ ವೀರ್ಯ ಹೋಗುವುದು ನಿಲ್ಲುತ್ತದೆ.

– ಬಿಲ್ವ ಪತ್ರಿಯನ್ನು ಕುಟ್ಟಿ ಒಂದು ಸಣ್ಣ ಗ್ಲಾಸ್ ರಸ ತೆಗೆದು ಮುಂಜಾನೆ ಖಾಲಿ ಹೊಟ್ಟೆಯಲ್ಲಿ 7 ದಿವಸ ಕುಡಿದರೆ ವೀರ್ಯ ಗಟ್ಟಿಯಾಗಿ ತಡೆಗಟ್ಟುತ್ತದೆ.

13) **ಕಿವಿ ಸೋರುವಾಗ** :

– ಬಿಳಿ ಎಕ್ಕಿಯ 10 ಎಲೆಗಳು, ಕರಿ ತುಳಸಿ ಮತ್ತು ಕಾಮಕಸ್ತೂರಿಯ 15 ಎಲೆಗಳು ಕಲಸಿ ಚೆನ್ನಾಗಿ ಕುಟ್ಟಿ ರಸ ತೆಗೆಯಬೇಕು. ನಂತರ ಒಂದು ಸ್ವಚ್ಛವಾದ ಶೀಸೆಯಲ್ಲಿ ಹಾಕಿ ಮುಚ್ಚಿಡಬೇಕು. ನೀರು ಬಿಸಿ ಮಾಡಿ ಅಡುಗೆ ಉಪ್ಪು ಕಲಸಿ, ಸ್ವಚ್ಛವಾಗಿ ಕಿವಿ ತೊಳೆದು ನಂತರ ದಿನಕ್ಕೆ 3 ಸಲದಂತೆ 3 ಹನಿ ರಸ ಕಿವಿಯಲ್ಲಿ ಹಾಕಿ ಹತ್ತಿಯಿಂದ ಮುಚ್ಚಬೇಕು. ಇದರಿಂದ ಕಿವಿ ಸೋರುವುದು ನಿಲ್ಲುತ್ತದೆ.

ಪಥ್ಯ : ಆಲುಗಡ್ಡೆ, ಘುಂಡಿಪಲ್ಯ್ಯಾ, ಕುಟ್ಟಿನ ಗೋಧಿ ಹುಗ್ಗಿ, ರತ್ನಾಲು ತಿನ್ನಬಾರದು.

ಸೂಚನೆ : ಬಿಳಿ ಜೋಳದ ರೊಟ್ಟಿ ಮತ್ತು ಸಪ್ಪನ ಬೇಳೆ 15 ದಿವಸ ಊಟ ಮಾಡಬೇಕು.

– ನಾಯಿನಾಲಿಗೆ ಹುಳವನ್ನು ತಂದು ಎಳ್ಳೆಣ್ಣೆಯಲ್ಲಿ ಕರಿದು. ಎಣ್ಣೆಯನ್ನು ಸೋಸಿ ಸ್ವಚ್ಛವಾದ ಶೀಸೆಯಲ್ಲಿ ತುಂಬಿಟ್ಟುಕೊಳ್ಳಬೇಕು. ನಂತರ ಕಿವಿ ತೊಳೆದು ಎಣ್ಣೆಯನ್ನು ಹಾಕಿದರೆ ಕಿವಿ ಸೋರುವುದು ನಿಂತು ರೋಗ ನಿವಾರಣೆಯಾಗುತ್ತದೆ.

– ಪಚ್ಚ ಕರ್ಪೂರವನ್ನು ಕೊಬ್ಬರಿ ಎಣ್ಣೆಯಲ್ಲಿ ಹಾಕಿ ಚೆನ್ನಾಗಿ ಕಲೆಸಿ, ಸ್ವಚ್ಛವಾಗಿ ಕಿವಿ ತೊಳೆದು ದಿನಕ್ಕೆ ಮೂರು ಸಲದಂತೆ ಮೂರು ಹನಿ ಎಣ್ಣೆ ಹಾಕಿದರೆ ಕಿವಿ ಸೋರುವುದು ಕಡಿಮೆಯಾಗುತ್ತದೆ.

– ಗಾಂಜಾಗಿಡದ ಎಲೆಗಳನ್ನು ತಂದು ಚೆನ್ನಾಗಿ ಕುಟ್ಟಿ ರಸತೆಗೆದು, ಕಿವಿಯಲ್ಲಿ ಹಾಕಿದರೆ ಕಿವಿ ಸೋರುವುದು ನಿಲ್ಲುತ್ತದೆ.

– ಅಡುಗೆ ಸೋಡಾದಲ್ಲಿ ನಿಂಬೆ ರಸವನ್ನ ಕಲೆಸಿ ಕಿವಿಗೆ ಹಾಕುವುದರಿಂದ ರೋಗ ನಿವಾರಣೆಯಾಗುತ್ತದೆ.

14) **ಕಣ್ಣಿಗೆ ಪೊರೆ ಬಂದಾಗ** :

– ಜೇನು ತುಪ್ಪ ಕ್ರಮೇಣ ಕಣ್ಣಿನಲ್ಲಿ ದಿನಕ್ಕೆ ಎರಡು ಸಲದಂತೆ 30 ದಿವಸ ಹಾಕಿದರೆ ಕಣ್ಣಿನ ಪೊರೆ ಒಡೆದು ಕಣ್ಣು ಚೆನ್ನಾಗಿ ಕಾಣುತ್ತವೆ.

– ಹಳೆಯ ತುಪ್ಪವನ್ನು ಕಣ್ಣಿಗೆ ಹಾಕುವುದರಿಂದ ಕಣ್ಣಿನ ಪೊರೆ ನಿವಾರಣೆಯಾಗುತ್ತದೆ.

15) <u>ಕಣ್ಣಿಗೆ ಹೂ ಬಿದ್ದಾಗ :</u>

ಪಡಪತ್ರಿ ಎಲೆಯನ್ನು ಕುಟ್ಟಿ ರಸತೆಗೆದು ಒಂದು ಸ್ವಚ್ಛವಾದ ಶೀಸೆಯಲ್ಲಿ ಹಾಕಿ, ದಿನಕ್ಕೆ ಎರಡು ಸಲದಂತೆ ಮೂರು ದಿನ ಹಾಕಿದರೆ ಕಣ್ಣಿನಲ್ಲಿರುವ ಹೂ ಹೋಗುತ್ತದೆ.

16) <u>ದನದ ಕಣ್ಣಿನಲ್ಲಿ ಹೂವು ಬಿದ್ದಾಗ :</u>

ಪಡಪತ್ರಿ ಎಲೆಯನ್ನು ಕುಟ್ಟಿ ರಸ ತೆಗೆದು ದಿನಕ್ಕೆ 8 ಹನಿಯಂತೆ 5 ದಿವಸ ಹಾಕಿದರೆ ದನದ ಕಣ್ಣಿನಲ್ಲಿರುವ ಹೂ ಹೋಗುತ್ತದೆ.

17) <u>ಕಣ್ಣು ನೋವು (ಕಣ್ಣು ಬಂದಾಗ) :</u>

ನೌಳಸರವನ್ನು ಕಾಸಿ ಕಣ್ಣಿನ ಮೇಲೆ ಮಂದವಾಗಿ ಕಾವು ಕೊಡುತ್ತಿದ್ದರೆ ಕಣ್ಣು ಬಿಳುಪಾಗುತ್ತವೆ ಹಾಗೂ ನೋವು ಶಮನವಾಗುತ್ತದೆ.

18) <u>ಕೆಮ್ಮು, ದಮ್ಮು :</u>

– ಜೇನು ತುಪ್ಪ 1 ಕೆ.ಜಿ., ಬೆಳಗಡ್ಡಿ (ಬೆಳ್ಳೊಳ್ಳಿ) ಅರ್ಧ ಕಿಲೋ, ನವಳಸರದ ರಸ ಅರ್ಧ ಕಿಲೋ ಉಳ್ಳಾಗಡ್ಡಿ (ಇರುಳ್ಳಿ) ಪಾವ್ ಕಿಲೋ, ಉಳ್ಳಾಗಡ್ಡಿ ಮತ್ತು ಬೆಳ್ಳಾಗಡ್ಡಿ ಚೆನ್ನಾಗಿ ಕುಟ್ಟಿ ರಸ ತೆಗೆದು ನಾಲ್ಕು ಸ್ವಚ್ಛವಾದ ಸೀಸೆಯಲ್ಲಿ ಹಾಕಿ ಇಡಬೇಕು. ನಂತರ ಜೇನು ತುಪ್ಪ, ನವಳಸರದ ರಸ ಹಾಕಿ ಕಲಸಿ ಭದ್ರವಾಗಿ ಮುಚ್ಚಿಡಬೇಕು. ನಂತರ ಗೋಣಿ ಚೀಲ ಮುಚ್ಚಿ ಒಂದು ತಿಂಗಳವರೆಗೆ ಹೊರಗಡೆ ತೆಗೆಯಬಾರದು. ಹೀಗೆ ಇಟ್ಟಂತಹ ತುಪ್ಪ ದಿನಾಲೂ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಎರಡು ಚಮಚ ನೆಕ್ಕಿದರೆ ದಮ್ಮು, ಕೆಮ್ಮು ಮಾಯವಾಗುತ್ತದೆ.
– ಜೇನು ತುಪ್ಪದಲ್ಲಿ ಗುರು ಭಸ್ಮವನ್ನು ಕಲಸಿ ದಿನಾಲು ಮುಂಜಾನೆ ಮೂರು ದಿವಸ ಸೇವಿಸಿದರೆ ವಾಂತಿಯಾಗುತ್ತದೆ. ಇದರಿಂದ ಕಫ ಹೊರಗೆ ಬಂದು ದಮ್ಮು ಕೆಮ್ಮು ನಿವಾರಣೆಯಾಗುತ್ತದೆ.
  ಪಥ್ಯ : ಉದ್ದಿನ ಬೇಳೆ, ಆಲುಗಡ್ಡಿ, ಮೊಸರು, ಕಬ್ಬಿಣ ಅಂಶದ ಪದಾರ್ಥ ತಿನ್ನಬಾರದು.

  ಸೂಚನೆ : ರೊಟ್ಟಿ, ಸಪ್ಪನ ಬೇಳೆ, ಬೆಳ್ಳಾಗಡ್ಡಿ ಖಾರಾ ಊಟ ಮಾಡಬೇಕು.

- ಬೆಳ್ಳಾಗಡ್ಡಿಯನ್ನು ಹಾಲಿನಲ್ಲಿ ಕುದಿಸಿ ಆರಿಸಿದ ಹಾಲು ಕುಡಿಯಬೇಕು. ನಂತರ ಬೆಳ್ಳಾಗಡ್ಡಿ ಒಂದೊಂದಾಗಿ ತಿನ್ನಬೇಕು. ಇದರಿಂದ ದಮ್ಮು, ಕೆಮ್ಮು, ಕಫ, ಹಳೆಯ ಜ್ವರ, ಪಾಶ್ವರೋಗ ಬರುವುದಿಲ್ಲ.

19) <u>ಲಕ್ವ :</u>

ಜೈಫಲ ಕುಟ್ಟಿ ಕ್ರಮೇಣ ಲಕ್ವ ಹೊಡೆದ ಭಾಗಕ್ಕೆ ಹಚ್ಚಬೇಕು. ನಂತರ ಆಕಳ ಹಾಲಿನಲ್ಲಿ ಬೆಳ್ಳಾಗಡ್ಡಿ ಕುದಿಸಿ ಆರಿಸಿ ಬೆಳ್ಳಾಗಡ್ಡಿ ತಿನ್ನಬೇಕು, ನಂತರ ಹಾಲು ಕುಡಿಯಬೇಕು. ಕ್ರಮೇಣ 15 ದಿವಸ ಹೀಗೆ ಮಾಡುವುದರಿಂದ ಸ್ವಲ್ಪ ಸ್ವಲ್ಪ ಶಕ್ತಿ ಬಂದು ಲಕ್ವ ರೋಗ ನಿವಾರಣೆಯಾಗುತ್ತದೆ.

ಪಥ್ಯ : ಸ್ತ್ರೀ ಪುರುಷರು ಸಂಪರ್ಕ ಹೊಂದಬಾರದು, ಮೈ ತೊಳೆದುಕೊಳ್ಳಬಾರದು.

ಊಟ : ಸಪ್ಪನ ಬೇಳೆ ಮತ್ತು ರೊಟ್ಟಿ ಹಾಗೂ ಬೆಳ್ಳಾಗಡ್ಡಿ ಖಾರ ತಿನ್ನಬಹುದು.

20) <u>ಸುತ್ತನಾಗೂರ :</u>

- ತೊಂಡೆಕಾಯಿ ಗಿಡದ ತಪ್ಪಲನ್ನು ತಂದು ಕುಟ್ಟಿ ರಸತೆಗೆದು ಸುತ್ತನಾಗೂರ ಆದ ಜಾಗಕ್ಕೆ ಹಚ್ಚಬೇಕು ಹೀಗೆ 3-4 ಸಲ ಹಚ್ಚುವುದರಿಂದ ಕ್ರಮೇಣ ಸುತ್ತ ನಾಗೂರ ಮಾಯವಾಗುತ್ತದೆ.
- ಜಾಜ (ಕೆಂಪಗೆ ಇರುವ ಒಂದು ರೀತಿಯ ಮಣ್ಣು) ದಲ್ಲಿ ಮೊಸರನ್ನು ಕಲಸಿ ಸುತ್ತ ನಾಗೂರ ಆದ ಜಾಗಕ್ಕೆ ಹಚ್ಚಿದರೆ ರೋಗ ನಿವಾರಣೆಯಾಗುತ್ತದೆ.

21) <u>ಮೂಲವ್ಯಾಧಿ :</u>

ಔಟಿನ ಕಾಯಿ ಕಷಾಯಮಾಡಿ, ಕಹಿ ಜೀರಿಗೆ ಹಾಕಿ ಕಲೆಸಿ ಕುಡಿಯಬೇಕು. ಹೀಗೆ 30 ದಿವಸ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಕುಡಿದರೆ ಮೂಲವ್ಯಾಧಿ ರೋಗ ನಿವಾರಣೆಯಾಗುತ್ತದೆ.

22) <u>ಮೂಲವ್ಯಾಧಿ, ಮೊಳಕೆಗೆ :</u>

ಅರಿಶಿಣ ಪುಡಿಯನ್ನು ಎಕ್ಕಿ ಹಾಲಿನಲ್ಲಿ ಕಲಸಿ, ಮಲಾಮಿನಂತೆ ಮಾಡಿ ಮೂಲವಾದಿ ಮೊಳಕೆಗೆ ಹಚ್ಚಿದರೆ ಮೊಳಕೆ ಮಾಯವಾಗಿ ರೋಗ ನಿವಾರಣೆಯಾಗುತ್ತದೆ.

23) <u>ಸಕ್ಕರೆ ಬೇನೆ</u> :

- ನೇರಳೆ ಗಿಡದ ಬೀಜವನ್ನು ಕುಟ್ಟೀ ಚೂರ್ಣ ತಯಾರಿಸಿ ದಿನಾಲು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಅರ್ಧ ಚಮಚ ತಿನ್ನಬೇಕು. ಹೀಗೆ ರೋಗ ಕಡಿಮೆಯಾಗುವವರೆಗೆ ತಿಂದರೆ ಸಕ್ಕರೆ ಬೇನೆ ಕಡಿಮೆಯಾಗುತ್ತದೆ.
- ಬಿಲ್ವ ಪತ್ರಿಯನ್ನು ಕುಟ್ಟಿ ಅರ್ಧ ಗ್ಲಾಸ ರಸ ತೆಗೆದು ಮುಂಜಾನೆ ಖಾಲಿ ಹೊಟ್ಟೆಯಲ್ಲಿ 21 ದಿನ ಸೇವಿಸಿದರೆ ಸಕ್ಕರೆ ಬೇನೆ ಕಡಿಮೆಯಾಗುತ್ತದೆ.
- ಅಡಿ ಹಗಲಕಾಯಿಗಿಡದ ಎಲೆಯನ್ನು ಕುಟ್ಟಿ ಎರಡು ಚಮಚ ರಸ ತೆಗೆದು 60 ದಿವಸ ಕುಡಿದರೆ ಸಕ್ಕರೆ ಬೇನೆ ಇಲ್ಲವಾಗುತ್ತದೆ.
- ಪಡಪತ್ರಿ ಎಲೆಯನ್ನು ಒಣಗಿಸಿ, ಚೂರ್ಣ ತಯಾರಿಸಿ ಒಂದು ಗ್ಲಾಸ ನೀರಿನಲ್ಲಿ ಒಂದು ಚಮಚ ಚೂರ್ಣ ಕಲೆಸಿ 60 ದಿವಸ ಸೇವಿಸಿದರೆ ಸಕ್ಕರೆ ಬೇನೆ ನಿವಾರಣೆಯಾಗುತ್ತದೆ.
- ಪಡಪತ್ರಿಗಿಡದ ಬೇರನ್ನು ಒಂದು ಗ್ಲಾಸ ನೀರಿನಲ್ಲಿ ನೆನೆಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಕುಡಿದರೆ ಸಕ್ಕರೆ ಬೇನೆ ಬರುವುದಿಲ್ಲ.

24) <u>ಬಿಳಿ ಸೆರಗು</u> :

ಲಕ್ಕಿ ಗಿಡದ ತಪ್ಪಲನ್ನು ಬಾಳೆ ಹಣ್ಣಿನಲ್ಲಿ ಮೊದಲನೇ ದಿನ ಒಂದು, ಎರಡನೇ ದಿನ ಎಡು, ಮೂರನೇ ದಿನ ಮೂರು ಎಲೆ ಇಟ್ಟು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ತಿನ್ನಬೇಕು. ಇದರಿಂದ ಬಿಳಿ ಸೆರಗು ರೋಗ ನಿವಾರಣೆಯಾಗುತ್ತದೆ.

25) <u>ಹಲ್ಲು ಬೇನೆ</u> :

ಶುದ್ಧವಾಯುವಿಳಂಗ ಚೂರ್ಣದಲ್ಲಿ ರಾಯಪುರಿ ಸಕ್ಕರೆಯನ್ನು ಸೇರಿಸಿ ಗುಳಿಗೆ ಮಾಡಿ ಹಲ್ಲು ನೋವು ಇರುವ ಜಾಗಕ್ಕೆ ಇಡಬೇಕು. ನಂತರ ಬರುವ ಉಗುಳು ಜೊಲ್ಲು ಉಗುಳಿದರೆ ಹಲ್ಲು ಬೇನೆ ಕಡಿಮೆಯಾಗುತ್ತದೆ.

26) <u>ಕಾಮಣಿ (ಕಾಮಾಲೆ)</u> :

- ಒಂದು ಗ್ಲಾಸ್ ನೀರಿನಲ್ಲಿ ಪಟಕಾ ಕಲೆಸಿ ಏಳು ದಿನ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಕುಡಿದರೆ ಕಾಮಣಿ ಕಡಿಮೆಯಾಗುತ್ತದೆ.

- ನವಳಸರದ ಮುಳ್ಳು ತೆಗೆದು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ತಿಂದರೆ ಕಾಮಣಿ ಇಲ್ಲವಾಗುತ್ತದೆ.
- ಕಾಲಿನ ಹಿಮ್ಮಡಿಗೆ ಕಬ್ಬಿಣದ ಸರಳು ಕಾಯಿಸಿ ಚುಚ್ಚಬೇಕು, ಫೆಜೆಟಿಕ್ಕೆ ತಪ್ಪಲು ರಸ ಹಚ್ಚಬೇಕು. ಮತ್ತೆ 8 ದಿವಸ ನಂತರ ಹೀಗೆ ಮಾಡಬೇಕು. ಇದರಿಂದ ಕಾಮಣಿ ರೋಗ ನಿವಾರಣೆಯಾಗುತ್ತದೆ.
- ಅಡ್ಡಸಾಲೆ ಗಿಡದ ಎಲೆಯನ್ನು ಕುಟ್ಟಿ, ಮೂರು ಗುಳಿಗೆಯನ್ನು ತಯಾರಿಸಿ, ಮತ್ತು ಬಿಳಿ ಎಕ್ಕಿ ಗಿಡದ ಮೊಗುಗಳು ಕುಟ್ಟಿ 3 ಗುಳಿಗೆ ತಯಾರಿಸಿ. ಈ ಎರಡು ಗುಳಿಗೆಗಳು ದಿನಕ್ಕೆ ಒಂದರಂತೆ 3 ದಿನ ಸೇವಿಸಿದರೆ ಕಾಮಾಲೆ ರೋಗ ನಿವಾರಣೆಯಾಗುತ್ತದೆ.

27) <u>ಕಾಮಾಲೆಯಿಂದ ಹಸಿವೆ ಆಗದೆ ಇದ್ದಾಗ :</u>

- ಇಂಗನ್ನು ಬೇಳೆಯ ಸಾರಿನಲ್ಲಿ ಹಾಕಿ ದಿನಾಲು ಊಟ ಮಾಡಬೇಕು. ನಂತರ ಪಟಕಾ ಹಾಕಿದ ನೀರು ಕುಡಿಯಬೇಕು. ಇದರಿಂದ ಹಸಿವೆಯಾಗುತ್ತದೆ.
- ಗಾಂಜಾದ ಎಲೆಗಳನ್ನು ತುಪ್ಪದಲ್ಲಿ ಹುರಿದು ಗುಳಿಗೆಯನ್ನು ತಯಾರಿಸಿ, ದಿನಾಲೂ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಒಂದು ಗುಳಿಗೆ ತಿಂದರೆ ಹಸಿವೆಯಾಗುತ್ತದೆ.

28) <u>ಬಾಯಿ ವಾಸನೆ :</u>

- ಬಿಸಿ ನೀರಿನಲ್ಲಿ ಅಡುಗೆ ಉಪ್ಪನ್ನು ಹಾಕಿ ಕಲೆಸಿ, ಬಾಯಿ ಮುಕ್ಕಳಿಸುವುದರಿಂದ ಬಾಯಿ ವಾಸನೆ ನಿಲ್ಲುತ್ತದೆ.
- ಶುದ್ಧಗುಗ್ಗಳನ್ನು ತಂದು ಹದಮಾಡಿ ದಿನಕ್ಕೆ ಒಂದು ಗುಳಿಗೆಯನ್ನು ತಿಂದರೆ ಬಾಯಿ ವಾಸನೆ ಬರುವುದಿಲ್ಲ.
- ಶ್ರೀಗಂಧದ ಚೂರ್ಣವನ್ನು ದಿನಕ್ಕೆ 1 ಚಮಚದಂತೆ 3-4 ದಿನ ತಿಂದರೆ ಬಾಯಿ ದುರ್ಗಂಧ ನಿಲ್ಲುತ್ತದೆ.

29) <u>ಮೈಸುಟ್ಟಾಗ :</u>

ಬಬಲೆ (ಜಾಲಿ) ಗಿಡದ ಬೇರನ್ನು ಶೋಸಿ ಗಂಧವನ್ನು ತೆಗೆದು ಕೊಬ್ಬರಿ ಎಣ್ಣೆಯಲ್ಲಿ ಕಲಸಿ ಸುಟ್ಟ ಜಾಗಕ್ಕೆ ಹಚ್ಚುವುದರಿಂದ ಹುಣ್ಣುಗಳು ಮಾಯವಾಗುತ್ತವೆ.

30) **ಮಲ್ಲಜೇರಿ** :

- ಕರಿ ದತ್ತುರಿಯ ಎಲೆಯನ್ನು ಕುಟ್ಟಿ ರಸ ತೆಗೆದು ದಿನಕ್ಕೆ 4-5 ಸಲದಂತೆ 7 ದಿವಸ ಮಲ್ಲಜೇರಿ ಆದ ಜಾಗಕ್ಕೆ ಹಚ್ಚಿದರೆ ಬಾವು ನೋವು ಕಡಿಮೆಯಾಗುತ್ತದೆ.
- ಪಡಪತ್ರಿ ಎಲೆಯನ್ನು ಕುಟ್ಟಿ ರಸ ತೆಗೆದು ಕಬ್ಬಿಣ ಬುಟ್ಟಿಯಲ್ಲಿ ಹಾಕಿ ಮಲ್ಲಜೇರಿ ಆದ ಜಾಗಕ್ಕೆ ದಿನಕ್ಕೆ 4-5 ಸಲದಂತೆ 7 ದಿನ ಹಚ್ಚಿದರೆ ನೋವು ನಿವಾರಣೆಯಾಗುತ್ತದೆ.

  ಪಥ್ಯ : ಎಣ್ಣೆ ವಾಸನೆ ಬೀಳಬಾರದು.

  ಊಟ : ಸಪ್ಪನ ಬೇಳೆ ರೊಟ್ಟಿ ತಿನ್ನಬೇಕು.

31) **ಗಂಟಮಲ್ಲಿ** :

ಉತ್ತರಣಿ ಬೇರನ್ನು ನೀರಿನ ಸಹಾಯದಿಂದ ಉಜ್ಜಿ (ಶೋಸಿ) ಬರುವ ಗಂಧವನ್ನು ಗಂಟಮಲ್ಲಿ ಆದ ಜಾಗಕ್ಕೆ ಹಚ್ಚಬೇಕು. ನಂತರ ಇದರ ತಪ್ಪಲನ್ನು ಕುಟ್ಟಿ ಗುಳಿಗೆ ಮಾಡಿ ದಿನಕ್ಕೆ ಒಂದರಂತೆ ತಿಂದರೆ ಗಂಟಮಲ್ಲಿ ಹುಣ್ಣು ಮಾಯವಾಗುತ್ತದೆ.

32) **ದೊಡ್ಡ ದೊಡ್ಡ ಹುಣ್ಣು** :

ಉತ್ತರಣಿ ಬೇರನ್ನು (ಶೋಸಿ) ಉಜ್ಜಿ ಗಂಧ ತೆಗೆದು ಹುಣ್ಣುಗಳಿಗೆ ಹಚ್ಚಿದರೆ ಹುಣ್ಣುಗಳು ಮಾಯವಾಗುತ್ತವೆ.

33) **ಕೆಮ್ಮು ನೆಗಡಿ** :

ನೀಲಗಿರಿ ಕಾಯಿಯನ್ನು ಸೋಸಿ ಗಂಧ ತೆಗೆದು ನೆಕ್ಕಿದರೆ ಕೆಮ್ಮು ನೆಗಡಿ ಮಾಯವಾಗುತ್ತದೆ.

34) **ನಾಲಿಗೆ ಕೆಟ್ಟಾಗ** :

ಸಂಜೀರಗೆ ತುಪ್ಪದಲ್ಲಿ ಕಲೆಸಿ ನಾಲಿಗೆಗೆ ಹಚ್ಚುವುದರಿಂದ ಕೆಟ್ಟಿದ್ದ ನಾಲಿಗೆ ವಾಸಿಯಾಗುತ್ತದೆ.

35) **ಒಸಡು ಉಬ್ಬಿದಾಗ** :

ಪಡಪತ್ರಿಯ ಎಲೆ ತಿನ್ನುವುದರಿಂದ ಒಸಡು ನೋವು ನಿವಾರಣೆಯಾಗುತ್ತದೆ.

36) **ಕೀಲು ನೋವು** :

ಬಿಳಿ ಎಕ್ಕಿ ಗಿಡದ ಮೊಗ್ಗನ್ನು ಒರೆಸಿ, ಶೇಂಗಾ ಬೀಜದಷ್ಟು ಗುಳಿಗೆ ಮಾಡಿ ದಿನಕ್ಕೆ 3 ರಂತೆ 4-5 ದಿನ ಸೇವಿಸಿದರೆ ಕೀಲು ನೋವು ಮಾಯವಾಗುತ್ತದೆ.

37) **ಪುರುಷತ್ವ ಇಲ್ಲದಿದ್ದಾಗ** :

- 65-70 ವರ್ಷ ಹಿಂದಿನ ತುಪ್ಪ ಸೂಜಿ ಕೊನೆಯಿಂದ ವೀಳೆದೆಲೆಗೆ ಹಚ್ಚಿ ತಿಂದರೆ ಪುರುಷತ್ವ ಬರುತ್ತದೆ.
- ನುಗ್ಗೆ ಕಾಯಿ ತಿನ್ನುವುದರಿಂದ ಪುರುಷತ್ವ ಬರುತ್ತದೆ.

38) **ಫಿನ್ಸಿ** :

ಎಳ್ಳಿನ ಎಣ್ಣೆ ಮೂಗಿನಲ್ಲಿ ದಿನಕ್ಕೆ 2 ಹನಿಯಂತೆ 3-4 ದಿನ ಹಾಕಿದರೆ ಫಿನ್ಸಿ ರೋಗ ನಿವಾರಣೆಯಾಗುತ್ತದೆ.

39) **ಚೇರ ಇಳಿದಾಗ** :

ತುಪ್ಪದಿಂದ ಟೊಂಕ ಮತ್ತು ಬೆನ್ನಿನ ನರ ಒರೆಸಿದರೆ ಚೇರ ಕಡಿಮೆಯಾಗುತ್ತದೆ.

40) **ಕೂದಲು ಉದುರುತ್ತಿದ್ದರೆ** :

- ದಾಸಿವಾಳ ಹೂವಿನ ರಸವನ್ನು ಕೂದಲು ಉದುರುತ್ತಿರುವ ಸ್ಥಳಕ್ಕೆ ಹಚ್ಚಿದರೆ ಹೊಸ ಕೂದಲು ಬರುತ್ತವೆ.
- ತೊಂಡಿ ಹೊಡೆದು ಸುಟ್ಟು ಬೂದಿ ಮಾಡಿ ಕೊಬ್ಬರಿ ಎಣ್ಣೆಯಲ್ಲಿ ಕಲಸಿ, ಕಡ್ಡಿಯಿಂದ ಕೂದಲು ಉದುರುತ್ತಿರುವ ಜಾಗಕ್ಕೆ ಹಚ್ಚಿದರೆ ಹೊಸ ಕೂದಲು ಬರುತ್ತದೆ.

41) **ಅರ್ಧ ತಲೆ ನೋವು** :

ಕ್ಯಾರಳದ ಎಣ್ಣೆ ಕಣ್ಣಿನ ಹುಬ್ಬಿಗೆ ಚೆಣಗೆ ಕಾಳಿನಷ್ಟು ಹಚ್ಚಿದರೆ ಅರ್ಧ ತಲೆನೋವು ಕಡಿಮೆಯಾಗುತ್ತದೆ.

42) **ಮುಟ್ಟು ಚೆನ್ನಾಗಿ ಆಗದಿದ್ದಾಗ** :

- ನವಳಸರ ಸ್ವಲ್ಪ ತುಂಡನ್ನು ಕಡಿದು ದಿನಾಲು 1 ರಂತೆ 7 ದಿನ ತಿಂದರೆ ಮುಟ್ಟು ಸರಿಯಾದ ಸಮಯಕ್ಕೆ ಆಗುತ್ತದೆ.
- ಕರಿ ಎಳ್ಳು, ಬೆಲ್ಲ, ಕ್ರಮೇಣ 15 ದಿವಸ ತಿಂದರೆ ಮುಟ್ಟಿನ ತೊಂದರೆ ನಿವಾರಣೆಯಾಗುತ್ತದೆ.

49) **ವಕ್ತಾರರು** : **ನಜೀರಮಿಯ್ಯಾ ತಂದೆ ಮಹಿಬುಸಾಬ್**

ವಯಸ್ಸು : 35 ವರ್ಷ

ಊರು : ಹೆಡಗಾಪೂರ

ತಾಲೂಕಾ : ಔರಾದ, ಜಿಲ್ಲೆ ಬೀದರ.

1) **ಕಿವಿ ಒಡೆದರೆ** :

ಚಳನ್ನು ಒಳ್ಳೆಣ್ಣೆಯಲ್ಲಿ ಕರಿದು ನಂತರ ಎಣ್ಣೆ ಸೋಸಿ ಒಂದು ಸ್ವಚ್ಛವಾದ ಶೀಸೆ (ಬಾಟಲಿ) ಯಲ್ಲಿ ಹಾಕಿ ದಿನಕ್ಕೆ 2 ಹನಿಯಂತೆ, 3 ದಿನ ಕಿವಿಯಲ್ಲಿ ಹಾಕಿದರೆ ಕಿವಿಸೊರುವುದು ನಿಲ್ಲುತ್ತದೆ.

2) **ಬಿಳಿ ಸೆರಗು** :

ಬಿಳಿ ಪಾಂಗರಿ, ಮುತ್ತುಗದ ಹೂವು, ಖಡಸಕ್ಕರೆ, (ಕಲ್ಲು ಸಕ್ಕರೆ) 20 ಗ್ರಾಂ ಬಾದಾಮು – ಒಂದು, ಎಲ್ಲಾ ಸೇರಿಸಿ ಕುಟ್ಟಿ ಚೂರ್ಣಯಾರಿಸಿ ದಿನಾಲೂ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಒಂದು ಚಮಚದಂತೆ 15 ದಿವಸ ಸೇವಿಸಿದರೆ ಬಿಳಿ ಸೆರಗು ನಿಲ್ಲುತ್ತದೆ.

3) **ಕೆಂಪು ಸೆರಗು** :

ಕಾಜು, ಅಡಿಬೆಂಡಿ, ಸರ್ಕಾರಿ ಬಬಲೆ ಕಾಯಿ, ಒಂದೊಂದು, ಸ್ವಲ್ಪ ಪುಟ್ಟ ಪುಟ್ಯಾನಬಳ್ಳಿ, ಇವೆಲ್ಲ ಸೆರಿಸಿ ಕುಟ್ಟಿ ಚೂರ್ಣ ತಯಾರಿಸಿ ಮುಂಜಾನೆ ಮತ್ತು ರಾತ್ರಿ ಒಂದೊಂದು ಚಮಚ ತಿನ್ನಬೇಕು ಹೀಗೆ 3 ದಿನ ಸೇವಿಸಿದರೆ ಕೆಂಪು ಸೆರಗು ನಿಲ್ಲುತ್ತದೆ.

4) **ಖಂಡ್ಕಿ ಹುಣ್ಣು** :

ಗುಟ್ ಗುಟ್ಯಾನ ತಪ್ಪಲು, ಅರಿಶಿಣ, ಬೆಣ್ಣೆ, ವಿಳೆದೆಲೆ ಇವೆಲ್ಲವನ್ನು ಕುಟ್ಟಿ ಖಂಡಿ ಹುಣ್ಣು ಆದ ಜಾಗಕ್ಕೆ 3 ದಿನಗಳಕಾಲ ಕಟ್ಟಿದರೆ ಹುಣ್ಣು ಕಡಿಮೆಯಾಗುತ್ತದೆ.

5) <u>ಗಜಕರ್ಣ :</u>

ಎಕ್ಕಿ ಗಿಡದ ಕಾಯಿ ಸುಟ್ಟು ಇದ್ದಿಲು ಮಾಡಿ ಒಳ್ಳೆಣ್ಣೆಯಲ್ಲಿ ಕಲಸಿ ಗಜಕರ್ಣ ಆದ ಜಾಗಕ್ಕೆ 3 ದಿನ ಹಚ್ಚಿದರೆ ತಿಂಡಿ, ನೋವು ಶಮನವಾಗುತ್ತದೆ.

6) **<u>ಕಾಮಣಿ (ಕಾಮಾಲೆ) :</u>**

ತೊಂಡೆ ಎಲೆಗಳು, ಅಜಿವಾನ, ಅರಿಸಿಣದ ಪುಡಿ ಇವೆಲ್ಲವನ್ನು ಚೆನ್ನಾಗಿ ಕುಟ್ಟಿ ತಾಳಗಿ (ತಲೆಯ) ಮೇಲೆ ಕಟ್ಟಬೇಕು ಹೀಗೆ ರವಿವಾರ, ಮಂಗಳವಾರ, ರವಿವಾರ ಮಾಡಿದರೆ ಕಾಮಣಿ ನಿವಾರಣೆಯಾಗುತ್ತದೆ.

7) **<u>ಮಲ ಹೆಚ್ಚಾಗಿ ಕೂಡಿಸುತ್ತಿದ್ದರೆ :</u>**

ಗುಟಗುಟ್ಯಾನ ಎಲೆ ಕೈಯಲ್ಲಿ ರಗಡಿಸಿ ನಂತರ ಸ್ವಲ್ಪ ಬೆಲ್ಲ ಹಾಕಿ ಗುಳಿಗೆ ಮಾಡಿ ದಿನಕ್ಕೆ 3 ರಂತೆ 3 ದಿನ ಸೇವಿಸಿದರೆ ಮಲ ಹೆಚ್ಚಾಗಿ ಕೂಡಿಸುವುದು ನಿಲ್ಲುತ್ತದೆ.

8) **<u>ನೆಗಡಿ :</u>**

ಒಂದು ಗ್ಲಾಸ್ ಹಾಲಿನಲ್ಲಿ ಮೆಣಸಿನ ಪುಡಿ, ಅರಿಶಿಣ ಪುಡಿಹಾಕಿ ಕಲಸಿ ಕುಡಿದರೆ ನೆಗಡಿ ಕಡಿಮೆಯಾಗುತ್ತದೆ.

9) **<u>ನೆಗಡಿಯಿಂದ ಮೂಗು ಕಟ್ಟಿಕೊಂಡರೆ :</u>**

ಒಂದು ಗಡಿಗೆ (ಮಡಿಕೆ) ಯಲ್ಲಿ ನೀರು ಹಾಕಿ ಚೆನ್ನಾಗಿ ಕುದಿಸಿ ನಂತರ ಕೆಳಗೆ ಇಳಿಸಿ, ಮೂಗಿನಿಂದ ಹವೆಯನ್ನು ಎಳೆದುಕೊಳ್ಳಬೇಕು. ಇದರಿಂದ ವಿಷಾಣು ಯುಕ್ತ ಜಲಾಂಶವೆಲ್ಲಾ ತಾನೇ ತಾನಾಗಿ ಕರಗಿ ನೆಗಡಿ ನಿಲ್ಲುತ್ತದೆ.

10) **<u>ಮೊಡವೆ :</u>**

ಟೊಮೆಟೋ ಹಣ್ಣಿನ ತಿರುಳು (ಗಾಬಿ) ನ್ನು ಕೆಲದಿನ ಮುಖಕ್ಕೆ ಹಚ್ಚಿಕೊಂಡು ಒಂದು ಗಂಟೆಯ ನಂತರ ಬೆಚ್ಚಗಿನ ನೀರಿನಿಂದ ತೊಳೆದುಕೊಳ್ಳಬೇಕು. ಹೀಗೆ ಮಾಡುವುದರಿಂದ ಮೊಡವೆ ಮಾಯವಾಗಿ ಮುಖ ಕಾಂತಿಯುಕ್ತವಾಗುತ್ತದೆ.

11) <u>ಕರಳು ಮತ್ತು ಪಿತ್ತಜನಕಾಂಗಗಳ ತೊಂದರೆ :</u>

ಒಂದು ಗ್ಲಾಸ್ ಟೊಮ್ಯಾಟೊ ರಸಕ್ಕೆ ಒಂದು ಚಿಟಕಿ ಅಡುಗೆ ಉಪ್ಪು ಮತ್ತು ಮೆಣಸಿನ್ ಬೀಜದ ಪುಡಿಯನ್ನು ಹಾಕಿ ಕುಡಿಯುವುದರಿಂದ ಸೋಮಾರಿತನ, ಹೊಟ್ಟೆ ಉರಿ, ಎದೆ ಉರಿತ, ಕರಳು ಮತ್ತು ಪಿತ್ತ ಜನಕಾಂಗದ ತೊಂದರೆ ನಿವಾರಣೆಯಾಗುತ್ತದೆ.

12) <u>ಮೈತೂಕ ಇಳಿಸಲು :</u>

ಎರಡು ತಿಂಗಳವರೆಗೆ ಮುಂಜಾನೆ ಉಪಹಾರದ ಬದಲಾಗಿ ಎರಡು ಟೊಮ್ಯಾಟೊ ಹಣ್ಣುಗಳನ್ನು ತಿನ್ನುವುದರಿಂದ ದೇಹದ ತೂಕ ಕಡಿಮೆಯಾಗುತ್ತದೆ.

13) <u>ಕಣ್ಣಿನ ದೋಷ :</u>

ಒಂದು ಮುಷ್ಟಿಯಷ್ಟು ಟೊಮ್ಯಾಟೊ ಗಿಡದ ಎಲೆಗಳನ್ನು ನೀರಿನಲ್ಲಿ 15 ನಿಮಿಷಗಳ ವರೆಗೆ ಕುದಿಸಿ ಅದನ್ನು ಸೋಸಿ ನೀರನ್ನು ಮುಂಜಾನೆ, ಮಧ್ಯಾಹ್ನ ಮತ್ತು ರಾತ್ರಿವೇಳೆಯಲ್ಲಿ ಊಟಕ್ಕೆ ಮುಂಚೆ ಒಂದು ಗ್ಲಾಸ್ ಕುಡಿದರೆ ಕಣ್ಣಿನ ದೋಷ ಮತ್ತು ಕಣ್ಣಿನ ನರಗಳಿಗೆ ಶಕ್ತಿ ಬರುತ್ತದೆ.

14) <u>ಮೂತ್ರಜನಕಾಂಗದ ತೊಂದರೆ :</u>

ಒಂದು ಟೆಮ್ಯಾಟೊ ಹಣ್ಣನ್ನು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಸೇವಿಸಿದರೆ ಮೂತ್ರ ಜನಕಾಂಗದಲ್ಲಿ ಕಲ್ಲು ಇದ್ದರೆ ಕರಗಿಹೋಗಿ, ಮೂತ್ರ ಜನಕಾಂಗ ತೊಂದರೆ ತಪ್ಪುತ್ತದೆ.

15) <u>ಉಸಿರಾಟ ಕ್ರಿಯೆಯಲ್ಲಿ ತೊಂದರೆಗೆ :</u>

ಸಿಪ್ಪೆ ತೆಗೆದ ಬೆಳಾಗಡ್ಡಿ (ಬೆಳ್ಳೊಳಿ) ಹೋಳುಗಳು ಮೆಲೆದು ತಿನ್ನಬೇಕು. ನಂತರ ಅರ್ಧ ಗ್ಲಾಸ್ ಟೊಮ್ಯಾಟೋ ರಸಕ್ಕೆ ಎರಡು ಚಮಚ ಜೇನುತುಪ್ಪ, 4-5 ಇಲಾಯಚಿ (ಯಾಲಕ್ಕಿ) ಪುಡಿ ಹಾಕಿ ಕಲಸಿ ಕುಡಿಯುವುದರಿಂದ ಶ್ವಾಸಕೋಶಕ್ಕೆ ಸಂಭವಿಸಿದ ರೋಗಗಳು ನಿವಾರಣೆಯಾಗುತ್ತದೆ.

16) <u>**ಮೈಗೆ ಬಿಸಿಬೇಕಾದಾಗ**</u> :

ಕಿತ್ತಾಳೆ ಹಣ್ಣಿನ ರಸವನ್ನು ಸೇವಿಸಿದರೆ ದೇಹದಲ್ಲಿ ಶಕ್ತಿ ಮತ್ತು ಶಾಖದ ಉತ್ಪತ್ತಿ ಆಗುತ್ತದೆ.

17) <u>**ನೆಗಡಿ, ಜ್ವರ, ರಕ್ತಸ್ರಾವ, ಅಜೀರ್ಣ**</u> :

ಕಿತ್ತಳೆ ಹಣ್ಣನ್ನು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಕೆಲವು ದಿವಸ ಸೇವಿಸಿದರೆ ನೆಗಡಿ, ಜ್ವರ, ರಕ್ತ ಸ್ರಾವ ನಿಲ್ಲುತ್ತದೆ.

18) <u>**ಹೊಟ್ಟೆ ನೋವು ಅಥವಾ ಮಲಬದ್ಧತೆ**</u> :

ಮುಂಜಾನೆ ಹಾಸಿಗೆಯಿಂದ ಎದ್ದ ಕೂಡಲೇ ಹಾಗೂ ರಾತ್ರಿ ಮಲಗುವ ಮುನ್ನ ಒಂದೆರಡು ಕಿತ್ತಳೆ ಹಣ್ಣು ಸೇವಿಸುವುದರಿಂದ ಹೊಟ್ಟೆ ನೋವು ಅಥವಾ ಮಲಬದ್ಧತೆ ನಿವಾರಣೆಯಾಗುತ್ತದೆ.

19) <u>**ಹಲ್ಲು ನೋವು**</u> :

ಕಿತ್ತಳೆ ರಸವನ್ನು ಹತ್ತಿಯಲ್ಲಿ ತೋಯಿಸಿ (ಅದ್ದಿ) ಹಲ್ಲು ನೋವು ಇರುವ ಭಾಗದ ಮೇಲೆ ಇಡಬೇಕು. ಬರುವ (ಜೊಲ್ಲು) ಉಗುಳನ್ನು ಉಗಿಯಬೇಕು. ಇದರಿಂದ ಹಲ್ಲು ನೋವು ಶಮನವಾಗುತ್ತದೆ.

20) <u>**ಹೃದಯ ಸಂಬಂಧಿ ರೋಗಕ್ಕೆ**</u> :

ಕಿತ್ತಳೆ ರಸದಲ್ಲಿ ಜೇನು ತುಪ್ಪ ಬೆರೆಸಿ ಸೇವಿಸಿದರೆ ಹೃದಯ ಸಂಬಂಧಿ ರೋಗಗಳು ಬರುವುದಿಲ್ಲ.

21) <u>**ಕ್ಷಯ, ದಮ್ಮು, ಕಫ**</u> :

ಜೇನು ತುಪ್ಪ, ಕಿತ್ತಳೆ ರಸ ಒಂದೊಂದು ಚಮಚ ತೆಗೆದುಕೊಂಡು ಇದರಲ್ಲಿ ಒಂದು ಚಿಟಿಕೆ ಅಡುಗೆ ಉಪ್ಪನ್ನು ಹಾಕಿ ಕಲಸಿ ಸೇವಿಸಿದರೆ ಕ್ಷಯ, ದಮ್ಮು ಕಫ್ ಶಮನವಾಗುತ್ತದೆ.

22) <u>**ಮೊಡವೆ**</u> :

ಕಿತ್ತಳೆ ಹಣ್ಣಿನ ಸಿಪ್ಪೆಯನ್ನು ಅರೆದು ಮೊಡವೆ ಆದ ಜಾಗಕ್ಕೆ 3 ದಿವಸ ಹಚ್ಚಿದರೆ ಮೊಡವೆಗಳು ಕಡಿಮೆಯಾಗುತ್ತವೆ.

50) **ವಕ್ತಾರರು** : **ರವಿಂದ್ರ ಕರಂಜೆ**

ವಯಸ್ಸು : 30 ವರ್ಷ

ಊರು : ಕೊಟಗ್ಯಾಳ

ತಾಲೂಕಾ : ಭಾಲ್ಕಿ, ಜಿಲ್ಲೆ ಬೀದರ.

1) **ಮೂಲವ್ಯಾಧಿ** :

ಬಿಳಿ ಹುಲಿ ತಪ್ಪಲನ್ನು ಸುಟ್ಟು ಕರಕುಮಾಡಿ, ಆರುತಿ ಕರ್ಪೂರದಲ್ಲಿ ಕಲಸಿ, ಮೂಲವ್ಯಾಧಿ ಮೊಳಕೆಗೆ 5 ದಿನ ಹಚ್ಚಿದರೆ ಈ ರೋಗ ನಿವಾರಣೆಯಾಗುತ್ತದೆ.

2) **ಚೇಳು ಕಡಿತ** :

- ಸೀತಾಫಲ ಎಲೆಯ ರಸವನ್ನು ತೆಗೆದು ಚೇಳು ಕಡಿದ ವಿರುದ್ಧ ಭಾಗದ ಕಿವಿಯಲ್ಲಿ ಹಾಕಿದರೆ ವಿಷ ಇಳಿದು ಉರಿ ಕಡಿಮೆಯಾಗುತ್ತದೆ.
- ಬೋರೆ (ಬಾರೆಗಿಡ) ತಪ್ಪಲನ್ನು 8-10 ತಿಂದರೆ ವಿಷ ಇಳಿದು ಉರಿ ಶಮನವಾಗುತ್ತದೆ.

3) **ಮಕ್ಕಳಿಗೆ ಹೊಟ್ಟೆಸೂಲ (ಬೇನೆ)** :

ಗೆಜ್ಜೆಟಿಕ್ಯಾನ ತಪ್ಪಲನ್ನು ಕೈಯಲ್ಲಿ ಒರೆಸಿ 1 ಚಮಚ ರಸ ತೆಗೆದು, ಹೊಟ್ಟೆ ಸೂಲ ಎದ್ದ ಸಮಯದಲ್ಲಿ ಕುಡಿಸಿದರೆ ನೋವು ಶಮನವಾಗುತ್ತದೆ.

4) **ಮೂತ್ರದಲ್ಲಿ ಉರಿಯುವಿಕೆ (ಉರಚಗಿ)** :

ಝುಂಜರೆನ್ ಬೇಲಿನ ತೊಗಟೆ ಮತ್ತು ಖಡಸಕ್ಕರೆ ತಿಂದರೆ ಉರಿತ ಕಡಿಮೆಯಾಗುತ್ತದೆ.

5) **ಬಿಳಿ ಸೆರಗು** :

ಬಿಳಿ ಮಲ್ಲಿ ಹೂ ತಪ್ಪಲಿನ ಅರ್ಧ ಬಟ್ಟಲು ರಸ ತೆಗೆದು ಮುಂಜಾನೆ ಖಾಲಿ ಹೊಟ್ಟೆಯಲ್ಲಿ 3 ದಿವಸ ಕುಡಿದರೆ ಬಿಳಿ ಸತೆರಗು ನಿಲ್ಲುತ್ತದೆ.

6) <u>ಕೆಂಪು ಸೆರಗು</u> :

ಕೆಂಪು ಮಲ್ಲಿಗೆ ಹೂ ಗಿಡದ ತಪ್ಪಲಿನಿಂದ ಅರ್ಧ ಬಟ್ಟಲು ರಸ ತೆಗೆದು ಮುಂಜಾನೆ ಖಾಲಿ ಹೊಟ್ಟೆಯಲ್ಲಿ 13 ದಿನ ಸೇವಿಸಿದರೆ ಕೆಂಪು ಸೆರಗು ಶಮನವಾಗುತ್ತದೆ (ನಿಲ್ಲುತ್ತದೆ).

7) <u>ಲಕ್ವ</u> :

- ಅಡು ಮುಟ್ಟಲ್ದ ಬೆಳ್ಳಿಯ ತಪ್ಪಲು ಕುಟ್ಟಿ ಒಂದು ಗ್ಲಾಸ್ ಆಡಿನ ಹಾಲಿನಲ್ಲಿ ಹಾಕಿ 5-6 ದಿನ ಕುಡಿದರೆ ಅಂಕು-ಡೊಂಗು ಆದ ಅಂಗಗಳು ಸರಿಹೊಂದುತ್ತವೆ.
- ದಾಂಗಡ್ಯಾನ ಗಿಡದ ಎಲೆಯನ್ನು ಕುಟ್ಟಿ ಒಂದು ಗ್ಲಾಸ ಆಡಿನ ಹಾಲಲ್ಲಿ ಹಾಕಿ 5-6 ದಿನಗಳವರೆಗೆ ಕುಡಿದರೆ ಲಕ್ವ ಕಡಿಮೆಯಾಗುತ್ತದೆ.

8) <u>ಕಾಮಾಲೆ</u> :

ದೇಶಿ ಕೋಳಿಯ ಮಲ, ಬೆಲ್ಲ, ಎರಡೂ ಕಲಸಿ ಕಡ್ಲಿ ದಾಣಿಯಷ್ಟು ಗುಳಿಗೆ ಮಾಡಿ ದಿನಕ್ಕೆ 03 ಸಲದಂತೆ 8 ದಿನ ತಿಂದರೆ ಕಾಮಾಲೆ ನಿವಾರಣೆಯಾಗುತ್ತದೆ.

51) **ವಕ್ತಾರರು : ಕೆ. ಹಣಮಂತರಾವ ರಾಮಶೆಟ್ಟಿ**

ವಯಸ್ಸು : 40 ವರ್ಷ

ಊರು : ಚಿಮಕೋಡ

ತಾಲೂಕಾ : ಬೀದರ.

1) **<u>ಚೇಳು ಕಡಿತ</u>** :

– ಜಾಜು ಮಲ್ಲಿಗೆ ಗಿಡದ ಬೇಲಿನ ಗಂಧ ತೆಗೆದು ಚೇಳು ಕಡಿದ ಜಾಗಕ್ಕೆ ಹಚ್ಚಿದರೆ ವಿಷ ಇಳಿದು ಉರಿ ಕಡಿಮೆಯಾಗುತ್ತದೆ.

– ಡಿ.ಎ.ಪಿ. ಗೊಬ್ಬರನ್ನು ಚೇಳು ಕಡಿದ ಜಾಗಕ್ಕೆ ಹಚ್ಚಿದರೆ ವಿಷ ಇಳಿದು ಉರಿ ಶಮನವಾಗುತ್ತದೆ.

2) **<u>ದೇಹದ ಮೇಲೆ ಗಡ್ಡೆಯಾದಾಗ</u>** :

ಖಗ್ಗು ಪಪಾಯಿ ಬೀಜ ತೆಗೆದು ಗಾಬಿ (ತಿರುಳು) ಚೆನ್ನಾಗಿ ಅರೆದು ಗಡ್ಡೆಯಾದ ಜಾಗಕ್ಕೆ ಹಚ್ಚಿ ನಂತರ ಒಂದು ಬಟ್ಟೆಯಿಂದ ಕಟ್ಟಬೇಕು. ಇದರಿಂದ ಗಡ್ಡೆ ಒಡೆದು ಕೆಟ್ಟ ರಕ್ತ ಹೋಗಿ ನಿವಾರಣೆಯಾಗುತ್ತದೆ.

3) **<u>ಮುಳ್ಳು ನಟ್ಟಿ ಹೊರ ಬರದಿದ್ದಾಗ</u>** :

ಸಣ್ಣ ಎಕ್ಕಿ ಗಿಡದ ಹಸಿರು ತರಹದ ಹಾಲು, ಮುಳ್ಳು ನಟ್ಟ ಜಾಗಕ್ಕೆ ಸ್ವಲ್ಪ ಕೆದರಿ ಅದರಲ್ಲಿ ಈ ಹಾಲು ಹಾಕಿದರೆ ಮುಳ್ಳು ಹೊರಗಡೆ ಬರುತ್ತದೆ.

4) **<u>ಕೀಲು ನೋವು</u>** :

ಬಿಳಿ ಎಕ್ಕಿ ಗಿಡದ ಹಾಲು ಕೀಲು ನೋವು ಇರುವ ಜಾಗಕ್ಕೆ ಹಚ್ಚಿದರೆ ನೋವು ಮತ್ತು ಬಾವು ನಿವಾರಣೆಯಾಗುತ್ತದೆ.

5) **<u>ಮಗು ಹೆದರಿಕೊಂಡಾಗ</u>** :

'ಮುಟ್ಟಿದರೆ ಮುನಿ' ಈ ಸಸ್ಯದ ತಪ್ಪಲನ್ನು ಆಕಳ ಬಾಲದ ಕೂದಲಿ (ಜವಿ) ಗೆ ಕಟ್ಟಿ ಮಗುವಿನ ಉಡುಧಾರ ಅಥವಾ ಕೊರಳಿಗೆ ಕಟ್ಟಿದರೆ ಮಗು ಹೆದರುವುದಿಲ್ಲ.

6) <u>ಕಾಮಾಲೆ ಬರದಹಾಗೆ ನೋಡಿಕೊಳ್ಳುವ ಮುಂಜಾಗ್ರತೆಗೆ ಕ್ರಮ :</u>

ಆಕಳ ಮೂತ್ರ (ಗ್ವಾತಾ) ದಿನಾಲೂ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಒಂದು ಚಮಚ ಸೇವಿಸಿದರೆ ಕಾಮಾಲೆ ರೋಗ ಬರುವುದಿಲ್ಲ.

7) <u>ಕಣ್ಣು ಬಂದಾಗ :</u>

ಆಡಿನ ಹಾಲನ್ನು ಮೊಲೆಯಿಂದ ನೇರವಾಗಿ ಕಣ್ಣಿಗೆ ಎರಡು ಮೂರು ದಿವಸ ಹಿಂಡಿದರೆ ಕಣ್ಣು ನೋವು ಮಾಯವಾಗುತ್ತದೆ.

8) <u>ದಿಟ್ಟಿಯಾದಾಗ :</u>

ಖಾದಿ (ಖಾಟನ್) ಬಟ್ಟೆಯನ್ನು ಮೂರು ತುಕುಡಿ (ತುಂಡು) ಮಾಡಿ, ಹಿಂದೆ ಮುಂದೆ ಮೂರು ಸಲ ನಿವಾಳಿಸಿ ಬೆಂಕಿಯಲ್ಲಿ ಸುಟ್ಟರೆ ದಿಟ್ಟಿ ಮಾಯವಾಗುತ್ತದೆ.

9) <u>ನಾಯಿ ದನಗಳಿಗೆ ಕೂದಲು ಉದುರುತಿದ್ದರೆ :</u>

ಅರಶಿಣ ಪುಡಿಯನ್ನು ಮಂದಾಗ್ನಿಯಲ್ಲಿ ಉರಿಸುತ್ತ ಕಪ್ಪಾಗುವ ವರೆಗೆ ಹುರಿಯಿರಿ. ತಣ್ಣಗಾದನಂತರ ಕರಿಬೇವಿನ ಎಣ್ಣೆಯಲ್ಲಿ ಬೆರೆಸಿ, ಮಲಾಮು ತಯಾರಿಸಿ, ಕೂದಲು ಉದುರುವ ಸ್ಥಳಕ್ಕೆ ದಿನಕ್ಕೆ 4-5 ಸಲ ಹಚ್ಚಿದರೆ ಕೂದಲು ಉದುರುವುದನ್ನು ನಿಂತು ಹೊಸ ಕೂದಲು ಬರುತ್ತವೆ.

10) <u>ಮೂತ್ರ ವಿಸರ್ಜನೆ ತೊಂದರೆ :</u>

ಪುಟೆದ ಕಾಯಿ (ಹಣ್ಣಾಗಿರುವ ಸೌತೆಕಾಯಿ) ಯ ಬೀಜವನ್ನು ಒಣಗಿಸಿ ಪುಡಿಮಾಡಿ, ಒಂದು ಗ್ಲಾಸ ನೀರಿನಲ್ಲಿ ಹಾಕಿ ಸ್ವಲ್ಪ ಸಕ್ಕರೆ ಕಲೆಸಿ ಬಿಸಿಮಾಡಿ ಸೇವಿಸಿದರೆ ಮೂತ್ರ ವಿಸರ್ಜನೆಯ ಸಂದರ್ಭದಲ್ಲಿ ಉಂಟಾಗುವ ಉರಿ, ಕಲ್ಲು ಮಾಯವಾಗಿ ರೋಗ ನಿವಾರಣೆಯಾಗುತ್ತದೆ.

11) <u>ಸಂಧಿವಾತ ಮತ್ತು ಗಂಟಲು ಬೇನೆ :</u>

ಗಜರಿಯನ್ನು ಕುಟ್ಟಿ ರಸತೆಗೆದು, ಸೌತೆಕಾಯಿಯ ರಸದಲ್ಲಿ ಸೇರಿಸಿ ಕುಡಿದರೆ ಸಂಧಿವಾತ, ಗಂಟಲು ಬೇನೆ ಕಡಿಮೆಯಾಗುತ್ತದೆ.

12) <u>ಗರ್ಮಿಯಿಂದ ಚರ್ಮ ಬಿರುಕು ಬಿಟ್ಟಾಗ :</u>

ಗಜರಿ ಮತ್ತು ಬೆಳ್ಳಗಡ್ಡಿ ರಸವನ್ನು ಸೌತೇಕಾಯಿ ರಸದೊಂದಿಗೆ ಬೆರೆಸಿ ಕುಡಿದರೆ ಗರ್ಮಿಯಿಂದ ಚರ್ಮ ಬಿರುಕು ಬಿಡುವುದು ನಿಲ್ಲುತ್ತದೆ.

13) **ವಾಂತಿ ಭೇದಿ** :

ಸೌತಿಕಾಯಿಯ ಎರಡು ಚಮಚ ರಸತೆಗೆದು, ಎಳೆ ನೀರಿಗೆ ಬೆರೆಸಿ, ಗಂಟೆಗೆ ಒಂದು ಸಲದಂತೆ 4-5 ಸಲ ಕುಡಿದರೆ ವಾಂತಿ ಭೇದಿ ನಿಲ್ಲುತ್ತದೆ.

14) **ಮೊಡವೆ, ಕಪ್ಪು ಕಲೆಗಳು, ಚರ್ಮ ಒಣಗುವಿಕೆ** :

ಸೌತೆಕಾಯಿಯನ್ನು ಸಣ್ಣ ಸಣ್ಣ ತುಂಡುಗಳಾಗಿ ಕತ್ತರಿಸಿ ಅದನ್ನು ಮುಖ, ಕಣ್ಣು ಹಾಗೂ ಕುತ್ತಿಗೆಯ ಸುತ್ತಲೂ ಹಚ್ಚಬೇಕು. 15-20 ನಿಮಿಷಗಳ ಕಾಲ ತಡೆದು ನಂತರ ತೊಳೆದುಕೊಳ್ಳಬೇಕು. ಇದರಿಂದ ಮೊಡವೆ, ಕಪ್ಪು ಕಲೆಗಳು, ಚರ್ಮ ಒಣಗುವಿಕೆಯ ತೊಂದರೆಗಳು ನಿವಾರಣೆಯಾಗುತ್ತವೆ.

15) **ಹೊಟ್ಟೆ ಶೂಲೆ** :

ಎರಡು ಬಲಿತ ಸೌತೆಕಾಯಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ತಿಂದರೆ ಹೊಟ್ಟೆ ಶೂಲೆ ನಿವಾರಣೆಯಾಗುತ್ತದೆ.

16) **ಕೂದಲು ಬೆಳೆಯದಿದ್ದಾಗ** :

ಗಜ್ಜರಿ, ಬೆಳ್ಳಗಡ್ಡಿ, ಸೌತೆಕಾಯಿ ಇವುಗಳಿಂದ ಎರಡೆರಡು ಚಮಚ ರಸ ತೆಗೆದು ದಿನಕ್ಕೆ ಮೂರು ಸಲದಂತೆ ಸೇವಿಸಿದರೆ ಕೂದಲು ನಯವಾಗಿ ಬೆಳೆಯುತ್ತವೆ.

17) **ಆ್ಯಸಿಡಿಟಿ** :

ಬಿಲ್ವ ಪತ್ರಿ ದಿನಕ್ಕೆ 7 ರಂತೆ, 7 ದಿನ ತಿಂದರೆ ಆ್ಯಸಿಡಿಟಿ ಕಡಿಮೆಯಾಗುತ್ತದೆ.

18) <u>ಕ್ಯಾನ್ಸರ್ ತಡೆಗಟ್ಟಲು :</u>

ಬೆಲ್ಲವನ್ನು ಸೇವಿಸುವುದರಿಂದ ಕ್ಯಾನ್ಸರ್ ತಡೆಗಟ್ಟಬಹುದು.

19) <u>ಕಿಡ್ನಿ ತೊಂದರೆಗೆ ಕಾರಣ :</u>

ಪಾಲಕ ಮತ್ತು ಟೊಮೆಟೊ ಎರಡನ್ನು ಕಲಸಿ ಊಟ ಮಾಡಬಾರದು, ಹಾಗೆ ಮಾಡಿದರೆ ಮೂತ್ರ ವಿಸರ್ಜನೆಗೆ ತೊಂದರೆಯಾಗಿ ಕಿಡ್ನಿ ತೊಂದರೆಯಾಗುವುದು.

20) <u>ಕೂದಲು ನಯವಾಗಲು :</u>

ದಾಸಿವಾಳ ಹೂಗಳನ್ನು ನೆರಳಿನಲ್ಲಿ ಒಣಗಿಸಿ, ಪುಡಿ ಮಾಡಿ, ಅದನ್ನು ನೀರಿನೊಂದಿಗೆ ಬೆರೆಸಿ ತಲೆ ತೊಳೆದುಕೊಂಡರೆ ಕೂದಲು ನಯವಾಗುತ್ತವೆ.

21) <u>ಕರಳು ಹುಣ್ಣು, ಕಣ್ಣು ನೋವು, ಉರಿ, ಕಿವಿ ಸೋರುವಿಕೆ, ಜಠರದ ಹುಣ್ಣು:</u>

ಕರಿಕೆ (ಗರಿಕೆ) ಹುಲ್ಲನ್ನು ಬೇರಿನಿಂದ ಬೇರ್ಪಡಿಸಿ ಉಪ್ಪಿನ ನೀರಿನಲ್ಲಿ ತೊಳೆದು ಒರಳು ಅಥವಾ ಮಿಕ್ಸರ್‌ನಲ್ಲಿ ರುಬ್ಬಬೇಕು. ನಂತರ ಒಂದು ಗ್ಲಾಸ್ ನೀರಿನಲ್ಲಿ ಹಾಕಿ ಕಲಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಕುಡಿಯಬೇಕು. ಹೀಗೆ ಮೂರು ದಿನಗಳವರೆಗೆ ಕುಡಿದರೆ ಕರಳು ಹುಣ್ಣು, ಕಣ್ಣು ನೋವು, ಉರಿ, ಕಿವಿ ಸೋರುವಿಕೆ, ಜಠರದ ಹುಣ್ಣು ಕಡಿಮೆಯಾಗುತ್ತದೆ.

22) <u>ಅಜೀರ್ಣ :</u>

ಆಹಾರದಲ್ಲಿ ಹೆಚ್ಚಾಗಿ ಶುಂಠಿ ಉಪಯೋಗಿಸಿದರೆ ಅಜೀರ್ಣತೆ ತಡೆಯಬಹುದು.

23) <u>ನೆಗಡಿ :</u>

ಶುಂಠಿಯ ಕಷಾಯ ಮಾಡಿ ಎರಡು ದಿನ ಕುಡಿಯುವುದರಿಂದ ನೆಗಡಿ ನಿವಾರಣೆಯಾಗುತ್ತದೆ.

24) <u>ದಮ್ಮು, ಕೆಮ್ಮು :</u>

ಶುಂಠಿ ಕಷಾಯದಲ್ಲಿ ಜೇನು ತುಪ್ಪ ಬೆರೆಸಿ ಸೇವಿಸಿದರೆ ದಮ್ಮು, ಕೆಮ್ಮು ಶಮನವಾಗುತ್ತದೆ.

25) <u>ಹಲ್ಲು ನೋವು</u> :

ಶುಂಠಿಯನ್ನು ಸೋಸಿ ಗಂಧ ತೆಗೆದು ಹತ್ತಿಯಲ್ಲಿ ಹಾಕಿ ಹಲ್ಲು ನೋವಿರುವ ಜಾಗಕ್ಕೆ ಇಡಬೇಕು. ನಂತರ ಬರುವ ಉಗುಳನ್ನು (ಜೊಲ್ಲು) ಉಗುಳಿದರೆ ಹಲ್ಲು ನೋವು ಕಡಿಮೆಯಾಗುತ್ತದೆ.

26) **<u>ಕೆಮ್ಮು, ನೆಗಡಿ, ಜ್ವರ</u>** :

ಕೋತಂಬರಿ, ದಾಲ್ಚಿನಿ, ಅರಿಶಿಣ ಇವೆಲ್ಲವನ್ನು ಕುಟ್ಟಿ ಪುಡಿಮಾಡಿ, ಒಂದು ಗ್ಲಾಸ್ ನೀರಿನಲ್ಲಿ ಹಾಕಿ ಕುಡಿಯುವುದರಿಂದ ಕೆಮ್ಮು, ನೆಗಡಿ, ಜ್ವರ ಕಡಿಮೆಯಾಗುತ್ತದೆ.

27) <u>ಬಾವು</u> :

ಸುಣ್ಣ ಮತ್ತು ಅರಿಶಿಣದ ಪುಡಿ ಸ್ವಲ್ಪ ನೀರಿನಲ್ಲಿ ಕಲಸಿ, ಮಲಾಮಿನಂತೆ ಮಾಡಿ, ಬಾವು ಬಂದ ಜಾಗಕ್ಕೆ ಹಚ್ಚಿದರೆ ಬಾವು ಇಳಿಯುತ್ತದೆ.

28) <u>ತಲೆನೋವು</u> :

ಶುಂಠಿ ಮತ್ತು ಅರಶಿಣವನ್ನು ಸೋಸಿ ಗಂಧವನ್ನು ತೆಗೆದು ಹಣೆಗೆ ಹಚ್ಚಿದರೆ ತಲೆನೋವು ನಿವಾರಣೆಯಾಗುತ್ತದೆ.

29) <u>ಮಧುಮೇಹ</u> :

- ನಾಲ್ಕು ಹಗಲಕಾಯಿ ಕುಟ್ಟಿ ರಸತೆಗೆದು ಪ್ರತಿದಿನ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಸೇವಿಸಿದರೆ ಸಂಪೂರ್ಣ ಮಧು ಮೇಹ ರೋಗ ನಿವಾರಣೆಯಾಗುತ್ತದೆ.
- ಹಗಲಕಾಯಿ ಬೀಜವನ್ನು ಒಣಗಿಸಿ ಕುಟ್ಟಿ ಪುಡಿಮಾಡಿ ಆಹಾರದೊಂದಿಗೆ ಸೇವಿಸಿದರೆ ಮಧು ಮೇಹ ರೋಗ ಮಾಯವಾಗುತ್ತದೆ.
- ಹಗಲಕಾಯಿ ಕುದಿಸಿದ ನೀರನ್ನು ಕುಡಿಯುವುದರಿಂದ ಮಧುಮೇಹ ಕಡಿಮೆಯಾಗುತ್ತದೆ.

30) <u>ರಕ್ತದೊತ್ತಡ, ಕಣ್ಣಿನ ತೊಂದರೆ, ಕಬ್ಬಿಣಾಂಶದ ಕೊರತೆ :</u>

ಪ್ರತಿದಿನ ಆಹಾರದಲ್ಲಿ ಹಗಲಕಾಯಿ ಸೇವಿಸುವುದರಿಂದ ರಕ್ತದೊತ್ತಡ, ಕಣ್ಣಿನ ತೊಂದರೆ, ಕಬ್ಬಿಣಾಂಶದ ಕೊರತೆ ಮಾಯಾಗುತ್ತದೆ.

31) <u>ಮೂಲವ್ಯಾಧಿ :</u>

ಹಗಲ ಎಲೆಗಳನ್ನು ಕುಟ್ಟಿ ಮೂರು ಚಮಚ ರಸ ತೆಗೆದು ಒಂದು ಗ್ಲಾಸ್ ಮಜ್ಜಿಗೆಯಲ್ಲಿ ಹಾಕಿ. ಒಂದು ತಿಂಗಳವರೆಗೆ ಪ್ರತಿದಿನ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಕುಡಿಯಬೇಕು. ಅಲ್ಲದೆ ಇದರ ಬೇರನ್ನು ಸೋಸಿ ಬರುವ ಗಂಧವನ್ನು ಮೂಲವ್ಯಾಧಿ ಮೊಳಕೆಗೆ ಹಚ್ಚಬೇಕು. ಇದರಿಂದ ಈ ರೋಗ ಮಾಯವಾಗುತ್ತದೆ.

32) <u>ಕಜ್ಜಿ, ತುರಿಕೆ, ಹೊಟ್ಟೆಯಲ್ಲಿ ಕಾಣಿಸಿಕೊಳ್ಳುವ ಲಾಡಿ ಹುಳದಂತಹ ರೋಗ (ಜಂತು) :</u>

ಒಂದು ಗ್ಲಾಸ್ ಹಗಲಕಾಯಿಯ ರಸಕ್ಕೆ ಒಂದು ಚಮಚ ನಿಂಬೆರಸ ಕಲೆಸಿ ದಿನಕ್ಕೆ 4 ಸಲ ಖಾಲಿ ಹೊಟ್ಟೆಯಲ್ಲಿ ತೆಗೆದುಕೊಳ್ಳಬೇಕು. ಹೀಗೆ 4-6 ತಿಂಗಳವರೆಗೆ ಸೇವಿಸಿದರೆ ಕಜ್ಜಿ, ತುರಿಕೆ, ಹೊಟ್ಟೆಯಲ್ಲಿ ಕಾಣಿಸಿಕೊಳ್ಳುವ ಲಾಡಿ ಹುಳದಂತಹ ರೋಗಗಳು ನಾಶವಾಗುತ್ತವೆ.

33) <u>ಉಸಿರಾಟದ ತೊಂದರೆ, ಕೆಮ್ಮು, ನೆಗಡಿ, ಕಫ :</u>

ಹಗಲ ಬೇರಿನ ರಸವನ್ನು ಒಂದು ಚಮಚ ಜೇನು ತುಪ್ಪ ಅಥವಾ ತುಳಸಿದಳದ ರಸದೊಂದಿಗೆ ಬೆರೆಸಿ ಒಂದು ತಿಂಗಳ ವರೆಗೆ ಪ್ರತಿ ರಾತ್ರಿ ಸತತವಾಗಿ ಸೇವಿಸುತ್ತ ಬಂದರೆ ಕೆಮ್ಮು, ನೆಗಡಿ, ಕಫ ದೂರವಾಗಿ ಉಸಿರಾಟ ಸಾರಾಗವಾಗುವುದು.

34) <u>ಕುಡಿತದಿಂದ ತೊಂದರೆಗೊಳಗಾದರೆ :</u>

ಹಗಲಕಾಯಿ ರಸವನ್ನು ಸೇವಿಸುತ್ತಾ ಬಂದರೆ ಕುಡಿತದಿಂದ ಹಾನಿಗೊಳಗಾದ ಯಾಕೃತ್ತು ಉತ್ತಮಗೊಳ್ಳುವುದು. ಇದರಿಂದ ತೊಂದರೆ ತಪ್ಪುತ್ತದೆ.

35) <u>ವಾಂತಿ, ಭೇದಿ, ಕಾಲರಾ</u> :

ಹಗಲ ಎಲೆಯ ರಸದೊಂದಿಗೆ ಎರಡು ಚಮಚ ನಿಂಬೆ ರಸ ಬೆರೆಸಿ ಸೇವಿಸಿದರೆ ವಾಂತಿ, ಭೇದಿ, ಕಾಲರಾ ಕಡಿಮೆಯಾಗುತ್ತದೆ.

36) <u>ಡಯಾಬಿಟೀಸ್ ಹತೋಟಿಗೆ ಮತ್ತು ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿಸಲು</u> :

ನೆಲ್ಲಿ, ಅರಿಶಿಣ, ಅಮೇತ ಬಳ್ಳಿ, ಬೇವಿನ ಎಲೆ, ಬಿಲ್ವ ಪತ್ರಿ, ನೇರಳೆ, ಹಗಲಕಾಯಿ ಇವೆಲ್ಲವನ್ನು ಸಮ ಪ್ರಮಾಣದಲ್ಲಿ ತೆಗೆದುಕೊಂಡು ಬೇರೆ ಬೇರೆಯಾಗಿ ಕುಟ್ಟಿ ಒಂದು ಕಡೆ ಕಲಸಿ ದಿನಾಲು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಒಂದು ಚಮಚದಂತೆ 2 ತಿಂಗಳವರೆಗೆ ಸೇವಿಸಿದರೆ ಡಯಾಬಿಟೀಸ್ ಹತೋಟಿಗೆ ಬಂದು ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿಸುತ್ತದೆ.

37) <u>ಶೀತ, ತಲೆನೋವು</u> :

ಅರ್ಧ ಚಮಚ ಕರಿ ಮೆಣಸಿನ ಪುಡಿಯನ್ನು ಅರ್ಧ ಗ್ಲಾಸ್ ಬಿಸಿ ಹಾಲಿಗೆ ಬೆರೆಸಿ, ನಂತರ ಸ್ವಲ್ಪ ಬೆಲ್ಲ ಹಾಕಿ ದಿನಕ್ಕೆ 3 ಸಲ ಕುಡಿದರೆ ಶೀತದಿಂದಾಗುವ ತಲೆನೋವು ನಿವಾರಣೆಯಾಗುತ್ತದೆ.

38) <u>ವಾಂತಿ, ತಲೆ ನೋವಿಗೆ</u> :

- ಇಲಾಚಿ (ಏಲಕ್ಕಿ) ಯನ್ನು ಸಿಪ್ಪೆ ಸಮೇತ ಪುಡಿಮಾಡಿ ಇದಕ್ಕೆ ಸಮ ಪ್ರಮಾಣದಲ್ಲಿ ಜೀರಿಗೆ ಪುಡಿ ಮತ್ತು ಸಕ್ಕರೆ ಸೇರಿಸಿ ದಿನಕ್ಕೆ 3 ಸಲ ತಿಂದರೆ ತಲೆ ನೋವು ನಿವಾರಣೆಯಾಗುತ್ತದೆ.
- ಎಳ್ಳೆಣ್ಣೆಯನ್ನು ಸ್ವಲ್ಪ ಬೆಚ್ಚಗೆ ಮಾಡಿ ಮೃದುವಾಗಿ ಹಣೆಗೆ ತಿಕ್ಕಬೇಕು. ಸ್ವಲ್ಪ ಸಮಯದನಂತರ ಬಿಸಿ ನೀರಿನಲ್ಲಿ ಅದ್ದಿ (ಎದ್ದಿ) ದ ಬಟ್ಟೆಯಿಂದ ಶಾಖವನ್ನು ಕೊಡಬೇಕು. ಇದರಿಂದ ತಲೆನೋವು ಕಡಿಮೆಯಾಗುತ್ತದೆ.

39) <u>ಜ್ವರ</u> :

ಜೀರಿಗೆಯನ್ನು ಬೆಲ್ಲದೊಂದಿಗೆ ಬೆರೆಸಿ ಸೇವಿಸಿದರೆ ಜ್ವರ ನಿಲ್ಲುತ್ತದೆ.

40) <u>ಭೇದಿ :</u>

4-5 ಚಮಚ ಮೊಸರಿನಲ್ಲಿ ಅರ್ಧ ಚಮಚ ಜೀರಿಗೆ ಚೂರ್ಣ ಬೆರೆಸಿ ಸೇವಿಸುವುದರಿಂದ ಭೇದಿ ಕಡಿಮೆಯಾಗುತ್ತದೆ.

41) <u>ಅತಿ ಪಿತ್ತದಿಂದ ಉಂಟಾಗುವ ವಾಂತಿ :</u>

ನಿಂಬೆ ಹಣ್ಣಿನ ರಸದೊಡನೆ ಅರ್ಧ ಚಮಚದಷ್ಟು ಜೀರಿಗೆ ಪುಡಿಹಾಕಿ ಸೇವಿಸಿದರೆ ಅತಿ ಪಿತ್ತದಿಂದ ಉಂಟಾದ ವಾಂತಿ ನಿಲ್ಲುವುದು.

42) <u>ಚೇಳು ಕಡಿದಾಗ :</u>

ಜೀರಿಗೆ, ತುಪ್ಪ, ಸಿಂದೆಲೋನ ಸಮಪ್ರಮಾಣದಲ್ಲಿ ತೆಗೆದುಕೊಂಡು ನುಣ್ಣಗೆ ಅರೆದು ಸ್ವಲ್ಪ ಬೆಚ್ಚಗೆ ಮಾಡಿ ಚೇಳು ಕಡಿದ ಜಾಗದ ಮೇಲೆ ಕಟ್ಟಿದರೆ ವಿಷ ಇಳಿದು ಉರಿ ಕಡಿಮೆಯಾಗುತ್ತದೆ.

43) <u>ಅಜೀರ್ಣ ವಾಂತಿ :</u>

ಜೀರಿಗೆಯ ಚೂರ್ಣವನ್ನು ಬಿಸಿ ನೀರಿನಲ್ಲಾಗಲಿ ಅಥವಾ ಆಗತಾನೆ ಕಡೆದ ಮಜ್ಜಿಗೆಯಲ್ಲಾಗಲಿ ಹಾಕಿ ಕುಡಿದರೆ ಅಜೀರ್ಣ, ವಾಂತಿ ನಿಲ್ಲುತ್ತದೆ.

44) <u>ಉರಿ ಮೂತ್ರದ ತೊಂದರೆ :</u>

ಜೀರಿಗೆ ಚೂರ್ಣ ಎರಡು ಚಮಚ, ಎರಡು ಗ್ಲಾಸ್ ನೀರಿಗೆ ಹಾಕಿ, ಚೆನ್ನಾಗಿ ಕುದಿಸಿ ಅರ್ಧ ಗ್ಲಾಸ್ ಆದಾಗ ಕಷಾಯ ಕೆಳಗೆ ಇಳಿಸಿ. ದಿನಕ್ಕೆ ಎರಡು ಸಲ ಸೇವಿಸಿದರೆ ಉರಿ ಮೂತ್ರ ತೊಂದರೆ ನಿವಾಹರಣೆಯಾಗುತ್ತದೆ.

52) **ವಕ್ತಾರರು** : **ಮ. ಉಸ್ಮಾನಸಾಬ್ ತಂದೆ ರಾಜ್ ಮಹ್ಮದ ಸಾಬ**

ವಯಸ್ಸು : 65 ವರ್ಷ

ಊರು : ಅಮಲಾಪೂರ

ತಾಲೂಕಾ : ಬೀದರ.

1) **ಹಾವು ಕಡಿದಾಗ** :

ಇಸ್ತ್ರಿ ಗಿಡದ ತಪ್ಪಲನ್ನು ಕುಟ್ಟಿ ಹಾವು ಕಡಿದ ಜಾಗಕ್ಕೆ ಕಟ್ಟಬೇಕು, ಇದರಿಂದ ವಿಷ ಇಳಿದು ವ್ಯಕ್ತಿ ಅಪಾಯದಿಂದ ಪಾರಾಗುತ್ತಾನೆ.

2) **ಹಾವು ಕಡಿದು ಕೈಕಾಲು ಉಬ್ಬಿದಾಗ** :

ಇಸಕಂಟಿ ಗಿಡದ ಬೇರು, ಜಟಾಶಂಕರ ಗಡ್ಡಿ ಇವರೆಡನ್ನು ಸೋಸಿ ಗಂಧ ತೆಗೆದು, ಆಡಿನ (ಮೇಕೆ) ಮಲದಲ್ಲಿ ಕಲಸಿ ನಂತರ ಈ ಮೂರನ್ನು ನೀರಿನಲ್ಲಿ ಕುದಿಸಿ ಹಾವು ಕಡಿದ ಜಾಗಕ್ಕೆ ಕಟ್ಟಬೇಕು. ಹೀಗೆ 2-3 ದಿವಸ ಮಾಡಿದರೆ ಸಂಪೂರ್ಣ ವಿಷ ಇಳಿದು ಕೈಕಾಲು ಉಬ್ಬಿರುವುದನ್ನು ಇಳಿಯುತ್ತದೆ.

ಸೂಚನೆ : ಡಿಕಾಸಿನ (ನೀರು ಮತ್ತು ಪತ್ತಿ ಹಾಕಿ ಕುದಿಸಿದ ಮಿಶ್ರಣ) ಡಬಲರೊಟ್ಟಿ (ಬ್ರೆಡ್ಡು), ಉಪ್ಪಿಟ್ಟು ಸೇವಿಸಬೇಕು, ನೀರು ಕಾಯಿಸಿ ಕುಡಿಯಬೇಕು.

3) **ಚೇಳು ಕಡಿದಾಗ** :

ಹವಳದ ಗಡ್ಡಿ, ಸೋಸಿ ಗಂಧ ತೆಗೆದು ಚೇಳು ಕಡಿದ ಜಾಗಕ್ಕೆ ಹಚ್ಚಿದರೆ ವಿಷ ಇಳಿದು ಉರಿ ಶಮನವಾಗುತ್ತವೆ.

4) **ಚೇಳು ಕಡಿದು ಕೈಕಾಲು ಉಬ್ಬಿದರೆ** :

ಎಕ್ಕಿ ಎಲೆಗಳು ಕುಟ್ಟಿ ಚೇಳು ಕಡಿದು ಕೈಕಾಲು ಉಬ್ಬಿದ ಜಾಗಕ್ಕೆ ಕಟ್ಟಿದರೆ ವಿಷ ಇಳಿದು ರೋಗ ನಿವಾರಣೆಯಾಗುತ್ತದೆ.

5) **ಮೂಲವ್ಯಾಧಿ :**

ಕಾಗೆ ಗಿಡದ ತಪ್ಪಲು, ಜೀರಿಗೆ, ಖಡಸಕ್ಕರೆ, ಇವೆಲ್ಲವನ್ನು ಕುಟ್ಟಿ ಬೆಣ್ಣೆಯಲ್ಲಿ ಕಲಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಎರಡು ಚಮಚದಷ್ಟು ಒಂದು ತಿಂಗಳವರೆಗೆ ತಿನ್ನಬೇಕು. ಮೂಲವ್ಯಾಧಿ ಮೊಳಕೆಗೆ ಉಳ್ಳಾಗಡ್ಡಿ (ಈರುಳ್ಳಿ) ಬೀಜ ಸುಟ್ಟು ಹೊಗೆ ಕೊಡಬೇಕು ಇದರಿಂದ ಮೂಲವ್ಯಾಧಿ ಮಾಯವಾಗುತ್ತದೆ.

ಪಥ್ಯ : ಗರ್ಮಿ ಪದಾರ್ಥ ತಿನ್ನಬಾರದು.

6) **ಹಲ್ಲು ಬೇನೆ :**

ಮುಲ್ಲಮಗಡ್ಡಿ (ಮೂಲಂಗಿ) ಸೋಸಿ, ಹತ್ತಿಯಲ್ಲಿ ಹಾಕಿ, ಹಲ್ಲು ನೋವು ಇರುವ ಜಾಗಕ್ಕೆ ಇಡಬೇಕು ನಂತರ ಬರುವ ಉಗುಳನ್ನು ಉಗುಳುವುದರಿಂದ ಹಲ್ಲು ಬೇನೆ ಮಾಯವಾಗುತ್ತದೆ.

7) **ಮಲ್ಲಜೇರಿ :**

ಚೆನ್ನಂಗಿ (ಚೆಣಗಿ) ತಪ್ಪಲನ್ನು ಅರೆದು ಅದರಲ್ಲಿ ಸುಣ್ಣ ಕಲಸಿ, ಮಲ್ಲಜೇರಿ ಆದ ಜಾಗಕ್ಕೆ ಮೂರು ದಿನ ಹಚ್ಚಿದರೆ ಈ ರೋಗ ನಿವಾರಣೆಯಾಗುತ್ತದೆ.

8) **ಕಾಮಾಲೆ :**

- ಸೈತಪ್ಪಲು, ಪಟಕಾ, ಲವಂಗ ಈ ಮೂರನ್ನು ಕುಟ್ಟಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ರವಿವಾರ, ಮಂಗಳವಾರ ಸೇವಿಸಿದರೆ ಕಾಮಾಲೆ ವಾಸಿಯಾಗುತ್ತದೆ.
- ಕೋಳಿ ಮೊಟ್ಟೆ ಮತ್ತು ಮೆಣಸು ಹಾಕಿ ಕುದಿಸಿ, ಮೂರು ದಿನ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ತಿಂದರೆ ಕಾಮಾಲೆ ರೋಗ ನಿವಾರಣೆಯಾಗುತ್ತದೆ.

9) **ಗಂಟಮಲ್ಗಿ :**

ಗುರ್ಜಿ ತಪ್ಪಲು ಒಣಗಿಸಿ ಪೌಡರ ತರಹ ಮಾಡಿ ಗಂಟಮಲಗಿ ಆದ ಜಾಗಕ್ಕೆ ಹಚ್ಚಬೇಕು. ಕೆಟ್ಟ ರಕ್ತ ಹೋಗಿ ಹುಣ್ಣು ಮಾಯವಾಗಿ ರೋಗ ನಿವಾರಣೆಯಾಗುತ್ತದೆ.

10) <u>ಸಂಧಿವಾತ :</u>

ರಸಕಪೂರ, ಆರುತಿ ಕರ್ಪೂರ, ಜಾಜುಕಾಯಿ, ಇವೆಲ್ಲವೂ 25 ಗ್ರಾಂ ತೆಗೆದುಕೊಂಡು ಚೆನ್ನಾಗಿ ಕುಟ್ಟಿ ಚೂರ್ಣ ತಯಾರಿಸಿ ದಿವಸಕ್ಕೆ ಮೂರು ಸಾರಿ ಒಂದು ಚಮಚ 11 ದಿವಸ ತಿಂದರೆ ಸಂಧಿವಾತ ವಾಸಿಯಾಗುತ್ತದೆ.

11) <u>ಚೇರ್ :</u>

ಕಾರೆ ಗಿಡದ ತಪ್ಪಲನ್ನು ಚೆನ್ನಾಗಿ ಕುದಿಸಿ, ಗಟ್ಟಿಯಾದ ನಂತರ ಕೆಳಗೆ ಇಳಿಸಿ ಆರಿಸಿ ತೊರಡಿಗೆ (ವೃಷಣ) ಕಟ್ಟಬೇಕು. ಹೀಗೆ ಮೂರು ದಿನ ರಾತ್ರಿ ಮಾಡಿದರೆ ಚೇರ ಕಡಿಮೆಯಾಗುತ್ತದೆ.

ಪಥ್ಯ : ಹುಳಿ, ಎಣ್ಣೆ ಸೇವಿಸಬಾರದು.

12) <u>ಗರ್ಮಿ :</u>

ಬ್ರಹ್ಮದಂಡಿ ಬೇರು, ಖಡಸಕ್ಕರೆ, ಜೀರಿಗೆ ಸಮ ಪ್ರಮಾಣ ತೆಗೆದುಕೊಂಡು, ಚೆನ್ನಾಗಿ ಕುಟ್ಟಿ ಚೂರ್ಣ ತಯಾರಿಸಿ ಪ್ರತಿದಿನ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಒಂದು ಚಮಚದಂತೆ ಒಂದು ತಿಂಗಳು ಸೇವಿಸಿದರೆ ಗರ್ಮಿ ಜಮನವಾಗುತ್ತದೆ.

ಪಥ್ಯ : ಹುಳಿ, ಎಣ್ಣೆ ತಿನ್ನಬಾರದು.

13) <u>ಬಿಳಿ ಸೆರಗು :</u>

ಪಾಂಗರೇನ ಬೇರು, ವಟವಟೇನ ಎಲೆ ಎರಡನ್ನೂ ಕುಟ್ಟಿ ಒಂದು ಗ್ಲಾಸ್ ಮಜ್ಜಿಗೆಯಲ್ಲಿ ಹಾಕಿ ಚೆನ್ನಾಗಿ ಕಲಸಿ ಮೂರು ದಿನ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಸೇವಿಸಿದರೆ ಬಿಳಿ ಸೆರಗು ನಿಲ್ಲುತ್ತದೆ.

14) <u>ಕೆಂಪು ಸೆರಗು :</u>

ಕೌಟೆನ ಬೇರು, ಜೀರಿಗೆ, ಖಡಿ ಸಕ್ಕರೆ, ಹವಳದ ಗಡ್ಡಿ, ಇವೆಲ್ಲವನ್ನು ಕುಟ್ಟಿ ಚೂರ್ಣ ತಯಾರಿಸಿ ಒಂದು ಚಮಚದಷ್ಟು ಒಂದು ಗ್ಲಾಸ್ ಮಜ್ಜಿಗೆಯಲ್ಲಿ ಹಾಕಿ ಕಲಸಿ ಮೂರು ದಿನ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಕುಡಿದರೆ ಕೆಂಪು ಸೆರಗು ನಿಲ್ಲುತ್ತದೆ.

15) <u>ಹೆಚ್ಚು ಮಲ (ಸಂಡಾಸ) ಕೂಡಿಸುತ್ತಿದ್ದಾಗ (ಅತಿ ಭೇದಿ) :</u>

ಒಂದು ಗ್ಲಾಸ್ ಹಾಲಿನಲ್ಲಿ ಸ್ವಲ್ಪ ನಿಂಬೆ ರಸ ಮತ್ತು ಮೊಸರು ಕಲಸಿ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಎರಡು ದಿವಸ ಕುಡಿಯುವುದರಿಂದ ಹೆಚ್ಚು ಮಲ ಕೂಡಿಸುವುದನ್ನು ಕಡಿಮೆಯಾಗುತ್ತದೆ.

16) <u>ಇಸುಬು :</u>

ಗಜಕರ್ಣ ಎಣ್ಣೆ, ಮೃದಾಳ ಸಿಂಗಿ ಇವೆರಡನ್ನು ಕಲಸಿ ಇಸುಬು ಆದ ಜಾಗಕ್ಕೆ ಹಚ್ಚಿದರೆ ಕಡಿಮೆಯಾಗುತ್ತದೆ.

17) <u>ಕೀಲು, ಮಂಡಿ ನೋವು :</u>

ಖಂಡಕಿ ಗಿಡ, ಅರಿಶಿಣ ಎರಡನ್ನು ಕುಟ್ಟಿ ಔಡಲ ಎಣ್ಣೆಯಲ್ಲಿ ಕಲಸಿ ಕೀಲು, ಮಂಡಿಗೆ ಕಟ್ಟಿದರೆ ನೋವು ಶಮನವಾಗುತ್ತದೆ.

18) <u>ಕುರು :</u>

ಘೆರ್ಯೊಟಕ್ಕೆ ತಪ್ಪಲನ್ನು ಕುಟ್ಟಿ, ಔಡಲ ಎಣ್ಣೆಯಲ್ಲಿ ಕಲಸಿ ಕುರು ಆದ ಜಾಗಕ್ಕೆ ಕಟ್ಟಿದರೆ, ಕುರು ಒಡೆದು, ಕಟ್ಟ ರಕ್ತ ಹೋಗಿ ಹುಣ್ಣು ಮಾಯುತ್ತದೆ.




(a) ಗ್ರೆವಿಯಾ ಏಷ್ಯಾಟಿಕಾ ಎಲ್.,
(b) ಹೊಲಾರ್ಹೆನಾ ಪಬ್ಸೆನ್ಸ್ ವಾಲ್. ಮಾಜಿ ಜಿ. ಡಾನ್,
(c) ಹೊಲೊಪ್ಟೆಲಿಯಾ ಇಂಟೆಗ್ರಿಫೋಲಿಯಾ (ರಾಕ್ಸ್.) ಪ್ಲಾಂಚ್.,
(d) ಕಿಗೆಲಿಯಾ ಆಫ್ರಿಕಾನಾ ಬೆಂತ್.,
(e) ಲಿಟ್ಸಿಯಾ ಗ್ಲುಟಿನೋಸಾ (ಲೌರ್.) ರಾಬ್.,
(f) ಮೆಲಿಯಾ ಅಜೆಡಾರಾಚ್ ಎಲ್.,
(g) ಮಿಮುಸೊಪ್ಸ್ ಎಲೆಂಗಿ ಎಲ್.,
(h) ಮಿತ್ರಾಗಣ್ಯ ಪರ್ವಿಫೋಲಿಯ
(i) ಮೊರಿಂಗಾ ಒಲಿಫೆರಾ ಲ್ಯಾಮ್ಕ್.,
(j) ಮೊರಸ್ ಆಲ್ಬಾ ಎಲ್.,
(k) ಮುರ್ರಾಯ ಕೊಯೆನಿಗಿ (ಎಲ್.) ಸ್ಪೆಂಗ್.,
(l) ನಿಕ್ಟಾಂಥೆಸ್ ಆರ್ಬರ್-ಟ್ರಿಸ್ಟಿಸ್
(m) ಓರಾಕ್ಸಿಲಮ್ ಇಂಡಿಕಮ್ ವೆಂಟ್
(n) ರಿಕಿನಸ್ ಕಮ್ಯುನಿಸ್ ಎಲ್. ಮತ್ತು
(o) ಸರಕಾ ಅಸೋಕಾ (ರಾಕ್ಸ್.) ಡಿ ವೈಲ್ಡ್.